ಬುಧವಾರ, ಏಪ್ರಿಲ್ 24, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..



ಕಾಂಗ್ರೆಸ್ ಆಡಳಿತ ವೈಫಲ್ಯದಿಂದ ಸಮಸ್ಯೆ ಸೃಷ್ಟಿ • ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಹೇಳಿಕೆ

‘ಕಾವೇರಿ ನೀರು: ರಾಜಕೀಯ ಅನಗತ್ಯ’

ಪ್ರಜಾವಾಣಿ ವಾರ್ತೆ


ಕೆ. ಅಣ್ಣಾಮಲೈ

ಮಂಗಳೂರು: ‘ಕಾವೇರಿ ನದಿ ನೀರು ಹಂಚಿಕೆಯಲ್ಲಿ ಕರ್ನಾಟಕ, ತಮಿಳುನಾಡು ಎರಡೂ ರಾಜ್ಯಗಳಿಗೆ ಒಳ್ಳೆಯದಾಗಬೇಕು. ಎರಡೂ ರಾಜ್ಯಗಳವರು ಅಣ್ಣ–ತಮ್ಮಂದಿರಂತೆ ಇದ್ದು, ರಾಜಕೀಯ ಬಿಟ್ಟು ಚಿಂತಿಸಬೇಕು’ ಎಂದು ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅಭಿಪ್ರಾಯಪಟ್ಟರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕದಲ್ಲಿ ನೀರಿನ ಸಮಸ್ಯೆ ಇರುವುದು ಶೇಕಡಾ ನೂರರಷ್ಟು ಸತ್ಯ. ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯದಿಂದ ಸಮಸ್ಯೆ ಸೃಷ್ಟಿಯಾಗಿದೆ. ತಮಿಳುನಾಡಿನ ಸಾವಿರಾರು ಜನರು ಕರ್ನಾಟಕದಲ್ಲಿ, ಇಲ್ಲಿನ ಸಾವಿರಾರು ಜನರು ತಮಿಳುನಾಡಿನಲ್ಲಿ ಉದ್ಯೋಗದಲ್ಲಿದ್ದಾರೆ. ಎರಡೂ ರಾಜ್ಯಗಳಿಗೆ ಸಮಾನ ನ್ಯಾಯ ದೊರೆಯಬೇಕು. ಇದಕ್ಕಾಗಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಕೇಂದ್ರ ಸರ್ಕಾರ ನಿರ್ಣಯ ಕೈಗೊಳ್ಳುತ್ತವೆ’ ಎಂದರು.

ಸುಪ್ರೀಂ ಕೋರ್ಟ್ ಆದೇಶ ಇದೆ, ನೀರು ಹಂಚಿಕೆ ಸೂತ್ರದ ಪ್ರಕಾರವೇ ನಡೆಯುತ್ತದೆ. ಇದರಲ್ಲಿ ರಾಜಕೀಯ ಮಾಡುವ ಅಗತ್ಯವಿಲ್ಲ ಎಂದರು.

‘ಹುಬ್ಬಳ್ಳಿಯ ನೇಹಾ ಪ್ರಕರಣವನ್ನು ಬಿಜೆಪಿ ಮಾನವೀಯ ನೆಲೆಯಲ್ಲಿ ಸ್ಪಂದಿಸಿ, ಕುಟುಂಬಕ್ಕೆ ಸಾಂತ್ವನ ಹೇಳಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಓಲೈಕೆ ರಾಜಕಾರಣ ಹೆಚ್ಚಾಗಿದ್ದು, ಕಾನೂನು ಸುವ್ಯವಸ್ಥೆ ಸಮರ್ಪಕವಾಗಿ ಅನುಷ್ಠಾನ ಆಗುತ್ತಿಲ್ಲ ಎಂದು ಹೇಳಿದರು.

ರಾಜ್ಯದ ಗೃಹ ಸಚಿವರು ಬಳಸಿದ ಭಾಷೆಯನ್ನು ನಾಗರಿಕ ಸಮಾಜ ಒಪ್ಪಲು ಸಾಧ್ಯವಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಬರಪರಿಹಾರ, ಹೋಲಿಕೆ ಮಾಡಲಿ’

ಕರ್ನಾಟಕಕ್ಕೆ ಬರ ಪರಿಹಾರ ಕುರಿತ ಪ್ರಶ್ನೆಗೆ, ‘ರಾಜ್ಯ ಸರ್ಕಾರವು ಎನ್‌ಡಿಎ ಮತ್ತು ಯುಪಿಎ ಅವಧಿಯಲ್ಲಿ ಬಿಡುಗಡೆಯಾದ ಪರಿಹಾರ ಮೊತ್ತ ಹೋಲಿಕೆ ಮಾಡಲಿ’ ಎಂದು ಅಣ್ಣಾಮಲೈ ಅವರು ಸವಾಲು ಹಾಕಿದರು.

‘ಎನ್‌ಡಿಎ ಸರ್ಕಾರ ಯಾವ ರಾಜ್ಯಕ್ಕೂ ತಾರತಮ್ಯ ಮಾಡಿಲ್ಲ. ನ್ಯಾಯ ಸೂತ್ರ ಆಧರಿಸಿ ಪರಿಹಾರ ಮೊತ್ತ ನೀಡಿದೆ. ಕರ್ನಾಟಕ ಸರ್ಕಾರ ₹18 ಸಾವಿರ ಕೋಟಿ ಬರ ಪರಿಹಾರದ ಬೇಡಿಕೆ ಇಟ್ಟು, ಇದನ್ನು ಚುನಾವಣೆ ರಾಜಕೀಯದ ತಂತ್ರವಾಗಿ ಮಾರ್ಪಾಡಿಸಿಕೊಂಡಿದೆ’ ಎಂದು ಆರೋಪಿಸಿದರು.

ಅಣ್ಣಾಮಲೈ ವಿರುದ್ಧ ಪ್ರಕರಣ

ಚೆನ್ನೈ : ಡಿಎಂಕೆ ಕಾರ್ಯಕರ್ತರು ಕಡಲೂರು ಜಿಲ್ಲೆಯ ಪಕ್ಕಿರಿಮಣಿಯಂ ಎಂಬ ಗ್ರಾಮದ 45 ವರ್ಷದ ಮಹಿಳೆಯೊಬ್ಬರನ್ನು ಥಳಿಸಿ, ಹತ್ಯೆ ಮಾಡಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ‘ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ’ ಪೋಸ್ಟ್ ಮಾಡಿದ ಆರೋಪದಡಿ ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷ ಅಣ್ಣಾಮಲೈ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕಡಲೂರು ಜಿಲ್ಲಾ ಪೊಲೀಸರು ಅಣ್ಣಾಮಲೈ ವಿರುದ್ಧ ಸೋಮವಾರ ಪ್ರಕರಣ ದಾಖಲಿಸಿದ್ದಾರೆ.

‘ಇದೇ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿಯನ್ನು ಹಬ್ಬಿಸಿದ್ದಕ್ಕಾಗಿ ಮೂವರ ವಿರುದ್ಧ ಪೊಲೀಸರು ಪ್ರತ್ಯೇಕ ಪ್ರಕರಣ ದಾಖಲಿಸಿದ ಬೆನ್ನಲ್ಲೇ, ಅಣ್ಣಾಮಲೈ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

‘ಲೋಕಸಭೆ ಚುನಾವಣೆ ಅಂಗವಾಗಿ ಏಪ್ರಿಲ್ 19ರಂದು ನಡೆದಿದ್ದ ಮತದಾನದ ವೇಳೆ, ಆಡಳಿತಾರೂಢ ಡಿಎಂಕೆ ವಿರುದ್ಧ ಗೋಮತಿ ಎಂಬುವವರು ಮತ ಚಲಾವಣೆ ಮಾಡಿದ್ದಕ್ಕೆ ಪಕ್ಷದ ಕಾರ್ಯಕರ್ತರು ಅವರನ್ನು ಥಳಿಸಿ, ಕೊಂದಿದ್ದಾರೆ. ಗೋಮತಿ ಅವರನ್ನು ಹತ್ಯೆ ಮಾಡಿದ ಡಿಎಂಕೆ ಕಾರ್ಯಕರ್ತರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿಲ್ಲ’ ಎಂದು ಆರೋಪಿಸಿ ಅಣ್ಣಾಮಲೈ ಏಪ್ರಿಲ್ 21ರಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

ಸುದ್ದಿ 2 ನಿಮಿಷ

ಚುನಾವಣೆ ಚಿಹ್ನೆ: ಆಯೋಗಕ್ಕೆ ಎನ್‌ಸಿಪಿ (ಪವಾರ್ ಬಣ) ದೂರು

ಪುಣೆ (ಪಿಟಿಐ): ಪಕ್ಷದ ಭದ್ರಕೋಟೆಯಾದ ಬಾರಾಮತಿ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿರುವ ಪಕ್ಷದ ಅಭ್ಯರ್ಥಿಗೆ ಕಹಳೆಯನ್ನು ಹೋಲುವಂತಹ ವಾದ್ಯವನ್ನು ಚಿಹ್ನೆಯನ್ನಾಗಿ ನೀಡಿರುವುದರ ವಿರುದ್ಧ ಚುನಾವಣೆ ಆಯೋಗಕ್ಕೆ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಶರದ್‌ಚಂದ್ರ ಪವಾರ್ ಬಣ) ದೂರು ನೀಡಿದೆ.

‘ಬಾರಾಮತಿ ಕ್ಷೇತ್ರದಿಂದ ಸ್ಪರ್ಧಿಸಿರುವ ಪಕ್ಷೇತರ ಅಭ್ಯರ್ಥಿ ಶೇಖ್ ಸೋಯಲ್‌ಶಾ ಯೂನಸ್ ಶಾ ಎಂಬುವವರಿಗೆ ಪಕ್ಷದ ಚಿಹ್ನೆ ಕಹಳೆಯನ್ನೇ ಹೋಲುವಂತಹ ವಾದ್ಯವನ್ನು ಚಿಹ್ನೆಯಾಗಿ ನೀಡಲಾಗಿದೆ. ಇದನ್ನು ‘ತುತಾರಿ’ ಎಂದು ಕರೆಯಲಾಗಿದೆ’ ಎಂದು ಆಯೋಗಕ್ಕೆ ನೀಡಿರುವ ದೂರಿನಲ್ಲಿ ಎನ್‌ಸಿಪಿ (ಎಸ್‌ಪಿ) ತಿಳಿಸಿದೆ.

ಬಾರಾಮತಿ ಕ್ಷೇತ್ರದ ಎನ್‌ಸಿ-ಪಿ(ಎಸ್‌ಪಿ) ಅಭ್ಯರ್ಥಿ ಸುಪ್ರಿಯಾ ಸುಳೆ ಅವರ ಚುನಾವಣಾ ಏಜೆಂಟ್ ಲಕ್ಷ್ಮೀಕಾಂತ ಖಬಿಯಾ ಎಂಬುವವರು ಏಪ್ರಿಲ್ 20ರಂದು ದೂರು ಸಲ್ಲಿಸಿದ್ದಾರೆ.

‘ಕಹಳೆ ಊದುತ್ತಿರುವ ಮನುಷ್ಯ’ ಚಿಹ್ನೆಯನ್ನು ಆಯೋಗವು ಎನ್‌ಸಿಪಿಗೆ (ಎಸ್‌ಪಿ)ಹಂಚಿಕೆ ಮಾಡಿದೆ.

‘ನಮ್ಮ ಪಕ್ಷ ಹಾಗೂ ಸ್ವತಂತ್ರ ಅಭ್ಯರ್ಥಿಗೆ ನೀಡಿರುವ ಚಿಹ್ನೆಗಳಿಗೆ ಮರಾಠಿಯಲ್ಲಿ ಒಂದೇ ಹೆಸರಿನಿಂದ ಕರೆಯಲಾಗುವುದರಿಂದ ಇದು ಮತದಾರರಲ್ಲಿ ಗೊಂದಲ ಮೂಡಿಸುತ್ತದೆ. ಹೀಗಾಗಿ ಈ ಕುರಿತು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲಾಗಿದೆ’ ಎಂದು ದೂರುದಾರ ಲಕ್ಷ್ಮೀಕಾಂತ ಖಬಿಯಾ ಹೇಳಿದ್ದಾರೆ.

ಈ ಕ್ಷೇತ್ರಕ್ಕೆ ಮೇ 7ರಂದು ಮತದಾನ ನಡೆಯಲಿದೆ.



ಸಿಎಸ್ ಅಮಾನತಿಗೆ ಬಿಜೆಪಿ ಆಗ್ರಹ

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಜಾರಿ ಇರುವಾಗಲೇ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಕಾಂಗ್ರೆಸ್ ನಾಯಕರಿಗೆ ಪ್ರತಿಭಟನೆಗೆ ಅವಕಾಶ ನೀಡಿರುವ ಸರ್ಕಾರದ ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್ ಅವರನ್ನು ಅಮಾನತುಗೊಳಿಸಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿದರು.

ಬರ ಪರಿಹಾರದ ವಿಚಾರವನ್ನು ಮುಂದಿಟ್ಟುಕೊಂಡು ಗಾಂಧಿ ಪ್ರತಿಮೆ ಬಳಿ ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗಿದೆ. ಚುನಾವಣೆಯ ಸಂದರ್ಭದಲ್ಲಿ ರಾಜ್ಯದ ಶಕ್ತಿ ಕೇಂದ್ರವಾದ ವಿಧಾನಸೌಧದ ಆವರಣದಲ್ಲಿ ಅನಧಿಕೃತ ಪ್ರತಿಭಟನೆಗೆ ರಜನೀಶ್ ಗೋಯಲ್ ಅವಕಾಶ ಕೊಟ್ಟಿದ್ದಾರೆ. ಅವರು ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಅಶೋಕ ಅವರ ಜತೆ, ಬಿಜೆಪಿ ಪ್ರಧಾನಕಾರ್ಯದರ್ಶಿ ಪಿ.ರಾಜೀವ್, ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ, ಜೆಡಿಎಸ್‌ನ ನಗರ ಘಟಕದ ಅಧ್ಯಕ್ಷ ರಮೇಶ್ ಗೌಡ ಇದ್ದರು.

ಪ್ರಧಾನಿ ಮೋದಿಗೆ ಸೋಲಿನ ಹತಾಶೆ: ಪ್ರಕಾಶ್ ರಾಜ್

ಪ್ರಜಾವಾಣಿ ವಾರ್ತೆ



ಪ್ರಧಾನಿ ಪರಿಹಾರ ನಿಧಿಯಲ್ಲಿ ಸಾವಿರಾರು ಕೋಟಿ ಹಣ ಕೊಳೆಯುತ್ತಿದೆ. ಮಾಹಿತಿ ಹಕ್ಕಿನ ಅಡಿ ಕೇಳಿದರೆ ಖರ್ಚು ಮಾಡಿದ ವಿವರ ಕೊಡಲು ಅವರು ಸಿದ್ಧರಿಲ್ಲ. ಪ್ರಶ್ನೆ ಮಾಡಿದವರಿಗೆ ನಗರ ನಕ್ಸಲರ ಹಣೆಪಟ್ಟಿ ಕಟ್ಟುತ್ತಿದ್ದಾರೆ

ಪ್ರಕಾಶ್ ರಾಜ್, ನಟ

ಬೆಂಗಳೂರು: ‘ಲೋಕಸಭೆಗೆ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗುವ ಸುಳಿವು ಸಿಕ್ಕಿದ್ದರಿಂದ ಹತಾಶೆಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅತ್ಯಂತ ಕೀಳುಮಟ್ಟದ ಮಾತುಗಳನ್ನು ಆಡುತ್ತಿದ್ದಾರೆ’ ಎಂದು ನಟ ಪ್ರಕಾಶ್ ರಾಜ್ ಹೇಳಿದರು.

’ಚುನಾವಣೆಯ ಸೋಲಿನ ಭೀತಿಯಿಂದ ಮೋದಿ ಅವರು ಬಟ್ಟೆಯ ಒಳಗೆ ಬೆವರುತ್ತಿದ್ದಾರೆ. ಹಿಂದೆ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು ಎಲ್ಲ ಹಿಂದುಳಿದ ವರ್ಗಗಳು, ಮಹಿಳೆಯರಿಗೆ ಸಮಾನ ಅವಕಾಶ ಸಿಗಬೇಕು ಎಂದಿದ್ದರು. ಅದನ್ನು ಮೋದಿ ಅವರು ತಿರುಚಿ ಹೇಳಿಕೆ ನೀಡುತ್ತಿದ್ದಾರೆ. ‘ಇಂಡಿಯಾ’ ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಎಲ್ಲ ಸಂಪತ್ತು ಹಂಚುತ್ತಾರೆ ಎಂಬ ‘ಕಾಗಕ್ಕ ಗುಬ್ಬಕ್ಕನ ಕಥೆ’ ಹೇಳುತ್ತಿದ್ದಾರೆ. ಹಿಂದೂ ಧರ್ಮದ ಮಹಿಳೆಯರ ತಾಳಿ, ಬಂಗಾರ, ಆಸ್ತಿ ಎಲ್ಲವನ್ನೂ ಉಳಿಸಲು ಎನ್‌ಡಿಎಗೆ ಮತ ನೀಡಬೇಕು ಎಂದು ಹೇಳುವುದು ಅತ್ಯಂತ ನೀಚತನದ ಪರಮಾವಧಿ’ ಎಂದು ಮಂಗಳವಾರ ‘ಎದ್ದೇಳು ಕರ್ನಾಟಕ’ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

’ಸೂರತ್‌ನಲ್ಲಿ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿರುವ ಪ್ರಕರಣದ ಹಿಂದೆಯೂ ಹಲವು ಅನುಮಾನಗಳಿವೆ. ಒಂದು ಪಕ್ಷ ಚುನಾವಣೆ ರಹಿತವಾಗಿ ಗೆಲ್ಲುವ ಮಾರ್ಗ ಕಂಡುಕೊಳ್ಳುತ್ತಿದೆ. ಪ್ರಜಾಪ್ರಭುತ್ವದ ಕತ್ತು ಹಿಸುಕುವ, ಜನರ ಧ್ವನಿಯನ್ನೇ ಹತ್ತಿಕ್ಕುವ ಕೆಲಸ ಮಾಡುತ್ತಿದೆ’ ಎಂದರು.

’ರಾಜ್ಯದ ಪ್ರತಿನಿಧಿಯಾದ ಹಣಕಾಸು ಸಚಿವೆ ರಾಜ್ಯಕ್ಕೆ ಆದ ಅನ್ಯಾಯದ ವಿರುದ್ಧ ಧ್ವನಿಯನ್ನೇ ಎತ್ತಲಿಲ್ಲ. ರಾಜ್ಯ ಸರ್ಕಾರ ಬರಪರಿಹಾರಕ್ಕಾಗಿ ಸುಪ್ರೀಂಕೋರ್ಟ್ ಮೊರೆ ಹೋಗಬೇಕಾಯಿತು. ಪರಿಹಾರ ನೀಡದೇ ಅನಗತ್ಯ ವಿಚಾರಗಳನ್ನು ಪ್ರಸ್ತಾಪಿಸುತ್ತಾ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

’ಚುನಾವಣಾ ಬಾಂಡ್ ಹಗರಣ ಹೊರಬಂದ ನಂತರ ಬಿಜೆಪಿ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿಲ್ಲ. ಅದಕ್ಕಾಗಿಯೇ ಸಮುದಾಯಗಳ ಮಧ್ಯೆ ದ್ವೇಷ ಹುಟ್ಟು ಹಾಕುವ ವಿಚಾರ ಮಾತನಾಡುತ್ತಿದ್ದಾರೆ. ಹಿಂದು–ಮುಸ್ಲಿಂ, ಭಾರತ–ಪಾಕ್ ವಿಚಾರ ಬಿಟ್ಟರೆ ಬೇರೆ ವಿಷಯಗಳಿಲ್ಲ. ಕೋವಿಡ್ ಸಮಯದಲ್ಲಿ ಮುಸ್ಲಿಮರ ಪಟ್ಟಿ ಹಿಡಿದುಕೊಂಡು ದ್ವೇಷ ಬಿತ್ತಲು ಪ್ರಯತ್ನಿಸಿದ್ದ ತೇಜಸ್ವಿ ಸೂರ್ಯ, ಏನೂ ಕೆಲಸ ಮಾಡದ ಪಿ.ಸಿ. ಮೋಹನ್ ಆಯ್ಕೆಯಾಗಬೇಕಾ ಎನ್ನುವುದನ್ನು ಜನರು ನಿರ್ಧರಿಸಬೇಕು. ಜನರ ಹಕ್ಕುಗಳಿಗೆ ತುಡಿಯುವ ಜನರನ್ನು ಆಯ್ಕೆಮಾಡಬೇಕು. ಈಗ ಮತದಾನಕ್ಕೆ ಸರದಿಯಲ್ಲಿ ನಿಲ್ಲದಿದ್ದರೆ ಐದು ವರ್ಷ ಬೇರೆ ವಿಚಾರಗಳಿಗೆ ಸರದಿಯಲ್ಲಿ ನಿಲ್ಲಬೇಕಾಗುತ್ತದೆ’ ಎಂದರು.

‘ಸುದ್ದಿವಾಹಿನಿ ಒಡೆಯ ತೆರಿಗೆ ಕಟ್ಟಿದ್ದು ₹600!’

ರಾಜ್ಯವನ್ನು 18 ವರ್ಷ ಸಂಸತ್‌ನಲ್ಲಿ ಪ್ರತಿನಿಧಿಸಿದ ರಾಜ್ಯಸಭಾ ಸದಸ್ಯ ಚಂದ್ರಶೇಖರ್ ಈಗ ತಿರುವನಂತಪುರಕ್ಕೆ ಪಲಾಯನ ಮಾಡಿದ್ದಾರೆ. ಇಲ್ಲಿ ಕೆಲಸ ಮಾಡದ ಕಾರಣಕ್ಕೆ ಅಲ್ಲಿಗೆ ಹೋಗಿದ್ದಾರೆ. ಸುದ್ದಿ ವಾಹಿನಿ, ಉದ್ಯಮದ ಒಡೆಯರೂ ಆದ ಅವರು ಸಲ್ಲಿಸಿದ ಅಫಿಡವಿಟ್‌ನಲ್ಲಿ ₹ 600 ತೆರಿಗೆ ಕಟ್ಟಿರುವುದಾಗಿ ಹೇಳಿದ್ದಾರೆ. ಅವರು ನನಗಿಂತ ‘ಭಡವ’ ಎಂದು ಪ್ರಕಾಶ್ ರಾಜ್ ಟೀಕಿಸಿದರು.

‘ಚುನಾವಣಾ ಆಯೋಗ ಸ್ವತಂತ್ರವಾಗಿಲ್ಲ’

‘ಮೋದಿ ಧರ್ಮದ ಆಧಾರದಲ್ಲಿ ಚುನಾವಣೆ ನಡೆಸುತ್ತಿದ್ದಾರೆ. ರಾಮನನ್ನು ತಂದಿದ್ದೇ ನಾನು ಎನ್ನುತ್ತಿದ್ದಾರೆ. ಕಾವಿಯನ್ನು ನೋಡಿ ಜನರು ಎದರುವ ಸ್ಥಿತಿ ತಂದಿದ್ದಾರೆ. ಇದು ಚುನಾವಣಾ ನಿಯಮಗಳಿಗೆ ವಿರುದ್ಧ. ಚುನಾವಣಾ ಆಯೋಗ ಒಂದು ದೂರಿಗೂ ಕ್ರಮ ಕೈಗೊಳ್ಳುತ್ತಿಲ್ಲ. ಕಳ್ಳರ ಹತ್ತಿರ ದೂರು ನೀಡಿದರೆ ಹೇಗೆ ಸ್ವೀಕರಿಸುತ್ತಾರೆ? ಅದು ಸ್ವತಂತ್ರ ಸಂಸ್ಥೆಯಾಗಿ ಉಳಿದಿಲ್ಲ. ಅದು ಮೋದಿ ಪರಿವಾರವಾಗಿದೆ’ ಎಂದು ಟೀಕಿಸಿದರು.

ಮೋದಿ ಎಂದು ಮೂರು ಬಾರಿ ಹೇಳಿದ್ದಕ್ಕೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಗೆ ಸಂಕಷ್ಟ ತಂದರು. ಅದೇ ಮೋದಿ ತಪ್ಪುಗಳನ್ನು ನೋಡಿಯೂ ಆಯೋಗ ಸುಮ್ಮನೆ ಕುಳಿತಿದೆ ಎಂದು ದೂರಿದರು.

ನಂಜುಂಡಿ ಇಂದು ಕಾಂಗ್ರೆಸ್‌ಗೆ

ಪ್ರಜಾವಾಣಿ ವಾರ್ತೆ


ಕೆ.ಪಿ.ನಂಜುಂಡಿ

ಹುಬ್ಬಳ್ಳಿ: ವಿಶ್ವಕರ್ಮ ಸಮಾಜದ ಮುಖಂಡ ಕೆ.ಪಿ.ನಂಜುಂಡಿ ಅವರು ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ಸಲ್ಲಿಸಿದರು. ರಾಜೀನಾಮೆಯನ್ನು ಇಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಸಲ್ಲಿಸಿದ್ದು, ಸಭಾಪತಿಯವರು ಅಂಗೀಕರಿಸಿದರು.

‘ನನ್ನನ್ನು ಸರಿಯಾಗಿ ನಡೆಸಿಕೊಳ್ಳದೆ ಬಿಜೆಪಿ ನಿರ್ಲಕ್ಷಿಸಿತು. ಸಾಮರ್ಥ್ಯ ಆಧರಿಸಿ ಜವಾಬ್ದಾರಿ, ಸ್ಥಾನ ಕೊಡಲಿಲ್ಲ. ಬೇಸರಗೊಂಡು ಪರಿಷತ್ತಿನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡುವೆ’ ಎಂದು ಕೆ.ಪಿ.ನಂಜುಂಡಿ ತಿಳಿಸಿದರು.

‘ಹಲವು ವರ್ಷಗಳಿಂದ ಸಮಾಜ ಸಂಘಟಿಸಿದ್ದೇನೆ. ನನ್ನ ಸಮಾಜದ ಅಭಿವೃದ್ಧಿಗೆ ಕೆಲಸ ಮಾಡಲು ನೆರವಾಗುವ ಯಾವುದೇ ಸ್ಥಾನಮಾನ ಬಿಜೆಪಿ ನೀಡಲಿಲ್ಲ. ಪರಿಷತ್ತು ಸದಸ್ಯತ್ವದಿಂದ ಏನೂ ಫಲವಿಲ್ಲ. ಸಚಿವ ಸ್ಥಾನ ನೀಡಿದ್ದರೆ, ಉತ್ತಮ ಕೆಲಸ ಮಾಡಬಹುದಿತ್ತು’ ಎಂದು ನಂಜುಂಡಿ ಅವರು ಅಭಿಪ್ರಾಯಪಟ್ಟರು.

‘ವಿಶ್ವಕರ್ಮ ಸೇರಿದಂತೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ₹ 1 ಸಾವಿರ ಕೋಟಿ ಅನುದಾನ ಕೊಡಬೇಕು ಎಂದು ಬಿಜೆಪಿ ಸರ್ಕಾರಕ್ಕೆ ಕೋರಿದ್ದೆ. ಆದರೆ, ಸ್ಪಂದನೆ ಸಿಗಲಿಲ್ಲ’ ಎಂದು ಹೇಳಿದರು.

‘ಕೆಪಿಸಿಸಿ ಅಧ್ಯಕ್ಷರು ನನ್ನ ಜೊತೆ ಮಾತನಾಡಿದ ಬಳಿಕ ಯಡಿಯೂರಪ್ಪ ಸೇರಿ ಬಿಜೆಪಿಯ ಯಾವ ನಾಯಕರು ಸಂಪರ್ಕಿಸ ಲಿಲ್ಲ. ನಾನು ಅವರಿಗೆ, ಪಕ್ಷಕ್ಕೆ ಅಗತ್ಯವಿಲ್ಲ ಎಂದರ್ಥ. ಡಿ.ಕೆ. ಶಿವಕುಮಾರ್ ಅವರ ಉಪಸ್ಥಿತಿ-ಯಲ್ಲಿ ಬೆಂಗಳೂರಿನಲ್ಲಿ ಬುಧವಾರ ಕಾಂಗ್ರೆಸ್‌ಗೆ ಸೇರ್ಪಡೆಯಾಗುವೆ’ ಎಂದರು.

‘ಏನೇ ಮಾಡಿದರೂ ಗೌಡರು 4 ಸೀಟು ಗೆಲ್ಲಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವೇಗೌಡರು ಏನೇ ಮಾಡಿದರೂ, ಅವರು ಹೇಳಿರುವಂತೆ ನಾಲ್ಕು ಸೀಟು ಬರುವುದಿಲ್ಲ. ಮೂರು ಅಧಿಕೃತ (ಹಾಸನ, ಮಂಡ್ಯ, ಕೋಲಾರ), ಒಂದು ಅನಧಿಕೃತ (ಬೆಂಗಳೂರು ಗ್ರಾಮಾಂತರ) ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲಲಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ವಯಸ್ಸಿನಲ್ಲಿ ನನಗೆ ಈ ರೀತಿ ಮಾಡಿದ್ದಾರೆಂದು ದೇವೇಗೌಡರು ಹಾಸನದಲ್ಲಿ ಕಣ್ಣೀರು ಹಾಕಿದ್ದಾರೆ. ಅವರು ಕಣ್ಣೀರು ಹಾಕುವಂತೆ ಯಾರು ಏನು ಮಾಡಿದ್ದಾರೆ? ಅವರನ್ನು ಕಾಂಗ್ರೆಸ್ ಪಕ್ಷ ಪ್ರಧಾನಿ ಮಾಡಿದೆ. ಆದರೂ ಕಣ್ಣೀರು ಯಾಕೆ ಹಾಕುತ್ತಿದ್ದಾರೆ ಗೊತ್ತಿಲ್ಲ’ ಎಂದರು.

‘ಅವರನ್ನು ಮುಖ್ಯಮಂತ್ರಿ ಮಾಡಿದ್ದು ಹಾಸನ ಜಿಲ್ಲೆಯಲ್ಲ. ನಮ್ಮ ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ. ಹೀಗಾಗಿ, ಅವರು ಕಣ್ಣೀರು ಹಾಕುವ ಪರಿಸ್ಥಿತಿ ಇಲ್ಲ. ತಮ್ಮ ಕೊಡುಗೆ ಬಗ್ಗೆ ಹೇಳಲು ಅವರಿಗೆ ಏನೂ ಇಲ್ಲ’ ಎಂದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ನಿರಂತರ ಪ್ರಚಾರ ಮಾಡುತ್ತಿರುವ ಬಗ್ಗೆ ಕೇಳಿದಾಗ, ‘ಪ್ರಜಾ-ಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲಿ ಬೇಕಾದರೂ ಹೋಗಿ ಪ್ರಚಾರ ಮಾಡಬಹುದು. ನಾವು ನಿನ್ನೆ ಮೊನ್ನೆಯಿಂದ ರಾಜಕಾರಣ ಮಾಡುತ್ತಿಲ್ಲ. ಚುನಾವಣೆ ಫಲಿತಾಂಶದ ಮರುದಿನದಿಂದಲೇ ಸೇವೆ ಮಾಡುತ್ತಿದ್ದೇವೆ. ಕೋವಿಡ್ ಸಮಯದಲ್ಲಿ ಮೃತಪಟ್ಟವರ ಶವಗಳ ಅಂತ್ಯಸಂಸ್ಕಾರ ಮಾಡಿದ್ದೇವೆ. ಜನರಿಗೆ ಉಚಿತ ಔಷಧಿ, ಅಕ್ಕಿ ನೀಡಿದ್ದೇವೆ. ಜನ ಉಪಕಾರ ಸ್ಮರಣೆ ಮಾಡಲಿದ್ದಾರೆ’ ಎಂದರು.

ಕಾಂಗ್ರೆಸ್‌ಗೆ ವಿಸಿಕೆ ಬೆಂಬಲ: ತಮಿಳುನಾಡಿನ ವಿಡುಥಲೈ ಚಿರುತೈಗಲ್ ಕಚ್ಚಿ (ವಿಸಿಕೆ) ಪಕ್ಷದ ಸಂಸ್ಥಾಪಕರೂ ಆಗಿರುವ ಸಂಸದ ತೊಳ್ ತಿರುಮಾವಳವನ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದರು.

ಈ ಬಗ್ಗೆ ಮಾತನಾಡಿದ ಶಿವಕುಮಾರ್, ‘ವಿಸಿಕೆ ಪಕ್ಷ ‘ಇಂಡಿಯಾ’ ಮೈತ್ರಿಕೂಟದಲ್ಲಿದೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡಲು ಆ ಪಕ್ಷದ ಅಧ್ಯಕ್ಷ ರಾಜ್ಯಕ್ಕೆ ಬಂದಿದ್ದಾರೆ. ಅವರ ಪಕ್ಷದಿಂದ ಬೆಂಗಳೂರು ಗ್ರಾಮಾಂತರದಲ್ಲಿ ಚಂದ್ರಶೇಖರ್, ಕೋಲಾರದಲ್ಲಿ ಎಂ.ಸಿ. ವೇಣು, ಬೆಂಗಳೂರು ದಕ್ಷಿಣದಲ್ಲಿ ರಾಜಕುಮಾರ್ ಅವರು ಕಣದಲ್ಲಿದ್ದರು. ಅವರೆಲ್ಲರೂ ಸ್ಪರ್ಧೆಯಿಂದ ನಿವೃತ್ತಿ ಘೋಷಿಸಿದ್ದಾರೆ’ ಎಂದರು.

‘ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ’

ಹಾರೋಹಳ್ಳಿ: ‘ಜೆಡಿಎಸ್ ಮುಗಿಸಲು ಕೆಲ ಮಹಾನುಭಾವರು ಹಗಲುಗನಸು ಕಾಣುತ್ತಿದ್ದಾರೆ. ನಮ್ಮ ಪಕ್ಷವನ್ನು ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಗುಡುಗಿದ್ದಾರೆ.

ಹಾರೋಹಳ್ಳಿ ಮತ್ತು ಮರಳವಾಡಿಯಲ್ಲಿ ಮಂಗಳವಾರ ಪ್ರಚಾರಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ನಿರ್ನಾಮ ಮಾಡುವುದಾಗಿ ಹೇಳುತ್ತಿರುವ ಮಹಾನುಭಾವರು ಹಗಲುಗನಸು ಕಾಣಬೇಕಷ್ಟೇ ಎಂದು ಲೇವಡಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೆಸರು ಪ್ರಸ್ತಾಪಿಸದೆ ಭಾಷಣದುದ್ದಕ್ಕೂ ‘ಮಹಾನುಭಾವರು’ ಎಂದು ಸಂಬೋಧಿಸಿದರು.

‘ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಬದಲಾಗಿ ಬಿಜೆಪಿ–ಜೆಡಿಎಸ್ ಒಂದಾಗಿ ಕಾಂಗ್ರೆಸ್ ಪಕ್ಷವನ್ನು ನಿರ್ನಾಮ ಮಾಡಲಿವೆ. ಲೋಕಸಭಾ ಚುನಾವಣೆ ನಂತರ ಕಾಂಗ್ರೆಸ್ ಹೇಳ ಹೆಸರು ಇಲ್ಲದಂತಾಗುತ್ತದೆ’ ಎಂದು ತಿರುಗೇಟು ನೀಡಿದರು.

28ರಂದು ಬೆಳಗಾವಿ, ಶಿರಸಿಗೆ ಮೋದಿ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಶಿರಸಿ: ‘ಪ್ರಧಾನಿ ನರೇಂದ್ರ ಮೋದಿ ಏಪ್ರಿಲ್ 28ರಂದು ಬೆಳಗಾವಿಗೆ ಬರಲಿದ್ದು, ಬೆಳಗಾವಿ ಮತ್ತು ಚಿಕ್ಕೋಡಿ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳ ಪ್ರಚಾರ ಸಭೆಯಲ್ಲಿ ಮಾತನಾಡುವರು’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಅನಿಲ ಬೆನಕೆ ತಿಳಿಸಿದ್ದಾರೆ.

‘ಅದೇ ದಿನ (ಏಪ್ರಿಲ್ 28) ಉತ್ತರ ಕನ್ನಡ ಕ್ಷೇತ್ರ ವ್ಯಾಪ್ತಿಯ ಶಿರಸಿಯ ಮಾರಿಕಾಂಬಾ ಜಿಲ್ಲಾ ಕ್ರೀಡಾಂಗಣದ-ಲ್ಲೂ ನಡೆಯುವ ಬಿಜೆಪಿ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸುವರು. ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸುವರು’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಎಸ್.ಹೆಗಡೆ ತಿಳಿಸಿದ್ದಾರೆ.

26ರಂದು ವಿಜಯಪುರಕ್ಕೆ ರಾಹುಲ್

ವಿಜಯಪುರ: ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಏಪ್ರಿಲ್ 26ರಂದು ವಿಜಯಪುರಕ್ಕೆ ಭೇಟಿ ನೀಡುವರು. ಬೆಳಿಗ್ಗೆ 11ಕ್ಕೆ ಬಿಎಲ್‌ಡಿಇ ಹೊಸ ಕ್ಯಾಂಪಸ್ ಆವರಣದಲ್ಲಿ ನಡೆಯುವ ಕಾಂಗ್ರೆಸ್ ಸಮಾವೇಶದಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸುವರು’ ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಭಾಗವಹಿಸುವರು’ ಎಂದರು.

ಬಿಆರ್‌ಟಿಯಲ್ಲಿ ಬೆಂಕಿ: ಅರಣ್ಯ ಭಸ್ಮ

ಹನೂರು: ಬಿಳಿಗಿರಿರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶದ ಬೈಲೂರು ವನ್ಯಜೀವಿ ವಲಯದಲ್ಲಿ ಕಿಡಿಗೇಡಿಗಳು ಸೋಮವಾರ ಬೆಂಕಿ ಇಟ್ಟಿದ್ದರಿಂದ ನೂರಾರು ಎಕರೆ ಅರಣ್ಯ ಬೆಂಕಿಗೆ ಆಹುತಿಯಾಗಿದೆ.

ಮಳೆಯಿಲ್ಲದೆ ಅರಣ್ಯ ಪ್ರದೇಶದಲ್ಲಿ-ರುವ ವಿವಿಧ ಜಾತಿಯ ಗಿಡ– ಮರಗಳು, ಲಂಟಾನಗಳು ಒಣಗಿದ್ದು, ಬೆಂಕಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಲೀಸಾಗಿ ವಿಸ್ತರಿಸಿದೆ.

ಅರಣ್ಯ ಇಲಾಖೆಯ 180 ಸಿಬ್ಬಂದಿ ನಿರಂತರ ಶ್ರಮಿಸಿ ಬೆಂಕಿ ನಂದಿಸಿದ್ದಾರೆ. ‘ಸುಟ್ಟ ಅರಣ್ಯದ ಪ್ರಮಾಣದ ಮಾಹಿತಿಗಾಗಿ ಡ್ರೋನ್ ಮೂಲಕ ಸರ್ವೆಗೆ ನಿರ್ಧರಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಥೋತ್ಸವ ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ರಂಗನಾಥಸ್ವಾಮಿ ದೇವಾಲಯದಲ್ಲಿ ಮಂಗಳವಾರ ರಂಗನಾಥಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು

‘ಬಿಜೆಪಿ ಗೆದ್ದರೆ ಚುನಾವಣೆ ವ್ಯವಸ್ಥೆ ಅಂತ್ಯ’

ಪ್ರಜಾವಾಣಿ ವಾರ್ತೆ


ಡಾ.ಎಚ್‌ಸಿ. ಮಹದೇವಪ್ಪ

ಮಡಿಕೇರಿ: ‘ಪ್ರಜಾಪ್ರಭುತ್ವವು ನಾಶದ ಅಂಚಿಗೆ ಹೋಗುತ್ತಿದೆ. ಬಿಜೆಪಿ ಮತ್ತೆ ಗೆದ್ದರೆ ದೇಶದಲ್ಲಿ ಚುನಾವಣೆ ವ್ಯವಸ್ಥೆಯೂ ಅಂತ್ಯವಾಗಬಹುದು’ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಆತಂಕ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಪರಿಶಿಷ್ಟ ಜಾತಿ ಸಮಾವೇಶದಲ್ಲಿ ಮಾತನಾಡಿ, ‘ಇದು ಅತ್ಯಂತ ಮಹತ್ವದ ಚುನಾವಣೆ. ಪ್ರಜಾಪ್ರಭುತ್ವದ ಅಳಿವು ಉಳಿವಿನ ಚುನಾವಣೆ. ಸಂವಿಧಾನ ಉಳಿಸುವ ಚುನಾವಣೆ’ ಎಂದು ಪ್ರತಿಪಾದಿಸಿದರು.

‘ಅಟಲ್ ಬಿಹಾರಿ ವಾಜಪೇಯಿ ಅವರು ಸಂವಿಧಾನ ಪರಾಮರ್ಶೆ ಮಾಡಬೇಕು ಎಂದು ಹೇಳಿದಾಗ ನಾನು, ದೇವನೂರ ಮಹಾದೇವ, ಪ.ಮಲ್ಲೇಶ್ ಹಾಗೂ ದೇಶದಾದ್ಯಂತ ಇತರರು ಹೋರಾಟ ಮಾಡಿ ತಡೆದೆವು. ನಂತರವೂ ಸಂವಿಧಾನದ ಬದಲಾವಣೆ ಮಾತುಗಳನ್ನು ಬಿಜೆಪಿ ನಾಯಕರು ಹೇಳುತ್ತಿದ್ದರು. ಆದರೆ ನಮ್ಮ ಸರ್ಕಾರ ಸಂವಿಧಾನ ಜಾಗೃತಿ ಜಾಥಾ ಮಾಡಿದ ಮೇಲೆ ಆ ಮಾತುಗಳು ಕಡಿಮೆಯಾಗಿವೆ. ಅಷ್ಟರ-ಮಟ್ಟಿಗೆ ನಮ್ಮ ಕಾರ್ಯಕ್ರಮ ಜಾಗೃತಿ ಮೂಡಿಸಿದೆ’ ಎಂದರು.

‘ಹಿಂದೂ ರಾಷ್ಟ್ರ ನಿರ್ಮಿಸುತ್ತೇವೆ ಎಂಬ ಮಾತೇ ಸಂವಿಧಾನ ಬದಲಾಯಿಸುವ ಅವರ ಇಂಗಿತವನ್ನು ಸೂಚಿಸುತ್ತದೆ. ಸಂವಿಧಾನ ಉಳಿಯದಿದ್ದರೆ ನಾವೂ ಉಳಿಯುವುದಿಲ್ಲ’ ಎಂದರು.

ಇದಕ್ಕೂ ಮುನ್ನ ಸುದ್ದಿಗಾರರೊಂ-ದಿಗೆ ಮಾತನಾಡಿ, ‘ಬಿಜೆಪಿ ಸರ್ಕಾರ ಬಂದರೆ ಮಹಿಳೆಯರು ತಾಳಿಯ ಜೊತೆಗೆ ತಮ್ಮ ಗಂಡ, ಮಕ್ಕಳನ್ನೂ ಕಳೆದುಕೊಳ್ಳುತ್ತಾರೆ ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ಯಾವ ಅರ್ಥದಲ್ಲಿ ಹೇಳಿದ್ದಾರೆಯೋ ಗೊತ್ತಿಲ್ಲ. ಆದರೆ, ಮೋದಿ ಅವರು ನೀಡುವ ಎಲ್ಲ ಭರವಸೆಗಳೂ ಪೊಳ್ಳು. ಅವರು ಭರವಸೆಗಳನ್ನು ಜಾರಿಗೆ ತರುವುದಿಲ್ಲ ಎಂಬುದಂತೂ ಸತ್ಯ’ ಎಂದರು.


3ನೇ ಹಂತ: ಕಣದಲ್ಲಿ 1,351 ಅಭ್ಯರ್ಥಿಗಳು

ನವದೆಹಲಿ (ಪಿಟಿಐ): ದೇಶದ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೂರನೇ ಹಂತದಲ್ಲಿ ನಡೆಯಲಿರುವ ಲೋಕಸಭಾ ಚುನಾವಣಾ ಕಣದಲ್ಲಿ ಒಟ್ಟಾರೆ 1,351 ಅಭ್ಯರ್ಥಿಗಳಿದ್ದಾರೆ ಎಂದು ಚುನಾವಣಾ ಆಯೋಗ ಮಂಗಳವಾರ ತಿಳಿಸಿದೆ.

ಎರಡನೇ ಹಂತದಲ್ಲಿ ನಡೆಯಬೇಕಿದ್ದ, ಬಿಎಸ್‌ಪಿ ಅಭ್ಯರ್ಥಿಯ ಅಕಾಲಿಕ ಮರಣದಿಂದಾಗಿ ಮೂರನೇ ಹಂತದಲ್ಲಿ ಮತದಾನ ನಿಗದಿಯಾಗಿರುವ ಮಧ್ಯ ಪ್ರದೇಶದ ಬೇತುಲ್ ಕ್ಷೇತ್ರದಿಂದ ಎಂಟು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ ಎಂದು ಆಯೋಗ ಹೇಳಿಕೆ ಬಿಡುಗಡೆ ಮಾಡಿದೆ. ಮೂರನೇ ಹಂತದ ಮತದಾನ ಮೇ 7ರಂದು ನಡೆಯಲಿದ್ದು, ಉಮೇದುವಾರಿಕೆ ಹಿಂಪಡೆಯಲು ಏಪ್ರಿಲ್ 22 ಕೊನೆಯ ದಿನವಾಗಿತ್ತು. 95 ಕ್ಷೇತ್ರಗಳಲ್ಲಿ ಒಟ್ಟಾರೆ 2,963 ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದರು.

ನಿಧನ ವಾರ್ತೆ

ಡಾ.ವಿ.ಎನ್.ಲಕ್ಷ್ಮೀನಾರಾಯಣ್



ಮೈಸೂರು: ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ (ಪಿಯುಸಿಎಲ್) ರಾಜ್ಯ ಕಾರ್ಯದರ್ಶಿ ಡಾ.ವಿ.ಎನ್.ಲಕ್ಷ್ಮೀ ನಾರಾಯಣ್ (71) ಸೋಮವಾರ ರಾತ್ರಿ 11ಕ್ಕೆ ಹೃದಯಾಘಾತದಿಂದ ಇಲ್ಲಿ ಆಸ್ಪತ್ರೆ-ಯಲ್ಲಿ ನಿಧನರಾದರು. ಅವರಿಗೆ ಪತ್ನಿ ರತಿರಾವ್, ಪುತ್ರ ಅಪೂರ್ವ ಇದ್ದಾರೆ.

ಜಿಲ್ಲೆಯ ಕೆ.ಆರ್.ನಗರದ ಎಡತೊರೆ ಗ್ರಾಮದವರಾದ ಲಕ್ಷ್ಮೀನಾರಾಯಣ್, ಕೆ.ಆರ್.ಆಸ್ಪತ್ರೆಯಲ್ಲಿ ಚರ್ಮ ಹಾಗೂ ಕುಷ್ಠರೋಗ ತಜ್ಞರಾಗಿ ನಾಲ್ಕು ದಶಕ ಕೆಲಸ ಮಾಡಿದ್ದರು. ಹುಣಸೂರು, ನಂಜನಗೂಡು ಸುತ್ತಮುತ್ತ ಹಲವು ಗ್ರಾಮಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಕೊನೆದಿನಗಳವರೆಗೂ ಮೈಸೂರಿನ ಪ್ರಗತಿಪರ, ಎಡಪಂಥೀಯ, ಮಾನವ ಹಕ್ಕುಗಳು ಹಾಗೂ ಮಹಿಳಾ ಸಮಾನತೆಯ ಹೋರಾಟದಲ್ಲಿ ಸಕ್ರಿಯ-ರಾಗಿದ್ದರು.

1970ರಲ್ಲಿ ಮೈಸೂರಿನಲ್ಲಿ ರೂಪುಗೊಂಡ ಸಮಾಜವಾದಿ ಚಳವಳಿ ಮತ್ತು ದಲಿತ ಚಳವಳಿಯ ಆರಂಭಿಕ ಘಟ್ಟದಲ್ಲಿ ಮಾರ್ಕ್ಸ್‌ವಾದಿ ಚಿಂತನೆಯೊಂದಿಗೆ ಚಳುವಳಿಗೆ ಧುಮುಕಿದ್ದರು. ಹಲವು ವರ್ಷ ಪಿಯುಸಿಎಲ್ ಸಂಘಟನೆಯ ರಾಜ್ಯ ಕಾರ್ಯದರ್ಶಿ, ರಾಷ್ಟ್ರೀಯ ಕೌನ್ಸಿಲ್ ಸದಸ್ಯರಾಗಿದ್ದರು.

1974ರಲ್ಲಿ ಗೆಳೆಯರೊಡನೆ ಸೇರಿ ಕುಕ್ಕರಹಳ್ಳಿಯಲ್ಲಿ ‘ಮಾರ್ಕ್ಸ್‌ವಾದಿ ಗ್ರಂಥಾಲಯ’ ಸ್ಥಾಪಿಸಿದ್ದರು. ಇಂದಿಗೂ ಅವರ ಮನೆಯ ನೆಲಮಹಡಿಯಲ್ಲಿ ‘ಅರಿವು’ ಗ್ರಂಥಾಲಯ ಕಾರ್ಯನಿರ್ವ-ಹಿಸುತ್ತಿದೆ.

‘ವಿಜಯನಗರ 2ನೇ ಹಂತದಲ್ಲಿರುವ ಅವರ ಮನೆಯಲ್ಲಿ ಬುಧವಾರ ಬೆಳಿಗ್ಗೆ 8ರಿಂದ 11ರವರೆಗೆ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಅವಕಾಶವಿರುತ್ತದೆ. ಬಳಿಕ ಮೃತರ ಕೋರಿದ್ದಂತೆ ದೇಹವನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾನ ಮಾಡಲಾಗುವುದು’ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹವಾಮಾನ ಇಲಾಖೆಯ ಮುನ್ಸೂಚನೆ • ಉಳಿದ ಜಿಲ್ಲೆಗಳಲ್ಲಿ ಒಣಹವೆ ಸಂಭವ

ರಾಜ್ಯದ ಏಳು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದ ಕೆಲವೆಡೆ ಬುಧವಾರವೂ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಏಳು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ವಿಜಯಪುರ, ಬಾಗಲಕೋಟೆ, ಬೆಳಗಾವಿ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಒಂದೆರಡು ಕಡೆ ಗುಡುಗು ಸಹಿತ ಮಳೆ ಮತ್ತು ಬಿರುಗಾಳಿ (30-40 ಕಿ.ಮೀ. ವೇಗ) ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಕೆಲ ಜಿಲ್ಲೆಗಳಲ್ಲಿ ಮಳೆಯ ಜತೆಗೆ ಬಿಸಿಗಾಳಿ ಕಾಣಿಸಿಕೊಳ್ಳುವ ಸಾಧ್ಯತೆಯೂ ಇದೆ. ರಾಯಚೂರು, ವಿಜಯಪುರ, ಯಾದಗಿರಿ, ಕೊಪ್ಪಳ, ಬಾಗಲಕೋಟೆ, ಕಲಬುರಗಿ, ಬಳ್ಳಾರಿ, ಚಿತ್ರದುರ್ಗ, ಕೋಲಾರ, ಚಿಕ್ಕ-ಬಳ್ಳಾಪುರ ಜಿಲ್ಲೆಗಳಲ್ಲಿ ಬಿಸಿಗಾಳಿ ಹೆಚ್ಚಾಗುವ ಸಂಭವವಿದೆ ಎಂದು ಹೇಳಿದೆ.

24 ರಿಂದ 27ರವರೆಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಸಿ ಮತ್ತು ಆರ್ದ್ರ ಪರಿಸ್ಥಿತಿಗಳು ಮೇಲುಗೈ ಸಾಧಿಸುವ ಸಾಧ್ಯತೆಯಿದೆ. ಮುಂದಿನ 5 ದಿನಗಳು ರಾಜ್ಯದಲ್ಲಿ ಗರಿಷ್ಠ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ರಾಯಚೂರಿನಲ್ಲಿ ಗರಿಷ್ಠ (44.2 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ. ಕಲಬುರಗಿ, ಯಾದಗಿರಿ ಸೇರಿ 14 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಕಡಬ: 40.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನಲ್ಲಿ ಮಂಗಳವಾರ 40.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಇದು ಈ ವರ್ಷ ಬೇಸಿಗೆಯಲ್ಲಿ ದಾಖಲಾದ ಗರಿಷ್ಠ ತಾಪಮಾನವಾಗಿದೆ.

ಮಧ್ಯಾಹ್ನ 2.30ರ ವೇಳೆಗೆ ಇಲ್ಲಿ 40.7 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದರೂ, 45 ಡಿಗ್ರಿ ತಾಪಮಾನ ಇರುವಷ್ಟು ಧಗೆ ಇತ್ತು ಎಂದು ಹವಾಮಾನ ಇಲಾಖೆಯ ಮೂಲಗಳು ತಿಳಿಸಿವೆ. ಏಪ್ರಿಲ್ 5ರಂದು ಇದೇ ತಾಲ್ಲೂಕಿನಲ್ಲಿ 39.9 ಡಿಗ್ರಿ ಸೆಲ್ಸಿಯಸ್ ಉಷ್ಣತೆ ದಾಖಲಾಗಿತ್ತು.

ಮಂಗಳೂರು ನಗರದಲ್ಲಿ ಗರಿಷ್ಠ 36, ಕನಿಷ್ಠ 25 ಡಿಗ್ರಿ ಸೆ. ಉಷ್ಣತೆ ಇತ್ತು. ಜಿಲ್ಲೆಯಲ್ಲಿ ಎರಡು ದಿನಗಳ ಹಿಂದೆ ಮಳೆಯಾಗಿದ್ದರೂ, ವಾತಾವರಣದಲ್ಲಿ ತಂಪು ಮೂಡಿಲ್ಲ. ದಿನದಿಂದ ದಿನಕ್ಕೆ ಧಗೆ ಹೆಚ್ಚುತ್ತಿರುವ ಅನುಭವವಾಗುತ್ತಿದೆ.

ಕರಾವಳಿ ಭಾಗದಲ್ಲಿ ಮುಂದಿನ ಐದು ದಿನ (ಏ.26ರವರೆಗೆ) ಬಿಸಿಗಾಳಿ ಬೀಸಲಿದ್ದು, ಗರಿಷ್ಠ ತಾಪಮಾನ 2ರಿಂದ3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ನಾಪೋಕ್ಲು ವ್ಯಾಪ್ತಿಯಲ್ಲಿ ಗುಡುಗು ಸಹಿತ ಮಳೆ

ನಾಪೋಕ್ಲು: ನಾಪೋಕ್ಲು ಸುತ್ತಮುತ್ತ ಮಂಗಳವಾರ ಮಧ್ಯಾಹ್ನ ಗುಡುಗು ಸಹಿತ ಮಳೆಯಾಯಿತು.

ಸಮೀಪದ ನೆಲಜಿ ಗ್ರಾಮದಲ್ಲೂ ಸುಮಾರು 20 ನಿಮಿಷಗಳ ಕಾಲ ಬಿರುಗಾಳಿ ಸಹಿತ ಮಳೆಯಾಗಿದೆ. ಈ ವ್ಯಾಪ್ತಿಯಲ್ಲಿ 2-3 ದಿನಗಳಿಂದ ಅಲ್ಲಲ್ಲಿ ಮಳೆಯಾಗುತ್ತಿದ್ದು, ವಾತಾವರಣ ತಂಪಾಗಿದೆ.

ಸಿಡಿಲು ಬಡಿದು ರೈತ ಸಾವು

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹಣಮನಟ್ಟಿ ಗ್ರಾಮದಲ್ಲಿ ಸೋಮವಾರ ಸಂಜೆ ಸಿಡಿಲು ಬಡಿದು ರೈತ ಕೆಂಚಪ್ಪ ಬಸವಣ್ಣೆಪ್ಪ ಕಾವಳದ (31) ಎಂಬುವರು ಮೃತಪಟ್ಟಿದ್ದಾರೆ. ಅವರಿಗೆ ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಜಮೀನಿನಲ್ಲಿ ನೀರು ಹಾಯಿಸುವಾಗ ಸಿಡಿಲು ಬಡಿದಿದೆ.ಪ್ರಕೃತಿ ವಿಕೋಪ ಪರಿಹಾರದಡಿ ಕೆಂಚಪ್ಪ ಅವರ ಕುಟುಂಬಕ್ಕೆ ಪರಿಹಾರ ಒದಗಿಸಲಾಗು-ವುದು ಎಂದು ತಹಶೀಲ್ದಾರ್ ಎಚ್.ಎನ್. ಶಿರಹಟ್ಟಿ ತಿಳಿಸಿದ್ದಾರೆ.

ಬುಧವಾರ, ಏಪ್ರಿಲ್ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 114 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಚಾಟ್‌ಜಿಪಿಟಿಯ ಹೊಸ ಆವೃತ್ತಿ ಈಗ ಹೊರಬಂದಿದೆ; ಜೊತೆಗೆ ಅದಕ್ಕೆ ಸ್ಪರ್ಧಿಗಳೂ ಹುಟ್ಟಿಕೊಂಡಿದ್ದಾರೆ.



ಕೇರಳದಲ್ಲಿ ಬಾವಿಗೆ ಬಿದ್ದ ಆನೆ ಸಾವು 4
ವಿಶ್ವ ಹವಾಮಾನ ಸಂಸ್ಥೆಯಿಂದ ವರದಿ ಬಿಡುಗಡೆ
ಕೇಜ್ರಿವಾಲ್‌ಗೆ ಜೈಲಿನಲ್ಲೇ ಇನ್ಸುಲಿನ್ 4
2023– ಏಷ್ಯಾಕ್ಕೆ ದುರಂತಮಯ ವರ್ಷ 5

ಎಫ್‌ಎಂಸಿಜಿ ಕಂಪನಿಗಳಿಗೂ ಬಿಸಿ • ಪ್ರಮಾಣಪತ್ರ ಸಲ್ಲಿಸಲು ಸಚಿವಾಲಯಗಳಿಗೆ 'ಸುಪ್ರೀಂ' ನಿರ್ದೇಶನ

'ಸುಳ್ಳು ಜಾಹೀರಾತು ನಿಯಂತ್ರಿಸಿ'

ನವದೆಹಲಿ (ಪಿಟಿಐ): ಪತಂಜಲಿ ಆಯುರ್ವೇದ ಪ್ರಕರಣದಲ್ಲಿ ತನ್ನ ವಿಚಾರಣೆಯ ವ್ಯಾಪ್ತಿಯನ್ನು 'ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ವಸ್ತು' ತಯಾರಿಸುವ (ಎಫ್‌ಎಂಸಿಜಿ) ಕಂಪನಿಗಳಿಗೂ ವಿಸ್ತರಿಸಿರುವುದಾಗಿ ಮಂಗಳವಾರ ಹೇಳಿರುವ ಸುಪ್ರೀಂ ಕೋರ್ಟ್, ಈ ಪ್ರಕರಣವನ್ನು ಇನ್ನಷ್ಟು ಸೂಕ್ಷ್ಮವಾಗಿ ಪರಿಶೀಲಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

ಸಾರ್ವಜನಿಕರನ್ನು ತಪ್ಪುದಾರಿಗೆಳೆಯುವ ಎಫ್‌ಎಂಸಿಜಿ ಕಂಪನಿಗಳ ಜಾಹೀರಾತುಗಳ ಬಗ್ಗೆಯೂ ಕಠಿಣ ನಿಲುವು ತೆಗೆದುಕೊಳ್ಳಬೇಕಿದೆ. ಸಾರ್ವಜನಿಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿ, ಜನರ ಮೇಲೆ ಸವಾರಿ ಮಾಡುವಂತಹ ಕಂಪನಿಗಳ ಈ ರೀತಿಯ ಅಭ್ಯಾಸವನ್ನು ನಿಯಂತ್ರಿಸಲು ಕೇಂದ್ರದ ಮೂರು ಸಚಿವಾಲಯಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಬೇಕು ಎಂದು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರ ಪೀಠ ನಿರ್ದೇಶಿಸಿದೆ.

67 ಪತ್ರಿಕೆಗಳಲ್ಲಿ ಕ್ಷಮೆಯಾಚಿಸಿದ ಬಾಬಾ: ಅಲೋಪಥಿ ಔಷಧಗಳ ಕುರಿತು ಜನರನ್ನು ತಪ್ಪುದಾರಿಗೆಳೆಯುವ ರೀತಿಯ ಜಾಹೀರಾತು ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯೋಗ ಗುರು ಬಾಬಾ ರಾಮದೇವ ಮತ್ತು ಪತಂಜಲಿ ಆಯುರ್ವೇದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಬಾಲಕೃಷ್ಣ ಅವರು 67 ಪತ್ರಿಕೆಗಳಲ್ಲಿ ಪೂರ್ಣ ಮನಸ್ಸಿನಿಂದ ಕ್ಷಮೆ ಯಾಚಿಸಿದ್ದಾರೆ ಮತ್ತು ಈ ಕುರಿತು ಹೆಚ್ಚುವರಿಯಾಗಿ ಜಾಹೀರಾತುಗಳನ್ನು ನೀಡಲು ಸಿದ್ಧರಿದ್ದಾರೆ ಎಂದು ಅವರ ಪರ ಹಿರಿಯ ವಕೀಲ ಮುಕುಲ್ ರೋಹಟಗಿ ಪೀಠಕ್ಕೆ ತಿಳಿಸಿದರು.



ಸಾರ್ವಜನಿಕವಾಗಿ ಕ್ಷಮೆಯಾಚಿಸಿದ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದ ಜಾಹೀರಾತುಗಳು ದಾಖಲೆಯಲ್ಲಿಲ್ಲ ಎಂದು ಹೇಳಿದ ಪೀಠ, ಅವುಗಳನ್ನು ಎರಡು ದಿನಗಳಲ್ಲಿ ಸಲ್ಲಿಸುವಂತೆ ಸೂಚಿಸಿ, ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.

ಸೂಕ್ಷ್ಮ ಪರಿಶೀಲನೆ ಅಗತ್ಯ: ಪತಂಜಲಿಯ ವಿಚಾರಣೆ ಸಂದರ್ಭದಲ್ಲಿ ಪೀಠವು, 'ಔಷಧಗಳು ಮತ್ತು ದಿಢೀರ್ ಪರಿಹಾರ' (ಆಕ್ಷೇಪಾರ್ಹ ಜಾಹೀರಾತುಗಳು) ಕಾಯ್ದೆ, ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ, ಗ್ರಾಹಕ ಸಂರಕ್ಷಣಾ ಕಾಯ್ದೆ ಮತ್ತು ಸಂಬಂಧಿತ ನಿಯಮಗಳ ಅನುಷ್ಠಾನಕ್ಕೆ ಸೂಕ್ಷ್ಮವಾದ ಪರಿಶೀಲನೆ ಅತ್ಯಗತ್ಯ ಎಂದು ಹೇಳಿದೆ.

ಈ ಪ್ರಕರಣ ಕೇವಲ ಪತಂಜಲಿಗೆ ಸೀಮಿತವಾಗಿಲ್ಲ. ಅದನ್ನು ಎಲ್ಲ ಎಫ್‌ಎಂಸಿಜಿ ಕಂಪನಿಗಳಿಗೆ ವಿಸ್ತರಿಸಲಾಗಿದೆ. ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ನೀಡಿ ಸಾರ್ವಜನಿಕರ ಮೇಲೆ ಸವಾರಿ ಮಾಡುವುದು ಸರಿಯಲ್ಲ' ಎಂದು ಪೀಠ ತಿಳಿಸಿದೆ.

ಯಾವ ಕ್ರಮ ತೆಗೆದುಕೊಂಡಿದ್ದೀರಿ?: ಗ್ರಾಹಕರ ಕಾನೂನುಗಳ ದುರುಪಯೋಗ ತಡೆಯಲು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ, ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯಗಳು ಯಾವ ಕ್ರಮ ಕೈಗೊಂಡಿವೆ ಎಂದು ಪೀಠ ಇದೇ ವೇಳೆ ಪ್ರಶ್ನಿಸಿತು.

ಈ ಸಚಿವಾಲಯಗಳು 2018ರಿಂದ ಸಂಬಂಧಿತ ದತ್ತಾಂಶಗಳ ಜತೆಗೆ, ಈ ಕಾನೂನುಗಳ ದುರುಪಯೋಗ ತಡೆಯಲು ತೆಗೆದುಕೊಂಡ ಕ್ರಮಗಳನ್ನು ವಿವರಿಸುವ ಪ್ರಮಾಣಪತ್ರ ಸಲ್ಲಿಸಬೇಕು. ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪರವಾನಗಿ ಪ್ರಾಧಿಕಾರಗಳನ್ನು ಸಹ ಈ ವಿಷಯದಲ್ಲಿ ಸಹ–ಪ್ರತಿವಾದಿಗಳೆಂದು ಸೂಚಿಸಲಾಗುವುದು ಎಂದು ಪೀಠ ತಿಳಿಸಿದೆ.

ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆಯ 170ನೇ ನಿಯಮದ ಪ್ರಕಾರ ಯಾವುದೇ ಕ್ರಮ ತೆಗೆದುಕೊಳ್ಳದಂತೆ ಆಯುಷ್ ಸಚಿವಾಲಯವು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಪರವಾನಗಿ ಅಧಿಕಾರಿಗಳು ಮತ್ತು ಆಯುಷ್‌ನ ಔಷಧ ನಿಯಂತ್ರಣ ಇಲಾಖೆಗಳಿಗೆ 2023ರಲ್ಲಿ ಹೊರಡಿಸಿದ್ದ ಪತ್ರದ ಕುರಿತು ವಿವರಣೆ ನೀಡುವಂತೆಯೂ ಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಕ್ಷಮೆ ಕೋರಲು ತಡವಾದದ್ದೇಕೆ?: ಸುಪ್ರೀಂ

ಪತ್ರಿಕೆಗಳಲ್ಲಿ ಜಾಹೀರಾತು ಮೂಲಕ ಕ್ಷಮೆ ಕೋರಲು ಒಂದು ವಾರ ಏಕೆ ಬೇಕಾಯಿತು ಎಂದು ಪೀಠ ಕೇಳಿತು. ಅದಕ್ಕೆ ಪ್ರತಿಕ್ರಿಯಿಸಿದ ವಕೀಲ ಮುಕುಲ್ ರೋಹಟಗಿ, 'ಜಾಹೀರಾತಿನ ಭಾಷೆಯನ್ನು ಬದಲಿಸಬೇಕಿತ್ತು' ಎಂದರು.

ಇದೇ ವೇಳೆ ಜಾಹೀರಾತುಗಳ ಗಾತ್ರದ ಬಗ್ಗೆಯೂ ನ್ಯಾಯಾಲಯ ಪ್ರಶ್ನೆ ಮಾಡಿತು. ಸಾಮಾನ್ಯವಾಗಿ ನೀವು ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವಷ್ಟು ಗಾತ್ರದಲ್ಲಿಯೇ ಇವುಗಳು ಇವೆಯಾ ಎಂದು ಪೀಠ ಕೇಳಿತು. ಪತ್ರಿಕೆಗಳಲ್ಲಿ ಪ್ರಕಟವಾದ ನಿಜವಾದ ಜಾಹೀರಾತುಗಳನ್ನು ಪೀಠ ನೋಡಲು ಬಯಸಿದ್ದು, ಆ ಕುರಿತ ದಾಖಲೆ ಸಲ್ಲಿಸುವಂತೆ ಆದೇಶಿಸಿತು.



ಐಎಂಎಗೂ ಸೂಚನೆ

ಪತಂಜಲಿ ಜಾಹೀರಾತು ಪ್ರಕರಣದ ಅರ್ಜಿದಾರರಾದ ಭಾರತೀಯ ವೈದ್ಯಕೀಯ ಸಂಘಕ್ಕೆ (ಐಎಂಎ) ಪೀಠವು, ನಿಮ್ಮ ಮನೆಯನ್ನೂ ಕ್ರಮಬದ್ಧವಾಗಿ ಇಟ್ಟುಕೊಳ್ಳಿ ಎಂದು ಸೂಚನೆ ನೀಡಿತು. 'ನೀವು ಪತಂಜಲಿಯತ್ತ ಬೆರಳು ತೋರಿಸುತ್ತಿರುವಾಗ, ಉಳಿದ ನಾಲ್ಕು ಬೆರಳುಗಳು ನಿಮ್ಮತ್ತ (ಐಎಂಎ) ತೋರಿಸುತ್ತವೆ' ಎಂದು ಪೀಠವು ಐಎಂಎ ವಕೀಲರಿಗೆ ಹೇಳಿತು.

ದುಬಾರಿ ಔಷಧಗಳು ಮತ್ತು ಚಿಕಿತ್ಸೆ ಮಾರ್ಗವನ್ನು ಶಿಫಾರಸು ಮಾಡುವ ಐಎಂಎ ಸದಸ್ಯರ ಆಪಾದಿತ ಅನೈತಿಕ ಕೃತ್ಯಗಳ ಬಗ್ಗೆ ಹಲವು ದೂರುಗಳಿವೆ ಎಂದ ಪೀಠವು, ಈ ವಿಚಾರದಲ್ಲಿ ನ್ಯಾಯಾಲಯಕ್ಕೆ ಪರಿಣಾಮಕಾರಿ ಸಹಾಯಕ್ಕಾಗಿ ರಾಷ್ಟ್ರೀಯ ವೈದ್ಯಕೀಯ ಆಯೋಗವನ್ನು (ಎನ್‌ಎಂಸಿ) ಪ್ರತಿವಾದಿಯನ್ನಾಗಿ ಮಾಡುವಂತೆ ಆದೇಶಿಸಿತು.



ಕರಗ ಬೆಂಗಳೂರಿನ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಮಂಗಳವಾರ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಿತು – ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್.ಜಿ.

3A

ಬಹಿರಂಗ ಪ್ರಚಾರಕ್ಕೆ ಇಂದು ತೆರೆ

ಪ್ರಜಾವಾಣಿ ವಾರ್ತೆ

14 ಕ್ಷೇತ್ರಗಳು

ಬೆಂಗಳೂರು: ರಾಜ್ಯದಲ್ಲಿ ಮೊದಲ ಹಂತದಲ್ಲಿ (ಏಪ್ರಿಲ್ 26) ಮತದಾನ ನಡೆಯುವ 14 ಲೋಕಸಭಾ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರಕ್ಕೆ ಬುಧವಾರ ಸಂಜೆ ತೆರೆ ಬೀಳಲಿದೆ. ವ್ಯಾಪಕವಾಗಿ ನಡೆಸಿದ ಬಹಿರಂಗ ಸಭೆಗಳು, ಪಾದಯಾತ್ರೆಗಳ ಮೂಲಕ ಮತದಾರರ ಮನ ಗೆಲ್ಲಲು ಈ ಕ್ಷೇತ್ರಗಳ ಅಭ್ಯರ್ಥಿಗಳು ಸಜ್ಜಾಗಿದ್ದಾರೆ.

ಈ 14 ಕ್ಷೇತ್ರಗಳಲ್ಲಿ ಮಾರ್ಚ್ 28ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. ಅದಕ್ಕೂ ಮೊದಲೇ ಚುನಾವಣಾ ಪ್ರಚಾರ ಬಿರುಸಾಗಿತ್ತು. 11 ಕ್ಷೇತ್ರಗಳಲ್ಲಿ ಕಾಂಗ್ರೆಸ್–ಬಿಜೆಪಿ ನೇರ ಹಣಾಹಣಿ ನಡೆಸುತ್ತಿದ್ದರೆ, ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್–ಜೆಡಿಎಸ್ ಮಧ್ಯೆ ಸ್ಪರ್ಧೆ ಇದೆ. ಬಿಜೆಪಿ, ಕಾಂಗ್ರೆಸ್‌ನ ಕೇಂದ್ರ, ರಾಜ್ಯಗಳ ಘಟಾನುಘಟಿ ನಾಯಕರು ಹಲವು ಸುತ್ತಿನ ಪ್ರಚಾರ ನಡೆಸಿದ್ದಾರೆ. ಜೆಡಿಎಸ್ ನಾಯಕರೂ ಒಕ್ಕಲಿಗ ಮತದಾರರ ಪ್ರಾಬಲ್ಯ ಇರುವ ಕ್ಷೇತ್ರಗಳಲ್ಲಿ ಎಡೆಬಿಡದೆ ಪ್ರಚಾರ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮೈಸೂರು, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನಲ್ಲಿ ಬಹಿರಂಗ ಸಭೆಯ ಮೂಲಕ ಬಿಜೆಪಿ, ಜೆಡಿಎಸ್ ಅಭ್ಯರ್ಥಿಗಳ ಪರ ಮತ ಯಾಚಿಸಿದ್ದಾರೆ. ಮಂಗಳೂರಿನಲ್ಲಿ ರೋಡ್ ಶೋ ನಡೆಸಿ ಕರಾವಳಿಯ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಬೆಂಗಳೂರಿನಲ್ಲಿ ಸರಣಿ ಸಭೆಗಳ ಮೂಲಕ ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸುವ ಜತೆಯಲ್ಲೇ, ಬಹಿರಂಗ ಸಭೆಯಲ್ಲೂ ಮತ ಯಾಚಿಸಿದ್ದರು.

5ನೇ ಪುಟ ನೋಡಿ

ಮಿಲಿಟರಿ ವೆಚ್ಚ: 4ನೇ ಸ್ಥಾನದಲ್ಲಿ ಭಾರತ

ನವದೆಹಲಿ: ಜಾಗತಿಕವಾಗಿ ಮಿಲಿಟರಿ ಅಗತ್ಯಗಳಿಗಾಗಿ ಅತಿ ಹೆಚ್ಚಿನ ಮೊತ್ತ ವಿನಿಯೋಗಿಸುವ ದೇಶಗಳ ಸಾಲಿನಲ್ಲಿ ಭಾರತವು ನಾಲ್ಕನೆಯ ಸ್ಥಾನದಲ್ಲಿ ಇದೆ ಎಂದು 'ಸ್ಟಾಕ್‌ಹೋಂ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್' (ಎಸ್‌ಐಪಿಆರ್‌ಐ) ವರದಿ ಹೇಳಿದೆ. 4

ಚಿನಕುರುಳಿ


ಪ್ರಕಾಶ್ ಶೆಟ್ಟಿ



ಷರತ್ತುಬದ್ಧ ಜಾಮೀನಿಗೆ ನಾಲ್ಕು ತಿಂಗಳ ತಡೆ ನೀಡಿದ ಸುಪ್ರೀಂ ಕೋರ್ಟ್

ಶರಣಾಗಲು ಮುರುಘಾಶ್ರೀಗೆ ತಾಕೀತು

ಪ್ರಜಾವಾಣಿ ವಾರ್ತೆ



ನವದೆಹಲಿ: ಪೋಕ್ಸೊ ಕಾಯ್ದೆಯಡಿ ಆರೋಪಿಯಾಗಿರುವ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಶರಣರು ಒಂದು ವಾರದೊಳಗೆ ವಿಚಾರಣಾ ನ್ಯಾಯಾಲಯಕ್ಕೆ ಶರಣಾಗಬೇಕು ಹಾಗೂ ಸಾಕ್ಷಿಗಳ ವಿಚಾರಣೆ ನಡೆಯುವವರೆಗೆ ನಾಲ್ಕು ತಿಂಗಳ ಕಾಲ ನ್ಯಾಯಾಂಗ ಬಂಧನದಲ್ಲಿರಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಶರಣರಿಗೆ ಕರ್ನಾಟಕ ಹೈಕೋರ್ಟ್ 2023ರ ನವೆಂಬರ್ 8ರಂದು ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದನ್ನು ಪ್ರಶ್ನಿಸಿ ಸಂತ್ರಸ್ತೆಯ ತಂದೆಯು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಸತೀಶ್ ಚಂದ್ರ ಶರ್ಮಾ ಅವರಿದ್ದ ಪೀಠವು ಹೈಕೋರ್ಟ್‌ನ ಆದೇಶವನ್ನು ನಾಲ್ಕು ತಿಂಗಳ ಕಾಲ ತಡೆ ಹಿಡಿದಿದೆ.

ವಿಚಾರಣಾ ನ್ಯಾಯಾಲಯವು ನಾಲ್ಕು ತಿಂಗಳೊಳಗೆ ಸಾಕ್ಷ್ಯ ಸಾಮಗ್ರಿಗಳ ಪರಿಶೀಲನೆ ನಡೆಸಬೇಕು ಹಾಗೂ ಒಂದು ವರ್ಷದೊಳಗೆ ವಿಚಾರಣೆ ಪೂರ್ಣಗೊಳಿಸಬೇಕು ಎಂದು ಪೀಠ ಸೂಚಿಸಿದೆ.

ಸ್ವಾಮೀಜಿ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, 'ಶರಣರು ನ್ಯಾಯಾಲಯಕ್ಕೆ ಶರಣಾಗಲಿದ್ದಾರೆ ಹಾಗೂ ಸಾಕ್ಷ್ಯ ಸಾಮಗ್ರಿಗಳ ವಿಚಾರಣೆ ಮುಗಿಯುವವರೆಗೆ ಹೈಕೋರ್ಟ್ ಆದೇಶವನ್ನು (ಅಂದರೆ ನಾಲ್ಕರಿಂದ ಗರಿಷ್ಠ ಆರು ತಿಂಗಳವರೆಗಿನ ಅವಧಿಯವರೆಗೆ) ತಡೆ ಹಿಡಿಯಬಹುದು' ಎಂದು ಪ್ರಸ್ತಾಪಿಸಿದರು.

ಸಂತ್ರಸ್ತೆಯ ತಂದೆ ಪರ ವಾದ ಮಂಡಿಸಿದ ವಕೀಲೆ ಅಪರ್ಣಾ ಭಟ್, 'ಸಂತ್ರಸ್ತರು ಅಪ್ರಾಪ್ತ ಬಾಲಕಿಯರು. ಇದು ಲೈಂಗಿಕ ಶೋಷಣೆಗೆ ಸಂಬಂಧಿಸಿದ ಪ್ರಕರಣವಾಗಿರುವುದರಿಂದ ಹೈಕೋರ್ಟ್ ನೀಡಿರುವ ಜಾಮೀನು ರದ್ದುಪಡಿಸಬೇಕು' ಎಂದು ಮನವಿ ಮಾಡಿದರು.

ಎರಡೂ ಪಕ್ಷಗಳ ಸುದೀರ್ಘ ವಾದವನ್ನು ಆಲಿಸಿದ ನ್ಯಾಯಪೀಠ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹೈಕೋರ್ಟ್ ವಿಸ್ತೃತ ಆದೇಶ ಜಾರಿಗೊಳಿಸಿರುವುದರಿಂದ ನಾವು ಮತ್ತೊಮ್ಮೆ ವಿವರವಾದ ಆದೇಶ ಹೊರಡಿಸುವ ಅಗತ್ಯವಿಲ್ಲ. ಆರೋಪಿಯು ನ್ಯಾಯಾಂಗ ಬಂಧನದಲ್ಲಿರುವ ಸಂದರ್ಭದಲ್ಲಿ ಎಲ್ಲ ಸಾಕ್ಷಿಗಳ ವಿಚಾರಣೆಯನ್ನು ತ್ವರಿತವಾಗಿ ಮುಗಿಸುವುದು ಸೂಕ್ತ' ಎಂದಿತು.

'ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆಗಸ್ಟ್ 26ರಂದು ದೂರು ದಾಖಲಿಸಿದ್ದರು. 2022ರ ಸೆಪ್ಟೆಂಬರ್ 1ರಂದು ಶರಣರನ್ನು ಬಂಧಿಸಲಾಗಿತ್ತು.

ಶರಣರ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012, ಭಾರತೀಯ ದಂಡ ಸಂಹಿತೆ–1860, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989 ಮತ್ತು ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯ್ದೆ–2015ರ ವಿವಿಧ ಕಲಂಗಳ ಅಡಿಯಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದ್ದು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಮೊದಲ ಪ್ರಕರಣದ ಬೆನ್ನಲ್ಲೇ ಮತ್ತೊಂದು ಪೋಕ್ಸೊ ಪ್ರಕರಣ ಶರಣರ ವಿರುದ್ಧ ದಾಖಲಾಗಿದ್ದು ಇದರಲ್ಲಿ ಶರಣರ ವಿರುದ್ಧ ಬಾಡಿ ವಾರಂಟ್ ಹೊರಡಿಸಲಾಗಿತ್ತು. ಶರಣರಿಗೆ ಹೈಕೋರ್ಟ್ ಏಕಸದಸ್ಯ ಪೀಠ ನವೆಂಬರ್‌ನಲ್ಲಿ ಜಾಮೀನು ನೀಡಿತ್ತು.

ಸುಪ್ರೀಂ ಕೋರ್ಟ್ ನಿರ್ದೇಶನವೇನು?

- ಪ್ರಕರಣದ ವಿಚಾರಣೆಯನ್ನು ದಿನನಿತ್ಯದ ಆಧಾರದ ಮೇಲೆ ನಡೆಸಬೇಕು ಮತ್ತು ನಾಲ್ಕು ತಿಂಗಳಲ್ಲಿ ಎಲ್ಲ ಸಾಕ್ಷಿಗಳ ವಿಚಾರಣೆ ಪೂರ್ಣಗೊಳಿಸಬೇಕು ಎಂದು ನ್ಯಾಯಪೀಠ ವಿಚಾರಣಾ ನ್ಯಾಯಾಲಯಕ್ಕೆ ಸೂಚನೆ ನೀಡಿತು
- ಅಗತ್ಯ ಸಂದರ್ಭಗಳನ್ನು ಹೊರತುಪಡಿಸಿ ಪ್ರಕರಣದ ವಿಚಾರಣೆಯಲ್ಲಿ ಅನಗತ್ಯ ಮುಂದೂಡಿಕೆ ಕೇಳದಂತೆ ಪ್ರಾಸಿಕ್ಯೂಟರ್ ಹಾಗೂ ಆರೋಪಿಗೆ ನಿರ್ದೇಶಿಸಿದ ನ್ಯಾಯಪೀಠ, ವಿಚಾರಣೆಗೆ ಸಹಕರಿಸುವಂತೆ ಸ್ವಾಮೀಜಿಗೆ ಸೂಚಿಸಿತು
- ನಾಲ್ಕು ತಿಂಗಳ ಅವಧಿಯಲ್ಲಿ ಸಾಕ್ಷಿಗಳ ವಿಚಾರಣೆ ನಡೆಸಲು ಸಾಧ್ಯವಾಗದಿದ್ದಲ್ಲಿ, ವಿಚಾರಣಾ ನ್ಯಾಯಾಲಯವು ಈ ನ್ಯಾಯಾಲಯದಿಂದ ಅವಧಿ ವಿಸ್ತರಣೆಗೆ ಮನವಿ ಮಾಡಬಹುದು. ಆದರೆ, ಅಲ್ಲಿಯವರೆಗೆ ಪ್ರತಿವಾದಿ ಸ್ವಾಮೀಜಿ ನ್ಯಾಯಾಂಗ ಬಂಧನದಲ್ಲಿಯೇ ಇರಲಿದ್ದಾರೆ ಎಂದೂ ಪೀಠ ಸ್ಪಷ್ಟಪಡಿಸಿತು. ನ್ಯಾಯಾಲಯದ ದಾಖಲೆಗಳಿಂದ ಸಂತ್ರಸ್ತರು ಮತ್ತು ಸಾಕ್ಷಿಗಳ ಹೆಸರುಗಳನ್ನು ಪರಿಷ್ಕರಿಸುವಂತೆ ಎರಡೂ ಪಕ್ಷಗಳಿಗೆ ನ್ಯಾಯಾಲಯ ಸೂಚಿಸಿತು

'ಮಾಹಿತಿಯಿಲ್ಲದೇ ವಿರೋಧಿಸಿದ್ದೆ'

ವಿದ್ಯಾರ್ಥಿನಿ ನೇಹಾ ಅವರ ತಂದೆ ನಿರಂಜನಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಾಹಿತಿ ಕೊರತೆಯಿಂದ ಮಗಳ ಕೊಲೆ ಪ್ರಕರಣದ ತನಿಖೆ ದಿಕ್ಕು ತಪ್ಪುತ್ತಿದೆ ಎಂದು ತಿಳಿದು, ರಾಜ್ಯ ಸರ್ಕಾರ ಮತ್ತು ಪೊಲೀಸ್ ಕಮಿಷನರ್ ವಿರುದ್ಧ ಮಾತನಾಡಿದ್ದೆ. ನನ್ನಿಂದಾದ ತಪ್ಪಿಗೆ ಕ್ಷಮೆ ಕೋರುತ್ತೇನೆ' ಎಂದು ಕೊಲೆಯಾದ ನೇಹಾ ಅವರ ತಂದೆ ನಿರಂಜನಯ್ಯ ಹಿರೇಮಠ ಹೇಳಿದರು.

'ಮಗಳು ಕೊಲೆಯಾದ ಬಳಿಕ ದುಃಖದಲ್ಲಿ ಇದ್ದೆ. ಅಂತ್ಯಕ್ರಿಯೆವರೆಗೂ ನನ್ನ ಜೊತೆಯಲ್ಲಿದ್ದ ನನ್ನವರು, ನಂತರ ಕಂಡಿರಲಿಲ್ಲ. ಪ್ರಕರಣ ಕುರಿತ ಎಲ್ಲ ಮಾಹಿತಿಯನ್ನು ಪಕ್ಷದವರೇ ಸರ್ಕಾರಕ್ಕೆ ಒದಗಿಸಿದ್ದಾರೆ ಎಂದು ಸೋಮವಾರ ತಿಳಿಯಿತು. ನನ್ನಿಂದ ತಪ್ಪಾಗಿದೆ' ಎಂದೂ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ನಮ್ಮ ಪಕ್ಷದವರು ತೆರೆಮರೆಯಲ್ಲಿ ನಿಂತು, ನನ್ನ ಮಗಳ ಸಾವಿಗೆ ನ್ಯಾಯ ಕೊಡಿಸಲು ಪ್ರಯತ್ನಿಸಿದ್ದಾರೆ. ಪ್ರಕರಣ ಸಿಐಡಿಗೆ ವಹಿಸುವಲ್ಲೂ ಅವರದ್ದು ಪಾತ್ರವಿದೆ. ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆದಿದೆ. ಮಗಳನ್ನು ಕಳೆದುಕೊಂಡ ದುಃಖದಲ್ಲಿದ್ದ ನಾನು ಏನೇ ತಪ್ಪು ಮಾತನಾಡಿದರೂ ಅನ್ಯಥಾ ಭಾವಿಸಬಾರದು. ನನ್ನಿಂದಾದ ತಪ್ಪಿಗೆ ಎಲ್ಲರಿಂದಲೂ ಕ್ಷಮೆ ಕೋರುತ್ತೇನೆ' ಎಂದು ಹೇಳಿದರು.

'ಇಂತಹ ಕೃತ್ಯಗಳು ನಡೆದಾಗ ತಕ್ಷಣ ಕ್ರಮಕೈಗೊಳ್ಳಲು ವಿಶೇಷ ಕಾನೂನು ರಚಿಸಲು ಸರ್ಕಾರಕ್ಕೆ ಒತ್ತಡ ಹೆಚ್ಚುತ್ತಿದೆ. ಆ ಕಾನೂನಿಗೆ 'ನೇಹಾ ಹಿರೇಮಠ ಕಾಯ್ದೆ' ಎಂದು ಹೆಸರಿಡಬೇಕು. ಅಂತಹ ಕಾಯ್ದೆ ಜಾರಿಯಾದರೆ, ಅಪರಾಧ ಮಾಡುವ ಮನಸ್ಥಿತಿಯವರಿಗೆ ಭಯ ಮೂಡುತ್ತದೆ. ಇಂತಹ ಪ್ರಕರಣ ಎಲ್ಲಿಯೂ ಮರುಕಳಿಸಬಾರದು. ಎಲ್ಲ ಹೆಣ್ಣು ಮಕ್ಕಳು ನಿರಾತಂಕವಾಗಿ ಕಾಲೇಜಿಗೆ ಹೋಗುವಂತಾಗಬೇಕು' ಎಂದರು.



ಹುಬ್ಬಳ್ಳಿಯಲ್ಲಿ ಮಂಗಳವಾರ ಸಚಿವ ಎಚ್‌.ಕೆ.ಪಾಟೀಲ ಅವರು ನೇಹಾ ಕುಟುಂಬದವರಿಗೆ ಸಾಂತ್ವನ ಹೇಳಿದರು. ಶಾಸಕ ಪ್ರಸಾದ ಅಬ್ಬಯ್ಯ, ನೇಹಾ ತಾಯಿ ಗೀತಾ ಮತ್ತು ತಂದೆ ನಿರಂಜನಯ್ಯ ಹಿರೇಮಠ ಉಪಸ್ಥಿತರಿದ್ದರು

ನೇಹಾ ಕೊಲೆ ಪ್ರಕರಣದ ಕುರಿತು ಮುಖ್ಯಮಂತ್ರಿ ಮತ್ತು ಗೃಹಸಚಿವರು ನೀಡಿದ್ದ ಹೇಳಿಕೆ ಮುಗಿದ ಅಧ್ಯಾಯ
ಎಚ್‌.ಕೆ.ಪಾಟೀಲ, ಕಾನೂನು ಸಚಿವ

ವಿದ್ಯಾರ್ಥಿನಿ ನೇಹಾದು ವ್ಯವಸ್ಥಿತ ಕೊಲೆ. ವಿಳಂಬ ಮಾಡದೆ ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯಬೇಕು
ಪ್ರಮೋದ ಮುತಾಲಿಕ್, ಸಂಸ್ಥಾಪಕ ಅಧ್ಯಕ್ಷ, ಶ್ರೀರಾಮ ಸೇನೆ ಸಂಘಟನೆ

ಪೊಲೀಸರ ಮೇಲೆ ರಾಜಕೀಯ ಪ್ರಭಾವ ಹೆಚ್ಚಾಗುತ್ತಿದೆ. ಹೀಗಾಗಿ ನೇಹಾ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು
ಬಸವರಾಜ ಬೊಮ್ಮಾಯಿ, ಶಾಸಕ

5ನೇ ಪುಟ ನೋಡಿ

ನನ್ನ ತಾಯಿ ದೇಶಕ್ಕಾಗಿ ಮಾಂಗಲ್ಯ ಕಳೆದುಕೊಂಡರು: ಪ್ರಿಯಾಂಕಾ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ (ಬೆಂಗಳೂರು): 'ಪ್ರಧಾನಿ ಮೋದಿ ಅವರ ಬಾಯಿಯಿಂದ ಎಂತಹ ಮಾತುಗಳು ಬರುತ್ತಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಂಗಳ ಸೂತ್ರವೇ ಕಿತ್ತುಕೊಳ್ಳುತ್ತದೆ ಎಂದು ಅವರು ಹೇಳುತ್ತಾರೆ. ನನ್ನ ತಾಯಿಯ ಮಾಂಗಲ್ಯ ದೇಶಕ್ಕಾಗಿ ಬಲಿಯಾಗಿದೆ' ಎಂದು ಕಾಂಗ್ರೆಸ್‌ನ 'ತಾರಾ ಪ್ರಚಾರಕಿ' ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹೇಳಿದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಪರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ನಡೆದ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಅವರು ಮಾತನಾಡಿದರು.

'ಪ್ರಧಾನಿ ಮೋದಿ ಅವರಿಗೆ ಮಾಂಗಲ್ಯದ ಬೆಲೆ ಗೊತ್ತಿಲ್ಲ. ರೈತರು ಸಾಲ ಹೆಚ್ಚಾದಾಗ ಮನೆಯಲ್ಲಿರುವ ಮಹಿಳೆಯ ಮಾಂಗಲ್ಯವನ್ನೇ ಅಡ ಇಡುತ್ತಾರೆ. ಮನೆಯಲ್ಲಿ ಯಾರಿಗಾದರೂ ಕಷ್ಟ ಎದುರಾದರೂ ಮಾಂಗಲ್ಯ ಅಡ ಇಡುತ್ತಾಳೆ. ಬಿಜೆಪಿಗೆ ಹೆಣ್ಣು ಮಕ್ಕಳ ಕಷ್ಟ ಅರ್ಥ ಆಗುವುದಿಲ್ಲ' ಎಂದರು.

'ಚುನಾವಣಾ ಪ್ರಚಾರದಲ್ಲಿ ಬಿಜೆಪಿಯ ಯಾರೊಬ್ಬರೂ ಅಭಿವೃದ್ಧಿ ಬಗ್ಗೆ ಮಾತನಾಡುತ್ತಿಲ್ಲ. ಪ್ರಧಾನಿ ಮೋದಿಯವರ ಭಾವಚಿತ್ರ ಇಟ್ಟುಕೊಂಡು ಮತ ಕೇಳುತ್ತಿದ್ದಾರೆ' ಎಂದು ಟೀಕಿಸಿದರು.

'ನಿರುದ್ಯೋಗ ಸಮಸ್ಯೆ ಎಲ್ಲರನ್ನೂ ಕಾಡುತ್ತಿದೆ. ಪ್ರಧಾನಿ ಮೋದಿಯವರ 10 ವರ್ಷಗಳ ಆಡಳಿತ ನೋಡಿದ್ದೀರಾ? ನಿಮ್ಮ ಜೀವನದಲ್ಲಿ ಬದಲಾವಣೆ ಆಗಿದೆಯಾ ಎಂದು ಪ್ರಶ್ನೆ ಮಾಡಬೇಕಿದೆ. ನಿಮ್ಮೆಲ್ಲರ ಮುಂದೆ ಸೂಪರ್ ಮ್ಯಾನ್ ರೀತಿ ಬಂದು ಅವರು ನಿಂತಿದ್ದರು' ಎಂದು ವ್ಯಂಗ್ಯವಾಡಿದರು.



ಪ್ರಿಯಾಂಕಾ ಗಾಂಧಿ ಅವರು ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಪರವಾಗಿ ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಪ್ರಚಾರ ಮಾಡಿದರು. ಜಮೀರ್ ಅಹಮದ್, ಕೆ.ಜೆ.ಜಾರ್ಜ್, ಡಿ.ಕೆ ಶಿವಕುಮಾರ್, ಕೆ.ರೆಹಮಾನ್ ಖಾನ್, ರಾಮಲಿಂಗಾ ರೆಡ್ಡಿ ಮತ್ತಿತರರು ಇದ್ದರು ಪ್ರಜಾವಾಣಿ ಚಿತ್ರ

'ಹೆಣ್ಣನ್ನು ಬೆತ್ತಲೆ ಮಾಡಿದಾಗ ಮೋದಿ ಎಲ್ಲಿದ್ದರು?'

'ಮಣಿಪುರದಲ್ಲಿ ಒಂದು ಹೆಣ್ಣನ್ನು ಬೆತ್ತಲೆ ಮಾಡಿದಾಗ ಮೋದಿ ಎಲ್ಲಿದ್ದರು? ದೇಶದ ಬಗ್ಗೆ ಅವರಿಗೆ ಕಾಳಜಿ ಇಲ್ಲವೇ? ಮೋದಿಯವರಿಗೆ ನಾಚಿಕೆ ಆಗಬೇಕು' ಎಂದು ಪ್ರಿಯಾಂಕಾ ಟೀಕಿಸಿದರು

'ದೇಶದಲ್ಲಿ ಲಾಕ್‌ಡೌನ್ ಆದಾಗ ಬಡವರಿಗೆ ಊಟ ಇರಲಿಲ್ಲ. ಎಷ್ಟೋ ಜನ ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಪ್ರತಿಭಟನೆ ಮಾಡಿದ ರೈತರಲ್ಲಿ 600ಕ್ಕೂ ಹೆಚ್ಚು ಜನ ಸತ್ತರು. ಆಗ ಮೋದಿ ಅವರಿಗೆ ಮಾಂಗಲ್ಯ ನೆನಪಾಗಲಿಲ್ಲವೇ? ' ಎಂದು ಅವರು ಪ್ರಶ್ನಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಪ್ರಧಾನಿ ಮೋದಿ ಅಲೆ ಎಲ್ಲಿಯೂ ಇಲ್ಲ. ಇರುವುದು ಕಾಂಗ್ರೆಸ್ ಅಲೆ ಮಾತ್ರ. ನಾವು ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ಸರ್ಕಾರ ಬಂದ ತಕ್ಷಣ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಿದ್ದೇವೆ' ಎಂದರು.

'ಈ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅಲ್ಲ, ಅಮಾಸೆ ಸೂರ್ಯ. ಈ ಅಮಾಸೆ ಸೂರ್ಯನದ್ದು ಬರೀ ಸ್ಟಂಟ್. ಹೀಗಾಗಿ, ಅವನನ್ನು ಈ ಬಾರಿ ಜನ ಮನೆಗೆ ಕಳುಹಿಸಬೇಕು' ಎಂದು ಮನವಿ ಮಾಡಿದರು.

'ಬಿಜೆಪಿಯವರು ದೇವಸ್ಥಾನ, ಧರ್ಮ ಎಂದು ಹೇಳುತ್ತಾರೆ. ಅವರಿಗೆ ಮಾತ್ರ ದೇವರು ಇದ್ದಾನಾ? ನಮಗೆ ದೇವರು ಇಲ್ಲವೇ? ಸಿದ್ದರಾಮಯ್ಯ, ರಾಮಲಿಂಗಾರೆಡ್ಡಿ, ನನ್ನ ಹೆಸರಿನಲ್ಲಿ ದೇವರು ಇಲ್ಲವೇ? ದೇವನೊಬ್ಬ ನಾಮ ಹಲವು' ಎಂದರು.

ಬೊಮ್ಮನಹಳ್ಳಿಯಲ್ಲಿ ಅದ್ದೂರಿ ಮೆರವಣಿಗೆ • ಅನುರಣಿಸಿದ ಕನ್ನಡ ಹಾಡು

ಬೆಂಗಳೂರಿನಲ್ಲಿ ಶಾ ರೋಡ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ರಾತ್ರಿ ನಗರದ ಬೊಮ್ಮನಹಳ್ಳಿಯಲ್ಲಿ ರೋಡ್ ಶೋ ನಡೆಸಿ ಪಕ್ಷದ ಕಾರ್ಯಕರ್ತರಲ್ಲಿ ಹುಮ್ಮಸ್ಸು ತುಂಬಿದರು.

ಬೊಮ್ಮನಹಳ್ಳಿಯ ವಿವೇಕಾನಂದ ಸರ್ಕಲ್‌ನಿಂದ ಬನ್ನೇರುಘಟ್ಟ ರಸ್ತೆಯ ಐಐಎಂಬಿವರೆಗೆ ರಾತ್ರಿ ರೋಡ್‌ಶೋ ನಡೆಯಿತು. ಕ್ಷೇತ್ರದ ಅಭ್ಯರ್ಥಿ ತೇಜಸ್ವಿ ಸೂರ್ಯ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ರಥದ ಮಾದರಿಯ ವಾಹನದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಜನಸ್ತೋಮಕ್ಕೆ ಕೈ ಬೀಸುತ್ತಾ, ಹೂವಿನ ಪಕಳೆಗಳನ್ನು ಎಸೆಯುತ್ತಾ ಸಾಗಿದರು. ಸುಮಾರು 50 ನಿಮಿಷ ರೋಡ್ ಶೋ ನಡೆಯಿತು.

ನಿಗದಿತ ಸಮಯಕ್ಕಿಂತ ತಡವಾಗಿಯೇ ರೋಡ್ ಶೋ ಆರಂಭವಾಯಿತು. ಆದರೂ ಜನ ಅಮಿತ್ ಶಾ ಅವರನ್ನು ಕಣ್ತುಂಬಿಕೊಳ್ಳಲು ಕಾದು ನಿಂತಿದ್ದರು. ವಿಶೇಷವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಡಿ.ಜೆ ಮೂಲಕ 'ಮೋದಿ' ಕುರಿತ ಕನ್ನಡ ಹಾಡು ಅನುರಣಿಸಿತು. 'ಭಾರತ್ ಮಾತಾಕೀ ಜೈ', 'ಜೈ ಶ್ರೀರಾಮ್', 'ಜೈ ಮೋದಿ', 'ಜೈ ಅಮಿತ್ ಶಾ' ಮುಂತಾದ ಘೋಷಣೆಗಳು ಮುಗಿಲು ಮುಟ್ಟಿದವು.

ಚುನಾವಣಾ ಪ್ರಚಾರಕ್ಕೆ ತೆರೆ ಬೀಳಲು ಒಂದು ದಿನ ಬಾಕಿ ಇರುವಂತೆ ನಡೆಸಿದ ರೋಡ್ ಶೋ ಬಿಜೆಪಿ ಕಾರ್ಯಕರ್ತರಲ್ಲಿ ಹುರುಪು ತುಂಬಿತು. ಹನುಮ ಜಯಂತಿಯ ಪ್ರಯುಕ್ತ ಹನುಮ ವೇಷಧಾರಿಗಳೂ ಜನರ ಜತೆ ಹೆಜ್ಜೆ ಹಾಕಿದರು. ರಸ್ತೆಯ ಕೆಲವು ಕಡೆಗಳಲ್ಲಿ ವಿವಿಧ ಕಲಾ ತಂಡಗಳು ಗೃಹಸಚಿವರನ್ನು ಸ್ವಾಗತಿಸಿದವು. ಈ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ರಾಷ್ಟ್ರೀಯ ಮಟ್ಟದ ನಾಯಕರೊಬ್ಬರು ನಗರದಲ್ಲಿ ರೋಡ್ ಶೋ ನಡೆಸಿದ್ದು ಇದೇ ಮೊದಲು.



ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ಮಂಗಳವಾರ ಬೆಂಗಳೂರು ದಕ್ಷಿಣ ಲೋಕಸಭಾ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಪರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ರೋಡ್ ಶೋ ಮಾಡುವ ಮೂಲಕ ಮತಯಾಚಿಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ, ಶಾಸಕ ಸತೀಶ್ ರೆಡ್ಡಿ ಮತ್ತು ಬಿ.ಎಸ್‌.ಯಡಿಯೂರಪ್ಪ ಇದ್ದರು
–ಪ್ರಜಾವಾಣಿ ಚಿತ್ರ: ರಂಜು ಪಿ

ವಿಶ್ವ ಪರಿಸರ ದಿನದ ಅಂಗವಾಗಿ ‘ಆಲ್ಟರ್ನೇಟಿವ್’ ರೀಲ್ಸ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪರಿಸರ ದಿನದ ಪ್ರಯುಕ್ತ ನಗರದ ವಿಮೊವ್ ಫೌಂಡೇಷನ್ ‘ಆಲ್ಟರ್ನೇಟಿವ್ 24’ (ಪರ್ಯಾಯ) ಶೀರ್ಷಿಕೆಯಡಿ ಈ ಬಾರಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ವಿಡಿಯೊ ರೀಲ್ಸ್ ಸ್ಪರ್ಧೆ ಹಮ್ಮಿಕೊಂಡಿದೆ.

‘ಯೂತ್ ಫಾರ್ ಗ್ರೀನ್ ಆ್ಯಂಡ್ ವೈಬ್ರಂಟ್ ಬೆಂಗಳೂರು’ ಪರಿಕಲ್ಪನೆಯಡಿ ‘ಆಲ್ಟರ್ನೇಟಿವ್ 24’ ಹಮ್ಮಿಕೊಳ್ಳಲಾಗಿದೆ. ನಗರದ ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, 30 ವರ್ಷದೊಳಗಿ ನವರು ಏಕವ್ಯಕ್ತಿಯಾಗಿ ಅಥವಾ ಗುಂಪಾಗಿ ಈ ರೀಲ್ಸ್ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಜಲ ಸಂರಕ್ಷಣೆ, ಹಸಿರು ತಾಣದ ಅಗತ್ಯ, ತ್ಯಾಜ್ಯ ನಿರ್ವಹಣೆ, ಸಾಗಣೆ ಕ್ರಮಗಳಲ್ಲಿ ಬದಲಾವಣೆ ಹಾಗೂ ಹಸಿರು ಇಂಧನ ಪರಿಹಾರ ಈ ವಿಷಯಗಳ ಕುರಿತು ರೀಲ್ಸ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಪರಿಕಲ್ಪನೆಯು ಫೌಂಡೇಷನ್‌ನ ಸಂಸ್ಥಾಪಕ ವಿನಯ್ ಶಿಂಧೆ ನೇತೃತ್ವದಲ್ಲಿ ನಡೆಯಲಿವೆ.

ಸ್ಪರ್ಧೆಯಲ್ಲಿ ಭಾಗವಹಿಸುವ ವರಿಗೆ ನೋಂದಣಿಗೆ ಇದೇ 30 ಕಡೆಯ ದಿನವಾಗಿದ್ದು, ವಿಡಿಯೊ ರೀಲ್ಸ್‌ಗಳನ್ನು ಸಲ್ಲಿಸಲು ಮೇ 13ರವರೆಗೆ ಅವಕಾಶವಿದೆ. ಸ್ಪರ್ಧೆಯ ವಿಜೇತರಿಗೆ ಅತ್ಯಾಕರ್ಷಕ ಬಹುಮಾನಗಳನ್ನೂ ನೀಡಲಾಗುತ್ತದೆ. ಆಯ್ದ ವಿಡಿಯೊಗಳನ್ನು ನಗರಕ್ಕೆ ಸಂಬಂಧಿಸಿದ ಸರ್ಕಾರಿ ವೆಬ್‌ಸೈಟ್‌ಗಳಲ್ಲಿ ಪ್ರಕಟ ಮಾಡಲಾಗುತ್ತದೆ. ಜೂನ್ 1ರಂದು ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯದಲ್ಲಿ ‘ಆಲ್ಟರ್ನೇಟಿವ್ 24’ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮದಲ್ಲಿಯೇ ಬಹುಮಾನ ವಿತರಿಸಲಾಗುತ್ತದೆ ಎಂದು ಫೌಂಡೇಷನ್ ತಿಳಿಸಿದೆ.

ಒಂದರಿಂದ ಮೂರು ನಿಮಿಷಗಳ ರೀಲ್ಸ್‌ಗಳನ್ನು alternative.net.inನಲ್ಲಿ ಅಪ್‌ಲೋಡ್ ಮಾಡಬೇಕಾ ಗುತ್ತದೆ. ತಜ್ಞರ ಸಮಿತಿಯು ಪ್ರತಿ ವಿಭಾಗದಲ್ಲಿ ಮೂರು ವಿಡಿಯೊ ರೀಲ್ಸ್‌ಗಳನ್ನು ಆಯ್ಕೆ ಮಾಡುತ್ತದೆ ಎಂದು ಹೇಳಿದೆ.

‘ಪರಿಸರ ನಾಶದಿಂದ ನಗರವು ನೀರು ಸೇರಿ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದೆ. ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಯುವಜನರಿಗಾಗಿ ರೀಲ್ಸ್ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ’ ಎಂದು ವಿನಯ್ ಶಿಂಧೆ ತಿಳಿಸಿದ್ದಾರೆ.

ವಿವರಕ್ಕೆ: alternative.net.in ಅಥವಾ 9845091409

‘ಒಳಚರಂಡಿಗೆ ಮಳೆ ನೀರು ಹರಿಸಿದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನೀರನ್ನು ಒಳಚರಂಡಿಗೆ ಹರಿಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಲಮಂಡಳಿಯ ಹಿರಿಯ ಅಧಿಕಾರಿಗಳೊಂದಿಗೆ ಮಂಗಳವಾರ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ‘ಮಳೆ ನೀರನ್ನು ರಾಜಕಾಲುವೆಗೆ ಹರಿಸಬೇಕು. ಕೆಲವರು ಒಳಚರಂಡಿ ಮಾರ್ಗಕ್ಕೆ ಸಂಪರ್ಕ ಕಲ್ಪಿಸಿ, ಅಲ್ಲಿಗೇ ಹರಿಸುತ್ತಿದ್ದಾರೆ. ಈ ಬಗ್ಗೆ ಪರಿಶೀಲನೆ ನಡೆಸಿ, ಅಕ್ರಮವಾಗಿ ಒಳಚರಂಡಿ ಮಾರ್ಗಕ್ಕೆ ಮಳೆ ನೀರು ಹರಿಸುವ ವ್ಯವಸ್ಥೆ ಹೊಂದಿರುವವರ ಮೇಲೆ ಕ್ರಮ ಕೈಗೊಳ್ಳಿ’ ಎಂದು ಹೇಳಿದರು.

ಮಳೆ ನೀರು ಒಳಚರಂಡಿಗೆ ಸೇರ್ಪಡೆ ಆಗುತ್ತಿರುವ ಪ್ರದೇಶಗಳನ್ನು ಗುರುತಿಸಬೇಕು. ಅಂತಹ ಸೇರ್ಪಡೆಯನ್ನು ತಡೆಯಬೇಕು. ಮ್ಯಾನ್‌ಹೋಲ್‌ಗಳು ಮತ್ತು ಒಳಚರಂಡಿ ಮಾರ್ಗಗಳ ಪರಿಶೀಲನೆ ನಡೆಸಬೇಕು. ಎಲ್ಲೆಲ್ಲಿ ಹೂಳು ತೆಗೆಯುವ ಅಗತ್ಯವಿದೆಯೋ ಅಲ್ಲೆಲ್ಲ ಕೂಡಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಬೇಕು ಎಂದರು.

ಮಳೆಯ ಪ್ರಮಾಣ ಹೆಚ್ಚಾದ ಸಂದರ್ಭದಲ್ಲಿ ಒತ್ತಡದಿಂದ ಕೆಲವು ಕಡೆಗಳಲ್ಲಿ ಮ್ಯಾನ್‌ಹೋಲ್‌ಗಳ ಮುಚ್ಚಳಗಳು ತೆರೆದುಕೊಳ್ಳುತ್ತವೆ. ಇದರಿಂದ ಪಾದಚಾರಿಗಳು ಹಾಗೂ ವಾಹನಗಳಿಗೆ ಅನನುಕೂಲ ವಾಗುತ್ತದೆ. ಹೀಗಾಗಿ, ಇಂತಹ ಮ್ಯಾನ್‌ಹೋಲ್ ಗಳನ್ನು ಗುರುತಿಸಿ, ಅಲ್ಲಿ ‘ಪ್ರೆಷರ್ ಮ್ಯಾನ್ ಹೋಲ್’ ಅಳವಡಿಸಬೇಕು ಎಂದರು.

ಮುಚ್ಚಳ ತೆರೆಯಬೇಡಿ: ಮಳೆ ನೀರು ಹರಿದು ಹೋಗುವಂತೆ ಮಾಡಲು ಕೆಲವು ಕಡೆಗಳಲ್ಲಿ ಸಾರ್ವಜನಿಕರು ಮ್ಯಾನ್‌ಹೋಲ್‌ಗಳ ಮುಚ್ಚಳಗಳನ್ನು ತೆಗೆದುಬಿಡುತ್ತಾರೆ. ಇದರಿಂದ ಮಳೆ ನೀರು ಒಳಚರಂಡಿ ಕೊಳವೆಮಾರ್ಗಕ್ಕೆ ಪ್ರವೇಶಿಸಿ ಒಳಚರಂಡಿ ಮಾರ್ಗದ ಮೇಲೆ ಒತ್ತಡ ಹೆಚ್ಚುತ್ತದೆ. ಅಲ್ಲದೇ, ತೆರೆದ ಮ್ಯಾನ್‌ಹೋಲ್‌ಗಳಿಗೆ ಪಾದಚಾರಿಗಳು ಬೀಳುವ ಸಾಧ್ಯತೆಯೂ ಹೆಚ್ಚಾಗಿರುತ್ತದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದರು.

ಸಕ್ರಮಕ್ಕೆ ಮೇ 7ರವರೆಗೆ ಗಡುವು

ಬಿಬಿಎಂಪಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ನೀರಿನ ಸಂಪರ್ಕವನ್ನು ಸಕ್ರಮಗೊಳಿಸಿಕೊಳ್ಳಲು ಮೇ 7ರವರೆಗೆ ಅವಕಾಶ ನೀಡಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ– 1964 ಕಲಂ 65 ಮತ್ತು 72 ಅನ್ವಯ ನೀರು ಹಾಗೂ ಒಳಚರಂಡಿ ಸಂಪರ್ಕಕ್ಕೆ ಜಲಮಂಡಳಿಯಿಂದ ಅನುಮತಿ ಪಡೆದುಕೊಂಡಿರಬೇಕು. ಈ ಕಾಯ್ದೆ ಉಲ್ಲಂಘನೆ ಮಾಡಿ, ಅನಧಿಕೃತವಾಗಿ ಸಂಪರ್ಕ ಹೊಂದಿದ್ದರೆ ಅಂತಹವರು ಮೇ 7ರೊಳಗೆ ಜಲಮಂಡಳಿಗೆ ಅರ್ಜಿ ಸಲ್ಲಿಸಿ ಸಂಪರ್ಕವನ್ನು ಅಧಿಕೃತ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಕಾನೂನು ಕ್ರಮ ಕೈಗೊಂಡು, ದಂಡ ವಿಧಿಸಲಾಗುತ್ತದೆ. ಸಂಪರ್ಕಗಳನ್ನು ಕಡಿತಗೊಳಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ 28ಕ್ಕೆ ‘ವಜ್ರಮಹೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ 60 ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಇದೇ 28ರಂದು ‘ವಜ್ರಮಹೋತ್ಸವದ ವರ್ಷಾಚರಣೆ–2024’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

‘ನಗರದ ಎನ್. ಆರ್.ಕಾಲೊನಿಯಲ್ಲಿರುವ ಎಪಿಎಸ್ ಕಾಲೇಜಿನಲ್ಲಿ ‘ವಜ್ರಮಹೋತ್ಸವ ವರ್ಷಾಚರಣೆಯ’ ಉದ್ಘಾಟನಾ ಸಮಾರಂಭ ನಡೆಯಲಿದೆ. ವಜ್ರಮಹೋತ್ಸವದ ಅಂಗವಾಗಿ ಬ್ಯಾಂಕಿನ ವಹಿವಾಟನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. 2025ರ ಮಾರ್ಚ್‌ನಲ್ಲಿ ಸಮಾರೋಪ ಕಾರ್ಯಕ್ರಮ ನಡೆಯಲಿದೆ‘ ಎಂದು ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಅವರು ತಿಳಿಸಿದ್ದಾರೆ.

‘ಪ್ರತಿವರ್ಷ ಉತ್ತಮವಾಗಿ ಕಾರ್ಯನಿರ್ವಹಿಸುವ ಒಂದು ಪಟ್ಟಣ ಸಹಕಾರ ಬ್ಯಾಂಕಿಗೆ ‘ಶ್ರೀ ತ್ಯಾಗರಾಜ ಸಮ್ಮಾನ್’ ರಾಷ್ಟ್ರೀಯ ಪ್ರಶಸ್ತಿ ಮತ್ತು ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುವ ಇಬ್ಬರು ನೌಕರರಿಗೆ ತ್ಯಾಗರಾಜರ ಹೆಸರಲ್ಲಿ ‘ಉತ್ತಮ ಸಿಬ್ಬಂದಿ’ ಪ್ರಶಸ್ತಿ ನೀಡಲಾಗುವುದು. ಎರಡು ಪ್ರಶಸ್ತಿಗಳು ಕ್ರಮವಾಗಿ ₹25 ಸಾವಿರ ಹಾಗೂ ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿರುತ್ತದೆ‘ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ನಗರದಲ್ಲಿ ಇಂದು

ಡಾ. ರಾಜ್‌ಕುಮಾರ್ ಅವರ ಜನ್ಮದಿನಾಚರಣೆ: ಅತಿಥಿಗಳು: ಶ್ರೀನಿವಾಸ ಮೂರ್ತಿ, ಪಿ. ಶೇಷಾದ್ರಿ, ರಾಘವೇಂದ್ರ ರಾಜ್‌ಕುಮಾರ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ ಜೆ.ಸಿ. ರಸ್ತೆ, ಬೆಳಿಗ್ಗೆ 11

ಬೆಂಗಳೂರು ಕರಗೋತ್ಸವ: ಪಾಡ್ಯಮಿ, ಪುರಾಣ ಪ್ರವಚನ, ದೇವಸ್ಥಾನದಲ್ಲಿ ಗಾವು ಶಾಂತಿ ರಾತ್ರಿ 2ರಿಂದ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ,

ರಾಮನವಮಿ ಸಂಗೀತೋತ್ಸವ–2024: ವಿಶೇಷ ಸಂಗೀತ ಕಛೇರಿ: ಹರಿ ಕೃಷ್ಣ ಪಿ ಮತ್ತು ತಂಡ, ‘ಅಯೋಧ್ಯ ರಾಣಿ’ ಕುರಿತು ಪ್ರವಚನ: ದುಷ್ಯಂತ್ ಶ್ರೀಧರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ: ಪಿಟೀಲು: ಸೌಂದರ್ಯ ಎಸ್., ಅಭಿರಾಮ ಭಟ್, ಮೃದಂಗ: ಸರ್ವಜಿತ್ ಬಿ.ಎಸ್., ಕೊಳಲು: ಜೆ.ಬಿ. ಶ್ರುತಿ ಸಾಗರ್, ಪಿಟೀಲು: ವೈಭವ್ ರಮಣಿ, ಮೃದಂಗ: ವಿಜಯ್ ನಟೇಶನ್, ಖಂಜೀರಾ: ಸುನಾದ್ ಆನೂರ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾಮಂದಿರ, ಬಸವೇಶ್ವರನಗರ, ಸಂಜೆ 5ರಿಂದ

ಶ್ರೀರಾಮೋತ್ಸವ: ವೀಣಾ ವಾದನ: ಸುಮಾ ಸುಧೀಂದ್ರ, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಆನೂರು ಅನಂತ ಕೃಷ್ಣ ಶರ್ಮ, ಘಟ: ಎಸ್.ಎನ್. ನಾರಾಯಣ ಮೂರ್ತಿ, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu prajavani.co.in

ದ್ವೇಷ ಭಾಷಣ ಮೋದಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವೇಷ ಭಾಷಣ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ನಾಗರಿಕ ಸಂಘಟನೆಗಳ ಮುಖಂಡರು ಮಂಗಳವಾರ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಅವರಿಗೆ ದೂರು ಸಲ್ಲಿಸಿದರು.

ಪ್ರಧಾನಿಯವರು ಏ.21ರ ತಮ್ಮ ಭಾಷಣದಲ್ಲಿ ಸುಳ್ಳು ಹಾಗೂ ದ್ವೇಷದ ಮಾತುಗಳನ್ನು ಹೇಳಿದ್ದಾರೆ. ಸಮಾಜದ ಕೋಮು ಸೌಹಾರ್ದಕ್ಕೆ ಧಕ್ಕೆ ತಂದಿದ್ದಾರೆ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಹಿಂದೂ ಸಮುದಾಯದ ಮತಗಳಿಗಾಗಿ ಮತ್ತೊಂದು ಸಮುದಾಯದ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಮುಸ್ಲಿಂ ಸಮುದಾಯದ ಬಗ್ಗೆ ಹಲವು ಅಪಾಯಕಾರಿ ಚಿಂತನೆಗಳನ್ನು ಹಬ್ಬಿಸಿದ್ದಾರೆ ಎಂದು ದೂರಿದರು.

ಚುನಾವಣಾ ಆಯೋಗವು ಕ್ರಮ ಕೈಗೊಳ್ಳಬೇಕು. ಮೋದಿ ಅವರನ್ನು ಅನರ್ಹಗೊಳಿಸ-ಬೇಕು. ಅವರ ಚುನಾವಣಾ ರ‍್ಯಾಲಿ ನಿಷೇಧಿಸಬೇಕು ಎಂದು ಒತ್ತಾಯಿಸಿದರು.

ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್, ಬಹುತ್ವ ಕರ್ನಾಟಕ, ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟೀಸ್, ದ್ವೇಷ ಭಾಷಣದ ವಿರುದ್ಧ ಜನಾಂದೋಲನ, ಪೀಪಲ್ಸ್ ಸೇರಿದಂತೆ 15 ಸಂಘಟನೆಗಳ ಮುಖಂಡರು ದೂರು ಸಲ್ಲಿಸಿದರು.

ಮಹಿಳೆ ಕೊಲೆ: ಆನ್‌ಲೈನ್ ಸ್ನೇಹಿತ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಎಂ. ಶೋಭಾ (48) ಕೊಲೆ ಪ್ರಕರಣದ ಆರೋಪಿ ನವೀನ್ ಗೌಡ (28) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ನವೀನ್ ಗೌಡ, ನಗರದ ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ. ಕೊಡಿಗೇಹಳ್ಳಿ ಬಳಿಯ ಗಣೇಶನಗರದ ಶೋಭಾ ಅವರನ್ನು ಏಪ್ರಿಲ್ 18ರಂದು ಕೊಲೆ ಮಾಡಿ ಪರಾರಿಯಾಗಿದ್ದ. ಶೋಭಾ ಅವರ ಮಗಳು ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಶೋಭಾ ಅವರು ವಾಹನ ಚಾಲನಾ ತರಬೇತಿ ಶಾಲೆ ನಡೆಸುತ್ತಿದ್ದರು. ಎರಡನೇ ಮಗಳ ಜೊತೆ ನೆಲೆಸಿದ್ದರು. ಅವರ ಪತಿ ಹಾಗೂ ಮೊದಲ ಮಗಳು ಪ್ರತ್ಯೇಕವಾಗಿ ವಾಸವಿದ್ದರು. ಏಪ್ರಿಲ್ 18ರಂದು ಬೆಳಿಗ್ಗೆ ಎರಡನೇ ಮಗಳು ತಮ್ಮ ಪತಿ ಮನೆಗೆ ತೆರಳಿದ್ದರು. ಇದೇ ಸಂದರ್ಭದಲ್ಲಿ ಮನೆಗೆ ಬಂದಿದ್ದ ನವೀನ್ ಗೌಡ, ಶೋಭಾ ಅವರ ಕತ್ತು ಹಿಸುಕಿ ಕೊಂದಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದರು.



ನವೀನ್ ಗೌಡ

ಸಾಮಾಜಿಕ ಮಾಧ್ಯಮದಿಂದ ಪರಿಚಯ: ‘ಶೋಭಾ ಸಾಮಾಜಿಕ ಮಾಧ್ಯಮದಲ್ಲಿ ಖಾತೆ ಹೊಂದಿದ್ದರು. ಅದೇ ಖಾತೆಗೆ ಆರೋಪಿ ನವೀನ್ ರಿಕ್ವೆಸ್ಟ್ ಕಳುಹಿಸಿದ್ದ. ಅದನ್ನು ಶೋಭಾ ಸ್ವೀಕರಿಸಿದ್ದರು. ನಂತರ, ಇಬ್ಬರೂ ಪರಸ್ಪರ ಚಾಟಿಂಗ್ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡಿದ್ದ ಇಬ್ಬರೂ ಮಾತುಕತೆ ಆರಂಭಿಸಿದ್ದರು. ಇಬ್ಬರ ನಡುವೆ ಸಲುಗೆಯೂ ಬೆಳೆದಿತ್ತು ಎಂಬ ಮಾಹಿತಿ ಇದೆ. ಭೇಟಿಯಾಗುವುದಾಗಿ ಹೇಳಿದ್ದ ನವೀನ್, ಕೆಲ ದಿನಗಳ ಹಿಂದೆಯಷ್ಟೇ ಶೋಭಾ ಅವರ ಮನೆಗೆ ಬಂದು ಹೋಗಿದ್ದ. ಏಪ್ರಿಲ್ 18ರಂದು ಎರಡನೇ ಬಾರಿ ಮನೆಗೆ ಬಂದಿದ್ದ ನವೀನ್ ಹಾಗೂ ಶೋಭಾ ನಡುವೆ ಶುರುವಾದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ’ ಎಂದು ತಿಳಿಸಿದರು.

‘ಕೊಲೆ ನಂತರ ಆರೋಪಿ ನವೀನ್, ಶೋಭಾ ಅವರ ಕಾರಿನಲ್ಲಿಯೇ ಸ್ಥಳದಿಂದ ಪರಾರಿಯಾಗಿದ್ದ. ಸಲುಗೆ ಕಾರಣಕ್ಕೆ ಈ ಕೊಲೆ ನಡೆದಿರುವ ಮಾಹಿತಿ ಇದೆ’ ಎಂದು ಹೇಳಿದರು.

ದ್ವಿಚಕ್ರ ವಾಹನ ಕಳವು: ಡೆಲಿವರಿ ಬಾಯ್ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ದೀಪಕ್ ಅಲಿಯಾಸ್ ದೀಪುನನ್ನು (23) ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ದೀಪು, ಅಪರಾಧ ಹಿನ್ನೆಲೆಯುಳ್ಳವ. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ಆಹಾರ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಅದರ ಜೊತೆಯೇ ವಾಹನಗಳನ್ನು ಕದಿಯುತ್ತಿದ್ದ’ ಎಂದು ಪೊಲೀಸರು ಹೇಳಿದರು.


‘ಆಹಾರ ಪೂರೈಕೆಗಾಗಿ ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿ, ಬೈಕ್‌ಗಳನ್ನು ಗುರುತಿಸುತ್ತಿದ್ದ. ಹ್ಯಾಂಡಲ್ ಲಾಕ್ ಮುರಿದು ವಾಹನ ಕದ್ದೊಯ್ಯುತ್ತಿದ್ದ. ನಂತರ, ತನ್ನದೇ ವಾಹನವೆಂದು ಹೇಳಿ ಬೇರೆಯವರಿಗೆ ಮಾರುತ್ತಿದ್ದ.’

‘ಜೆ.ಪಿ.ನಗರ, ಪರಪ್ಪನ ಅಗ್ರಹಾರ, ಹೆಣ್ಣೂರು ಹಾಗೂ ಕೋಣನಕುಂಟೆ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿದ್ದ. ಬೈಯಪ್ಪನಹಳ್ಳಿ ಬಳಿಯ ಜಿ.ಎಂ. ಪಾಳ್ಯದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಇತ್ತೀಚೆಗೆ ಕಳ್ಳತನ ಆಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ. ಈತನಿಂದ ₹ 3 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಹತ್ಯೆ: ಕಠಿಣ ಶಿಕ್ಷೆಗೆ ಆಗ್ರಹ

ಬೆಂಗಳೂರು: ಕೊಪ್ಪಳದ ಕಿನ್ನಾಳ ಗ್ರಾಮದ ಏಳು ವರ್ಷದ ಬಾಲಕಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೀನಕೃತ್ಯವೆಸಗಿದ ಅಪರಾಧಿಗಳಿಗೆ ಕಠಿಣ ಶಿಕ್ಷೆ ಒದಗಿಸಬೇಕು ಎಂದು ಮಡಿವಾಳ ಸಮುದಾಯ ಫೌಂಡೇಷನ್ ಆಗ್ರಹಿಸಿದೆ.

ಈ ಬಗ್ಗೆ ಫೌಂಡೇಷನ್ ಕಾರ್ಯದರ್ಶಿ ಕೊಪ್ಪಳದ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ. ‘ಅನುಶ್ರೀ ಹತ್ಯೆಯು ನಾಗರಿಕ ಸಮಾಜ ತಲೆತಗ್ಗಿಸಬೇಕಾದ ಸಂಗತಿ. ಈ ಘಟನೆ ಸಮುದಾಯದ ಅಂತಃಪ್ರಜ್ಞೆಯನ್ನು ಆಘಾತಕ್ಕೀಡು ಮಾಡಿದೆ’ ಎಂದು ಫೌಂಡೇಷನ್ ತಿಳಿಸಿದೆ.



ಕ್ಯಾಂಡಿಡೇಟ್ ಚೆಸ್ ಟೂರ್ನಾಮೆಂಟ್ ಗೆದ್ದುಕೊಳ್ಳಲು ಅತ್ಯಂತ ಕಿರಿಯ ಆಟಗಾರನ ಆಚರಣೆ

ಮಾರಕಾಸ್ತ್ರ ತೋರಿಸಿ ಬೆದರಿಕೆ ರೌಡಿ ಸೈಯದ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರಿಗೆ ಮಚ್ಚು ತೋರಿಸಿ ಬೆದರಿಸಿ ಸುಲಿಗೆ ಮಾಡುತ್ತಿದ್ದ ಆರೋಪದಡಿ ರೌಡಿ ಸೈಯದ್ ಮಾಜಾರ್ ಅಲಿಯಾಸ್ ಬಚ್ಚಾನನ್ನು (30) ಶಿವಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಶಿವಾಜಿನಗರದ ಬಚ್ಚಾ, ಕೊಲೆ, ದರೋಡೆ, ಗಲಭೆ ಸೇರಿದಂತೆ 17 ಪ್ರಕರಣಗಳಲ್ಲಿ ಆರೋಪಿ. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಬಂದಿದ್ದ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ಕೆಲ ವ್ಯಾಪಾರಿಗಳ ಬಳಿ ಹೋಗಿದ್ದ ಬಚ್ಚಾ, ಮಾರಕಾಸ್ತ್ರ ತೋರಿಸಿದ್ದ. ಹಣ ನೀಡದಿದ್ದರೆ ಕೊಲೆ ಮಾಡುವುದಾಗಿ ಹೇಳಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ರೌಡಿಯನ್ನು ವಶಕ್ಕೆ ಪಡೆದಿದ್ದರು’ ಎಂದರು.

ಅಡುಗೆ ಕೆಲಸಗಾರ ಬಂಧನ

ದೊಡ್ಡನೆಕ್ಕುಂದಿಯ ಫ್ಲ್ಯಾಟ್‌ನಲ್ಲಿ ಚಿನ್ನ, ವಜ್ರಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡನೆಕ್ಕುಂದಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ನಡೆದಿದ್ದ ಕಳ್ಳತನ ಪ್ರಕರಣದಲ್ಲಿ ಆರೋಪಿ ಸುರೇಂದ್ರ ಕಾಮತ್ (29) ಎಂಬುವವರನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಿಹಾರದ ಸುರೇಂದ್ರ, ದೂರುದಾರ ಅಮಿತ್ ಜೈನ್ ಅವರ ಫ್ಲ್ಯಾಟ್‌ನಲ್ಲಿ ಹಲವು ತಿಂಗಳಿನಿಂದ ಅಡುಗೆ ಕೆಲಸ ಮಾಡುತ್ತಿದ್ದ. ಮಾಲೀಕರು ಮನೆಯಲ್ಲಿ ಇಲ್ಲದ ಸಂದರ್ಭದಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ. ಈತನನ್ನು ಇತ್ತೀಚೆಗೆ ಸೆರೆ ಹಿಡಿಯಲಾಗಿದೆ. ₹ 50 ಲಕ್ಷ ಮೌಲ್ಯದ 502 ಗ್ರಾಂ ತೂಕದ ಚಿನ್ನಾಭರಣ, 99.5 ಗ್ರಾಂ ತೂಕದ ವಜ್ರದ ಆಭರಣ, 199 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ₹ 12 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಅಮಿತ್ ಜೈನ್ ಹಾಗೂ ಕುಟುಂಬದವರು ಏಪ್ರಿಲ್ 12ರಂದು ಮುಂಬೈಗೆ ತೆರಳಿದ್ದರು. ಅವಾಗಲೇ ಆರೋಪಿ ಕಳವು ಮಾಡಿ ಪರಾರಿಯಾಗಿದ್ದ. ಏಪ್ರಿಲ್ 15ರಂದು ಜೈನ್ ಮನೆಗೆ ವಾಪಸು ಬಂದಿದ್ದಾಗ ಕಳ್ಳತನ ಸಂಗತಿ ಗೊತ್ತಾಗಿತ್ತು. ಠಾಣೆಗೆ ದೂರು ನೀಡಿದ್ದರು’ ಎಂದು ತಿಳಿಸಿದರು.

ರೈಲು ನಿಲ್ದಾಣದಲ್ಲಿ ವಶಕ್ಕೆ: ‘ಆರೋಪಿ ಸುರೇಂದ್ರ ಪತ್ತೆಗಾಗಿ ವಿಶೇಷ ತಂಡ ಬಿಹಾರಕ್ಕೆ ಹೋಗಿತ್ತು. ಆದರೆ, ಆತ ಮನೆಯಲ್ಲಿರಲಿಲ್ಲ. ಆಂಧ್ರಪ್ರದೇಶದ ವಿಜಯವಾಡದಲ್ಲಿರುವ ಮಾಹಿತಿ ಸಿಕ್ಕಿತ್ತು. ಸ್ಥಳಕ್ಕೆ ಹೋದಾಗ, ಆತ ರೈಲು ನಿಲ್ದಾಣದಲ್ಲಿರುವುದು ಗೊತ್ತಾಗಿತ್ತು. ವಿಜಯವಾಡದ ರೈಲು ನಿಲ್ದಾಣದಲ್ಲಿ ಈತನನ್ನು ವಶಕ್ಕೆ ಪಡೆಯಲಾಯಿತು’ ಎಂದು ಹೇಳಿದರು.

ತಲೆಮರೆಸಿಕೊಂಡಿದ್ದ ರೌಡಿ ಬಂಧನ

ಬೆಂಗಳೂರು: ತನ್ನ ವಿರುದ್ಧ ದಾಖಲಾಗಿದ್ದ ಪ್ರಕರಣಗಳ ವಿಚಾರಣೆಗೆ ಗೈರಾಗಿ ತಲೆಮರೆಸಿಕೊಂಡಿದ್ದ ರೌಡಿ ಅಜೀಜ್ ಆಸೀಫ್‌ನನ್ನು (33) ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ರೌಡಿ ಆಸೀಫ್, 2015ರಿಂದಲೇ ಅಪರಾಧ ಕೃತ್ಯ ಎಸಗುತ್ತಿದ್ದಾನೆ. ಕಳ್ಳತನ, ಸುಲಿಗೆ ಸೇರಿದಂತೆ 42 ಅಪರಾಧ ಪ್ರಕರಣಗಳಲ್ಲಿ ಈತ ಭಾಗಿಯಾಗಿದ್ದ. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಬಂದಿದ್ದ. ಬಾಣಸವಾಡಿ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ’ ಎಂದು ಪೊಲೀಸರು ಹೇಳಿದರು.

‘ಅಪರಾಧ ಪ್ರಕರಣಗಳಲ್ಲಿ ಜಾಮೀನು ಪಡೆದಿದ್ದ ಆಸೀಫ್, ಜೈಲಿನಿಂದ ಹೊರಬಂದು ತಲೆಮರೆಸಿಕೊಂಡಿದ್ದ. ನ್ಯಾಯಾಲಯದ ವಿಚಾರಣೆಗೂ ಗೈರಾಗುತ್ತಿದ್ದ. ಈತನ ಬಂಧನಕ್ಕೆ ವಾರಂಟ್ ಜಾರಿಯಾಗಿತ್ತು. ಇತ್ತೀಚೆಗೆ ಬಂಧಿಸಲಾಗಿದೆ’ ಎಂದು ತಿಳಿಸಿದರು.

‘ದಲಿತ ಯುವಕನ ಹತ್ಯೆ ಮುಚ್ಚಿ ಹಾಕುವ ಹುನ್ನಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾದಗಿರಿಯಲ್ಲಿ ದಲಿತ ಯುವಕ ರಾಕೇಶ್ ಹತ್ಯೆ ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳದ ಸರ್ಕಾರ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಿದ್ದು, ಇದರ ನೈತಿಕ ಹೊಣೆ ಹೊತ್ತು ಗೃಹ ಸಚಿವ ಜಿ.ಪರಮೇಶ್ವರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಒತ್ತಾಯಿಸಿದರು.



ಪಿ.ರಾಜೀವ್

ಭಾನುವಾರ ಘಟನೆ ನಡೆದಿದ್ದರೂ ಸೋಮವಾರ ಮಧ್ಯಾಹ್ನದವರೆಗೆ ಎಫ್‌ಐಆರ್ ದಾಖಲಿಸಿರಲಿಲ್ಲ. ಒತ್ತಡ ಹೆಚ್ಚಾದ ಬಳಿಕ ಅಂದರೆ 14 ಗಂಟೆಗಳ ಬಳಿಕ ಎಫ್‌ಐಆರ್ ದಾಖಲಿಸಲಾಗಿದೆ. ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಕೃಪಾಕಟಾಕ್ಷದಿಂದ ಕರ್ನಾಟಕ ಅತ್ಯಂತ ಕರಾಳ ದಿನಗಳನ್ನು ಎದುರಿಸ ಬೇಕಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರಾಜ್ಯದಲ್ಲಿ ಕಾನೂನು– ಸುವ್ಯವಸ್ಥೆ ಜೀವಂತ ಇದೆಯೇ ಎಂಬ ಸಂಶಯ ಮೂಡುತ್ತಿದೆ. ಹೆಣ್ಣು ಮಕ್ಕಳು, ವಿದ್ಯಾರ್ಥಿಗಳ ಜೀವಕ್ಕೆ ಸುರಕ್ಷತೆಯೇ ಇಲ್ಲವಾಗಿದೆ. ದಲಿತರ ಮನೆಗೆ ನುಗ್ಗಿ ಪೋಷಕರ ಸಮ್ಮುಖದಲ್ಲೇ ದಲಿತ ಯುವಕನ ಮರ್ಮಾಂಗಕ್ಕೆ ಒದ್ದು, ಕತ್ತು ಹಿಸುಕಿ ಕೊಲೆ ಮಾಡಿದ ಘಟನೆ ನಡೆದಿದೆ. ಆದರೆ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಸಂವೇದನೆಯನ್ನೇ ಕಳೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಹತ್ಯೆ ನಡೆದು 14 ಗಂಟೆ ಕಳೆದರೂ ಎಫ್‌ಐಆರ್ ದಾಖಲು ಮಾಡಲು ಪೊಲೀಸ್ ಇಲಾಖೆಗೆ ಸಾಧ್ಯವಿಲ್ಲ ಎಂದಾದರೆ ದಲಿತ ಸಮುದಾಯದಿಂದ ಬಂದ ಗೃಹ ಸಚಿವರು ದಲಿತರಿಗೆ ಹೇಗೆ ಮುಖ ತೋರಿಸುತ್ತಾರೆ ಎಂದು ರಾಜೀವ್ ಪ್ರಶ್ನಿಸಿದರು.



ಪೊಲೀಸರ ಹೆಸರಿನಲ್ಲಿ 2 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ‘ನಾವು ಪೊಲೀಸರು’ ಎಂಬುದಾಗಿ ಹೇಳಿಕೊಂಡು ಗುಜರಿ ಮಳಿಗೆ ಮಾಲೀಕನನ್ನು ಬೆದರಿಸಿ ₹ 2 ಲಕ್ಷ ಸುಲಿಗೆ ಮಾಡಿದ್ದ ಆರೋಪದಡಿ ಎಸ್. ನಿವಾಸ್ ಎಂಬುವವರನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಟ್ಟಂದೂರು ಅಗ್ರಹಾರ ಬಳಿಯ ಗುಜರಿ ಮಳಿಗೆ ಮಾಲೀಕ ಅಖ್ತಿರ್ ಅಲಿ ಮೊಂಡಲ್ ಅವರು ಕೃತ್ಯದ ಬಗ್ಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ನಿವಾಸ್‌ನನ್ನು ಸೆರೆ ಹಿಡಿಯಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಮೂವರು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಆರೋಪಿ ನಿವಾಸ್, ಪೊಲೀಸ್ ಬಾತ್ಮಿದಾರ. ಠಾಣೆ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಅಕ್ರಮಗಳ ಬಗ್ಗೆ ಈತ ಪೊಲೀಸರಿಗೆ ಆಗಾಗ ಮಾಹಿತಿ ನೀಡುತ್ತಿದ್ದ. ಈತನೇ ಪೊಲೀಸರ ಹೆಸರಿನಲ್ಲಿ ಗುಜರಿ ಮಳಿಗೆಗೆ ಹೋಗಿ ಸುಲಿಗೆ ಮಾಡಿರುವ ಆರೋಪವಿದೆ.

ಪ್ರಕರಣ ದಾಖಲಿಸುವ ಬೆದರಿಕೆ: ‘ಆರೋಪಿ ನಿವಾಸ್ ಹಾಗೂ ಮೂವರು ಸಹಚರರು, ಕಾರಿನಲ್ಲಿ ಗುಜರಿ ಮಳಿಗೆಗೆ ಏಪ್ರಿಲ್ 17ರಂದು ಹೋಗಿದ್ದರು. ‘ನಾವು ಪೊಲೀಸರು. ಮಳಿಗೆಯಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಯುತ್ತಿದೆ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸಿ, ಬಂಧಿಸಲು ಬಂದಿದ್ದೇವೆ. ಪ್ರಕರಣ ದಾಖಲಿಸಬಾರದೆಂದರೆ ಹಣ ನೀಡಬೇಕು’ ಎಂಬುದಾಗಿ ಆರೋಪಿಗಳು ಬೇಡಿಕೆ ಇರಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಯಾವುದೇ ಕಾನೂನುಬಾಹಿರ ಚಟುವಟಿಕೆ ನಡೆಸುತ್ತಿಲ್ಲವೆಂದು ಹೇಳಿದ್ದ ದೂರುದಾರ, ಹಣ ನೀಡಲು ನಿರಾಕರಿಸಿದ್ದರು. ದೂರುದಾರರ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಒತ್ತಾಯದಿಂದ ತಮ್ಮ ಖಾತೆಗೆ ₹ 80 ಸಾವಿರ ವರ್ಗಾಯಿಸಿಕೊಂಡಿದ್ದರು. ಜೊತೆಗೆ, ಎಟಿಎಂ ಕಾರ್ಡ್ ಕಿತ್ತುಕೊಂಡು ಸ್ಥಳದಿಂದ ಹೊರಟು ಹೋಗಿದ್ದರು.’

‘ಅದೇ ಎಟಿಎಂ ಕಾರ್ಡ್ ಬಳಸಿ ಏಪ್ರಿಲ್ 18ರಂದು ಆರೋಪಿಗಳು ಹಣ ಡ್ರಾ ಮಾಡಿಕೊಂಡಿದ್ದರು. ದೂರುದಾರರಿಂದ ಒಟ್ಟು ₹ 2 ಲಕ್ಷ ದೋಚಿದ್ದರು’ ಎಂದು ಮೂಲಗಳು ತಿಳಿಸಿವೆ.

ಹಲವು ಕಡೆ ಸುಲಿಗೆ: ‘ಪೊಲೀಸ್ ಬಾತ್ಮಿದಾರ ಎಂಬುದಾಗಿ ಹೇಳಿಕೊಂಡು ಆರೋಪಿ ನಿವಾಸ್ ಹಲವು ಕಡೆಗಳಲ್ಲಿ ಜನರನ್ನು ಬೆದರಿಸಿ ಹಣ ಸುಲಿಗೆ ಮಾಡಿರುವ ಮಾಹಿತಿ ಇದೆ. ಸದ್ಯ ಒಂದು ಪ್ರಕರಣ ದಾಖಲಾಗಿದೆ. ಯಾರಾದರೂ ದೂರು ನೀಡಿದರೆ, ಅದನ್ನೂ ಪರಿಗಣಿಸಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ಕೆಲ ಪೊಲೀಸರೂ ಭಾಗಿ: ‘ಆರೋಪಿ ನಿವಾಸ್ ಮೂಲಕ ಕೆಲ ಪೊಲೀಸರು ಹಣ ಪಡೆದುಕೊಂಡಿರುವ ಆರೋಪವಿದೆ. ಈ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಉದ್ಯೋಗ ವಾಣಿ

ಪೇಟೆಗಳಲ್ಲಿ ಸಡಗರ, ಎಲ್ಲೆಡೆ ಗೋವಿಂದನ ಜಪ, ವಿದ್ಯುತ್ ದೀಪಗಳಿಂದ ಝಗಮಗಿಸಿದ ರಸ್ತೆಗಳು

ಕರಗ ಶಕ್ತ್ಯೋತ್ಸವ, ಸಂಭ್ರಮದ ಮಹಾರಥೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೈತ್ರ ಪೌರ್ಣಮಿಯ ಬೆಳಕಿನಲ್ಲಿ ನಗರದ ಹೃದಯ ಭಾಗದ ರಸ್ತೆಗಳು ವಿದ್ಯುತ್ ದೀಪಗಳಿಂದ ರಂಗೇರಿದ್ದವು. ಹಸಿರು ತೋರಣ, ಹೂವಿನ ಅಲಂಕಾರ, ಗೋವಿಂದ... ಗೋವಿಂದ ಎಂಬ ಜಪ ಮಂಗಳವಾರದ ಸಂಜೆಯಿಂದಲೇ ಕೇಳಿಬರುತ್ತಿತ್ತು...

ದ್ರೌಪದಿದೇವಿ ಕರಗ ಶಕ್ತ್ಯೋತ್ಸವದ (ಬೆಂಗಳೂರು ಕರಗ) ಅಂಗವಾಗಿ ತಿಗಳರಪೇಟೆ, ನಗರ್ತಪೇಟೆ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯ ಮುಖ್ಯ ರಸ್ತೆ ಹಾಗೂ ಗಲ್ಲಿಗಲ್ಲಿಗಳಲ್ಲಿ ಸಂಭ್ರಮ ಮನೆ ಮಾಡಿತ್ತು. ದೇವಸ್ಥಾನ ಹಾಗೂ ಮನೆಗಳ ಮುಂದೆ ನೀರು ಹಾಕಿ, ಸಾರಿಸಿ, ರಂಗೋಲಿ ಹಾಕುವ ಸಡಗರ ಮಂಗಳವಾರ ಬೆಳಿಗ್ಗೆಯಿಂದಲೇ ಇತ್ತು. ಪ್ರಸಿದ್ಧ ಹೂವಿನ ಕರಗವನ್ನು ಕಣ್ತುಂಬಿಕೊಳ್ಳಲು, ಮಲ್ಲಿಗೆ ಹೂವನ್ನು ಚೆಲ್ಲಲು ಪೇಟೆಗಳ ಇಕ್ಕೆಲಗಳಲ್ಲಿ ಜನರು ಸೇರಿದ್ದರು.

ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ನಗರದ ಪೇಟೆ ಬೀದಿಗಳಲ್ಲಿ ಏಪ್ರಿಲ್ 15ರಿಂದಲೇ ಸಿದ್ಧತೆಗಳು ನಡೆದಿದ್ದವು. ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು, ಧಾರ್ಮಿಕ ವಿಧಿ-ವಿಧಾನಗಳು ನಡೆಯುತ್ತಿದ್ದವು. ಭಾನುವಾರ ತಡರಾತ್ರಿ ಹಸಿ ಕರಗದ ಪೂಜೆ ನಡೆದು, ಸಂಪಂಗಿ ಕೆರೆಯ ಶಕ್ತಿಪೀಠದಿಂದ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಹಸಿ ಕರಗವನ್ನು ಅರ್ಚಕ ಜ್ಞಾನೇಂದ್ರ ಮೆರಣಿಗೆಯಲ್ಲಿ ಹೊತ್ತು ತಂದಿದ್ದರು.



ಬೆಂಗಳೂರು ನಗರದಲ್ಲಿ ಮಂಗಳವಾರ ರಾತ್ರಿ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ ಪ್ರಜಾವಾಣಿ ಚಿತ್ರ / ಪ್ರಶಾಂತ್ ಹೆಚ್ ಜಿ

ಮಂಗವಾರ ತಡರಾತ್ರಿ ನಡೆಯುವ ಹೂವಿನ ಕರಗದ ಹಿನ್ನೆಲೆಯಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ ಹೊರಭಾಗದಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ಕರ್ಪೂರ ಸೇವೆ ನಡೆಯಿತು. ವರ್ಷಗಳಿಂದ ಹರಕೆ ಮಾಡಿಕೊಂಡವರು, ಅದನ್ನು ತೀರಿಸಲು ಸಣ್ಣ ಗಾತ್ರದ ಕರ್ಪೂರ ಸೇರಿದಂತೆ ಬೃಹತ್ ಗಾತ್ರದ ಕರ್ಪೂರಗಳ ಆರತಿ ಮಾಡಿದರು. ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಕರ್ಪೂರದಾರತಿ ನಡೆದು, ಸುತ್ತಮುತ್ತಲ ರಸ್ತೆಗಳಲ್ಲಿ ಕರ್ಪೂರದ ಘಮ ವ್ಯಾಪಿಸಿತ್ತು.

ಎಲ್ಲ ವಯೋಮಾನದ ವೀರಕುಮಾರರು ಸಹಸ್ರ ಸಂಖ್ಯೆಯಲ್ಲಿ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಸಂಜೆಯಿಂದಲೇ ಬಂದು ಸೇರಿಕೊಂಡಿದ್ದರು. ಕರಗ ಸಾಗಿದ ನಂತರ ಆರಂಭಗೊಳ್ಳುವ ಧರ್ಮರಾಯಸ್ವಾಮಿ ಮಹಾರಥೋತ್ಸವದ ಹಿಂದೆ ಸಾಗಲು ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ 50ಕ್ಕೂ ಹೆಚ್ಚು ತೇರುಗಳು ಜೆ.ಸಿ.ರಸ್ತೆ, ಟೌನ್‌ಹಾಲ್‌ಗಳ ಬಳಿ ಸಜ್ಜಾಗಿ ನಿಂತಿದ್ದವು.

ಮಧ್ಯರಾತ್ರಿ ಸರಿದ ಮೇಲೆ ಮಲ್ಲಿಗೆಯ ಹೂವಿನಿಂದ ಕೂಡಿದ್ದ ಕರಗ ಧರ್ಮರಾಯ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಆರಂಭಿಸಿತು. ರಾಜ್ಯ ಹಾಗೂ ಹೊರ ರಾಜ್ಯಗಳಿಂದಲೂ ಬಂದಿದ್ದ ಸಾವಿರಾರು ಭಕ್ತರು ಉತ್ಸವಕ್ಕೆ ಸಾಕ್ಷಿಯಾದರು. ಎಲ್ಲ ಪೇಟೆಗಳು ಹಾಗೂ ಕರಗ ಸಾಗುವ ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿ ಪಲಾವ್, ಬಿಸಿಬೇಳೆಬಾತ್, ಪೊಂಗಲ್ ಸೇರಿದಂತೆ ವಿವಿಧ ರೀತಿಯ ಭಕ್ಷ್ಯಗಳನ್ನು ವಿತರಿಸಲಾಯಿತು. ಪಾನಕ, ಮಜ್ಜಿಗೆಯನ್ನೂ ಕರಗ ನೋಡಲು ಬಂದ ಭಕ್ತರಿಗೆ ನೀಡಲಾಯಿತು.

ಜಾತ್ರೆ: ಎಲೆಕ್ಟ್ರಾನಿಕ್ ಹಾಗೂ ಕಂಪ್ಯೂಟರ್ ಬಿಡಿಭಾಗಗಳಿಗೆ ಪ್ರಸಿದ್ಧವಾಗಿರುವ ಎಸ್.ಪಿ ರಸ್ತೆಯ ಇಕ್ಕೆಲಗಳಲ್ಲಿ ಮಂಗಳವಾರ ಸಂಜೆಯಿಂದ ವ್ಯಾಪಾರ ವಿಭಿನ್ನವಾಗಿತ್ತು. ಆಟಿಕೆ, ಫ್ಯಾನ್ಸಿ ವಸ್ತುಗಳು, ತಿಂಡಿ ತಿನಿಸುಗಳ ವ್ಯಾಪಾರವಿತ್ತು.



ಬೆಂಗಳೂರು ನಗರದಲ್ಲಿ ಮಂಗಳವಾರ ರಾತ್ರಿ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ನಡೆದ ಧಾರ್ಮಿಕ ವಿಧಿಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಡಿದ್ದರು ಪ್ರಜಾವಾಣಿ ಚಿತ್ರ



ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗ ದೇವಿಮೂರ್ತಿಯೊಂದಿಗೆ ಸೆಲ್ಫಿ ತೆಗೆದುಕೊಂಡ ಭಕ್ತರು ಪ್ರಜಾವಾಣಿ ಚಿತ್ರ

ಏಪ್ರಿಲ್ 26ರಂದು ಮಧ್ಯಾಹ್ನ 1 ಗಂಟೆ ನಂತರ ಪ್ರವಾಸಕ್ಕೆ ಕೊಂಡೊಯ್ಯಲು ಮನವಿ

ನಗರದಲ್ಲಿ 1.01 ಕೋಟಿ ಮತದಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲೆಯಲ್ಲಿ ಮತದಾರರ ಸಂಖ್ಯೆ ಮೊದಲ ಬಾರಿಗೆ ಒಂದು ಕೋಟಿ ದಾಟಿದೆ. ಕೇಂದ್ರ, ದಕ್ಷಿಣ, ಉತ್ತರ ಲೋಕಸಭಾ ಕ್ಷೇತ್ರಗಳ ಜೊತೆಗೆ ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಈ ಮತದಾರರಿದ್ದಾರೆ.

2024ರ ಜನವರಿಯಲ್ಲಿ ಪ್ರಕಟಿಸಿದ್ದ ಪಟ್ಟಿಯಲ್ಲಿ 97,13,349 ಮತದಾರರಿದ್ದರು. ಏಪ್ರಿಲ್ 23ರಂತೆ 1.01 ಕೋಟಿ ಮತದಾರರಿದ್ದಾರೆ.

ಏಪ್ರಿಲ್ 4ರವರೆಗೆ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿಕೊಳ್ಳಬಹುದಾಗಿತ್ತು. ಅಲ್ಲಿಯವರೆಗೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಲೋಕಸಭಾ ಚುನಾವಣೆಗೆ 8,984 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 43,123 ಮತಗಟ್ಟೆ ಅಧಿಕಾರಿಗಳು ಕಾರ್ಯನಿರ್ವಹಿಸಲಿದ್ದಾರೆ ಎಂದು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

4,492 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದ್ದು, 11,793 ಕೇಂದ್ರ ಸಶಸ್ತ್ರ ಮೀಸಲು ಪಡೆ (ಸಿಎಪಿಎಫ್) ಸಿಬ್ಬಂದಿಗಳನ್ನು ಮತಗಟ್ಟೆಗಳಿಗೆ ನಿಯೋಜಿಸಲಾಗಿದೆ ಎಂದರು.

1 ಗಂಟೆ ನಂತರ ಪ್ರವಾಸ: 'ನಗರದಲ್ಲಿರುವ ಪ್ರವಾಸಿ ಕ್ಯಾಬ್ ಸಂಸ್ಥೆಗಳೊಂದಿಗೆ ಮಾತುಕತೆನಡೆದಿದ್ದು, ಏಪ್ರಿಲ್ 26ರಂದು ಮಧ್ಯಾಹ್ನ 1 ಗಂಟೆಯ ನಂತರವೇ ಪ್ರವಾಸಗಳು ಆರಂಭವಾಗಲಿವೆ. ನಗರ ಹಾಗೂ ನಗರದ ಹೊರಭಾಗಕ್ಕೆ ಪ್ರವಾಸ ಹೊರಡುವವರು ಬೆಳಿಗ್ಗೆಯೇ ಮತದಾನ ಮಾಡಿ ತೆರಳಲು ಸಂಸ್ಥೆಗಳೂ ನಮ್ಮೊಂದಿಗೆ ಕೈಜೋಡಿಸಿವೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಎಂಸಿಸಿ ನೋಡಲ್ ಅಧಿಕಾರಿ ಮುನೀಶ್ ಮೌದ್ಗಿಲ್ ಉಪಸ್ಥಿತರಿದ್ದರು.

1,01,27,869 ಒಟ್ಟು ಮತದಾರರು

ಪುರುಷರು	52,16,091
ಮಹಿಳೆಯರು	49,09,958
ಇತರೆ	1,820
ಅಂಗವಿಕಲರು	31,173
ಯುವ ಮತದಾರರು	1,60,232
ಸೇವಾ ಮತದಾರರು	1,665
ಎನ್‌ಆರ್‌ಐ ಮತದಾರರು	2,158

8,984 ಒಟ್ಟು ಮತಗಟ್ಟೆಗಳು

ಸೂಕ್ಷ್ಮ ಮತಗಟ್ಟೆಗಳು	2,003
ಅತಿಸೂಕ್ಷ್ಮ ಮತಗಟ್ಟೆಗಳು	253
ಸಖಿ ಮತಗಟ್ಟೆಗಳು	140
ಯುವ ಮತಗಟ್ಟೆಗಳು	28
ಅಂಗವಿಕಲರ ಮತಗಟ್ಟೆಗಳು	28
ಥೀಮ್ಡ್ ಮತಗಟ್ಟೆಗಳು	28

52	ಎಸಿಪಿ
118	ಇನ್‌ಸ್ಪೆಕ್ಟರ್
687	ಪಿಎಸ್‌ಐ/ಎಸ್‌ಐ
8,511	ಹೆಡ್‌ಕಾನ್‌ಸ್ಟೆಬಲ್/ ಕಾನ್‌ಸ್ಟೆಬಲ್
3,919	ಗೃಹ ರಕ್ಷಕರು
500	ಸಿವಿಲ್ ಡಿಫೆನ್ಸ್
32	ಅರಣ್ಯ ಸಿಬ್ಬಂದಿ
44	ಸಶಸ್ತ್ರ ತುಕಡಿಗಳು
11	ಕೇಂದ್ರ ಪೊಲೀಸ್ ತುಕಡಿಗಳು

22,78,339	ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಮತದಾರರು
18,54,700	ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಮತದಾರರು
21,09,990	ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಮತದಾರರು
38,84,840	ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಕ್ಷೇತ್ರದ ವ್ಯಾಪ್ತಿಗೆ ಬರುವ ನಗರದ ಮತದಾರರು

₹44.93 ಕೋಟಿ ಮೌಲ್ಯದ ವಸ್ತು ವಶ

ಮಾದರಿ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿ ಸಾಗಣೆ ಮಾಡುತ್ತಿದ್ದ ₹44.93 ಕೋಟಿ ಮೌಲ್ಯದ ವಸ್ತುಗಳನ್ನು ಮಾರ್ಚ್ 16 ರಿಂದ ಏಪ್ರಿಲ್ 23ರವರ ಅವಧಿಯಲ್ಲಿ ಜಪ್ತಿ ಮಾಡಲಾಗಿದೆ.

₹11.45 ಕೋಟಿ ನಗದು, ₹18.64 ಕೋಟಿ ಮೌಲ್ಯದ 4.44 ಲಕ್ಷ ಲೀಟರ್ ಮದ್ಯ, ₹7.15 ಕೋಟಿ ಮೌಲ್ಯದ 226 ಕೆ.ಜಿ ಮಾದಕ ವಸ್ತು, ₹53.71 ಲಕ್ಷ ಮೌಲ್ಯದ 49.58 ಕೆ.ಜಿ ಚಿನ್ನ–ಬೆಳ್ಳಿ ಆಭರಣಗಳು, ₹1.17 ಕೋಟಿ ಮೌಲ್ಯದ ಉಡುಗೊರೆ, ₹5.97 ಕೋಟಿ ಮೌಲ್ಯದ ವಾಹನಗಳು ಸೇರಿದಂತೆ ₹44.93 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ, ಪೊಲೀಸ್ ಠಾಣೆಯಲ್ಲಿ 116, ಅಬಕಾರಿ ಇಲಾಖೆಯಲ್ಲಿ 6,150 ಪ್ರಕರಣ ಸೇರಿದಂತೆ 6,266 ಎಫ್‌ಐಆರ್‌ಗಳನ್ನು ಈವರೆಗೆ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

'ನಿಷೇಧಾಜ್ಞೆ ಜಾರಿ: ಮದ್ಯ ಮಾರಾಟ ನಿಷೇಧ'

'ಚುನಾವಣೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ನಗರದಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದ್ದು, ಮದ್ಯ ಮಾರಾಟವನ್ನೂ ಸಂಪೂರ್ಣವಾಗಿ ನಿಷೇಧಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಏಪ್ರಿಲ್ 24ರಂದು ಸಂಜೆ 6 ಗಂಟೆಯಿಂದ ಏಪ್ರಿಲ್ 26ರ ತಡರಾತ್ರಿ 12 ಗಂಟೆಯವರೆಗೆ ಸಿಆರ್‌ಪಿಸಿ ಸೆಕ್ಷನ್ 144ರಡಿ ನಗರದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರಲಿದೆ. ಈ ಅವಧಿಯಲ್ಲಿ ಮದ್ಯ ಮಾರಾಟವನ್ನೂ ನಿಷೇಧಿಸಲಾಗಿದೆ. ನಿಯಮ ಮೀರಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

'ಸಾರ್ವಜನಿಕರು ಧೈರ್ಯವಾಗಿ ಮತದಾನ ಮಾಡಬೇಕು. ಚುನಾವಣೆ ಸಂಬಂಧಿತ ಯಾವುದೇ ಕ್ರಮ ಹಾಗೂ ತುರ್ತು ಸಹಾಯಕ್ಕಾಗಿ ಸಾರ್ವಜನಿಕರು 112 ಸಂಖ್ಯೆಗೆ ಕರೆ ಮಾಡಬಹುದು' ಎಂದು ಹೇಳಿದರು.

ರಾಮನ ವಿರುದ್ಧ ದಾರಿಯಲ್ಲಿ ಮೋದಿ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಹಿಂದೂ ಪರಂಪರೆಯಲ್ಲಿ ನಾಯಕರನ್ನು ಸತ್ಯದ ದಾರಿಯಲ್ಲಿ, ಸೇವಾ ಮನೋಭಾವದಲ್ಲಿ ನಡೆಯುವವರು ಎಂದೇ ಕಾಣುತ್ತೇವೆ. ಶ್ರೀರಾಮ ಕೂಡಾ ಇದೇ ಮಾರ್ಗದಲ್ಲಿ ನಡೆದಿದ್ದರು. ಆದರೆ, ಪ್ರಧಾನಿ ನರೇಂದ್ರ ಮೋದಿ ಹತ್ತು ವರ್ಷಗಳಿಂದ ಇದಕ್ಕೆ ತದ್ವಿರುದ್ಧ ಆಡಳಿತ ನಡೆಸಿದ್ದಾರೆ' ಎಂದು ಕಾಂಗ್ರೆಸ್‌ನ 'ತಾರಾ ಪ್ರಚಾರಕಿ' ಪ್ರಿಯಾಂಕಾ ಗಾಂಧಿ ವಾಗ್ದಾಳಿ ಮಂಗಳವಾರ ನಡೆಸಿದರು.

ಇಲ್ಲಿನ ಹಳೆ ಮಾಧ್ಯಮಿಕ ಶಾಲೆ ಆವರಣದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ 'ನ್ಯಾಯ ಸಂಕಲ್ಪ ರ‍್ಯಾಲಿ'ಯಲ್ಲಿ ಮಾತನಾಡಿದ ಅವರು, 'ಪ್ರಧಾನಿ ಮೋದಿ ಸುಳ್ಳಿನ ಸರಮಾಲೆಗಳನ್ನು ಹೆಣೆದಿದ್ದಾರೆ' ಎಂದು ಟೀಕಿಸಿದರು.

'ದೇಶದ ರಾಜಕೀಯ ಪರಂಪರೆ ಘನತೆಯಿಂದ ಕೂಡಿತ್ತು. ಈವರೆಗಿನ ಯಾವುದೇ ಪ್ರಧಾನಿ ದಾರಿ ಬಿಟ್ಟು ನಡೆದಿರಲಿಲ್ಲ. ಈಗಿನ ಪ್ರಧಾನಿ ಅಹಂಕಾರದಿಂದ ನಡೆದುಕೊಳ್ಳುತ್ತಿದ್ದಾರೆ. ಅಧಿಕಾರದ ದರ್ಪ ಹೆಚ್ಚಾಗಿದೆ. ವೈಭೋಗದ ಜೀವನ ನಡೆಸುತ್ತಿದ್ದಾರೆ. ನೈತಿಕತೆ ಬಿಟ್ಟು ನಾಟಕ ಮಾಡುತ್ತಿದ್ದಾರೆ' ಎಂದು ಕುಟುಕಿದರು.

'ಬಿಜೆಪಿಯೇತರ ಪಕ್ಷ ಅಧಿಕಾರದಲ್ಲಿರುವ ಸರ್ಕಾರಗಳನ್ನು ತಪ್ಪು ದಾರಿಯಲ್ಲಿ ಕಿತ್ತುಕೊಳ್ಳಲಾಗುತ್ತಿದೆ. ನೂರಾರು ಕೋಟಿ ಕೊಟ್ಟು ನಾಯಕರನ್ನು ಖರೀದಿಸಲಾಗುತ್ತಿದೆ. ಮಾಧ್ಯಮಗಳು ಇದನ್ನೇ 'ಮಾಸ್ಟರ್ ಸ್ಟ್ರೋಕ್' ಎಂದು ಬಣ್ಣಿಸುತ್ತಿವೆ. ಇದು ಅಸಂವಿಧಾನಿಕ ಹಾಗೂ ಅನೈತಿಕ ಮಾರ್ಗ ಎಂದು ಪ್ರಶ್ನಿಸುವ ಧೈರ್ಯ ಯಾರಿಗೂ ಇಲ್ಲವಾಗಿದೆ' ಎಂದು ಅವರು ಅಸಮಾಧಾನ ಹೊರಹಾಕಿದರು.

'ವಿಶ್ವದಾದ್ಯಂತ ಮೋದಿ ಪ್ರಸಿದ್ಧರು ಎಂದು ನಂಬಿಸಲಾಗುತ್ತಿದೆ. ಚಿಟಿಕೆ ಹೊಡೆವಷ್ಟರಲ್ಲಿ ಯುದ್ಧಗಳನ್ನೇ ನಿಲ್ಲಿಸುತ್ತಾರೆ ಎಂಬುದಾಗಿ ಮಾಧ್ಯಮಗಳು ಬಣ್ಣಿಸುತ್ತಿವೆ. ಇಷ್ಟು ಬಲಿಷ್ಠರಾದ ಅವರು ಬಡವರನ್ನು ಕಾಡುತ್ತಿರುವ ಬೆಲೆ ಏರಿಕೆ, ನಿರುದ್ಯೋಗ, ಸಂಕಷ್ಟಗಳನ್ನು ಏಕೆ ಕಡಿಮೆ ಮಾಡಲಿಲ್ಲ' ಎಂದು ಪ್ರಶ್ನಿಸಿದರು.

'ಮೋದಿ ಆಡಳಿತದಿಂದ ಜನ ಸಾಮಾನ್ಯರ ಜೀವನದಲ್ಲಿ ಏನಾದರೂ ಬದಲಾವಣೆ ಆಗಿದೆಯೇ?' ಎಂದು ಪ್ರಶ್ನಿಸಿದ ಅವರು, 'ಮೋದಿಯವರ ಇಬ್ಬರು ಸ್ನೇಹಿತರ ಆಸ್ತಿ ಹೆಚ್ಚಾಗಿದೆ. ಅವರು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಮುನ್ನೆಲೆಗೆ ಬಂದಿದ್ದಾರೆ. ಇದೇ ಹತ್ತು ವರ್ಷಗಳ ಸಾಧನೆ' ಎಂದು ವ್ಯಂಗ್ಯವಾಡಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ನಿಜವಾಗಿಯೂ ಕೆಲಸ ಮಾಡಿದ್ದರೆ ಅಭಿವೃದ್ಧಿ ಆಧಾರದ ಮೇಲೆ ಮತ ಕೇಳುತ್ತಿದ್ದರು. ಜಾತಿ, ಧರ್ಮ ಉಲ್ಲೇಖಿಸುತ್ತಿರಲಿಲ್ಲ' ಎಂದು ಹರಿಹಾಯ್ದರು.

ಧ್ವನಿ ಅಡಗಿಸುವ ಯತ್ನ: ಆರೋಪ

'ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸುವ ವಿರೋಧ ಪಕ್ಷಗಳ ಧ್ವನಿ ಅಡಗಿಸುವ ಯತ್ನ ವ್ಯವಸ್ಥಿತವಾಗಿ ನಡೆಯುತ್ತಿದೆ. ಇಬ್ಬರು ಮುಖ್ಯಮಂತ್ರಿಗಳನ್ನು ಬಂಧಿಸಿ, ಕಾಂಗ್ರೆಸ್ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ' ಎಂದು ಪ್ರಿಯಾಂಕಾ ಗಾಂಧಿ ಆರೋಪಿಸಿದರು.

'ಚುನಾವಣಾ ಬಾಂಡ್ ನೆಪದಲ್ಲಿ ಖಾಸಗಿ ಕಂಪನಿಗಳಿಂದ ನರೇಂದ್ರ ಮೋದಿ ದೇಣಿಗೆ ವಸೂಲಿ ಮಾಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಹೆದರಿದ ಅನೇಕ ಕಂಪನಿಗಳು ಲಾಭಾಂಶಕ್ಕಿಂತ ಹೆಚ್ಚಿನ ಪಾಲನ್ನು ಬಿಜೆಪಿಗೆ ದೇಣಿಗೆ ನೀಡಿವೆ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದ ದೇಣಿಗೆ ನೀಡಿದವರ ಹೆಸರು ಬೆಳಕಿಗೆ ಬಂದಿದೆ' ಎಂದರು.

'ಮೋದಿ ಅಲೆಯಿಲ್ಲ, ಗ್ಯಾರಂಟಿ ಅಲೆ'

ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ ಸುಳ್ಳುಗಳು ಜನರಿಗೆ ಅರ್ಥವಾಗಿವೆ. ಹೀಗಾಗಿ, ಕರ್ನಾಟಕದಲ್ಲಿ ಮೋದಿ ಅಲೆ ಇಲ್ಲ. ಇಲ್ಲಿ ಇರುವುದು 'ಗ್ಯಾರಂಟಿ' ಅಲೆ ಮಾತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಲೋಕಸಭಾ ಚುನಾವಣೆಯಲ್ಲಿ ಸೋಲಿನ ಭೀತಿಯಿಂದ ಬಿಜೆಪಿ ಮತ್ತು ಜೆಡಿಎಸ್ ಒಗ್ಗೂಡಿ ಸ್ಪರ್ಧೆ ಮಾಡುತ್ತಿವೆ. ಎಚ್.ಡಿ.ದೇವೇಗೌಡ ಹಾಗೂ ನರೇಂದ್ರ ಮೋದಿ ಪೈಪೋಟಿಗೆ ಬಿದ್ದವರಂತೆ ಸುಳ್ಳು ಹೇಳುತ್ತಿದ್ದಾರೆ' ಎಂದು ಕುಟುಕಿದರು.

'ಮೋದಿ ಪ್ರಧಾನಿಯಾದರೆ ಈ ದೇಶ ಬಿಟ್ಟು ಹೋಗುತ್ತೇನೆ. ಮುಂದಿನ ಜನ್ಮದಲ್ಲಿ ಹುಟ್ಟಿದರೆ ಮುಸಲ್ಮಾನನಾಗಿ ಹುಟ್ಟುತ್ತೇನೆ' ಎಂದು 2019ರ ಲೋಕಸಭಾ ಚುನಾವಣೆಯಲ್ಲಿ ದೇವೇಗೌಡ ಹೇಳಿದ್ದರು. ಪ್ರಸಕ್ತ ಚುನಾವಣೆಯಲ್ಲಿ ಮೋದಿ ಜೊತೆಗೂಡಿ ಕನ್ನಡಿಗರ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಹೇಳಿದರು.

ಹುಮ್ಮಸ್ಸು ತುಂಬಿದ ಪ್ರಿಯಾಂಕಾ

ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತಯಾಚನೆಗೆ ಮಂಗಳವಾರ ಆಯೋಜಿಸಿದ್ದ 'ನ್ಯಾಯ ಸಂಕಲ್ಪ ರ‍್ಯಾಲಿ' ಕೈ ಪಡೆಗೆ ಹುಮ್ಮಸ್ಸು ತುಂಬಿತು. ಮಹಿಳಾ ಮತದಾರರನ್ನು ಸೆಳೆಯುವ ಪ್ರಯತ್ನ ನಡೆಯಿತು. ಇಂದಿರಾ ಗಾಂಧಿ ಮೊಮ್ಮಗಳು' ಎಂಬ ಅಭಿಮಾನದಿಂದ ಅನೇಕರು ಸಮಾವೇಶಕ್ಕೆ ಬಂದಿದ್ದರು. ಮಹಿಳೆಯರ ಸಂಖ್ಯೆಯೂ ಅಪಾರ ಪ್ರಮಾಣದಲ್ಲಿತ್ತು. ಪ್ರಿಯಾಂಕಾ ಅವರು ವೇದಿಕೆಗೆ ಬರುತ್ತಿದ್ದಂತೆಯೇ ಜನರು ಹರ್ಷೋದ್ಗಾರ ಮಾಡಿದರು. ಕೇಂದ್ರ ಸರ್ಕಾರ ಹಾಗೂ ನರೇಂದ್ರ ಮೋದಿ ಅವರನ್ನು ಟೀಕಿಸುತ್ತ, ಕಾಂಗ್ರೆಸ್ ಪ್ರಣಾಳಿಕೆಯ ಅಂಶಗಳನ್ನು ಬಿಡಿಸಿಟ್ಟ ರೀತಿಗೆ ಕಾಂಗ್ರೆಸ್ ಕಾರ್ಯಕರ್ತರು, ನೆರೆದಿದ್ದ ಜನರು ಕರತಾಡನದೊಂದಿಗೆ ಬೆಂಬಲ ಸೂಚಿಸಿದರು.

ಆಮಿಷ ಪ್ರಕರಣ: ಎಫ್‌ಐಆರ್ ರದ್ದುಕೋರಿ ಡಿಕೆಶಿ ಅರ್ಜಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಲೋಕಸಭೆ ಚುನಾವಣೆ ಪ್ರಚಾರದ ವೇಳೆ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಆಮಿಷವೊಡ್ಡಿದ್ದಾರೆ ಎಂಬ ಆರೋಪದಡಿ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಜರುಗಿಸಲು ಇದೇ 19ರಂದು ಮ್ಯಾಜಿಸ್ಟ್ರೇಟ್ ಕೋರ್ಟ್ ಹೊರಡಿಸಿರುವ ಆದೇಶ ಮತ್ತು ಇದನ್ನು ಆಧರಿಸಿ ಆರ್‌ಎಂಸಿ ಯಾರ್ಡ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಈ ಕ್ರಿಮಿನಲ್ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಖಾಸಗಿ ದೂರು ಸಲ್ಲಿಸಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಚಾರಿ ವಿಚಕ್ಷಣಾ ತಂಡದ ಮುಖ್ಯಸ್ಥ ಬಿ.ಕೆ.ದಿನೇಶ್ ಕುಮಾರ್ ಅವರನ್ನು ಈ ಅರ್ಜಿಯಲ್ಲಿ ಪ್ರತಿವಾದಿಯನ್ನಾಗಿ ಮಾಡಲಾಗಿದೆ.

'ಕಾಂಗ್ರೆಸ್‌ಗೆ ಮಾತ್ರ ಹೋರಾಟದ ಶಕ್ತಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ.ರಾಜೀವ್ ಗೌಡ ಪರವಾಗಿ ಬಾಗಲೂರು ಗ್ರಾಮದಲ್ಲಿ ಆಯೋಜಿಸಿದ್ದ ಪ್ರಚಾರ ಸಭೆಯನ್ನು ಉದ್ದೇಶಿಸಿ, ಸಚಿವ ಕೃಷ್ಣಬೈರೇಗೌಡ ಮಾತನಾಡಿದರು.

ಯಲಹಂಕ: 'ಕರ್ನಾಟಕದ ಪರವಾಗಿ ಹೋರಾಡುವ ಕೆಚ್ಚೆದೆ, ಧೈರ್ಯ, ದಮ್ಮು, ತಾಕತ್ತು ಇರುವುದು ಕಾಂಗ್ರೆಸ್ ಸರ್ಕಾರ ಮತ್ತು ಪಕ್ಷಕ್ಕೆ ಮಾತ್ರ. ಬರ ಪರಿಹಾರ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರದ ವಿಳಂಬ ಧೋರಣೆಯ ವಿರುದ್ಧ ದೂರು ದಾಖಲಿಸಿದ್ದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದ ಕಾನೂನು ಹೋರಾಟಕ್ಕೆ ಜಯ ಸಿಕ್ಕಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಪರವಾಗಿ ಹುಣಸಮಾರನ ಹಳ್ಳಿ, ಮೈಲನಹಳ್ಳಿ ಹಾಗೂ ಬಾಗಲೂರು ಗ್ರಾಮದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಬರಗಾಲ ಆವರಿಸಿ ರೈತರು ಸಂಕಷ್ಟದಲ್ಲಿದ್ದು, ಪರಿಹಾರ ಬಿಡುಗಡೆ ಮಾಡಬೇಕೆಂದು ಪ್ರಸ್ತಾವ ಸಲ್ಲಿಸಿ ಏಳು ತಿಂಗಳು ಕಳೆದಿದೆ. ಅಂದಿನಿಂದ ನಿರಂತರವಾಗಿ ಪ್ರಧಾನಿ, ಗೃಹ ಸಚಿವರು ಸೇರಿದಂತೆ ಸಂಬಂಧಿಸಿದ ಎಲ್ಲ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದರೂ ಪರಿಹಾರ ನೀಡಿರಲಿಲ್ಲ. ಕೊನೆಗೆ ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ದೂರು ದಾಖಲಿಸಿದೆವು. ನಂತರ ಈ ವಾರದಲ್ಲಿ ಪರಿಹಾರ ಬಿಡುಗಡೆ ಮಾಡುವುದಾಗಿ ಬಿಜೆಪಿಯವರು ಒಪ್ಪಿಕೊಂಡರು' ಎಂದರು.

'ಬಿಜೆಪಿಗೆ ಈ ಹಿಂದೆ ಎರಡು ಬಾರಿ ಇದ್ದಂತಹ ವಾತಾವರಣ ಈಗಿಲ್ಲ. 10 ವರ್ಷ ಬಿಜೆಪಿಯವರಿಗೆ ಅಧಿಕಾರ ನೀಡಿ ಜನರು ಬೇಸತ್ತಿದ್ದು, ಬಿಜೆಪಿ ಸರ್ಕಾರ ಎಂದರೆ, ಕರ್ನಾಟಕಕ್ಕೆ ಅನ್ಯಾಯ ಎಂಬಂತಾಗಿದೆ' ಎಂದು ಅವರು ಹೇಳಿದರು.

ಮೋಹನ್ ಬಿರುಸಿನ ಪ್ರಚಾರ



ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ. ಮೋಹನ್ ಅವರು ಮಂಗಳವಾರ ಚಾಮರಾಜಪೇಟೆಯಲ್ಲಿ ರೋಡ್ ಶೋ ಮೂಲಕ ಮತಯಾಚಿಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ. ಮೋಹನ್ ಮಂಗಳವಾರ ನೆತ್ತಿ ಸುಡುವ ಬಿಸಿಲಿನಲ್ಲೂ ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿದರು.

ಗಾಂಧಿನಗರ, ಚಿಕ್ಕಪೇಟೆ ವಾರ್ಡ್ ಮತ್ತು ಚಾಮರಾಜಪೇಟೆಯಲ್ಲಿ ತಮಿಳು ಭಾಷಿಕರು ಹೆಚ್ಚಿರುವ ಪ್ರದೇಶಗಳಲ್ಲಿ ಮೋಹನ್ ರೋಡ್ ಶೋ ನಡೆಸಿದರು. ಮೋಹನ್ ಅವರಿಗೆ ಪುದುಚೇರಿ ಸಚಿವರಾದ ಎ.ಕೆ. ಸಾಯಿ ಜೆ. ಸರವಣಕುಮಾರ್, ಎ. ನಮಶಿವಾಯಮ್ ಹಾಗೂ ಪುದುಚೇರಿ ಬಿಜೆಪಿ ಅಧ್ಯಕ್ಷ ಸೆಲ್ವಗಣಪತಿ, ಶಾಸಕ ರಿಚರ್ಡ್ಸ್ ಜಾನ್ ಕುಮಾರ್ ಮೋಹನ್ ಸಾಥ್ ನೀಡಿದರು.

ಪ್ರಚಾರಕ್ಕೆ ಇನ್ನು ಒಂದು ದಿನ ಮಾತ್ರ ಉಳಿದಿದ್ದು, ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರು, ಸುಡುವ ಬಿಸಿಲನ್ನೂ ಲೆಕ್ಕಿಸದೆ ತಮ್ಮ ಅಭ್ಯರ್ಥಿ ಪರ ಪ್ರಚಾರ ನಡೆಸಿದರು.

ಜೆಡಿಎಸ್ ಶಾಸಕ ಗೋವಿಂದರಾಜು, ಬಿಜೆಪಿ ಜಿಲ್ಲಾ ಅಧ್ಯಕ್ಷ ಸಪ್ತಗಿರಿಗೌಡ, ಮಂಡಲ ಅಧ್ಯಕ್ಷ ಶೈತಾನ್ ಸಿಂಗ್ ಅವರು ರೋಡ್ ಶೋನಲ್ಲಿ ಭಾಗವಹಿಸಿದ್ದರು.

'ಕಾಂಗ್ರೆಸ್‌ಗೆ ಲಿಂಗತ್ವ ಅಲ್ಪಸಂಖ್ಯಾತರ ಬೆಂಬಲ'

ಬೆಂಗಳೂರು: ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಸಂಘವು (ಜಿಎಸ್‌ಎಂ) ನಿರ್ಧರಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಮನೋಹರ್ ಎಲವರ್ತಿ, 'ದೇಶದಲ್ಲಿ ಜಾತ್ಯತೀತ ಮತ್ತು ಸಂವಿಧಾನಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಮೈತ್ರಿಕೂಟಕ್ಕೆ ಬೆಂಬಲಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಕೆಲ ಭರವಸೆಗಳನ್ನು ನೀಡಿದೆ. ಆದ್ದರಿಂದ, ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡಲು ನಿರ್ಧರಿಸಲಾಗಿದೆ' ಎಂದರು.

'ಅಭಿವೃದ್ಧಿಗಾಗಿ ಮೋದಿ ಬೆಂಬಲಿಸಿ'

ಪ್ರಜಾವಾಣಿ ವಾರ್ತೆ



ಮಲ್ಲಸಂದ್ರದ ಪೈಪ್ ಲೈನ್ ರಸ್ತೆಯಲ್ಲಿ ಶಾಸಕ ಎಸ್.ಮುನಿರಾಜು ನೇತೃತ್ವದಲ್ಲಿ ಆಯೋಜಿಸಲಾದ ರೋಡ್ ಶೋನಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಪರ ಮತಯಾಚಿಸಿದರು.

ಪೀಣ್ಯ ದಾಸರಹಳ್ಳಿ: ಬಡವರ ಅಭಿವೃದ್ಧಿಗಾಗಿ ವಿಶ್ವಕರ್ಮ ಯೋಜನೆ, ಶೂನ್ಯ ಹಣದಲ್ಲಿ ಬ್ಯಾಂಕ್ ಖಾತೆ ತೆರೆಯುವ ಜನಧನ್ ಯೋಜನೆ, ವ್ಯಾಕ್ಸಿನ್, ಮೆಟ್ರೊ, ರಸ್ತೆಯಂತಹ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದ್ದು ಪ್ರಧಾನಿ ನರೇಂದ್ರ ಮೋದಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಮಲ್ಲಸಂದ್ರದ ಪೈಪ್ ಲೈನ್ ರಸ್ತೆಯ ಸೆಲೆಕ್ಷನ್ ಕಾರ್ನರ್‌ನಲ್ಲಿ ನಡೆದ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಪರ ಮತಯಾಚನೆಯ ರೋಡ್ ಶೋನಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಶೋಭಾ ಕರಂದ್ಲಾಜೆ ಕೇಂದ್ರ ಸಚಿವರು, ಅನುಭವಿ ರಾಜಕಾರಣಿ ಕೂಡ. ಈಗಾಗಲೇ ಅವರು ಎಲ್ಲ ಕಡೆ ಭರ್ಜರಿ ಪ್ರಚಾರ ಮಾಡಿದ್ದು, ಉತ್ತಮ ಬೆಂಬಲ ವ್ಯಕ್ತವಾಗಿದೆ. ಅವರನ್ನು ಅಧಿಕ ಮತಗಳಿಂದ ಗೆಲ್ಲಿಸುವ ಮೂಲಕ ಮತ್ತೊಮ್ಮೆ ದೇಶಕ್ಕಾಗಿ, ಅಭಿವೃದ್ಧಿಗಾಗಿ ಮೋದಿ ಅವರನ್ನು ಪ್ರಧಾನಿಯಾಗಿ ಮಾಡೋಣ' ಎಂದರು.

ಶಾಸಕ ಎಸ್. ಮುನಿರಾಜು ಮಾತನಾಡಿ 'ರಾಜ್ಯದಲ್ಲಿ ಭ್ರಷ್ಟಾಚಾರ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರವನ್ನು ಕಿತ್ತು ಹೊಗೆಯಬೇಕು. ದೇಶದ ರಕ್ಷಣೆ, ಅಭಿವೃದ್ಧಿಗಾಗಿ ಮೋದಿ ಅವರಿಗೆ ಶಕ್ತಿ ತುಂಬಬೇಕು' ಎಂದು ಜನರಲ್ಲಿ ಮನವಿ ಮಾಡಿದರು.

ಮಲ್ಲಸಂದ್ರ ಪೈಪ್ ಸೆಲೆಕ್ಷನ್ ಕಾರ್ನರ್‌ನಿಂದ ಬೈಲಪ್ಪ ಸರ್ಕಲ್ ಮೂಲಕ ದಾಸರಹಳ್ಳಿ ಮೆಟ್ರೊ ನಿಲ್ದಾಣದವರೆಗೆ ರೋಡ್ ಶೋ ನಡೆಸಿ, ಶೋಭಾ ಕರಂದ್ಲಾಜೆ ಅವರ ಪರವಾಗಿ ಮತಯಾಚನೆ ನಡೆಸಲಾಯಿತು.

'ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯಗೆ ಬೆಂಬಲ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ, ಪರಿಷ್ಟ ಪಂಗಡದವರಿಗೆ ಮೀಸಲಾತಿ ಹೆಚ್ಚಿಸಿ, ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಹಾಗಾಗಿ, ಈ ಚುನಾವಣೆಯಲ್ಲಿ ನಮ್ಮ ಸಮುದಾಯ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಅವರನ್ನು ಬೆಂಬಲಿಸಲಿದೆ' ಎಂದು ರಾಜ್ಯ ಭೋವಿ (ವಡ್ಡರ) ಸಂಘದ ಪ್ರಧಾನ ಕಾರ್ಯದರ್ಶಿ ಡಾ.ಚೌಡಯ್ಯ ತಿಳಿಸಿದರು.

ಪಟ್ಟಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗದವರ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ನಿರಂತರವಾಗಿ ನೀಡುತ್ತಿದೆ. ಹೀಗಾಗಿ ಈ ಬಾರಿ ರಕ್ಷಾ ರಾಮಯ್ಯ ಅವರಿಗೆ ಬೆಂಬಲ ಸೂಚಿಸುತ್ತಿದ್ದೇವೆ' ಎಂದರು.

ವಿಶ್ವ ಪುಸ್ತಕ ದಿನಾಚರಣೆ: ಬರಗೂರು ರಾಮಚಂದ್ರಪ್ಪ ಹೇಳಿಕೆ

'ಪುಸ್ತಕೋದ್ಯಮ: ತಗ್ಗಿದ ಪ್ರೋತ್ಸಾಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕೋದ್ಯಮ ಮತ್ತು ಪುಸ್ತಕ ಸಂಸ್ಕೃತಿಗೆ ಸರ್ಕಾರದಿಂದ ಸಿಗಬೇಕಾದ ಮನ್ನಣೆ ಹಾಗೂ ಪ್ರೋತ್ಸಾಹ ದಿನೇ ದಿನೇ ಕಡಿಮೆಯಾಗುತ್ತಿದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಮಂಗಳವಾರ ಆಯೋಜಿಸಿದ್ದ 'ವಿಶ್ವ ಪುಸ್ತಕ ದಿನಾಚರಣೆ'ಯಲ್ಲಿ ಅವರು ಮಾತನಾಡಿದರು.

'ಪುಸ್ತಕ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂಬುದನ್ನು ಪ್ರಕಾಶಕರು, ಲೇಖಕರು ಹಾಗೂ ಸರ್ಕಾರಗಳು ಅರಿಯಬೇಕು. ಉದ್ಯಮವನ್ನು ಉಳಿಸಿಕೊಳ್ಳುವ ಉಮೇದಿನಲ್ಲಿ ಸಂಸ್ಕೃತಿ ನಾಶವಾಗದಂತೆ ನೋಡಿಕೊಳ್ಳಬೇಕು' ಎಂದರು.

'ಪುಸ್ತಕಗಳಿಗೆ ಯಾವತ್ತೂ ಸಾವಿಲ್ಲ, ಆದರೆ ಸವಾಲುಗಳಿವೆ. ಆ ಸವಾಲುಗಳನ್ನು ಎದುರಿಸಿ ಅದರ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡಬೇಕು. ಇದು ಪುಸ್ತಕೋದ್ಯಮ ಸೇರಿದಂತೆ ಎಲ್ಲ ಮಾಧ್ಯಮಗಳಿಗೆ ಅನ್ವಯಿಸುತ್ತದೆ. ಆದರೆ, ಮಾಧ್ಯಮಗಳೆಲ್ಲ ಉದ್ಯಮವಾಗಿರುವ ಕಾಲದಲ್ಲಿ ನಾವಿದ್ದೇವೆ. ಚಲನಚಿತ್ರ ಮಾಧ್ಯಮ ಚಲನಚಿತ್ರೋದ್ಯಮವಾಗಿದೆ. ಪತ್ರಿಕಾ ಮಾಧ್ಯಮ, ಪತ್ರಿಕೋದ್ಯಮವಾಗಿದೆ. ಹಾಗೆಯೇ ಪುಸ್ತಕ ಮಾಧ್ಯಮ ಅನಿವಾರ್ಯವಾಗಿ ಪುಸ್ತಕೋದ್ಯಮವಾಗಿದೆ' ಎಂದರು.

'ಎಲ್ಲ ಕಾಲದಲ್ಲೂ ಉದ್ಯಮ ಮತ್ತು ಸಂಸ್ಕೃತಿಯ ನಡುವೆ ತಾಕಲಾಟ ನಡೆಯುತ್ತಿರುತ್ತದೆ. ಉದ್ಯಮಕ್ಕೆ ಸಂಪಾದನೆಯೇ ಪ್ರಧಾನ, ಸಂಸ್ಕೃತಿಗೆ ಸಂವೇದನೆ ಮುಖ್ಯ. ಸಂವೇದನೆ ಉಳಿಸಿಕೊಳ್ಳಬೇಕಾ, ಸಂಪಾದನೆ ಉಳಿಸಿಕೊಳ್ಳಬೇಕಾ? ಪುಸ್ತಕ ಅಚ್ಚಾಗದಿದ್ದರೆ ಸಂವೇದನೆ ಉಳಿಸಿಕೊಳ್ಳಲು ಹೇಗೆ ಸಾಧ್ಯ. ಪುಸ್ತಕವೇ ಮಾರಾಟವಾ ಗದಿದ್ದರೆ ಸಂಪಾದನೆ ಹೇಗೆ ಸಾಧ್ಯ? ಉದ್ಯಮದಲ್ಲಿ ಪ್ರಧಾನವಾಗಿರುವ ಸಂಪಾದನೆ, ಪುಸ್ತಕ ಸಂಸ್ಕೃತಿಯಲ್ಲಿ ಮುಖ್ಯವಾಗಿರುವ ಸಂವೇದನೆ ಇವೆರಡನ್ನು ಸಮತೋಲನಗೊಳಿಸುವ ನೀತಿಯನ್ನು ಸರ್ಕಾರ ರೂಪಿಸಬೇಕು' ಎಂದು ಹೇಳಿದರು.

'ಸರ್ಕಾರ ಮುಂದಿನ ಬಜೆಟ್‌ನಲ್ಲಿ ಗ್ರಂಥಾಲಯ ಇಲಾಖೆಗೆ ನಿರ್ದಿಷ್ಟ ಮೊತ್ತವನ್ನು ಘೋಷಿಸಬೇಕು. ಸಾಂಸ್ಕೃತಿಕ ಹಾಗೂ ಸಾಮಾಜಿಕ ಪ್ರಜ್ಞೆ ಇರುವ ಸರ್ಕಾರಗಳು ಪುಸ್ತಕ ಸಂಸ್ಕೃತಿಯನ್ನು ನಿರ್ಲಕ್ಷಿಸುವುದಿಲ್ಲ. ಗ್ರಂಥಾಲಯಗಳು ಗೋದಾಮುಗಳಲ್ಲ. ಅಲ್ಲಿ ಪ್ರತಿ ತಿಂಗಳು ಓದಿನ ಅಭಿರುಚಿ ಹೆಚ್ಚಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕಿದೆ' ಎಂದರು.

ಪುಸ್ತಕ ಪ್ರಚಾಕರಾದ ರೂಪಾ ಮತ್ತಿಕೆರೆ, ಸಿ. ಮಾಯಣ್ಣ, ಪುಸ್ತಕ ವಿನ್ಯಾಸಕ ಆರ್. ರಾಮಕೃಷ್ಣ ಅವರನ್ನು ಸನ್ಮಾನಿಸಲಾಯಿತು.



ವಿಶ್ವ ಪುಸ್ತಕ ದಿನಾಚರಣೆ ಕಾರ್ಯಕ್ರಮದಲ್ಲಿ ಪುಸ್ತಕ ಪ್ರಚಾರಕ ಸಿ. ಮಾಯಣ್ಣ, ವಿನ್ಯಾಸಕ ಆರ್. ರಾಮಕೃಷ್ಣ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಎಚ್.ಎಂ. ಗೀತಾ, ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲ ಬಿ.ಜಿ. ಭಾಸ್ಕರ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕರ್ನಾಟಕ ಕನ್ನಡ ಬರಹಗಾರರು ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಬರಗೂರು ರಾಮಚಂದ್ರಪ್ಪ, ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ, ಕೆ.ಎಸ್. ಮುರಳಿ ಭಾಗವಹಿಸಿದ್ದರು.

ಬದಲಾಗುತ್ತಿದೆ ಪುಸ್ತಕದ ಸ್ವರೂಪ: ಗಣೇಶಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕವು ಕಾಗದದ ರೂಪದಲ್ಲಿ ಮಾತ್ರ ಇರುತ್ತದೆ ಎನ್ನುವುದು ತಪ್ಪು ಕಲ್ಪನೆ. ಪುಸ್ತಕದ ಸ್ವರೂಪ ಬದಲಾಗುತ್ತಿದ್ದು, ಸಾಹಿತ್ಯ ಕೃತಿಗಳು ಹೆಚ್ಚು ಜನರನ್ನು ತಲುಪಲು ಮುದ್ರಣದ ಜತೆಗೆ ಧ್ವನಿಮುದ್ರಿತ ಪುಸ್ತಕದಂತಹ (ಆಡಿಯೊ ಬುಕ್) ಪ್ರಯೋಗಗಳು ಹೆಚ್ಚಬೇಕು' ಎಂದು ಕೀಟತಜ್ಞ ಹಾಗೂ ಲೇಖಕ ಕೆ.ಎನ್. ಗಣೇಶಯ್ಯ ತಿಳಿಸಿದರು.

ಬಿಎಂಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ ಕರ್ನಾಟಕ ಪ್ರಕಾಶಕರ ಸಂಘ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ವಿಶ್ವ ಪುಸ್ತಕ ಮತ್ತು ಕೃತಿಸ್ವಾಮ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮೈಸೂರಿನ ಕನ್ನಡ ಪುಸ್ತಕ ಪ್ರಾಧಿಕಾರಮಳಿಗೆಯ ನಿಂಗರಾಜ್ ಚಿತ್ತಣ್ಣನವರ್ ಅವರಿಗೆ 'ಎಂ.ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ' ಹಾಗೂ ವಿಜಯಪುರದ ಪುಸ್ತಕ ಪ್ರೀತಿ ಮಳಿಗೆಯ ರೂಪ ಮತ್ತೀಕೆರೆ ಅವರಿಗೆ 'ನಂಜನಗೂಡು ತಿರುಮಲಾಂಬ ಪ್ರಕಾಶನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ಗಣೇಶಯ್ಯ, 'ಕನ್ನಡದಲ್ಲಿ ಬರಹಗಾರರು ಪ್ರಕಾಶನ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಹೊಸ ಸೃಜನಶೀಲ ಬರಹಗಾರರನ್ನು ಹುಡುಕುವಲ್ಲಿ ಪ್ರಕಾಶಕರು ವಿಫಲರಾಗುತ್ತಿರುವುದು, ಕೃತಿ ಪರಿಶೀಲನೆ ವ್ಯವಸ್ಥೆ ಇಲ್ಲದಿರುವುದು ಸೇರಿ ವಿವಿಧ ಕಾರಣಗಳಿಂದ ಬರಹಗಾರರಿಗೆ ಪ್ರಕಾಶನದತ್ತ ಹೊರಳುವುದು ಅನಿವಾರ್ಯವಾಗಿದೆ. ವಿಜ್ಞಾನ ಪ್ರಕಾಶನದ ರೀತಿ ಕನ್ನಡದಲ್ಲಿಯೂ ಪುಸ್ತಕ ಪ್ರಕಟಣೆಗೆ ಮೊದಲು ವಿಷಯ ತಜ್ಞರಿಂದ ಪರಿಶೀಲಿಸುವ ವ್ಯವಸ್ಥೆ ರೂಪಿಸಬೇಕು. ಮುದ್ರಣದ ಜತೆಗೆ ಧ್ವನಿ ಮುದ್ರಿಕೆ ರೂಪದಲ್ಲಿಯೂ ಪುಸ್ತಕಗಳನ್ನು ನೀಡಬೇಕು' ಎಂದು ಹೇಳಿದರು.

'ಕಥೆ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಓದಲು ಸಾಧ್ಯವಾಗದವರು ಪ್ರಯಾಣ ಸೇರಿ ವಿವಿಧ ಸಂದರ್ಭದಲ್ಲಿ ಕೇಳಿಸಿಕೊಳ್ಳುತ್ತಾರೆ. ತಂತ್ರಜ್ಞಾನದ ನೆರವಿನಿಂದ ಪುಸ್ತಕವನ್ನು ಓದುವ ಹಾಗೂ ಕೇಳುವ ಎರಡೂ ಮಾಧ್ಯಮದಲ್ಲಿ ಒದಗಿಸಬಹುದಾಗಿದೆ. ಪುಸ್ತಕ ಬೇರೆ ಬೇರೆ ಸ್ವರೂಪದಲ್ಲಿ ಬಂದಿದೆ. ಅಶೋಕನ ಕಾಲದಲ್ಲಿ ಒಂದೇ ರೀತಿಯ ಶಾಸನಗಳನ್ನು ಹಲವೆಡೆ ಇರಿಸಲಾಗಿತ್ತು. ಇದನ್ನು ಕೂಡ ಪುಸ್ತಕವೆಂದೇ ಪರಿಗಣಿಸಬಹುದು. ಬಳಿಕ ತಾಳೆಗರಿ, ಬಟ್ಟೆ, ಕಾಗದ, ಆಡಿಯೊ ರೂಪದಲ್ಲಿ ಪುಸ್ತಕ ಹೊರಬಂದಿದೆ' ಎಂದು ವಿವರಿಸಿದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ರೂಪ ಮತ್ತೀಕೆರೆ ಅವರಿಗೆ 'ನಂಜನಗೂಡು ತಿರುಮಲಾಂಬ ಪ್ರಕಾಶನ ಪ್ರಶಸ್ತಿ' ಹಾಗೂ ನಿಂಗರಾಜ್ ಚಿತ್ತಣ್ಣನವರ್ ಅವರಿಗೆ 'ಎಂ. ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಎಂ.ಎಸ್. ಆಶಾದೇವಿ, ಬೈರಮಂಗಲ ರಾಮೇಗೌಡ, ಕೆ.ಎನ್. ಗಣೇಶಯ್ಯ, ಪ್ರಕಾಶ್ ಕಂಬತ್ತಳ್ಳಿ ಮತ್ತು ಡಾ. ವಸುಂಧರಾ ಭೂಪತಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ, 'ಇತ್ತೀಚೆಗೆ ಪುಸ್ತಕಗಳ ಓದು ಕಡಿಮೆ ಆಗುತ್ತಿದೆ. ಹಿಂದೆ ಶಿಕ್ಷಕರು ಹೆಚ್ಚಿನ ಪುಸ್ತಕಗಳನ್ನು ಓದಿ, ಮಕ್ಕಳಿಗೂ ಓದುವಂತೆ ಪ್ರೇರೆಪಿಸುತ್ತಿದ್ದರು. ಈಗ ಶಿಕ್ಷಕರಲ್ಲಿಯೂ ಓದುವ ಹವ್ಯಾಸ ಕಡಿಮೆಯಾಗಿದೆ. ಕನ್ನಡ ಓದದೆಯೂ ವಿದ್ಯಾಭ್ಯಾಸ ಮುಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಬಳಕೆಯಿಂದಲೂ ಜನರು ಓದುವ ಹವ್ಯಾಸದಿಂದ ದೂರವಾಗುತ್ತಿದ್ದಾರೆ. ಓದುಗರ ಸಂಖ್ಯೆ ಕಡಿಮೆ ಆಗದಂತೆ ನೋಡಿಕೊಳ್ಳಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸಬೇಕು' ಎಂದು ಹೇಳಿದರು.

ವಿಮರ್ಶಕಿ ಎಂ.ಎಸ್. ಆಶಾದೇವಿ, ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಕರ್ನಾಟಕ ಪ್ರಕಾಶಕರ ಸಂಘದ ಉಪಾಧ್ಯಕ್ಷೆ ಡಾ. ವಸುಂಧರಾ ಭೂಪತಿ ಅವರು ಪುಸ್ತಕದ ಮಹತ್ವದ ಬಗ್ಗೆ ಮಾತನಾಡಿದರು.

'ಸ್ಟಾಕ್‌ಹೋಂ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್' ವರದಿ

ಮಿಲಿಟರಿ ವೆಚ್ಚ: 4ನೇ ಸ್ಥಾನದಲ್ಲಿ ಭಾರತ

ನವದೆಹಲಿ (ಪಿಟಿಐ): ಜಾಗತಿಕವಾಗಿ ಮಿಲಿಟರಿ ಅಗತ್ಯಗಳಿಗಾಗಿ ಅತಿ ಹೆಚ್ಚಿನ ಮೊತ್ತವನ್ನು ವಿನಿಯೋಗಿಸುವ ದೇಶಗಳ ಸಾಲಿನಲ್ಲಿ ಭಾರತವು ನಾಲ್ಕನೆಯ ಸ್ಥಾನದಲ್ಲಿ ಇದೆ ಎಂದು 'ಸ್ಟಾಕ್‌ಹೋಂ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್' (ಎಸ್‌ಐಪಿಆರ್‌ಐ) ವರದಿ ಹೇಳಿದೆ.

2023ರಲ್ಲಿ ಭಾರತವು ಮಿಲಿಟರಿಗಾಗಿ ಸರಿಸುಮಾರು ₹6.96 ಲಕ್ಷ ಕೋಟಿ ವೆಚ್ಚ ಮಾಡಿದೆ.

ಅಮೆರಿಕ, ಚೀನಾ ಮತ್ತು ರಷ್ಯಾ ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿ ಇವೆ. ಎಸ್‌ಐಪಿಆರ್‌ಐ ಸಂಸ್ಥೆಯು ತನ್ನ ವೆಬ್‌ಸೈಟ್‌ನಲ್ಲಿ ವರದಿಯನ್ನು ಪ್ರಕಟಿಸಿದೆ. ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧ, ಏಷ್ಯಾ,

ಮುಖ್ಯಾಂಶಗಳು

- 2023ರಲ್ಲಿ ಮಿಲಿಟರಿಗಾಗಿ ₹6.96 ಲಕ್ಷ ಕೋಟಿ ವೆಚ್ಚ ಮಾಡಿದ ಭಾರತ
- ಮೊದಲ 3 ಸ್ಥಾನಗಳಲ್ಲಿ ಕ್ರಮವಾಗಿ ಅಮೆರಿಕ, ಚೀನಾ, ರಷ್ಯಾ ಇವೆ

ಮಧ್ಯಪ್ರಾಚ್ಯ ಹಾಗೂ ಓಷಿಯಾನಿಯ ಪ್ರದೇಶದಲ್ಲಿ ಸಂಘರ್ಷ ಹೆಚ್ಚುತ್ತಿರುವುದು ಮಿಲಿಟರಿ ವೆಚ್ಚದಲ್ಲಿ ಹೆಚ್ಚಳಕ್ಕೆ ಕಾರಣ ಎಂದು ವರದಿಯು ಹೇಳಿದೆ.

'2023ರಲ್ಲಿಯೂ ವಿಶ್ವಮಟ್ಟದಲ್ಲಿ ಮಿಲಿಟರಿ ವೆಚ್ಚ ಹೆಚ್ಚಳ ಕಂಡಿದೆ. ಅಂದರೆ ಈ ವೆಚ್ಚಗಳು ಸತತ ಒಂಬತ್ತು ವರ್ಷಗಳಿಂದ ಹೆಚ್ಚುತ್ತಿವೆ. 2023ರಲ್ಲಿ



ಒಟ್ಟು ₹203 ಲಕ್ಷ ಕೋಟಿಯನ್ನು ಮಿಲಿಟರಿಗಾಗಿ ವಿನಿಯೋಗಿಸಲಾಗಿದೆ. 2023ರಲ್ಲಿ ಮಿಲಿಟರಿ ಮೇಲಿನ ವೆಚ್ಚವು ಶೇ 6.8ರಷ್ಟು ಹೆಚ್ಚಳ ಕಂಡಿದ್ದು, ಇದು 2009ರ ನಂತರದ ಅತ್ಯಂತ ತೀವ್ರ ಪ್ರಮಾಣದ ಏರಿಕೆ' ಎಂದು ವರದಿ ಉಲ್ಲೇಖಿಸಿದೆ.

ಮಿಲಿಟರಿಯ ತಲಾವಾರು ವೆಚ್ಚವು ಪ್ರತಿ ವ್ಯಕ್ತಿಗೆ 306 ಡಾಲರ್ (₹25,483) ಎಂದು ಸಂಸ್ಥೆ ಹೇಳಿದೆ. ಭಾರತವು 2023ರಲ್ಲಿ ಮಿಲಿಟರಿಗಾಗಿ ₹6.96 ಲಕ್ಷ ಕೋಟಿ ವೆಚ್ಚ ಮಾಡಿದೆ. 2022ರ ವೆಚ್ಚಕ್ಕೆ ಹೋಲಿಸಿದರೆ ಭಾರತ 2023ರಲ್ಲಿ ಮಾಡಿದ ವೆಚ್ಚವು ಶೇ 4.2ರಷ್ಟು ಹೆಚ್ಚಾಗಿದೆ, 2014ರ ವೆಚ್ಚಕ್ಕೆ ಹೋಲಿಸಿದರೆ ಶೇ 44ರಷ್ಟು ಜಾಸ್ತಿಯಾಗಿದೆ. ಭಾರತದಲ್ಲಿ ವೆಚ್ಚ ಹೆಚ್ಚಾಗಿದ್ದಕ್ಕೆ ಮುಖ್ಯ ಕಾರಣ ಕಾರ್ಯಾಚರಣೆ ವೆಚ್ಚದಲ್ಲಿ ಏರಿಕೆ ಹಾಗೂ ಸಿಬ್ಬಂದಿ ಮೇಲಿನ ವೆಚ್ಚದಲ್ಲಿ ಏರಿಕೆ. ಈ ಎರಡು ವೆಚ್ಚಗಳು ಒಟ್ಟು ಮಿಲಿಟರಿ ವೆಚ್ಚದ ಶೇ 80ರಷ್ಟಾಗುತ್ತವೆ ಎಂದು ವರದಿ ಹೇಳಿದೆ.

ಚೀನಾ ಹಾಗೂ ಪಾಕಿಸ್ತಾನದ ಜೊತೆ ಬಿಗುವಿನ ಪರಿಸ್ಥಿತಿ ಇರುವ ಕಾರಣ ಕೇಂದ್ರ ಸರ್ಕಾರವು ದೇಶದ ಸೇನಾಪಡೆಗಳ ಸನ್ನದ್ಧತೆಯನ್ನು ಇನ್ನಷ್ಟು ಹೆಚ್ಚುಮಾಡುವುದನ್ನು ಆದ್ಯತೆಯ ಕೆಲಸವನ್ನಾಗಿಸಿಕೊಂಡಿದೆ. ವೆಚ್ಚ ಹೆಚ್ಚಳವು ಕೇಂದ್ರದ ಆದ್ಯತೆಗೆ ಅನುಗುಣವಾಗಿ ಇದೆ ಎಂದು ಉಲ್ಲೇಖಿಸಲಾಗಿದೆ.

ವಿಶ್ವದಲ್ಲಿ ಮಿಲಿಟರಿ ವೆಚ್ಚಗಳನ್ನು ಅತಿಹೆಚ್ಚಿನ ಪ್ರಮಾಣದಲ್ಲಿ ಮಾಡುವುದು ಅಮೆರಿಕ. ಅದು ಚೀನಾದ ಮಿಲಿಟರಿ ವೆಚ್ಚಗಳಿಗಿಂತ 3.1 ಪಟ್ಟು ಹೆಚ್ಚು ಮೊತ್ತವನ್ನು ಮಿಲಿಟರಿಗಾಗಿ 2023ರಲ್ಲಿ ವಿನಿಯೋಗಿಸಿದೆ. ಚೀನಾ ದೇಶವು 2023ರಲ್ಲಿ ಅಂದಾಜು ₹24 ಲಕ್ಷ ಕೋಟಿ ವೆಚ್ಚ ಮಾಡಿದೆ.

ಕಿರುಕುಳ: ಶಿಕ್ಷೆ ರದ್ದತಿ ಕೋರಿದ್ದ ಡಿಜಿಪಿ ಅರ್ಜಿ ವಜಾ

ಚೆನ್ನೈ (ಪಿಟಿಐ): ಲೈಂಗಿಕ ಕಿರುಕುಳ ಪ್ರಕರಣವೊಂದರಲ್ಲಿ ತಮಿಳುನಾಡಿನ ಮಾಜಿ ವಿಶೇಷ ಡಿಜಿಪಿ ರಾಜೇಶ್ ದಾಸ್ ಎಂಬುವವರಿಗೆ ವಿಧಿಸಲಾಗಿರುವ ಮೂರು ವರ್ಷಗಳ ಜೈಲು ಶಿಕ್ಷೆಯನ್ನು ರದ್ದುಪಡಿಸಲು ಮದ್ರಾಸ್ ಹೈಕೋರ್ಟ್ ಮಂಗಳವಾರ ನಿರಾಕರಿಸಿದೆ. ಮಹಿಳೆಯರು, ಬಾಲಕಿಯರ ಮೇಲಿನ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿವೆ ಎಂದು ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಶಿಕ್ಷೆ ರದ್ದುಗೊಳಿಸುವಂತೆ ಕೋರಿ ರಾಜೇಶ್ ದಾಸ್ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ದಂಡಪಾಣಿ ಅವರು ತಿರಸ್ಕರಿಸಿದರು. ವಿಚಾರಣಾ ನ್ಯಾಯಾಲಯಕ್ಕೆ ಹಾಜರಾಗುವುದರಿಂದಲೂ ವಿನಾಯತಿ ನೀಡಬೇಕು ಎಂದು ದಾಸ್ ಕೋರಿದ್ದರು. ನ್ಯಾಯಮೂರ್ತಿಗಳು ಅದನ್ನೂ ನಿರಾಕರಿಸಿದರು.

ಮಹಿಳಾ ಐಪಿಎಸ್ ಅಧಿಕಾರಿಗೆ 2021ರಲ್ಲಿ ಲೈಂಗಿಕ ಕಿರುಕುಳ ನೀಡಿದ್ದ ಪ್ರಕರಣದಲ್ಲಿ ದಾಸ್ ಅವರ ಅಪರಾಧ ಸಾಬೀತುಪಡಿಸಿದ್ದ ವಿಳ್ಳುಪುರಂ ಸ್ಥಳೀಯ ನ್ಯಾಯಾಲಯವು ಅವರಿಗೆ 2023ರ ಜೂನ್‌ನಲ್ಲಿ ಮೂರು ವರ್ಷಗಳ ಕಠಿಣ ಸಜೆ ವಿಧಿಸಿತ್ತು.

ಅದನ್ನು ಪ್ರಶ್ನಿಸಿ ರಾಜೇಶ್ ದಾಸ್ ಅವರು ಅರ್ಜಿ ಸಲ್ಲಿಸಿದ್ದರು.

ಕೇರಳ: ಬಾವಿಗೆ ಬಿದ್ದು ಆನೆ ಸಾವು

ತ್ರಿಶ್ಶೂರ್ (ಕೇರಳ) (ಪಿಟಿಐ): ಜಿಲ್ಲೆಯ ಅರಣ್ಯದಿಂದ 200 ಮೀಟರ್ ದೂರದಲ್ಲಿರುವ ಖಾಸಗಿ ಜಮೀನಿನಲ್ಲಿದ್ದ ಬಾವಿಗೆ ಗಂಡು ಕಾಡಾನೆಯೊಂದು ಬಿದ್ದು, ಮೃತಪಟ್ಟಿದೆ.

ಆನೆಯು ಬಾವಿಗೆ ಬಿದ್ದಿರುವ ಮಾಹಿತಿ ಸೋಮವಾರ ಮಧ್ಯರಾತ್ರಿ ಲಭ್ಯವಾಗಿದ್ದು, ಪಶು ವೈದ್ಯಾಧಿಕಾರಿಗಳು ಸೇರಿದಂತೆ ತಂಡವು ಸ್ಥಳಕ್ಕೆ ಧಾವಿಸಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಅರಣ್ಯಾಧಿಕಾರಿಗಳ ತಂಡವು ತಕ್ಷಣವೇ ಮಣ್ಣಿನ ಅಗೆಯುವ ಯಂತ್ರವನ್ನು ಬಳಸಿಕೊಂಡು, ಆನೆಯನ್ನು ಬಾವಿಯಿಂದ ಹೊರಬರಲು ಮಾರ್ಗವನ್ನು ಸೃಷ್ಟಿಸುವ ಮೂಲಕ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿತು ಎಂದು ಅವರು ಹೇಳಿದರು. ಆದರೆ, ಕಾರ್ಯಾಚರಣೆ ಪೂರ್ಣಗೊಳ್ಳುವ ಮೊದಲೇ ಆನೆ ಮೃತಪಟ್ಟಿದೆ.

ಅರಣ್ಯಾಧಿಕಾರಿಗಳು ಆನೆಯ ಮೃತ ದೇಹವನ್ನು ಹೊರತೆಗೆಯುವ ಕಾರ್ಯದಲ್ಲಿ ತೊಡಗಿದ್ದು, ನಂತರ ಪರೀಕ್ಷೆ ನಡೆಸಿ ಸಾವಿಗೆ ನಿಖರ ಕಾರಣ ತಿಳಿಯಲು ಪರಿಶೀಲನೆ ನಡೆಸಲಾಗುವುದು ಎಂದರು.

ತ್ರಿಶ್ಶೂರ್‌ನಲ್ಲಿ ಈ ರೀತಿ ಘಟನೆಗಳು ನಡೆಯುವುದು ಅಪರೂಪ. ಇತ್ತೀಚೆಗೆ ಕೇರಳದಲ್ಲಿ ಕಾಡಾನೆಗಳು ಬಾವಿಗೆ ಬೀಳುತ್ತಿರುವ ವರದಿ ಹೆಚ್ಚು ದಾಖಲಾಗುತ್ತಿದ್ದು, ಇದುವರೆಗೆ ಆನೆಗಳನ್ನು ರಕ್ಷಿಸಲಾಗಿತ್ತು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.



ಮಳೆ–ಆಹ್ಲಾದ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮಂಗಳವಾರ ಬಿದ್ದ ಅಲ್ಪಪ್ರಮಾಣದ ಮಳೆ ಮತ್ತು ಬೀಸಿದ ತಣ್ಣನೆ ಗಾಳಿ ಬಿಸಿಲ ಧಗೆಯಿಂದ ಬಸವಳಿದಿದ್ದ ಜನರು ನಿಟ್ಟುಸಿರು ಬಿಡುವಂತೆ ಮಾಡಿತು –ಪಿಟಿಐ ಚಿತ್ರ

ಮೂವರು ಹನುಮ ಮಾಲಾಧಾರಿಗಳ ಸಾವು

ಪ್ರಜಾವಾಣಿ ವಾರ್ತೆ

ಶಕ್ತಿನಗರ (ರಾಯಚೂರು): ಹನುಮ ಜಯಂತಿ ಅಂಗವಾಗಿ ನೀರು ತರಲು ಕೃಷ್ಣಾ ನದಿಗೆ ಪಾದಯಾತ್ರೆ ತೆರಳಿ ಮರಳುವಾಗ ಮಂಗಳವಾರ ಹಿಂಬದಿಯಿಂದ ಬೊಲೆರೊ ವಾಹನ ಡಿಕ್ಕಿಯಾಗಿ ಮೂವರು ಹನುಮ ಮಾಲಾಧಾರಿಗಳು ಮೃತಪಟ್ಟಿದ್ದಾರೆ. ಶಕ್ತಿನಗರದ ಯಾದವ ಕ್ರಾಸ್ ಬಳಿ ಅಪಘಾತ ಸಂಭವಿಸಿದೆ.

ರಾಯಚೂರು ತಾಲ್ಲೂಕಿನ ಹೆಗ್ಗಸನಹಳ್ಳಿ ಗ್ರಾಮದ ನಿವಾಸಿ ಅಯ್ಯನಗೌಡ (30), ಉದಯಕುಮಾರ (28) ಮತ್ತು ಮಹೇಶ (22) ಮೃತರು.

ಬೆಳಿಗ್ಗೆ ಹೆಗ್ಗಸನಹಳ್ಳಿ ಗ್ರಾಮದಿಂದ 10 ಜನ ಹನುಮ ಮಾಲಾಧಾರಿಗಳು ತೆರಳಿದ್ದರು. ನದಿಯಲ್ಲಿ ನೀರು ತುಂಬಿಕೊಡು ಮರಳುವಾಗ ಹೈದರಾಬಾದ್‌ನಿಂದ ಕೋಳಿ ಸಾಗಿಸುತ್ತಿದ್ದ ವಾಹನ ಡಿಕ್ಕಿ ಹೊಡೆದಿದೆ.

ದೆಹಲಿ– ದಿಢೀರ್ ಹವಾಮಾನ ಬದಲಾವಣೆ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಮಂಗಳವಾರ ಸಂಜೆ ಹಠಾತ್ ಆಗಿ ಹವಾಮಾನ ಬದಲಾವಣೆಯಾಗಿದೆ. ಇಡೀ ದಿನ ಅಧಿಕ ತಾಪಮಾನವಿದ್ದು, ಸಂಜೆ ಭಾರಿ ಗಾಳಿ ಬೀಸಿದೆ. ಜೊತೆಗೆ ಕೆಲ ಭಾಗಗಳಲ್ಲಿ ಹಗುರ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಮೊದಲಿಗೆ ದೂಳು ಸಹಿತ ಭಾರಿ ಗಾಳಿ ಎದ್ದಿತ್ತು. ಬಳಿಕ ಗುಡುಗು ಸಹಿತ ಮಳೆ ಬಂದಿದೆ. ಮಳೆ ಸುರಿವಾಗಲೂ ಭಾರಿ ಗಾಳಿ ಬೀಸಿದೆ ಎಂದು ಇಲಾಖೆ ಹೇಳಿದೆ.

ಈ ಋತುವಿನಲ್ಲಿ ದೆಹಲಿಯಲ್ಲಿ ಕನಿಷ್ಠ 22.6 ಡಿಗ್ರಿ ಸೆಲ್ಸಿಯಸ್, ಗರಿಷ್ಠ 38 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರುತ್ತದೆ. ಮಂಗಳವಾರದ ಗರಿಷ್ಠ ಉಷ್ಣಾಂಶವು ಸರಾಸರಿಗಿಂತ ಕಡಿಮೆ, ಅಂದರೆ 36.8 ಡಿಗ್ರಿ ಸೆಲ್ಸಿಯಸ್ ಇತ್ತು.

ಸುದ್ದಿ 2 ನಿಮಿಷ

'10 ದಿನಗಳ ಎಂಬಿಎ' ಕೋರ್ಸ್: ಯುಜಿಸಿಯಿಂದ ಎಚ್ಚರಿಕೆ

ನವದೆಹಲಿ(ಪಿಟಿಐ): ಮಾನ್ಯತೆ ಇರುವ ಪದವಿ ಕೋರ್ಸ್‌ಗಳ ಹೆಸರಗಳನ್ನೇ ಹೋಲುವ ಸಂಕ್ಷಿಪ್ತ ಹೆಸರುಗಳ ಮೂಲಕ ನಕಲಿ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸುತ್ತಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗ್ಗೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ.

ಅದರಲ್ಲೂ, ವಿಶೇಷವಾಗಿ '10 ದಿನಗಳ ಎಂಬಿಎ' ಎಂಬ ಕೋರ್ಸ್ ಬಗ್ಗೆ ಜನರು ಎಚ್ಚರಿಕೆಯಿಂದ ಇರಬೇಕು ಎಂದು ಆಯೋಗದ ಕಾರ್ಯದರ್ಶಿ ಮನೀಷ್ ಜೋಶಿ ಹೇಳಿದ್ದಾರೆ.

'ಒಂದು ಪದವಿ ಕೋರ್ಸ್‌ನ ಸಂಕ್ಷಿಪ್ತ ರೂಪ, ಕೋರ್ಸ್‌ನ ಅವಧಿ, ಅದಕ್ಕೆ ಪ್ರವೇಶ



ಪಡೆಯಲು ಅಗತ್ಯವಿರುವ ಶೈಕ್ಷಣಿಕ ಅರ್ಹತೆ ಕುರಿತು ಯುಜಿಸಿ ನಿರ್ಧರಿಸಿರುತ್ತದೆ. ಈ ಕುರಿತು ಕೇಂದ್ರ ಸರ್ಕಾರದ ಅನುಮೋದನೆ ಪಡೆಯುವ ಜೊತೆಗೆ, ಗೆಜೆಟ್‌ನಲ್ಲಿ ಈ ಕುರಿತು ಅಧಿಸೂಚನೆಯನ್ನು ಸಹ ಪ್ರಕಟಿಸಲಾಗಿರುತ್ತದೆ' ಎಂದು ಅವರು ಹೇಳಿದ್ದಾರೆ.

'ಕೇಂದ್ರದಿಂದ ಅಥವಾ ಅದರ ಕಾಯ್ದೆ ಅನ್ವಯ ಸ್ಥಾಪಿಸಲಾದ ವಿಶ್ವವಿದ್ಯಾಲಯ ಅಥವಾ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ ಇಲ್ಲವೇ ಸಂಸ್ಥೆಯೊಂದು ಮಾತ್ರ ಪದವಿ ಪ್ರದಾನ ಮಾಡುವ ಹಕ್ಕು ಹೊಂದಿರುತ್ತದೆ' ಎಂದೂ ಅವರು ಸ್ಪಷ್ಟನೆ ನೀಡಿದ್ದಾರೆ.

'ಉನ್ನತ ಶಿಕ್ಷಣ ಸಂಸ್ಥೆಗಳು ಯಾವುದೇ ಆನ್‌ಲೈನ್ ಕೋರ್ಸ್ ಆರಂಭಿಸಬೇಕಿದ್ದರೂ, ಅದಕ್ಕೆ ಯುಜಿಸಿಯಿಂದ ಅನುಮೋದನೆ ಪಡೆಯುವುದು ಅಗತ್ಯ. ಆನ್‌ಲೈನ್ ಕೋರ್ಸ್ ನಡೆಸಲು ಯುಜಿಸಿಯಿಂದ ಮಾನ್ಯತೆ ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳ (ಎಚ್‌ಇಐ) ಪಟ್ಟಿಯು ಆಯೋಗದ ವೆಬ್‌ಸೈಟ್‌ನಲ್ಲಿ (deb.ugc.ac.in) ಲಭ್ಯ ಇದೆ' ಎಂದು ತಿಳಿಸಿದ್ದಾರೆ.

₹6.46 ಕೋಟಿ ಮೌಲ್ಯದ ವಜ್ರ ಮತ್ತು ಚಿನ್ನ ವಶ

ಮುಂಬೈ (ಪಿಟಿಐ): ಇಲ್ಲಿನ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಇಲಾಖೆಯು ಪ್ರಯಾಣಿಕರು ಅಕ್ರಮವಾಗಿ ದೇಹದ ಭಾಗ, ನೂಡಲ್ಸ್ ಪ್ಯಾಕೆಟ್ ಮತ್ತು ತಮ್ಮ ಸರಕು ಸಾಮಾನುಗಳಲ್ಲಿ ಸಾಗಿಸುತ್ತಿದ್ದ ಸುಮಾರು ₹6.46 ಕೋಟಿ ಮೌಲ್ಯದ ವಜ್ರ ಮತ್ತು ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾರಾಂತ್ಯದಲ್ಲಿ ₹4.44 ಕೋಟಿ ರೂಪಾಯಿ ಮೌಲ್ಯದ 6.815 ಕೆ.ಜಿ. ಚಿನ್ನ ಮತ್ತು ವಜ್ರಗಳನ್ನು ವಶಪಡಿಸಿಕೊಂಡಿದ್ದು, ನಾಲ್ವರನ್ನು ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಮುಂಬೈನಿಂದ ಬ್ಯಾಂಕಾಕ್‌ಗೆ ಪ್ರಯಾಣಿಸುತ್ತಿದ್ದ ಭಾರತೀಯ ಪ್ರಜೆಯನ್ನು ಪರೀಕ್ಷಿಸಿದಾಗ ತನ್ನ ಟ್ರಾಲಿ ಬ್ಯಾಗ್‌ನಲ್ಲಿ ನೂಡಲ್ಸ್ ಪ್ಯಾಕೆಟ್‌ಗಳಲ್ಲಿ ಬಚ್ಚಿಟ್ಟು ವಜ್ರಗಳನ್ನು ಕಳ್ಳಸಾಗಣೆ ಮಾಡುತ್ತಿರುವುದು ಕಂಡುಬಂದಿದ್ದು, ನಂತರ ಅವರನ್ನು ಬಂಧಿಸಲಾಗಿದೆ. ಎಂದು ಅಧಿಕಾರಿಗಳು ತಿಳಿಸಿದರು.

ಕೊಲಂಬೊದಿಂದ ಮುಂಬೈಗೆ ಪ್ರಯಾಣಿಸುತ್ತಿದ್ದ ವಿದೇಶಿ ಪ್ರಜೆಯೊಬ್ಬರನ್ನು ತಡೆಹಿಡಿಯಲಾಗಿದ್ದು, ಆಕೆಯ ಒಳ ಉಡುಪಿನಲ್ಲಿ 321 ಗ್ರಾಂ ತೂಕದ ಚಿನ್ನದ ತುಂಡುಗಳನ್ನು ಸಾಗಿಸುತ್ತಿರುವುದು ಕಂಡುಬಂದಿದೆ ಎಂದು ಅವರು ಹೇಳಿದರು.

ಉದ್ಯೋಗ ಪ್ರಕರಣ: ತೀರ್ಮಾನಿಸಲು ಮೇ 2ರ ಗಡುವು

ಕೋಲ್ಕತ್ತ (ಪಿಟಿಐ): 2016ರ ಶಾಲಾ ಉದ್ಯೋಗ ಪ್ರಕರಣದಲ್ಲಿ ಸಿಬಿಐ ಬಂಧಿಸಿರುವ ಮಾಜಿ ಸರ್ಕಾರಿ ಉದ್ಯೋಗಿಗಳ ವಿರುದ್ಧ ಕ್ರಮ ಜರುಗಿಸಲು ಅನುಮತಿ ನೀಡುವ ಬಗ್ಗೆ ಮೇ 2ಕ್ಕೆ ಮೊದಲು ತೀರ್ಮಾನ ಕೈಗೊಳ್ಳುವಂತೆ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಗೆ ಕಲ್ಕತ್ತ ಹೈಕೋರ್ಟ್ ಮಂಗಳವಾರ ಸೂಚಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ 25 ಸಾವಿರಕ್ಕೂ ಹೆಚ್ಚಿನ ನೇಮಕಾತಿಗಳನ್ನು ಸೋಮವಾರ ರದ್ದುಪಡಿಸಲಾಗಿದೆ. ಮಂಗಳವಾರದ ಸೂಚನೆಯನ್ನು ಪಾಲಿಸಲು ಮುಖ್ಯ ಕಾರ್ಯದರ್ಶಿ ವಿಫಲರಾದಲ್ಲಿ ಅವರ ವಿರುದ್ಧ ಸೂಕ್ತ ಕ್ರಮಕ್ಕೆ ಕೋರ್ಟ್ ಮುಂದಾಗಬೇಕಾಗುತ್ತದೆ ಎಂದು ವಿಭಾಗೀಯ ಪೀಠವು ಹೇಳಿದೆ.

ಪಶ್ಚಿಮ ಬಂಗಾಳದ ಸರ್ಕಾರಿ ಪ್ರಾಯೋಜಿತ ಮತ್ತು ಅನುದಾನಿತ ಶಾಲೆಗಳ 25,753 ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳಿಗೆ ನಡೆದ ನೇಮಕಾತಿಗಳನ್ನು ಇದೇ ಕೋರ್ಟ್‌ನ ಇನ್ನೊಂದು ವಿಭಾಗೀಯ ಪೀಠವು ಸೋಮವಾರ ರದ್ದುಪಡಿಸಿದೆ.

ಆರೋಪಿಗಳ ವಿರುದ್ಧ ಕಾನೂನು ಕ್ರಮಕ್ಕೆ ಅನುಮತಿ ಕೋರಿ ಸಿಬಿಐ ಸಲ್ಲಿಸಿರುವ ಅರ್ಜಿಯು 2022ರಿಂದಲೂ ಬಾಕಿ ಇದೆ ಎಂದು ಹೇಳಿರುವ ನ್ಯಾಯಮೂರ್ತಿ ಜಯಮಾಲಾ ಬಾಗ್ಚಿ ಅವರ ನೇತೃತ್ವದ ವಿಭಾಗೀಯ ಪೀಠವು, ಮುಖ್ಯ ಕಾರ್ಯದರ್ಶಿಯವರಿಗೆ ಈ ಸೂಚನೆ ನೀಡಿದೆ.

ಸಕ್ಕರೆ ಅಂಶ ಇಳಿಕೆ, ತಜ್ಞರ ಸಲಹೆಯಂತೆ ಕ್ರಮ • ಶುಭ ಸುದ್ದಿ –ಎಎಪಿ

ಕೇಜ್ರಿವಾಲ್‌ಗೆ ಜೈಲಿನಲ್ಲೇ ಇನ್ಸುಲಿನ್

ನವದೆಹಲಿ (ಪಿಟಿಐ): ಬಂಧನದಲ್ಲಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ರಕ್ತದಲ್ಲಿ ಸಕ್ಕರೆ ಅಂಶ ಇಳಿದಿದ್ದರಿಂದಾಗಿ ಇನ್ಸುಲಿನ್ ನೀಡಲಾಗಿದೆ ಎಂದು ತಿಹಾರ್ ಜೈಲಿನ ಅಧಿಕಾರಿಗಳು ತಿಳಿಸಿದ್ದಾರೆ.

'ಹನುಮಾನ್ ಜಯಂತಿ ದಿನದಂದೇ ಆಗಿರುವ ಈ ಬೆಳವಣಿಗೆ ಸ್ವಾಗತಾರ್ಹ. ದೇವರ ಆಶೀರ್ವಾದದಿಂದಲೇ ಇದು ನಡೆದಿದೆ' ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಪ್ರತಿಕ್ರಿಯಿಸಿದೆ.

'ಏಮ್ಸ್‌ನ ತಜ್ಞವೈದ್ಯರ ಸಲಹೆಯಂತೆ ಸೋಮವಾರ ಸಂಜೆ ಕೇಜ್ರಿವಾಲ್ ಅವರಿಗೆ ಕಡಿಮೆ ಡೋಸ್‌ನ ಇನ್ಸುಲಿನ್ ನೀಡಲಾಯಿತು' ಎಂದು ತಿಹಾರ್ ಜೈಲಿನ ಅಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್ 20ರಂದು ಕೇಜ್ರಿವಾಲ್ ಅವರೊಂದಿಗೆ ಏಮ್ಸ್ ಪರಿಣತರು ವಿಡಿಯೊ ಸಮಾಲೋಚನೆ ನಡೆಸಿದ್ದರು. ಅವರ ದೇಹದ ರಕ್ತದಲ್ಲಿ ಸಕ್ಕರೆ ಅಂಶವು ಹೆಚ್ಚಿನ ಪ್ರಮಾಣದಲ್ಲಿ ಕಡಿಮೆಯಾದರೆ ಇನ್ಸುಲಿನ್ ನೀಡಬೇಕು



ಅರವಿಂದ ಕೇಜ್ರಿವಾಲ್

ಎಂದು ತಿಹಾರ್ ಜೈಲಿನ ವೈದ್ಯರಿಗೆ ಸಲಹೆ ಮಾಡಿದ್ದರು ಎಂದು ಅಧಿಕಾರಿಗಳು ತಿಳಿಸಿದರು.

ಪಕ್ಷದ ನಾಯಕನಿಗೆ ಜೈಲಿನಲ್ಲಿ ಸರಿಯಾದ ಚಿಕಿತ್ಸೆ ದೊರೆಯುತ್ತಿರಲಿಲ್ಲ. ಅವರನ್ನು ಬಂಧಿಸಿದ 23 ದಿನಗಳ ನಂತರ ಈಗ ಇನ್ಸುಲಿನ್ ನೀಡಲಾಗಿದೆ. ಹನುಮಾನ್ ದೇವರ ಆಶೀರ್ವಾದವೇ ಇದಕ್ಕೆ ಕಾರಣ ಎಂದು ಎಎಪಿ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್ ಪ್ರತಿಕ್ರಿಯಿಸಿದರು.

ಸಚಿವೆ ಆತಿಶಿ ಅವರು ಈ ಕುರಿತಂತೆ ಎಕ್ಸ್ ಜಾಲತಾಣದಲ್ಲಿ, 'ಹನುಮಾನ್ ಜಯಂತಿಯಂದು ಶುಭ ಸುದ್ದಿ ಬಂದಿದೆ. ತಿಹಾರ್ ಜೈಲಿನ ಅಧಿಕಾರಿಗಳು ಕೊನೆಗೂ ಇನ್ಸುಲಿನ್ ನೀಡಿದ್ದಾರೆ' ಎಂದು ಪೋಸ್ಟ್ ಮಾಡಿದ್ದಾರೆ.

'ನ್ಯಾಯಾಂಗ ಬಂಧನ 7ರವರೆಗೆ ವಿಸ್ತರಣೆ'

ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್ ಮತ್ತು ಬಿಆರ್‌ಎಸ್ ನಾಯಕಿ ಕೆ.ಕವಿತಾ ನ್ಯಾಯಾಂಗ ಬಂಧನವನ್ನು ಕೋರ್ಟ್ ಮೇ 7ರವರೆಗೆ ವಿಸ್ತರಿಸಿದೆ.

ದೆಹಲಿ ಅಬಕಾರಿ ನೀತಿ ಹಗರಣದ ಹಣ ಅಕ್ರಮ ವರ್ಗಾವಣೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಇಬ್ಬರನ್ನು ಬಂಧಿಸಲಾಗಿದೆ.

ಸಿಬಿಐ, ಇ.ಡಿ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ಕೋರ್ಟ್‌ನ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ, ವರ್ಚುಯೆಲ್ ಕಲಾಪದಲ್ಲಿ ಈ ಕುರಿತ ಆದೇಶ ನೀಡಿದರು.

ಹನುಮ ಮಂದಿರಲ್ಲಿ ಸುನೀತಾ ಪ್ರಾರ್ಥನೆ

ಅರವಿಂದ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಮಂಗಳವಾರ ಇಲ್ಲಿ ಹನುಮಾನ್ ಮಂದಿರದಲ್ಲಿ ಹನುಮಾನ್ ಜಯಂತಿ ನಿಮಿತ್ತ ಪ್ರಾರ್ಥನೆ ಸಲ್ಲಿಸಿದರು.

'ಹನುಮಾನ್ ದೇವರು ನನ್ನದೂ ಸೇರಿ ಸರ್ವರ ಕಷ್ಟಗಳನ್ನೂ ನಿವಾರಿಸಲಿ. ಮುಂದಿನ ಬಾರಿ ಪತಿ ಜೊತೆಗೆ ಭೇಟಿ ನೀಡುತ್ತೇನೆ' ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿದರು.

ಕನ್ನಾಟ್ ಪ್ಲೇಸ್‌ನಲ್ಲಿರುವ ಮಂದಿರಕ್ಕೆ ಸುನೀತಾ ನಿಯಮಿತವಾಗಿ ಭೇಟಿ ನೀಡಲಿದ್ದಾರೆ.

ಭೋಜಶಾಲಾ ಸಮೀಕ್ಷೆ– ಸಮಯ ಕೇಳಿದ ಎಎಸ್‌ಐ

ಇಂದೋರ್ (ಪಿಟಿಐ): ಮಧ್ಯಪ್ರದೇಶದ ಧಾರ್ ಜಿಲ್ಲೆಯ ವಿವಾದಿತ ಭೋಜಶಾಲಾ ಸಂಕೀರ್ಣದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸುತ್ತಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಸಮೀಕ್ಷೆ ಪೂರ್ಣಗೊಳಿಸಲು ಎಂಟು ವಾರಗಳು ಬೇಕು ಎಂದು ಹೇಳಿದೆ.

ಈ ಕುರಿತು ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠಕ್ಕೆ ಅರ್ಜಿ ಸಲ್ಲಿಸಿರುವ ಎಎಸ್‌ಐ, ವಿವಾದಿತ ಆವರಣದಲ್ಲಿರುವ ಸಂರಚನೆಗಳ ಕುರಿತು ತಿಳಿದುಕೊಳ್ಳು ಹೆಚ್ಚಿನ ಸಮಯಾವಕಾಶ ನೀಡಬೇಕೆಂದು ಹೈಕೋರ್ಟ್‌ಗೆ ಮನವಿ ಮಾಡಿದೆ.

ಭೋಜಶಾಲಾ ವಿವಾದ ಕುರಿತ ಅರ್ಜಿಯ ಮುಂದಿನ ವಿಚಾರಣೆಯನ್ನು ಹೈಕೋರ್ಟ್ ಏಪ್ರಿಲ್ 29ಕ್ಕೆ ನಿಗದಿಪಡಿಸಿತ್ತು. ಎಎಸ್‌ಐ ಸಲ್ಲಿಸಿರುವ ಹೊಸ ಅರ್ಜಿಯ ವಿಚಾರಣೆಯನ್ನೂ ಅದೇ ದಿನ ನಡೆಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಹಿಂದೂ ಫ್ರಂಟ್ ಫಾರ್ ಜಸ್ಟೀಸ್ (ಎಚ್‌ಎಫ್‌ಜೆ) ಸಂಘಟನೆಯು ಭೋಜಶಾಲಾ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಕೋರಿ ಅರ್ಜಿ ಸಲ್ಲಿಸಿತ್ತು.

ವೀಸಾ ಅವಧಿ ವಿಸ್ತರಣೆಗೆ ನಕಾರ ಭಾರತ ತೊರೆದ ಆಸ್ಟ್ರೇಲಿಯಾ ಪತ್ರಕರ್ತೆ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಮೂಲದ ಪತ್ರಕರ್ತೆಯೊಬ್ಬರ ಕೆಲಸದ ವೀಸಾದ ಅವಧಿಯನ್ನು ವಿಸ್ತರಿಸಲು ಭಾರತ ಸರ್ಕಾರ ನಿರಾಕರಿಸಿದೆ.

ಸಿಖ್ ಪ್ರತ್ಯೇಕತಾವಾದಿ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದ ವರದಿಯನ್ನು ಮಾಡಿದ ಕಾರಣಕ್ಕಾಗಿ ತಮ್ಮ ವೀಸಾವನ್ನು ವಿಸ್ತರಿಸಲಿಲ್ಲ ಎಂದು ಆಸ್ಟ್ರೇಲಿಯಾ ಪತ್ರಕರ್ತೆ ಅವನಿ ಡಾಯಸ್ ತಿಳಿಸಿದ್ದಾರೆ.

ಅವರು ಏಪ್ರಿಲ್ 19ರಂದು ಭಾರತವನ್ನು ತೊರೆದು ಆಸ್ಟ್ರೇಲಿಯಾಕ್ಕೆ ತೆರಳಿದ್ದಾರೆ ಎಂದು ತಿಳಿದುಬಂದಿದೆ.

ಆಸ್ಟ್ರೇಲಿಯಾ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ ದಕ್ಷಿಣ ಏಷ್ಯಾದ ಬ್ಯೂರೊ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸುತ್ತಿದ್ದ ಅವನಿ ಡಾಯಸ್ ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಸಿಖ್ ಪ್ರತ್ಯೇಕತಾವಾದಿ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದ ಕುರಿತು ನಾನು ವರದಿ ಮಾಡಿದ್ದನ್ನು ಭಾರತ ಸರ್ಕಾರ ವಿರೋಧಿಸಿತ್ತು. ಅಲ್ಲದೆ, ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯ ವರದಿಗಾರಿಕೆ ವೇಳೆ ನಾನು ಎಲ್ಲಾ ಮಿತಿಯನ್ನು ಮೀರಿದ್ದೇನೆ ಎಂದು ಹೇಳಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ನನ್ನ ವೀಸಾ ಅವಧಿಯನ್ನು ವಿಸ್ತರಿಸಲು ನಿರಾಕರಿಸಿದೆ. ಹೀಗಾಗಿ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನದ ದಿನವಾದ ಏಪ್ರಿಲ್ 19ರಂದೇ ನಾನು ಭಾರತ ತ್ಯಜಿಸಬೇಕಾಯಿತು. ಇದನ್ನು ಮೋದಿ ಅವರು ಪ್ರಜಾಪ್ರಭುತ್ವದ ತಾಯಿ ಎಂದು ಬಣ್ಣಿಸುತ್ತಾರೆ' ಎಂದು ವ್ಯಂಗ್ಯವಾಡಿದ್ದಾರೆ.

ತ್ಯಾಜ್ಯ ಘಟಕದಲ್ಲಿ ಬೆಂಕಿ: ಉಸಿರಾಡಲು ಪರದಾಟ

ನವದೆಹಲಿ (ಪಿಟಿಐ): ಗಾಜಿಪುರದ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಬೆಂಕಿ ಹೊತ್ತಿಕೊಂಡು 24 ಗಂಟೆಗೂ ಹೆಚ್ಚು ಸಮಯವಾಗಿದೆ. ಅದರಿಂದ ಏಳುತ್ತಿರುವ ಹೊಗೆ ಸುತ್ತಮುತ್ತಲ ಪ್ರದೇಶಗಳಲ್ಲಿ ಆವರಿಸುತ್ತಿದ್ದು, ಅಲ್ಲಿನ ಜನರು ಉಸಿರಾಡಲೂ ಪರದಾಡುತ್ತಿದ್ದಾರೆ.

ಈ ಮಧ್ಯೆ, ಹೊಗೆಯ ಸುತ್ತ ರಾಜಕೀಯದಾಟ ಆರಂಭವಾಗಿದೆ. 'ಬೆಂಕಿ ಹೊತ್ತಿಕೊಳ್ಳುವುದಕ್ಕೆ ಎಎಪಿ ನೇತೃತ್ವದ ಎಂಸಿಡಿಯ ನಿರ್ಲಕ್ಷ್ಯವೇ ಕಾರಣ' ಎಂದು ಬಿಜೆಪಿ ಆರೋಪಿಸಿದೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ದೆಹಲಿಯ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚದೇವ ಅವರು, 'ಘಟನೆಗೆ ಮೇಯರ್ ಶೆಲ್ಲಿ ಅವರೂ ಕಾರಣ. ಆದರೆ ಇದು ರಾಜಕಾರಣ ಮಾಡುವ ಹೊತ್ತಲ್ಲ' ಎಂದಿದ್ದಾರೆ.

'ತಾಜ್ಯ ವಿಲೇವಾರಿ ಘಟಕದಲ್ಲಿ ಬೆಂಕಿ ಹೊತ್ತಿಕೊಳ್ಳುವುದಕ್ಕೆ ಕಾರಣಗಳೇನು? ಮತ್ತು ಬೇಸಿಗೆ ಕಾಲದಲ್ಲಿ ಇಂಥ ಘಟನೆಗಳನ್ನು ತಡೆಗಟ್ಟಲು ಕೈಗೊಳ್ಳಲಿರುವ ಕ್ರಿಯಾ ಯೋಜನೆಗಳೇನು ಎಂಬುದರ ವಿವರವಾದ ವರದಿ ಸಲ್ಲಿಸಬೇಕು' ಎಂದು ದೆಹಲಿ ಸರ್ಕಾರವು ಪರಿಸರ ಇಲಾಖೆಗೆ ಸೋಮವಾರ ನಿರ್ದೇಶನ ನೀಡಿತ್ತು.

'3 ಸಾವಿರ ಚದರ ಮೀಟರ್ ಪ್ರದೇಶದ ಘಟಕದಲ್ಲಿ ಹೊತ್ತಿಕೊಂಡಿದ್ದ ಶೇ 90ರಷ್ಟು ಬೆಂಕಿಯನ್ನು ಈಗಾಗಲೇ ನಂದಿಸಲಾಗಿದೆ. ಸುಮಾರು 40ರಿಂದ 50 ಚಿಕ್ಕ ಚಿಕ್ಕ ಸ್ಥಳಗಳಲ್ಲಿ ಮಾತ್ರ ಬೆಂಕಿ ಉಳಿದುಕೊಂಡಿದೆ' ಎಂದು ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ ಸೋಮವಾರ (ಎಂಸಿಡಿ) ತಡರಾತ್ರಿ ತಿಳಿಸಿತ್ತು.

'ಬೆಂಕಿಯನ್ನು ನಂದಿಸಲು ನಾವು ಎರಡು ಪರಿಣಾಮಕಾರಿ ವಿಧಾನಗಳನ್ನು; ಒಂದು–ಬೆಂಕಿ ಹೊತ್ತಿಕೊಳ್ಳಲು ಕಾರಣವಾಗುತ್ತಿರುವ ತಾಜ್ಯವನ್ನು ನಾಶಪಡಿಸುವುದು ಮತ್ತು ಎರಡು: ಅಗ್ನಿಶಾಮಕ ದಳದ ನೆರವಿನಿಂದ ಬೆಂಕಿ ನಂದಿಸುವ ಕ್ರಿಯೆ– ಬಳಸುತ್ತಿದ್ದೇವೆ' ಎಂದು ಅದು ತಿಳಿಸಿದೆ.

'ಮಂಗಳವಾರ ರಾತ್ರಿಯ ವೇಳೆಗೆ ಬೆಂಕಿ ಸಂಪೂರ್ಣವಾಗಿ ನಂದುವ ವಿಶ್ವಾಸವಿದೆ. ಕೆಲಸಗಾರರು ಮತ್ತು ಯಂತ್ರಗಳು ನಿರಂತರವಾಗಿ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದೂ ಅದು ತಿಳಿಸಿದೆ.

ಘಟಕದಲ್ಲಿ ಬೆಂಕಿ ಹೊತ್ತಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಘಟನೆಗೆ ಸಂಬಂಧಿಸಿದಂತೆ ಎಂಸಿಡಿ ತನಿಖೆ ನಡೆಸಲಿದೆ' ಎಂದು ಮೇಯರ್ ಶೆಲ್ಲಿ ಒಬೆರಾಯ್ ಅವರು ಮಾಹಿತಿ ನೀಡಿದ್ದಾರೆ.

ಕುಲಪತಿಯೇ ಪುಕ್ಕಟೆ ನೆಲಸಿದ್ದಾರೆ: ಜೆಎನ್‌ಯುಎಸ್‌ಯು

ನವದೆಹಲಿ (ಪಿಟಿಐ): ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕುರಿತು ಹೇಳಿಕೆ ನೀಡಿದ್ದ ಕುಲಪತಿ ಶಾಂತಿಶ್ರೀ ಧುಲೀಪುಡೀ ಪಂಡಿತ್ ಅವರ ವಿರುದ್ಧ ಜೆಎನ್‌ಯುಎಸ್‌ಯು (ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘಟನೆ) ತಿರುಗೇಟು ನೀಡಿದೆ.

ಈ ಕುರಿತು ಸೋಮವಾರ ರಾತ್ರಿ ಶಾಂತಿಶ್ರೀ ಅವರಿಗೆ ಪತ್ರಬರೆದಿರುವ ಜೆಎನ್‌ಯುಎಸ್‌ಯು, 'ವಿಶ್ವವಿದ್ಯಾಲಯವನ್ನು ಗುರಿಯಾಗಿಸಿ ತಯಾರಿಸಲಾದ ಚಲನಚಿತ್ರಗಳನ್ನು ಕುಲಪತಿಯವರು ಸಮರ್ಥವಾಗಿ ಎದುರಿಸಿಲ್ಲ. ಕ್ಯಾಂಪಸ್‌ನಲ್ಲಿರುವ ರಾಜಕೀಯ ಪಕ್ಷಗಳ ಬೆಂಬಲಿತ ಗುಂಪುಗಳು ಐಷಾರಾಮದಿಂದ ಇರುವುದರ ಕುರಿತು ಅವರು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷ್ಯ ತಾಳಿದ್ದಾರೆ. ಆದ್ದರಿಂದ ಕುಲಪತಿ ಅವರೇ ವಿ.ವಿಯಲ್ಲಿ ಪುಕ್ಕಟೆ ನೆಲಸಿರುವವರು' ಎಂದು ತಿಳಿಸಿದೆ.

'ಇಲ್ಲಿ ಪುಕ್ಕಟೆ ನೆಲಸಿರುವವರು ಯಾರು? ಶೈಕ್ಷಣಿಕ ಉತ್ಕೃಷ್ಟತೆಗಾಗಿ ಶ್ರಮಿಸುತ್ತಿರುವ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳೋ ಅಥವಾ ಕುಲಪತಿ ಕಚೇರಿಯಲ್ಲಿ ಕುಳಿತು, ತೆರಿಗೆದಾರ ಹಣದಿಂದ ಸಂಬಳ ಪಡೆದು, ಜವಾಬ್ದಾರಿಗಳನ್ನು ನೆರವೇರಿಸುವುದರಲ್ಲಿ ವಿಫಲರಾದ ನೀವೋ? ಎಂದು ಕೇಳಿದೆ.

'ಮೊದಲು ನೀವು ಆತ್ಮಾವಲೋಕನ ಮಾಡಿಕೊಂಡು, ವಿದ್ಯಾರ್ಥಿಗಳನ್ನು 'ಪುಕ್ಕಟೆ ನೆಲಸಿರುವವರು' ಎಂಬ ಹೇಳಿಕೆಯನ್ನು ಪುನರ್ ಪರಿಶೀಲಿಸಬೇಕು' ಎಂದು ಶಾಂತಶ್ರೀ ಅವರಿಗೆ ಒತ್ತಾಯಿಸಲಾಗಿದೆ.

ಆರ್‌ಎಸ್‌ಎಸ್ ಬೆಂಬಲಿತ ಕಾರ್ಯಕ್ರಮಗಳನ್ನು ಕ್ಯಾಂಪಸ್‌ನಲ್ಲಿ ನಡೆಸುವುದಕ್ಕೆ ಅನುಮತಿಸುತ್ತಿರುವುದಕ್ಕೆ ಕುಲಪತಿ ವಿರುದ್ಧ ಹರಿಹಾಯ್ದಿರುವ ಜೆಎನ್‌ಯುಎಸ್‌ಯು, 'ಆರ್‌ಎಸ್‌ಎಸ್ ನಡೆಸುವ ಕಾರ್ಯಕ್ರಮಗಳಿಗೆ ಕ್ಯಾಂಪಸ್‌ನ ಸೌಲಭ್ಯಗಳನ್ನು ಬಳಸಲು ಅನಿರ್ಬಂಧಿತ ಅವಕಾಶ ನೀಡಲಾಗುತ್ತದೆ. ಅದಕ್ಕೆ ಅವರು ಹಣವನ್ನು ನೀಡುವುದಿಲ್ಲ. ಆದರೆ, ಮೂಲಸೌಕರ್ಯಗಳನ್ನು ಬಳಸಲು ಅವಕಾಶ ಕೋರಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರೆ ಅವರ ವಿರುದ್ಧ ನೋಟಿಸ್ ಜಾರಿ ಮಾಡಲಾಗುತ್ತದೆ' ಎಂದೂ ಹೇಳಿದೆ.

ರಾಮನ ತದ್ವಿರುದ್ಧ ದಾರಿಯಲ್ಲಿ ಮೋದಿ

ಒಂದನೇ ಪುಟದಿಂದ

'ಪ್ರಧಾನಿ ನರೇಂದ್ರ ಮೋದಿ ಅವರು ನಿಜವಾಗಿಯೂ ಕೆಲಸ ಮಾಡಿದ್ದರೆ ಅಭಿವೃದ್ಧಿ ಆಧಾರದ ಮೇಲೆ ಮತ ಕೇಳುತ್ತಿದ್ದರು. ಜಾತಿ, ಧರ್ಮ ಉಲ್ಲೇಖಿಸುತ್ತಿರಲಿಲ್ಲ' ಎಂದು ಹರಿಹಾಯ್ದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ವಿಧಾನಪರಿಷತ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಶಾಸಕರಾದ ಬಿ.ಜಿ. ಗೋವಿಂದಪ್ಪ, ಸಲೀಂ ಅಹಮದ್, ಟಿ.ಬಿ.ಜಯಚಂದ್ರ, ಎನ್.ವೈ. ಗೋಪಾಲಕೃಷ್ಣ, ವೆಂಕಟೇಶ್, ಟಿ.ರಘುಮೂರ್ತಿ, ಕೆ.ಸಿ.ವೀರೇಂದ್ರ, ಮಾಜಿ ಸಚಿವ ಎಚ್.ಆಂಜನೇಯ ಅವರು ಇದ್ದರು.

'ಮೋದಿ ಅಲೆಯಲ್ಲ, ಗ್ಯಾರಂಟಿ ಅಲೆ'

ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ ಸುಳ್ಳುಗಳು ಜನರಿಗೆ ಅರ್ಥವಾಗಿವೆ. ಹೀಗಾಗಿ, ಕರ್ನಾಟಕದಲ್ಲಿ ಮೋದಿ ಅಲೆ ಇಲ್ಲ. ಇಲ್ಲಿ ಇರುವುದು 'ಗ್ಯಾರಂಟಿ' ಅಲೆ ಮಾತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಲೋಕಸಭಾ ಚುನಾವಣೆಯಲ್ಲಿ ಸೋಲಿನ ಭೀತಿಯಿಂದ ಬಿಜೆಪಿ ಮತ್ತು ಜೆಡಿಎಸ್ ಒಗ್ಗೂಡಿ ಸ್ಪರ್ಧೆ ಮಾಡುತ್ತಿವೆ. ಎಚ್.ಡಿ.ದೇವೇಗೌಡ ಹಾಗೂ ನರೇಂದ್ರ ಮೋದಿ ಪೈಪೋಟಿಗೆ ಬಿದ್ದವರಂತೆ ಸುಳ್ಳು ಹೇಳುತ್ತಿದ್ದಾರೆ' ಎಂದು ಕುಟುಕಿದರು.

'ಮೋದಿ ಪ್ರಧಾನಿಯಾದರೆ ಈ ದೇಶ ಬಿಟ್ಟು ಹೋಗುತ್ತೇನೆ. ಮುಂದಿನ ಜನ್ಮದಲ್ಲಿ ಹುಟ್ಟಿದರೆ ಮುಸಲ್ಮಾನನಾಗಿ ಹುಟ್ಟುತ್ತೇನೆ' ಎಂದು 2019ರ ಲೋಕಸಭಾ ಚುನಾವಣೆಯಲ್ಲಿ ದೇವೇಗೌಡ ಹೇಳಿದ್ದರು. ಪ್ರಸಕ್ತ ಚುನಾವಣೆಯಲ್ಲಿ ಮೋದಿ ಜೊತೆಗೂಡಿ ಕನ್ನಡಿಗರ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಹೇಳಿದರು.

ಹುಮ್ಮಸ್ಸು ತುಂಬಿದ ಪ್ರಿಯಾಂಕಾ

ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತಯಾಚನೆಗೆ ಚಿತ್ರದುರ್ಗದಲ್ಲಿ ಮಂಗಳವಾರ ಆಯೋಜಿಸಿದ್ದ 'ನ್ಯಾಯ ಸಂಕಲ್ಪ ರ‍್ಯಾಲಿ' ಕೈ ಪಡೆಗೆ ಹುಮ್ಮಸ್ಸು ತುಂಬಿತು. ಮಹಿಳಾ ಮತದಾರರನ್ನು ಸೆಳೆಯುವ ಪ್ರಯತ್ನ ನಡೆಯಿತು.

'ಇಂದಿರಾಗಾಂಧಿ ಮೊಮ್ಮಗಳು' ಎಂಬ ಅಭಿಮಾನದಿಂದ ಅನೇಕರು ಸಮಾವೇಶಕ್ಕೆ ಬಂದಿದ್ದರು. ಮಹಿಳೆಯರ ಸಂಖ್ಯೆಯೂ ಅಪಾರ ಪ್ರಮಾಣದಲ್ಲಿತ್ತು. ಪ್ರಿಯಾಂಕಾ ಅವರು ವೇದಿಕೆಗೆ ಬರುತ್ತಿದ್ದಂತೆಯೇ ಜನರು ಹರ್ಷೋದ್ಗಾರ ಮಾಡಿದರು. ಕೇಂದ್ರ ಸರ್ಕಾರ ಹಾಗೂ ನರೇಂದ್ರ ಮೋದಿ ಅವರನ್ನು ಟೀಕಿಸುತ್ತ, ಕಾಂಗ್ರೆಸ್ ಪ್ರಣಾಳಿಕೆಯ ಅಂಶಗಳನ್ನು ಬಿಡಿಸಿಟ್ಟ ರೀತಿಗೆ ಕಾಂಗ್ರೆಸ್ ಕಾರ್ಯಕರ್ತರು, ನೆರೆದಿದ್ದ ಜನರು ಕರತಾಡನದೊಂದಿಗೆ ಬೆಂಬಲ ಸೂಚಿಸಿದರು.

ವಿಶ್ವ ಹವಾಮಾನ ಸಂಸ್ಥೆಯಿಂದ ವರದಿ ಬಿಡುಗಡೆ

2023– ಏಷ್ಯಾಕ್ಕೆ ದುರಂತಮಯ ವರ್ಷ

ನವದೆಹಲಿ (ಪಿಟಿಐ): 2023ನೇ ಸಾಲಿನಲ್ಲಿ ಏಷ್ಯಾವು ಹವಾಮಾನ, ವಾಯುಗುಣ ಮತ್ತು ನೀರಿಗೆ ಸಂಬಂಧಿಸಿದಂತೆ ಹಲವು ರೀತಿಯ ವೈಪರೀತ್ಯಗಳನ್ನು ಅನುಭವಿಸಿದೆ. ಈ ಮೂಲಕ ಈ ಸಾಲಿನಲ್ಲಿ ಜಗತ್ತಿನಲ್ಲಿ ಅತಿ ಹೆಚ್ಚು ದುರಂತಗಳನ್ನು ಕಂಡ ಪ್ರದೇಶ ಎಂದೆನಿಸಿಕೊಂಡಿದೆ ಎಂದು ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯುಎಂಒ) ಬಿಡುಗಡೆ ಮಾಡಿರುವ ವರದಿ ಹೇಳಿದೆ.

ಪ್ರವಾಹಗಳು ಮತ್ತು ಚಂಡಮಾರುತಗಳಿಂದಾಗಿ ಅತಿ ಹೆಚ್ಚು ಜೀವಹಾನಿ ಮತ್ತು ಆರ್ಥಿಕ ನಷ್ಟ ಉಂಟಾಗಿದೆ. ಬಿಸಿಗಾಳಿಯ ಪರಿಣಾಮ ತೀವ್ರವಾಗಿತ್ತು. ಈಶಾನ್ಯ ಪೆಸಿಫಿಕ್ ಸಾಗರದ ಮೇಲ್ಮೈ ತಾಪಮಾನ ದಾಖಲೆ ಮಟ್ಟದಲ್ಲಿತ್ತು ಮತ್ತು ಆರ್ಕ್ಟಿಕ್ ಸಾಗರದಲ್ಲೂ ಬಿಸಿ ಮಾರುತ ಬೀಸಿದೆ ಎಂದು ಡಬ್ಲ್ಯುಎಂಒದ 'ಏಷ್ಯಾದ ಹವಾಮಾನ ಸ್ಥಿತಿಗತಿ– 2023' ವರದಿಯಲ್ಲಿ ಹೇಳಲಾಗಿದೆ.

ಈ ಪ್ರದೇಶದ ಹಲವು ದೇಶಗಳಲ್ಲಿ 2023ನೇ ಇಸವಿ ಅತಿ ಹೆಚ್ಚು ಉಷ್ಣಾಂಶ ದಾಖಲಾದ ವರ್ಷವಾಗಿದೆ. ಬರ, ಬಿಸಿಗಾಳಿ, ಪ್ರವಾಹ, ಚಂಡಮಾರುತದಂಥ ಹವಾಮಾನ ವೈಪರೀತ್ಯವನ್ನು ಇಲ್ಲಿಯ ದೇಶಗಳು ಅನುಭವಿಸಿವೆ. ಈ ಘಟನಾವಳಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಜನರ ಮೇಲೆ ದುಷ್ಪರಿಣಾಮ ಬೀರಿವೆ ಎಂದು ಡಬ್ಲ್ಯುಎಂಒ ಪ್ರಧಾನ ಕಾರ್ಯದರ್ಶಿ ಸೆಲೆಸ್ಟೆ ಸೌಲೊ ಹೇಳಿದ್ದಾರೆ.

ಮುಖ್ಯಾಂಶಗಳು

- ಜಗತ್ತಿನಲ್ಲೇ ಹೆಚ್ಚು ಹವಾಮಾನ ಸಂಬಂಧಿ ದುರಂತಗಳನ್ನು ಕಂಡ ಏಷ್ಯಾ
- ದುರಂತಗಳಿಂದ ಜನರ ಮೇಲೆ ಸಾಮಾಜಿಕ ಮತ್ತು ಆರ್ಥಿಕವಾಗಿ ದುಷ್ಪರಿಣಾಮ
- ಬಿಸಿಗಾಳಿಯಿಂದ ಭಾರತದಲ್ಲಿ 110ಕ್ಕೂ ಹೆಚ್ಚು ಸಾವು



ಈ ಎಲ್ಲಾ ಹವಾಮಾನ ಸಂಬಂಧಿ ದುರಂತಗಳಲ್ಲಿ ನೀರಿಗೆ ಸಂಬಂಧಿಸಿದ 79 ದುರಂತಗಳು ವರದಿಯಾಗಿವೆ. ಒಟ್ಟು ಪ್ರಾಕೃತಿಕ ದುರಂತಗಳ ಪೈಕಿ ಇದು ಶೇ 80ರಷ್ಟು. ಈ ದುರಂತಗಳಿಂದ ಸುಮಾರು 2 ಸಾವಿರ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 90 ಲಕ್ಷ ಮಂದಿಯ ಜೀವನದ ಮೇಲೆ ಪರಿಣಾಮ ಉಂಟಾಗಿದೆ.

ಭಾರತದಲ್ಲಿ ಏಪ್ರಿಲ್‌ನಿಂದ ಜೂನ್‌ವರೆಗೆ ಬೀಸಿದ ಬಿಸಿಗಾಳಿಯಿಂದಾಗಿ 110ಕ್ಕೂ ಹೆಚ್ಚು ಜನರು ಶಾಖಾಘಾತದಿಂದ ಮೃತಪಟ್ಟಿದ್ದಾರೆ. ಆಗ್ನೇಯ ಏಷ್ಯಾದಲ್ಲಿ ಏಪ್ರಿಲ್ ಮತ್ತು ಮೇ ಬಿಸಿಗಾಳಿಯ ತೀವ್ರತೆ ಹೆಚ್ಚಾಗಿಯೇ ಇತ್ತು ಎಂದು ವರದಿ ಹೇಳಿದೆ.

ತುರ್ಕಮೆನಿಸ್ತಾನ, ಉಜ್ಬೇಕಿಸ್ತಾನ, ಕಜಖಸ್ತಾನ, ಅಫ್ಗಾನಿಸ್ತಾನ, ಪಾಕಿಸ್ತಾನ, ಭಾರತ, ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್‌ನಲ್ಲಿ ಸರಾಸರಿಗಿಂತ ಕಡಿಮೆ ಮಳೆಯಾಗಿದೆ. ಆಗ್ನೇಯ ಚೀನಾದಲ್ಲಿ ಬರ ಪರಿಸ್ಥಿತಿ ಇತ್ತು. ಭಾರತದಲ್ಲಿ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆ ಸುರಿದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಹಿಂದೂ ಮಹಾಸಾಗರದಲ್ಲಿ ಬೀಸಿದ ಮೋಕ ಚಂಡಮಾರುತದಿಂದ ಮ್ಯಾನ್ಮಾರ್ ತತ್ತರಿಸಿತ್ತು. ಈ ಚಂಡಮಾರುತದಿಂದ 156 ಜನರು ಮೃತಪಟ್ಟಿದ್ದರು ಎಂದು ವರದಿಯಲ್ಲಿ ಹೇಳಲಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದುಬೈ: ವಿಮಾನ ನಿಲ್ದಾಣ ಮತ್ತೆ ಕಾರ್ಯಾಚರಣೆ

ದುಬೈ(ಪಿಟಿಐ): ಹಿಂದೆಂದೂ ಕಾಣದಂತಹ ಮಳೆಯಿಂದಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ದುಬೈ ಅಂತರ ರಾಷ್ಟ್ರೀಯ ವಿಮಾನನಿಲ್ದಾಣವು ಈಗ ಪೂರ್ಣ ಪ್ರಮಾಣದಲ್ಲಿ ಮತ್ತೆ ಕಾರ್ಯಾಚರಿಸುತ್ತಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

‘ಯುಎಇಯಲ್ಲಿ ಕಳೆದ 75 ವರ್ಷಗಳಲ್ಲಿಯೇ ಸುರಿದ ಭಾರಿ ಮಳೆ ಪರಿಣಾಮ ದುಬೈ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ನೀರು ನಿಂತು ಸಮಸ್ಯೆಯಾಗಿತ್ತು. ತ್ವರಿತ ಕ್ರಮ ಕೈಗೊಳ್ಳುವ ಮೂಲಕ ಕಾರ್ಯಾಚರಣೆಯನ್ನು ಮರುಸ್ಥಾಪಿಸಲಾಗಿದೆ’ ದುಬೈ ಅಂತರರಾಷ್ಟ್ರೀಯ ವಿಮಾನನಿಲ್ದಾಣವು ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ಪೂರೈಕೆಯ ಗುಣಮಟ್ಟದ ಜಾಲ ನಿರ್ವಹಣೆ

ಕರ್ನಾಟಕ, ಗುಜರಾತ್ ಮುಂದೆ

ಪ್ರಜಾವಾಣಿ ವಾರ್ತೆ



ಮುಂಬೈ: ವಿದ್ಯುತ್ ಪೂರೈಕೆಯ ಗುಣಮಟ್ಟದ ಜಾಲ ನಿರ್ವಹಣೆಯಲ್ಲಿ ಕರ್ನಾಟಕ ಮತ್ತು ಗುಜರಾತ್ ಮಂಚೂಣಿಯಲ್ಲಿವೆ ಎಂದು ಇಂಧನ ಆರ್ಥಿಕತೆ ಮತ್ತು ಹಣಕಾಸು ವಿಶ್ಲೇಷಣೆ ಸಂಸ್ಥೆ (ಐಇಇಎಫ್ಎ) ಮತ್ತು ಎಂಬರ್ ಜಂಟಿಯಾಗಿ ಪ್ರಕಟಿಸಿರುವ ವರದಿ ತಿಳಿಸಿದೆ.

ರಾಜ್ಯಗಳ ಮಟ್ಟದಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯ ಮೌಲ್ಯಮಾಪನ ಮಾಡುವ ಈ ಸಂಸ್ಥೆಗಳು ಸತತ 2ನೇ ವರ್ಷ ವರದಿ ಬಿಡುಗಡೆ ಮಾಡಿವೆ. ಹಿಂದಿನ ವರ್ಷ 16 ರಾಜ್ಯಗಳ ವ್ಯವಸ್ಥೆಯ ಮೌಲ್ಯಮಾಪನ ಆಗಿತ್ತು. ಈ ವರ್ಷ 21 ರಾಜ್ಯಗಳಲ್ಲಿನ ಸ್ಥಿತಿ ವಿಶ್ಲೇಷಿಸಲಾಗಿದೆ.

ವಿಶ್ಲೇಷಿಸಲಾದ 21 ರಾಜ್ಯಗಳು ಕಳೆದ ಏಳು-ಅಂದರೆ 2018ರಿಂದ 2024ರ (ನವೆಂಬರ್‌ವರೆಗೆ) ಹಣಕಾಸು ವರ್ಷದಲ್ಲಿ ಭಾರತದ ಶೇ 95ರಷ್ಟು ವಿದ್ಯುತ್ ಬೇಡಿಕೆಯನ್ನು ಈಡೇರಿಸಿದ್ದವು.

2024ನೇ ಸಾಲಿನಲ್ಲಿ ಮೌಲ್ಯಮಾಪನದ ಮಾನದಂಡಗಳು ಬದಲಾಗಿದ್ದವು. ವಿದ್ಯುತ್ ಸರಬರಾಜು ವ್ಯವಸ್ಥೆ, ಭಾಗೀದಾರರ ಅಭಿಪ್ರಾಯ ಮತ್ತು ಲಭ್ಯವಿರುವ ದತ್ತಾಂಶಗಳನ್ನು ಪರಿಗಣಿಸಲಾಗಿತ್ತು.

ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳು ಎಲ್ಲ ಆಯಾಮಗಳಿಂದ ಉತ್ತಮ ಸಾಧನೆ ತೋರಿವೆ. ವಿದ್ಯುತ್ ಜಾಲ ವ್ಯವಸ್ಥೆಗೆ ಪರಿಣಾಮಕಾರಿಯಾಗಿ ಮರುಬಳಕೆ ಇಂಧನ ಮೂಲಗಳನ್ನು ಸೇರ್ಪಡೆಗೊಳಿಸಿವೆ.

ಜಾರ್ಖಂಡ್, ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಇನ್ನೂ ಸುಧಾರಣೆ ಕಾಣಬೇಕಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ರಾಜ್ಯಗಳಲ್ಲಿನ ಪರಿಸ್ಥಿತಿ ಬದಲಾಗಿಲ್ಲ.

‘ಬದಲಾದ ಹವಾಮಾನ ಸ್ಥಿತಿ, ತ್ವರಿತಗತಿಯ ಆರ್ಥಿಕ ಚಟುವಟಿಕೆಯ ಪರಿಣಾಮ ಪ್ರತಿ ವರ್ಷ ವಿದ್ಯುತ್‌ಗೆ ಬೇಡಿಕೆ ಹೆಚ್ಚುತ್ತಲೇ ಇದೆ. ವಿದ್ಯುತ್ ಜಾಲಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಮರುಬಳಕೆ ಇಂಧನ ಸೇರಿಸಲು ಕೇಂದ್ರ ಸರ್ಕಾರ ಒತ್ತು ನೀಡಿದೆ. ಆದರೆ, ರಾಜ್ಯಗಳಲ್ಲಿ ಅದರ ನಿರ್ವಹಣೆಯ ಹಲವು ಪರಿಮಾಣಗಳಲ್ಲಿ ನಿರಂತರವಾಗಿ ಆಗಬೇಕಿದೆ’ ಎಂದು ಐಇಇಎಫ್ಎ ದಕ್ಷಿಣ ಏಷ್ಯಾದ ನಿರ್ದೇಶಕ ವಿಭೂತಿ ಗರ್ಗ್ ಅಭಿಪ್ರಾಯಪಟ್ಟರು.

ಶಾಸಕ ಭರತ್ ರೆಡ್ಡಿ ವಿರುದ್ಧ ತನಿಖೆಗೆ ಅನುಮತಿ ಕೋರಿದ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಗೂ ಮುನ್ನ ₹ 42 ಕೋಟಿಯಷ್ಟು ಹಣ ಸಂಗ್ರಹಿಸಿ, ಬಳಕೆ ಮಾಡಿರುವ ಆರೋಪ ಕುರಿತು ಬಳ್ಳಾರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ವಿರುದ್ಧ ತನಿಖೆ ಆರಂಭಿಸಲು ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದಾರೆ.



ನಾರಾ ಭರತ್ ರೆಡ್ಡಿ

ಹಣದ ಅಕ್ರಮ ವರ್ಗಾವಣೆ ಆರೋಪದಡಿ ಭರತ್ ರೆಡ್ಡಿ ಮತ್ತು ಸಹಚರರ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಫೆಬ್ರುವರಿ 10ರಂದು ದಾಳಿಮಾಡಿ, ಶೋಧ ನಡೆಸಿದ್ದರು. ಕರ್ನಾಟಕ, ಆಂಧ್ರ ಪ್ರದೇಶದ ಹಲವೆಡೆ ಶೋಧ ನಡೆಸಲಾಗಿತ್ತು.

ವಿಧಾನಸಭಾ ಚುನಾವಣೆಗೂ ಮುನ್ನ ₹ 42 ಕೋಟಿ ಸಂಗ್ರಹಿಸಿ, ಬಳಸಿರುವ ಕುರಿತು ಮಾಹಿತಿ ದೊರಕಿದೆ ಎಂದು ಇ.ಡಿ ಹೇಳಿತ್ತು.

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ಭರತ್ ರೆಡ್ಡಿ ವಿರುದ್ಧ ತನಿಖೆ ನಡೆಸುತ್ತಿರುವ ಇ.ಡಿ, ಆರೋಪಗಳ ಕುರಿತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ಪತ್ರ ಬರೆದಿತ್ತು. ಆ ಬಳಿಕ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿರುವ ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು, ತನಿಖೆಗೆ ಅನುಮತಿ ನೀಡುವಂತೆ ಕೋರಿದ್ದಾರೆ.

‘ಭರತ್ ರೆಡ್ಡಿ ಅಕ್ರಮ ಗಣಿಗಾರಿಕೆ ಮತ್ತು ಕೆಲವು ವಂಚನೆ ಸ್ವರೂಪದ ರಿಯಲ್ ಎಸ್ಟೇಟ್ ವ್ಯವಹಾರಗಳ ಮೂಲಕ ಹಣ ಸಂಗ್ರಹಿಸಿರುವುದು ಪತ್ತೆಯಾಗಿದೆ. ಆ ಹಣವನ್ನು ವಿಧಾನಸಭಾ ಚುನಾವಣೆಯ ಟಿಕೆಟ್ ಪಡೆಯಲು ಹಾಗೂ ಚುನಾವಣೆಯ ಇತರ ವೆಚ್ಚಕ್ಕೆ ಬಳಸಿರುವ ಸಾಧ್ಯತೆಗಳಿವೆ’ ಎಂದು ಇ.ಡಿ ಅನುಮಾನ ವ್ಯಕ್ತಪಡಿಸಿತ್ತು.

‘ಭರತ್ ರೆಡ್ಡಿ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವಂತೆ ಇ.ಡಿ ಅಧಿಕಾರಿಗಳು ಪತ್ರ ಬರೆದಿದ್ದಾರೆ. ಆದರೆ, ಸರ್ಕಾರದ ಅನುಮತಿ ಪಡೆಯದೇ ತನಿಖೆ ಆರಂಭಿಸಲು ಅವಕಾಶವಿಲ್ಲ. ಅನುಮತಿ ಕೋರಿ ಪತ್ರ ಬರೆದಿದ್ದೇವೆ. ಅನುಮತಿ ದೊರೆತ ಬಳಿಕ ತನಿಖೆ ಆರಂಭಿಸಲಾಗುವುದು’ ಎಂದು ಲೋಕಾಯುಕ್ತ ಪೊಲೀಸ್ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಚುನಾವಣಾ ಆಯೋಗಕ್ಕೂ ಪತ್ರ

ಅಕ್ರಮವಾಗಿ ಗಳಿಸಿದ ಹಣವನ್ನು ಚುನಾವಣಾ ವೆಚ್ಚ ಹಾಗೂ ಮತದಾರರಿಗೆ ಆಮಿಷ ಒಡ್ಡಲು ಬಳಸಿದ ಆರೋಪದ ಮೇಲೆ ನಾರಾ ಭರತ್ ರೆಡ್ಡಿ ವಿರುದ್ಧ ತನಿಖೆ ನಡೆಸುವಂತೆ ಇ.ಡಿ ಅಧಿಕಾರಿಗಳು ಕೇಂದ್ರ ಚುನಾವಣಾ ಆಯೋಗಕ್ಕೂ ಪತ್ರ ಬರೆದಿದ್ದಾರೆ.

‘ಭರತ್ ರೆಡ್ಡಿ ಚುನಾವಣೆಯಲ್ಲಿ ಮಾಡಿರುವ ನೈಜ ವೆಚ್ಚಕ್ಕೂ ಆಯೋಗಕ್ಕೆ ಸಲ್ಲಿಸಿರುವ ಲೆಕ್ಕಕ್ಕೂ ವ್ಯತ್ಯಾಸವಿದೆ. ಭಾರಿ ಪ್ರಮಾಣದ ನಗದನ್ನು ಮತದಾರರಿಗೆ ಆಮಿಷ ಒಡ್ಡಲು ಬಳಸಿರುವುದಕ್ಕೆ ಪುರಾವೆಗಳಿವೆ. ಚುನಾವಣಾ ಭ್ರಷ್ಟಾಚಾರ, ಮತದಾರರಿಗೆ ಆಮಿಷ ಒಡ್ಡಿರುವುದು ಮತ್ತು ಚುನಾವಣಾ ವೆಚ್ಚದ ವಿವರಗಳನ್ನು ಸಲ್ಲಿಸಲು ವಿಫಲವಾಗಿರುವ ಆರೋಪದ ಮೇಲೆ ಪ್ರಜಾಪ್ರತಿನಿಧಿ ಕಾಯ್ದೆಯಡಿ ತನಿಖೆ ನಡೆಸಿ, ಭರತ್ ರೆಡ್ಡಿ ವಿರುದ್ಧ ಕ್ರಮ ಜರುಗಿಸಬೇಕು’ ಎಂಬುದಾಗಿ ಇ.ಡಿ ಅಧಿಕಾರಿಗಳು ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎಂದು ‘ಪಿಟಿಐ’ ಸುದ್ದಿಸಂಸ್ಥೆ ತಿಳಿಸಿದೆ.

ಆದೇಶ ನಿರ್ಲಕ್ಷ್ಯ: ಎಲ್ಲ ಇಲಾಖೆಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರ್ಟ್ ಆದೇಶ ಹಾಗೂ ನಿರ್ದೇಶನಗಳನ್ನು ಪಾಲನೆ ಮಾಡಲು ರಾಜ್ಯದ ಎಲ್ಲ ಇಲಾಖೆಗಳಲ್ಲಿ ಆಂತರಿಕ ಮೇಲ್ವಿಚಾರಣಾ ವ್ಯವಸ್ಥೆ ಆರಂಭಿಸಬೇಕೆಂಬ ವಿಷಯದಲ್ಲಿ ದಾಖಲಿಸಿಕೊಳ್ಳಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಎಲ್ಲ ಇಲಾಖೆಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಒಟ್ಟು 44 ಇಲಾಖೆಗಳ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ 5ಕ್ಕೆ ಮುಂದೂಡಿದೆ.

‘ನ್ಯಾಯಾಲಯದ ಆದೇಶಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದರಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸಲು ವಿಫಲವಾಗುತ್ತಿದೆ. ನ್ಯಾಯಾಲಯಗಳು ತಮ್ಮ ಅಧಿಕಾರ ಕಳೆದುಕೊಳ್ಳುತ್ತಿವೆ. ಕೋರ್ಟ್ ಆದೇಶಗಳು ಸರ್ಕಾರಿ ಅಧಿಕಾರಿಗಳ ಮೇಲೆ ಯಾವುದೇ ಪರಿಣಾಮ ಬೀರುತ್ತಿಲ್ಲ ಎಂದು ಸಾರ್ವಜನಿಕರು ನಿರ್ಧರಿಸುವ ಪರಿಸ್ಥಿತಿಯನ್ನು ಸೃಷ್ಟಿ ಮಾಡಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದ ನ್ಯಾಯಪೀಠ ಈ ಸಂಬಂಧ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿದೆ.

ಅರ್ಜಿಯಲ್ಲಿ ಏನಿದೆ?: ನ್ಯಾಯಾಲಯದ ಆದೇಶಗಳನ್ನು ಪಾಲಿಸಲು ಸರ್ಕಾರ ಹಾಗೂ ಸಕ್ಷಮ ಪ್ರಾಧಿಕಾರಗಳು ಯಾವ ರೀತಿಯ ಕಾರ್ಯವಿಧಾನ ಅಳವಡಿಸಿಕೊಳ್ಳಬೇಕು? ಆದೇಶ ಪಾಲನೆ ವಿಚಾರಗಳನ್ನು ನಿರ್ವಹಿಸಲು ವಿಶೇಷ ಶಾಖೆ ಹಾಗೂ ಸಕ್ಷಮ ಅಧಿಕಾರಿಗಳನ್ನು ನೇಮಿಸಲಾಗಿದೆಯೇ? ಯಾವುದಾದರೂ ವ್ಯವಸ್ಥೆ ರೂಪಿಸಲಾಗಿದೆಯೇ? ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸಲು, ಅದನ್ನು ಮೇಲ್ವಿಚಾರಣೆ ನಡೆಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ? ನ್ಯಾಯಾಲಯದ ಆದೇಶಗಳ ಬಗ್ಗೆ ನಿರ್ಲಕ್ಷ ವಹಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಕ್ಕೆ ಯಾವ ವ್ಯವಸ್ಥೆ ರೂಪಿಸಲಾಗಿದೆ? ಈವರೆವಿಗೂ ಅಂತಹ ಅಧಿಕಾರಿಗಳ ವಿರುದ್ಧ ಕೈಗೊಳ್ಳಲಾಗಿರುವ ಕ್ರಮಗಳೇನು? ಎಂಬುದಕ್ಕೆ ಉತ್ತರ ನೀಡುವಂತೆ ಅರ್ಜಿಯಲ್ಲಿ ಸೂಚಿಸಲಾಗಿದೆ.

ಹೈಕೋರ್ಟ್ ಸುದ್ದಿ

ವಂಟಮುರಿ: ವಿಚಾರಣೆಗೆ ವರ್ಷದ ಗಡುವು

‘ಬೆಳಗಾವಿ ಜಿಲ್ಲೆಯ ಹೊಸ ವಂಟಮುರಿ ಗ್ರಾಮದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಥಳಿಸಿದ್ದ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಲು ಹೈಕೋರ್ಟ್ ಒಂದು ವರ್ಷದ ಕಾಲಮಿತಿ ನಿಗದಿಪಡಿಸಿದೆ.

ಈ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ಈ ಆದೇಶ ನೀಡಿತು.

‘ಆರೋಪಿಗಳ ವಿರುದ್ಧದ ವಿಚಾರಣೆಯನ್ನು ಸಂಬಂಧಿಸಿದ ನ್ಯಾಯಾಲಯವು ಒಂದು ವರ್ಷದ ಒಳಗಾಗಿ ಪೂರ್ಣಗೊಳಿಸಬೇಕು. ಈ ಆದೇಶವನ್ನು ಹೈಕೋರ್ಟ್ ರಿಜಿಸ್ಟ್ರಾರ್ ವಿಚಾರಣಾ ನ್ಯಾಯಾಲಯದ ಗಮನಕ್ಕೆ ತರಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿತು.

ಟ್ಯಾಕ್ಸಿಗಳಿಗೆ ಮೀಟರ್: ನೋಟಿಸ್



‘ರಾಜ್ಯದಲ್ಲಿ ಸದ್ಯ ಸಂಚರಿಸುತ್ತಿರುವ ಎಲ್ಲಾ ಟ್ಯಾಕ್ಸಿಗಳಿಗೆ ಮೀಟರ್ ಅಳವಡಿಕೆ ಕಡ್ಡಾಯಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಾರಿಗೆ ಇಲಾಖೆಯ ನಿವೃತ್ತ ನೌಕರ ಮೊಹಮ್ಮದ್ ದಸ್ತಗೀರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಮೊಹಮದ್ ದಸ್ತಗೀರ್ ಸ್ವತಃ ವಾದ ಮಂಡಿಸಿ, ‘ಕರ್ನಾಟಕ ಮೋಟಾರು ವಾಹನ ಕಾಯ್ದೆ–1989ರ ಕಲಂ 129ರ ಅನ್ವಯ ಎಲ್ಲಾ ಟ್ಯಾಕ್ಸಿಗಳಿಗೆ ಕಡ್ಡಾಯ ಮೀಟರ್ ಅಳವಡಿಕೆ ಜಾರಿಗೂಳಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಜೂನ್ 19ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ನಿಯಮವನ್ನು ಜಾರಿಗೊಳಿಸದೇ ಇರುವ ಕಾರಣ ಟ್ಯಾಕ್ಸಿಗಳು ಪ್ರಯಾಣಿಕರಿಂದ ಮನಬಂದಷ್ಟು ಶುಲ್ಕವನ್ನು ವಿಧಿಸುತ್ತಿವೆ. ಆದ್ದರಿಂದ, ಆಟೋರಿಕ್ಷಾಗಳಿಗೆ ಜಾರಿಗೊಳಿಸಿರುವಂತೆ, ಕಾನೂನು ಮತ್ತು ಮಾಪನ ಶಾಸ್ತ್ರ ಇಲಾಖೆಯಿಂದ ಪರೀಕ್ಷಿಸಿ ಪ್ರಮಾಣೀಕರಿಸಲಾದ ಮೀಟರ್‌ಗಳನ್ನು ಎಲ್ಲ ಬಗೆಯ ಟ್ಯಾಕ್ಸಿಗಳಿಗೆ ಅಳವಡಿಸಬೇಕು. ಇದರಿಂದ ಸಾರ್ವಜನಿಕರ ಮೇಲೆ ಟ್ಯಾಕ್ಸಿಗಳು ವಿಧಿಸುತ್ತಿರುವ ಹೆಚ್ಚಿನ ಹೊರೆ ತಗ್ಗಲಿದೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಬಹಿರಂಗ ಪ್ರಚಾರಕ್ಕೆ ಇಂದು ತೆರೆ

ಒಂದನೇ ಪುಟದಿಂದ

ಚನ್ನಪಟ್ಟಣದಲ್ಲಿ ರೋಡ್ ಶೋ ನಡೆಸುವ ಮೂಲಕ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಅವರ ಚುನಾವಣಾ ಪ್ರಚಾರದ ಕಾವು ಹೆಚ್ಚಿಸಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಡ್ಯ ಮತ್ತು ಕೋಲಾರ ಲೋಕಸಭಾ ಕ್ಷೇತ್ರಗಳಲ್ಲಿ ಬಹಿರಂಗ ಸಭೆಗಳಲ್ಲಿ ಭಾಗವಹಿಸಿ ಮತದಾರರನ್ನು ಹಸ್ತದತ್ತ ಸೆಳೆಯುವ ಪ್ರಯತ್ನ ಮಾಡಿದ್ದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮಂಗಳವಾರ ಚಿತ್ರದುರ್ಗ, ಬೆಂಗಳೂರಿನಲ್ಲಿ ಬಹಿರಂಗ ಸಭೆಗಳಲ್ಲಿ ಪಾಲ್ಗೊಂಡು, ಕಾಂಗ್ರೆಸ್ ಅಭ್ಯರ್ಥಿಗಳ ಬೆಂಬಲಕ್ಕೆ ನಿಲ್ಲುವಂತೆ ಮತದಾರರ ಮನವೊಲಿಸುವ ಯತ್ನ ಮಾಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿದ್ದಾರೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಒಕ್ಕಲಿಗ ಮತದಾರರ ಬಾಹುಳ್ಯವಿರುವ ಕ್ಷೇತ್ರಗಳಲ್ಲಿ ಬಿಜೆಪಿ ನಾಯಕರ ಜತೆ ವೇದಿಕೆ ಹಂಚಿಕೊಂಡು ಎರಡೂ ಪಕ್ಷಗಳ ಮತ ಒಗ್ಗೂಡಿಸುವ ಕಸರತ್ತು ನಡೆಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ತಾವೇ ಅಭ್ಯರ್ಥಿಯಾಗಿರುವ ಮಂಡ್ಯ ಕ್ಷೇತ್ರದ ಜತೆ ಇತರೆಡೆಗೂ ಪ್ರಚಾರ ನಡೆಸಿದ್ದಾರೆ.

ಬುಧವಾರ ಸಂಜೆ ಬಹಿರಂಗ ಪ್ರಚಾರ ಅಂತ್ಯಗೊಳ್ಳಲಿದೆ. ಗುರುವಾರ ಮನೆ, ಮನೆ ಪ್ರಚಾರಕ್ಕೆ ಮಾತ್ರ ಅವಕಾಶವಿದೆ. ಕೊನೆಯ ದಿನದ ಬಹಿರಂಗ ಪ್ರಚಾರದ ಅವಕಾಶ ಬಳಸಿಕೊಳ್ಳಲು ಅಭ್ಯರ್ಥಿಗಳು, ಅವರ ಬೆಂಬಲಿಗರು ತರಹೇವಾರಿ ಪ್ರಯತ್ನಗಳನ್ನು ಆರಂಭಿಸಿದ್ದಾರೆ.

ಎರಡನೇ ಹಂತದಲ್ಲಿ ಪ್ರಚಾರ ಬಿರುಸು

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಸೋಮವಾರ ಚುನಾವಣಾ ಕಣ ಅಂತಿಮಗೊಂಡಿತ್ತು. ಮಂಗಳವಾರದಿಂದ ಪ್ರಚಾರ ಬಿರುಸು ಪಡೆದಿದೆ.

ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಘಟಾನುಘಟಿ ನಾಯಕರು ಶುಕ್ರವಾರದಿಂದ ಎರಡನೇ ಹಂತದ ಕ್ಷೇತ್ರಗಳಲ್ಲಿ ಪ್ರಚಾರಕ್ಕೆ ಸಜ್ಜಾಗಿದ್ದಾರೆ.

‘ಮಾಹಿತಿಯಿಲ್ಲದೇ ವಿರೋಧಿಸಿದ್ದೆ, ಕ್ಷಮಿಸಿ’

ಒಂದನೇ ಪುಟದಿಂದ

ಸಾಂತ್ವನ ಹೇಳಿದ ಸಿ.ಎಂ: ಕೊಲೆಗೀಡಾದ ನೇಹಾ ಅವರ ತಂದೆ ನಿರಂಜನಯ್ಯ ಹಿರೇಮಠ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೂರವಾಣಿ ಮೂಲಕ ಮಾತನಾಡಿ, ಸಾಂತ್ವನ ಹೇಳಿದರು.

ಹುಬ್ಬಳ್ಳಿಯಲ್ಲಿ ಇರುವ ನೇಹಾ ಮನೆಗೆ ಮಂಗಳವಾರ ತೆರಳಿ, ಕುಟುಂಬದವರಿಗೆ ಸಾಂತ್ವನ ಹೇಳಲು ಎಚ್.ಕೆ. ಪಾಟೀಲ ಅವರು ಭೇಟಿಯಾದ ಸಂದರ್ಭದಲ್ಲಿ, ಮುಖ್ಯಮಂತ್ರಿ ಜೊತೆ ಅವರು ದೂರವಾಣಿ ಮೂಲಕ ನಿರಂಜನಯ್ಯ ಅವರಿಗೆ ಮಾತನಾಡಿಸಿದರು.

ಪ್ರಕರಣದ ಮಾಹಿತಿ ಪಡೆದ ಮುಖ್ಯಮಂತ್ರಿ, ಪ್ರಕರಣದ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆಗೆ ಸರ್ಕಾರ ನಿರ್ಧರಿಸಿದೆ. ನೇಹಾ ಸಾವಿಗೆ ನ್ಯಾಯ ಸಿಗುತ್ತದೆ. ‘ನಿಮ್ಮ ಪರ ನಾವು ಇರುತ್ತೇವೆ’ ಎಂದರು.

ಇದಕ್ಕೆ ಉತ್ತರಿಸಿದ ನಿರಂಜನಯ್ಯ ಹಿರೇಮಠ, ‘ನಿಮಗೆ, ಸರ್ಕಾರಕ್ಕೆ, ಕಾನೂನು ಸಚಿವರಿಗೆ, ಶಾಸಕರಿಗೆ ಸೇರಿದಂತೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವೆ’ ಎಂದರು.

ಸಿಐಡಿ ತನಿಖೆ ಆರಂಭ; ಮಾಹಿತಿ ಸಂಗ್ರಹ: ಸಿಐಡಿ ಅಧಿಕಾರಿಗಳ ತಂಡ ನೇಹಾ ಕೊಲೆ ಪ್ರಕರಣದ ತನಿಖೆ ಆರಂಭಿಸಿದೆ. ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ಅವರಿಂದ, ಕಡತ ಹಾಗೂ ಮಾಹಿತಿ ಪಡೆದಿದೆ.

ಎಸ್ಪಿ ವೆಂಕಟೇಶ್, ಡಿವೈಎಸ್‌ಪಿ ಮನೋಹರ್ ನೇತೃತ್ವದ ಎಂಟು ಅಧಿಕಾರಿಗಳ ತಂಡ, ಪ್ರಕರಣದ ಪ್ರಾಥಮಿಕ ಮಾಹಿತಿಯನ್ನು ಸ್ಥಳೀಯ ಪೊಲೀಸರಿಂದ ಪಡೆಯಿತು.

‘ಎರಡು ತಂಡಗಳಲ್ಲಿ ಮಾಹಿತಿ ಸಂಗ್ರಹಿಸುತ್ತಿರುವ ಅಧಿಕಾರಿಗಳು, ಬಿವಿಬಿ ಕಾಲೇಜಿನ ಆವರಣಕ್ಕೆ ತೆರಳಿ ಕೊಲೆ ನಡೆದ ಸ್ಥಳ, ಕೃತ್ಯದ ದೃಶ್ಯಾವಳಿ ಸೆರೆಯಾಗಿದ್ದ ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದ ಸ್ಥಳ ಪರಿಶೀಲಿಸಿದರು. ನೇಹಾ, ಫಯಾಜ್ ಮೊಬೈಲ್‌ಗಳ ಕರೆಗಳ ಮಾಹಿತಿಯನ್ನೂ (ಸಿಡಿಆರ್) ಪರಿಶೀಲಿಸಿದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿಬಿಐ ತನಿಖೆಗೆ ಒಪ್ಪಿಸಿ: ವಿಜಯೇಂದ್ರ ಆಗ್ರಹ

‘ನೇಹಾ ಪ್ರಕರಣದ ತನಿಖೆ ಹಾದಿ, ಮುಖ್ಯಮಂತ್ರಿ, ಗೃಹ ಸಚಿವರ ಹೇಳಿಕೆ ಗಮನಿಸಿದರೆ ಸಿಐಡಿ ತನಿಖೆಯಿಂದ ನ್ಯಾಯಸಿಗುವ ಭರವಸೆಯಿಲ್ಲ. ಸಿಬಿಐ ತನಿಖೆಗೆ ಒಪ್ಪಿಸಬೇಕು’ ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ಹುಬ್ಬಳ್ಳಿಯಲ್ಲಿ ನೇಹಾ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದ ಅವರು, ‘ಪ್ರಕರಣಕ್ಕೆ ಸಂಬಂಧಿಸಿ ಸಚಿವರ ಹೇಳಿಕೆ ಗಮನಿಸಿದರೆ, ಪರೋಕ್ಷವಾಗಿ ಅಲ್ಪಸಂಖ್ಯಾತರಿಗೆ ಬೆಂಬಲ ಸಿಗುತ್ತಿದೆ’ ಎಂದರು.

‘ಈ ಪ್ರಕರಣದಲ್ಲಿ ಇನ್ನೂ ನಾಲ್ಕು ಮಂದಿ ಇದ್ದಾರೆ ಎಂದು ನೇಹಾ ತಂದೆ ಹೇಳಿದ್ದಾರೆ. ಆದರೆ, ಈವರೆಗೂ ಅವರನ್ನು ಬಂಧಿಸಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ನೇಹಾ ಕೊಲೆ ಪ್ರಕರಣಕ್ಕೆ ಯಾರು ಕೂಡಾ ಜಾತಿ, ಧರ್ಮದ ಬಣ್ಣ ಹಚ್ಚಬಾರದು. ನೊಂದ ಹೆತ್ತವರಿಗೆ ಸಮಾಧಾನವಾಗುವಂತೆ ವರ್ತಿಸಬೇಕು’ ಎಂದು ವಿನಂತಿಸಿದರು.

ಮಹಿಳಾ ಮೋರ್ಚಾ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರ ಹತ್ಯೆಯನ್ನು ಖಂಡಿಸಿ’ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಕಾರ್ಯಕರ್ತೆಯರು, ನೇಹಾ ಹಿರೇಮಠ ಭಾವಚಿತ್ರದ ಎದುರು ಮೇಣದ ಬತ್ತಿಗಳನ್ನು ಹೊತ್ತಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

‘ಹಿಂದೂಗಳಿಗೆ ರಕ್ಷಣೆ ನೀಡದ ತುಘಲಕ್ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ’ ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ‘ನೇಹಾ ಅವರನ್ನು ಚಾಕುವಿನಿಂದ 13-14 ಬಾರಿ ಇರಿದು ಕೊಲೆ ಮಾಡಲಾಗಿದೆ. ಈ ಧೈರ್ಯ ಆರೋಪಿ ಫಯಾಜ್‌ಗೆ ಹೇಗೆ ಬಂತು? ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿರುವ ಇಂಥ ಸಂದರ್ಭದಲ್ಲಿ ಸಮಾಜದ್ರೋಹಿಗಳು ಹಾಗೂ ದೇಶದ್ರೋಹಿಗಳ ಕೈ ಮೇಲಾಗುತ್ತಿದೆ’ ಎಂದು ಆರೋಪಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ. ಮಂಜುಳಾ, ಬೆಂಗಳೂರು ಉತ್ತರ ಮಹಿಳಾ ಮೋರ್ಚಾ ಘಟಕದ ಅಧ್ಯಕ್ಷೆ ಆಶಾ ರಾವ್, ಕೇಂದ್ರ ಘಟಕದ ಅಧ್ಯಕ್ಷೆ ರೇಖಾ ಗೋವಿಂದ, ದಕ್ಷಿಣ ಘಟಕದ ಅಧ್ಯಕ್ಷೆ ವಿಜಯಲಕ್ಷ್ಮಿ ಆನಂದ್ ಇದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತೆಯರು, ನೇಹಾ ಭಾವಚಿತ್ರದ ಎದುರು ಮೇಣದ ಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಸುಧಾ, ಮಯೂರ ಓದಿರಿ...



ದೊಡ್ಡ ಮೊತ್ತ ಕಲೆ ಹಾಕಿದರೂ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೋಲು

ಮಾರ್ಕಸ್ ಶತಕ: ಲಖನೌಗೆ ಜಯ

ಚೆನ್ನೈ (ಪಿಟಿಐ): ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಮಿಂಚಿನ ಶತಕದ ಬಲದಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ಆರು ವಿಕೆಟ್‌ಗಳಿಂದ ಜಯಭೇರಿ ಬಾರಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಗೆದ್ದ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು.

ಚೆನ್ನೈ ತಂಡವು ಋತುರಾಜ್ ಗಾಯಕವಾಡ ಶತಕ ಹಾಗೂ ಶಿವಂ ದುಬೆ ಅವರ ಬೀಸಾಟದ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 210 ರನ್‌ಗಳ ಮೊತ್ತ ದಾಖಲಿಸಿತು.

ಅದಕ್ಕುತ್ತರವಾಗಿ ಲಖನೌ ತಂಡವು 19.3 ಓವರ್‌ಗಳಲ್ಲಿ 4 ವಿಕೆಟ್‌ಗೆ 213 ರನ್ ಗಳಿಸಿ ಗೆದ್ದಿತು. ಲಖನೌ ತಂಡವು 11 ಓವರ್‌ಗಳಲ್ಲಿ 88 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತ್ತು. ಈ ಸಂದರ್ಭದಲ್ಲಿ ಚೆನ್ನೈ ಸುಲಭ ಜಯ ಸಾಧಿಸುವಂತೆ ಕಂಡಿತ್ತು. ಆದರೆ, ಸ್ಟೊಯಿನಿಸ್ (ಔಟಾಗದೇ 124, 63ಎ, 4X13, 6X6) ಮತ್ತು ನಿಕೊಲಸ್ ಪೂರನ್ (34, 15ಎ, 4X3, 6X2) ಎಲ್ಲವನ್ನೂ ಬುಡಮೇಲು ಮಾಡಿದರು. ಚೆನ್ನೈ ತಂಡದ ಕೈಯಿಂದ ಗೆಲುವು ಕಸಿದುಕೊಂಡರು.

ಆರಂಭಿಕ ಆಟಗಾರರಾದ ಕೆ.ಎಲ್.ರಾಹುಲ್ ಮತ್ತು ಕ್ವಿಂಟನ್ ಡಿಕಾಕ್ ಬೇಗನೇ ಔಟಾದರು. ಕ್ವಿಂಟನ್ ಖಾತೆ ತೆರೆಯಲು ಚಾಹರ್ ಬಿಡಲಿಲ್ಲ. ಸ್ಟೊಯಿನಿಸ್ ಅವರೊಂದಿಗೆ ಸೇರಿಕೊಂಡ ಪೂರನ್ ಚೆನ್ನೈ ತಂಡದ ಬೌಲರ್‌ಗಳನ್ನು ಕಾಡಿದರು.

ಮಥೀಶ್ ಪಥಿರಾಣ ಬೌಲಿಂಗ್‌ನಲ್ಲಿ ಪೂರನ್ ಅವರು ಠಾಕೂರ್‌ಗೆ ಕ್ಯಾಚಿತ್ತರು. ಬಳಿಕ ಬಂದ ದೇವದತ್ತ ಪಡಿಕ್ಕಲ್ 19 ಎಸೆತಗಳಲ್ಲಿ 13 ರನ್ ಗಳಿಸಿ, ಪಥಿರಾಣಗೆ ವಿಕೆಟ್ ಒಪ್ಪಿಸಿದರು.

ಸ್ಟೊಯಿನಿಸ್ ಜತೆಗೂಡಿದ ದೀಪಕ್ ಹೂಡಾ 6 ಎಸೆತಗಳಲ್ಲಿ 17 ರನ್ ಗಳಿಸಿದರು. ಇದರಲ್ಲಿ ಎರಡು ಬೌಂಡರಿ, ಒಂದು ಸಿಕ್ಸರ್ ಸೇರಿತು.

ಮುಸ್ತಫಿಜುರ್ ರೆಹಮಾನ್ 3.3 ಓವರ್‌ಗಳಲ್ಲಿ 51 ರನ್ ನೀಡಿ ದುಬಾರಿ ಎನಿಸಿದರು.



ಲಖನೌ ಸೂಪರ್ ಜೈಂಟ್ಸ್ ತಂಡದ ಮಾರ್ಕಸ್ ಸ್ಟೊಯಿನಿಸ್ ಮತ್ತು ದೀಪಕ್ ಹೂಡಾ. ಎಎಫ್‌ಪಿ ಚಿತ್ರ

ಋತುರಾಜ್ ಶತಕ : ದುಬೆ ಬೀಸಾಟ: ಬ್ಯಾಟಿಂಗ್ ಆರಂಭಿಸಿದ ಚೆನ್ನೈ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ಮ್ಯಾಟ್ ಹೆನ್ರಿ ಆಘಾತ ನೀಡಿದರು. ಕೇವಲ 1 ರನ್ ಗಳಿಸಿದ ಅಜಿಂಕ್ಯ ರಹಾನೆ ಅವರು ಹೆನ್ರಿ ಎಸೆತ ಆಡುವ ಪ್ರಯತ್ನದಲ್ಲಿ ರಾಹುಲ್‌ಗೆ ಕ್ಯಾಚಿತ್ತರು.

ಆದರೆ ನಾಯಕನಿಗೆ ತಕ್ಕ ಆಟವಾಡಿದ ಋತುರಾಜ್ (ಔಟಾಗದೆ 108; 60ಎ, 4X12, 6X3) ತಂಡಕ್ಕೆ ಆಸರೆಯಾದರು. ಡ್ಯಾರಿಲ್ ಮಿಚೆಲ್ (11; 10ಎ) ಹೆಚ್ಚು ಹೊತ್ತು ಆಡಲಿಲ್ಲ.

ಎರಡನೇ ಓವರ್‌ನಲ್ಲಿ ಲಭಿಸಿದ್ದ ಜೀವದಾನವನ್ನು ಮಿಚೆಲ್ ಬಳಸಿಕೊಳ್ಳಲಿಲ್ಲ. ಆದರೆ ಋತುರಾಜ್ ಮತ್ತು ರವೀಂದ್ರ ಜಡೇಜ (16; 19ಎ) ಅವರು 3ನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು.

ಮೊಹಸಿನ್ ಖಾನ್ ಬೌಲಿಂಗ್‌ನಲ್ಲಿ ಜಡೇಜ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. ಆಗ ಕ್ರೀಸ್‌ಗೆ ಬಂದ ಶಿವಂ ದುಬೆ ಬೀಸಾಟಕ್ಕೆ ಚಾಲನೆ ನೀಡಿದರು. ಅವರೊಂದಿಗೆ ಋತುರಾಜ್ ಕೂಡ ತಮ್ಮ ಆಟದ ವೇಗ ಹೆಚ್ಚಿಸಿದರು. 4ನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ 104 (46ಎಸೆತ) ರನ್ ಸೇರಿಸಿದರು.

ಋತುರಾಜ್ ಐಪಿಎಲ್‌ನಲ್ಲಿ ಎರಡನೇ ಶತಕ ದಾಖಲಿಸಿದರು. 56 ಎಸೆತಗಳಲ್ಲಿ ಅವರು ನೂರರ ಗಡಿ ಮುಟ್ಟಿದರು. ಅವರ ಆಟದ ರಭಸಕ್ಕೆ ಲಖನೌ ಬೌಲರ್‌ಗಳು ಬಸವಳಿದರು. 19ನೇ ಓವರ್‌ನಲ್ಲಿ ಮೊಹಸಿನ್ ಎಸತದಲ್ಲಿ ಶಿವಂ ದುಬೆ ಕ್ಯಾಚ್ ಕೈಚೆಲ್ಲಿದ ಕ್ವಿಂಟನ್ ಡಿಕಾಕ್ ಜೀವದಾನ ನೀಡಿದರು.

ಆದರೆ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಕ್ವಿಂಟನ್ ಮತ್ತು ಸ್ಟೊಯಿನಿಸ್ ಅವರ ಚುರುಕಾದ ಫೀಲ್ಡಿಂಗ್‌ನಿಂದ ದುಬೆ ರನ್‌ಔಟ್ ಆದರು. ಕ್ರೀಸ್‌ಗೆ ಬಂದ ಮಹೇಂದ್ರಸಿಂಗ್ ಧೋನಿ ಎದುರಿಸಿದ ಏಕೈಕ ಎಸೆತವನ್ನೂ ಬೌಂಡರಿಗೆ ಕಳಿಸಿದರು.

ಸಂಕ್ಷಿಪ್ತ ಸ್ಕೋರ್: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 210 (ಋತುರಾಜ್ ಗಾಯಕವಾಡ ಔಟಾಗದೆ 108, ಶಿವಂ ದುಬೆ 66, ಮ್ಯಾಟ್ ಹೆನ್ರಿ 28ಕ್ಕೆ1, ಮೊಹಸಿನ್ ಖಾನ್ 50ಕ್ಕೆ1, ಯಶ್ ಠಾಕೂರ್ 47ಕ್ಕೆ1). ಲಖನೌ ಸೂಪರ್ ಜೈಂಟ್ಸ್ 19.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 213. (ಮಾರ್ಕಸ್ ಸ್ಟೊಯಿನಿಸ್ ಔಟಾಗದೆ 124, ನಿಕೊಲಸ್ ಪೂರನ್ 34, ಮಥೀಶ್ ಪಥಿರಾಣ 35ಕ್ಕೆ2, ದೀಪಕ್ ಚಾಹರ್ 11ಕ್ಕೆ1)

ಪಂದ್ಯದ ಆಟಗಾರ: ಮಾರ್ಕಸ್ ಸ್ಟೊಯಿನಿಸ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	8	7	1	14	0.698
ಕೋಲ್ಕತ್ತ ನೈಟ್ ರೈಡರ್ಸ್	7	5	2	10	1.206
ಸನ್‌ರೈಸರ್ಸ್ ಹೈದರಾಬಾದ್	7	5	2	10	1.914
ಲಖನೌ ಸೂಪರ್ ಜೈಂಟ್ಸ್	8	5	3	10	0.148
ಚೆನ್ನೈ ಸೂಪರ್ ಕಿಂಗ್ಸ್	8	4	4	8	0.415
ಗುಜರಾತ್ ಟೈಟನ್ಸ್	8	4	4	8	-1.055
ಮುಂಬೈ ಇಂಡಿಯನ್ಸ್	8	3	5	6	-0.277
ಡೆಲ್ಲಿ ಕ್ಯಾಪಿಟಲ್ಸ್	8	3	5	6	-0.477
ಪಂಜಾಬ್ ಕಿಂಗ್ಸ್	8	2	6	4	-0.292
ಆರ್‌ಸಿಬಿ (ಬೆಂಗಳೂರು)	8	1	7	2	-1.046

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (379 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಯಜುವೇಂದ್ರ ಚಾಹಲ್, ಹರ್ಷ ಪಟೇಲ್ (13 ವಿಕೆಟ್)


ಪಂತ್ ನಾಯಕತ್ವಕ್ಕೆ ಸವಾಲು

ನವದೆಹಲಿ (ಪಿಟಿಐ): ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬುಧವಾರ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ಎದುರು ಕಣಕ್ಕಿಳಿಯಲಿದೆ.

ಟೂರ್ನಿಯಲ್ಲಿ ಇದು ಎರಡನೇ ಬಾರಿ ಈ ಎರಡೂ ತಂಡಗಳು ಮುಖಾಮುಖಿಯಾಗಲಿವೆ. ಒಂದು ವಾರದ ಹಿಂದೆ ಡೆಲ್ಲಿ ತಂಡವು ಗುಜರಾತ್ ಎದುರು ಜಯಿಸಿತ್ತು.

ಅದರ ನಂತರದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಸೋತಿತ್ತು. ಡೆಲ್ಲಿ ತಂಡವು ಎಂಟು ಪಂದ್ಯಗಳನ್ನು ಆಡಿದ್ದು ಮೂರರಲ್ಲಿ ಮಾತ್ರ ಜಯಿಸಿದೆ. ಐದರಲ್ಲಿ ಪರಾಭವಗೊಂಡಿದೆ. ಆದ್ದರಿಂದ ಈ ಪಂದ್ಯದಲ್ಲಿ ಗೆಲುವು ಮುಖ್ಯವಾಗಿದೆ. ಅಲ್ಲದೇ ರಿಷಭ್ ನಾಯಕತ್ವಕ್ಕೂ ಇದು ಸವಾಲಿನದ್ದಾಗಿದೆ.

ದೀರ್ಘ ಕಾಲದ ನಂತರ ಕಣಕ್ಕಿಳಿದಿರುವ ರಿಷಭ್ ಈ ಐಪಿಎಲ್ ಟೂರ್ನಿಯಲ್ಲಿ ಬ್ಯಾಟಿಂಗ್ ಮತ್ತು ವಿಕೆಟ್‌ಕೀಪಿಂಗ್‌ನಲ್ಲಿ ಗಮನ ಸೆಳೆಯುವಂತಹ ಆಟವಾಡಿದ್ದಾರೆ.



ರಿಷಭ್ ಪಂತ್ ವ್ಯಾಯಾಮ –ಪಿಟಿಐ ಚಿತ್ರ

ತಂಡವು ಪ್ಲೇ ಆಫ್ ಪ್ರವೇಶಿಸಬೇಕಾದರೆ ಇಲ್ಲಿಂದ ಮುಂದಿನ ಬಹುತೇಕ ಎಲ್ಲ ಪಂದ್ಯಗಳಲ್ಲಿ ಜಯಿಸುವ ಒತ್ತಡ ಇದೆ.

ಸನ್‌ರೈಸರ್ಸ್ ಎದುರಿನ ಪಂದ್ಯದಲ್ಲಿ ಅವರು ತೆಗೆದುಕೊಂಡ ನಿರ್ಧಾರಗಳು ದುಬಾರಿಯಾದವು. ಟಾಸ್ ಗೆದ್ದು ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡರು. ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮುಸ್ಸಂಜೆಯ ಇಬ್ಬನಿಯ ಪರಿಣಾಮದ ಬಗ್ಗೆ ಅವರು ಮಾಡಿದ ಅಂದಾಜು ಕೈಕೊಟ್ಟಿತು.

ಇನಿಂಗ್ಸ್‌ನ ಎರಡನೇ ಓವರ್ ಹಾಕಲು ಲಲಿತ್ ಯಾದವ್ ಅವರಿಗೆ ಚೆಂಡು ನೀಡಿದ್ದು ತಪ್ಪಾಯಿತು. ಪವರ್‌ಪ್ಲೇ ಅವಧಿಯಲ್ಲಿಯೇ ಸನ್ ರೈಸರ್ಸ್ ಆರಂಭಿಕ ಜೋಡಿಯು 125 ರನ್ ಗಳಿಸಿಬಿಟ್ಟಿತು. ಕುಲದೀಪ್ ಯಾದವ್ ಮತ್ತು ಅಕ್ಷರ್ ಪಟೇಲ್ ಅವರು ವಿಕೆಟ್ ಪಡೆದು, ರನ್‌ಗಳಿಗೂ ತಡೆಯೊಡ್ಡಿದರು. ಆದರೂ ಡೆಲ್ಲಿ ತಂಡವು 267 ರನ್‌ಗಳ ಗುರಿ ಬೆನ್ನಟ್ಟಬೇಕಾಯಿತು.

ಪಂತ್ ಬ್ಯಾಟಿಂಗ್ ತುಸು ನಿಧಾನಗತಿಯಲ್ಲಿತ್ತು. ಈ ಎಲ್ಲ ಅಂಶಗಳನ್ನು ಸುಧಾರಿಸಿಕೊಂಡು ಕಣ ಕ್ಕಿಳಿಯುವ ಸವಾಲು ಡೆಲ್ಲಿ ಮುಂದಿದೆ.

ಗುಜರಾತ್ ತಂಡವು ತನ್ನ ಕಳೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಗೆದ್ದಿತ್ತು. ಇದರೊಂದಿಗೆ ಒಟ್ಟು ನಾಲ್ಕು ಸೋಲು ಮತ್ತು ನಾಲ್ಕು ಜಯ ಸಾಧಿಸಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್.

ಟೆನಿಸ್: ವರದ್‌ಗೆ ಅನುರಾಗ್ ಆಘಾತ

ಬೆಂಗಳೂರು: ಅನುರಾಗ್ ಶೌರ್ಯ ಅವರು ಏಷ್ಯನ್ ರ‍್ಯಾಂಕಿಂಗ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ವರದ್ ಪೋಲ್ ಅವರಿಗೆ ಆಘಾತ ನೀಡಿದರು.

ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿ ಅಂಗಳದಲ್ಲಿ ಮಂಗಳವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಅನುರಾಗ್ ಅವರು 6–1, 6–1ರಿಂದ ವರದ್ ಅವರನ್ನು ಹಿಮ್ಮೆಟ್ಟಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಎರಡನೇ ಶ್ರೇಯಾಂಕದ ತೇಜಸ್ ರವಿ ಮತ್ತು ಮೂರನೇ ಶ್ರೇಯಾಂಕದ ನಿವೇದ್ ಪೊನ್ನಪ್ಪ ಕೂಡ ಎಂಟರ ಘಟ್ಟಕ್ಕೆ ಮುನ್ನಡೆದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅನ್ವಿ ಪಿ. 6-1, 6-1ರಿಂದ ಮೂರನೇ ಶ್ರೇಯಾಂಕದ ಜೋಶಿತಾ ಎಸ್. ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅಗ್ರ ಶ್ರೇಯಾಂಕದ ಶೈವಿ ಗೌರವ್ ದಲಾಲ್ ಮುನ್ನಡೆದರು. ಆದರೆ, ಎರಡನೇ ಶ್ರೇಯಾಂಕದ ರಿದ್ಧಿ ಶಿಂಧೆ 3-6, 3-6ರಿಂದ ಪೂಜಾ ನಾಗರಾಜ್ ಅವರಿಗೆ ಶರಣಾದರು.

ಎರಡನೇ ಸುತ್ತಿನ ಫಲಿತಾಂಶ: ಬಾಲಕರ ಸಿಂಗಲ್ಸ್: ಕೃಶಾಂಕ್ ಜೋಶಿ 6-2, 6-3ರಿಂದ ಕಬೀರ್ ಜೇಟ್ಲಿ ವಿರುದ್ಧ; ಶ್ರೀಕರ್ ದೋಣಿ 3-6, 5-0ಯಿಂದ ಲಿಕಿತ್ ಎಸ್. ಗೌಡ (ನಿವೃತ್ತಿ) ವಿರುದ್ಧ; ನಿವೇದ್ ಪೊನ್ನಪ್ಪ 6-2, 6-0ಯಿಂದ ಧ್ರುವ ಹೆಗ್ಡೆ ವಿರುದ್ಧ; ಪ್ರಕಾಶ್ ಸರ್ರನ್ 6-1, 6-3ರಿಂದ ಅಯನ್ ಶೆಟ್ಟಿ ವಿರುದ್ಧ; ಶಾರ್ದೂಲ್ ಖವಾಲೆ 6-3, 6-3ರಿಂದ ಅಹಾನ್ ಶೆಟ್ಟಿ ವಿರುದ್ಧ; ಅನುರಾಗ್ ಶೌರ್ಯ 6-1,6-1ರಿಂದ ವರದ್ ಪೋಲ್ ವಿರುದ್ಧ; ಲೆವಿನ್ ಸಫೂರ್ ಮೈದೀನ್ 7-5, 6-0ಯಿಂದ ಕ್ರಿಸ್ಟೋ ಬಾಬು ವಿರುದ್ಧ; ತೇಜಸ್ ರವಿ 6-2,6-3ರಿಂದ ಅಯಾನ್ ಮೊಹಮ್ಮದ್ ಖಾನ್ ವಿರುದ್ಧ ಗೆಲುವು ಸಾಧಿಸಿದರು.

ಬಾಲಕಿಯರ ಸಿಂಗಲ್ಸ್: ಶೈವಿ ಗೌರವ್ 6-1, 6-1ರಿಂದ ಆದ್ಯಾ ಚೌರಾಸಿಯಾ ಎದುರು; ಮೇಘನಾ ಜಿ.ಡಿ. 6-2, 2-6, 6-2ರಿಂದ ಕೀರ್ತನಾ ರಂಗಿನೇನಿ ಎದುರು; ಅನ್ವಿ ಪಿ. 6-1, 6-1ರಿಂದ ಜೋಶಿತಾ ಸಂತಾನಕೃಷ್ಣನ್ ಎದುರು; ಕಶ್ವಿ ಸುನಿಲ್ 6–3, 7–5ರಿಂದ ಆದಿಯಾ ರಿತೇಶ್ ಕುಮಾರ್ ಎದುರು; ಧಾರಿಣಿ ಗೌಡ 6-2, 6-3ರಿಂದ ಜಾಹ್ನವಿ ಚೌಧರಿ ಎದುರು; ಅಹಿದಾ ಸಿಂಗ್ 6-0, 6-1ರಿಂದ ರಿಷಿತಾ ಚೌಧರಿ ಎದುರು; ದೀಪ್ತಿಕಾ ವಿ. 6-1, 6-1ರಿಂದ ಧೃತಿ ಸಾಂದ್ರ ಎದುರು; ಪೂಜಾ ನಾಗರಾಜ 6-3, 6-3ರಿಂದ ರಿದ್ಧಿ ಶಿಂಧೆ ಎದುರು ಜಯ ಸಾಧಿಸಿದರು.

ಅಖಿಲ ಭಾರತ ಬ್ಯಾಡ್ಮಿಂಟನ್ ಟೂರ್ನಿ

ನಿಕೋಲಸ್, ತುಷಾರ್ ಜೋಡಿಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಪ್ರಣಯ್ ಶೆಟ್ಟಿಗಾರ್ ಅವರು ಇಲ್ಲಿ ನಡೆದ ಅಖಿಲ ಭಾರತ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ 19 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಬಾಲಕಿಯರ ಸಿಂಗಲ್ಸ್ ಕಿರೀಟ ಅದೇ ರಾಜ್ಯದ ಆಲಿಶಾ ನಾಯ್ಕ್ ಪಾಲಾಯಿತು.

ಬಾಲಕರ ಫೈನಲ್ ಹಣಾಹಣಿಯಲ್ಲಿ ಆರನೇ ಶ್ರೇಯಾಂಕದ ಪ್ರಣಯ್ 21-13, 18-21, 21-18 ರಿಂದ ಚಂಡೀಗಢದ ರೌನಕ್ ಚೌಹಾಣ್ ಅವರನ್ನು ಮಣಿಸಿದರು. ಬಾಲಕಿಯರ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಆಲೀಶಾ ಅವರು 21-9, 21-15ರಿಂದ ಐದನೇ ಶ್ರೇಯಾಂಕದ ಮುಸ್ಕಾನ್ ಖಾನ್ ಅವರಿಗೆ ಆಘಾತ ನೀಡಿದರು.

ಬಾಲಕರ ಡಬಲ್ಸ್‌ನಲ್ಲಿ ಸ್ಥಳೀಯ ಆಟಗಾರರಾದ ನಿಕೋಲಸ್ ನಾಥನ್ ರಾಜ್ ಮತ್ತು ತುಷಾರ್ ಸುವೀರ್ 21-19, 21-17ರಿಂದ ಮೂರನೇ ಶ್ರೇಯಾಂಕದ ಭವ್ಯಾ ಛಾಬ್ರಾ ಮತ್ತು ಪರಮ್ ಚೌಧರಿ (ದೆಹಲಿ) ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದರು. ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ನವ್ಯಾ ಕಂಡೇರಿ (ಆಂಧ್ರ) ಮತ್ತು ರೇಷಿಕಾ ಯು. (ತಮಿಳುನಾಡು) ಜೋಡಿಯು 21-16, 22-20 ಅಂತರದಲ್ಲಿ ಅನ್ಯಾ ಬಿಶ್ತ್ ಮತ್ತು ಏಂಜೆಲ್ ಪುಣೇರಾ (ಉತ್ತರಖಂಡ) ವಿರುದ್ಧ ಜಯ ಸಾಧಿಸಿತು. ಮಿಕ್ಸೆಡ್ ಡಬಲ್ಸ್‌ನಲ್ಲಿ ಭಾರ್ಗವ್ ರಾಮ್ (ಆಂಧ್ರ) ಮತ್ತು ವೆನ್ನಲಾ ಕೆ. (ತೆಲಂಗಾಣ) ಜೋಡಿಯು 21-19, 21-13 ರಿಂದ ಭವ್ಯಾ ಛಾಬ್ರಾ (ದೆಹಲಿ) ಮತ್ತು ಪ್ರಜ್ಞಾ ಕತಾರಾ (ರಾಜಸ್ಥಾನ) ವಿರುದ್ಧ ಗೆದ್ದು ಚಾಂಪಿಯನ್ ಆಯಿತು.



ಅಖಿಲ ಭಾರತ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದವರು (ನಿಂತವರು ಎಡದಿಂದ) ಕರ್ನಾಟಕದ ತುಷಾರ್ ಸುವೀರ್, ನಿಕೋಲಸ್ ನಾಥನ್ ರಾಜ್, ಆಂಧ್ರಪ್ರದೇಶದ ಭಾರ್ಗವ್ ರಾಮ್, ತೆಲಂಗಾಣದ ವೆನ್ನಲಾ ಕೆ, (ಕುಳಿತವರು ಎಡದಿಂದ) ತಮಿಳುನಾಡಿನ ರೇಷಿಕಾ ಯು, ಆಂಧ್ರಪ್ರದೇಶದ ನವ್ಯಾ ಕಂಡೇರಿ, ಮಹಾರಾಷ್ಟ್ರದ ಆಲಿಶಾ ನಾಯ್ಕ್ –ಪ್ರಜಾವಾಣಿ ಚಿತ್ರ

ಬುಧವಾರ, ಏಪ್ರಿಲ್ 24, 2024 | ₹ 7.00
www.prajavani.net
prajavani.net prajavani prajavani prajavani


ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.





ಕೇಳಿದ್ದನ್ನು 'ಕೊಡುವ' ಕೃತಕ ಬುದ್ಧಿಮತ್ತೆಯ ಜಾಣರು

ಅವಿನಾಶ್ ಬಿ.



ಚಾಟ್‌ಜಿಪಿಟಿ, ಮೆಟಾ ಎಐ, ಮೈಕ್ರೋಸಾಫ್ಟ್ ಕೋಪೈಲಟ್, ಗೂಗಲ್ ಜೆಮಿನಿ, ಎಕ್ಸ್‌ನ ಗ್ರಾಕ್ ವಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳ ಒಡೆತನವನ್ನು ಹೊಂದಿರುವ ತಂತ್ರಜ್ಞಾನ ದಿಗ್ಗಜ ಕಂಪನಿ ಮೆಟಾ, ಹೊಸ ಜನರೇಟಿವ್ ಎಐ ಚಾಟ್‌ಬಾಟ್ ಅನ್ನು ಪರಿಚಯಿಸುತ್ತಿರುವುದರೊಂದಿಗೆ, ಕೃತಕ ಬುದ್ಧಿಮತ್ತೆಯ ಆಧಾರಿತವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಕ್ಷೇತ್ರವು ಮತ್ತಷ್ಟು ವಿಸ್ತಾರವಾಗಿದೆ. ಕಳೆದ ವರ್ಷಾಂತ್ಯದಲ್ಲಿ ಲಾರ್ಜ್ ಲಾಂಗ್ವೇಜ್ ಮಾಡೆಲ್ (LLM) ಹಾಗೂ ಜನರೇಟಿವ್ ಎಐ ತಂತ್ರಜ್ಞಾನಗಳ ಸಂಯೋಗದಿಂದ 'ಓಪನ್ ಎಐ' ಎಂಬ ಸಂಸ್ಥೆಯು ಚಾಟ್-ಜಿಪಿಟಿ ಎಂಬ 'ಕೇಳಿದ್ದನ್ನು ಕೊಡಬಲ್ಲ' ಚಾಟ್‌ಬಾಟ್ ಅನ್ನು ಘೋಷಿಸಿತ್ತು. ಈ ಯಾಂತ್ರಿಕ ಸಹಾಯಕನಂತಿರುವ ತಂತ್ರಜ್ಞಾನವು ಜನಸಾಮಾನ್ಯರ ಕೈಗೂ ಸಿಗಲಾರಂಭಿಸಿದ ಬಳಿಕ, ಅದಕ್ಕೀಗ ಸಾಕಷ್ಟು ಪ್ರತಿಸ್ಪರ್ಧಿಗಳು ಹುಟ್ಟಿಕೊಂಡಿದ್ದಾರೆ. ಪ್ರಮುಖ ತಂತ್ರಜ್ಞಾನ ದಿಗ್ಗಜ ಸಂಸ್ಥೆಗಳೆಲ್ಲವೂ ಈ ಕ್ಷೇತ್ರದಲ್ಲಿ ಹೊಸ ಮಾರುಕಟ್ಟೆಯ ಸಾಧ್ಯತೆಯನ್ನು ಮನಗಂಡು, ತಮ್ಮದೇ ಆದ 'ಜನರೇಟಿವ್ ಎಐ ಟೂಲ್'ಗಳನ್ನು ಅಭಿವೃದ್ಧಿಪಡಿಸಿಕೊಂಡಿವೆ. ಓಪನ್ ಎಐ ಹೊರತಂದಿದ್ದ ಚಾಟ್ ಜಿಪಿಟಿಯ 4ನೇ ಆವೃತ್ತಿ ಈಗ ಹೊರಬಂದಿದ್ದು, ನಾವು ಕೇಳಿದ ಪ್ರಶ್ನೆಗಳಿಗೆ ಹೆಚ್ಚು ನಿಖರವಾದ ಉತ್ತರ, ಹೆಚ್ಚು ಸ್ಪಷ್ಟವಾಗಿರುವ ಅನುವಾದದೊಂದಿಗೆ ಸೂಕ್ತವಾದ ಚಿತ್ರಗಳನ್ನು, ವಿಡಿಯೊಗಳನ್ನು ರಚಿಸಿಕೊಡಬಲ್ಲುದು ಮತ್ತು ಯಾವುದೇ ಕೋಡ್‌ಗಳನ್ನು ಕೂಡ ಸೃಷ್ಟಿಸಿಕೊಡಬಲ್ಲುದು.

> ಎಲ್ಲ ಚಾಟ್‌ಬಾಟ್‌ಗಳು ಅಂಗೈಯಲ್ಲೇ ಅರಮನೆ ಕಟ್ಟಬಲ್ಲ, ಕಲ್ಪಿಸಿದ್ದನ್ನು ಕೊಡುವ ಕಲ್ಪವೃಕ್ಷದಂತೆ, ಕಾಮಿಸಿದ್ದನ್ನು ನೀಡುವ ಕಾಮಧೇನುವಿನಂತೆ ಎಂದೆಲ್ಲ ಹೇಳಬಹುದಾದರೂ, ಮಾನವನ ಜಾಣ್ಮೆಗೆ ಎಂದಿಗೂ ಸರಿಸಾಟಿಯಾಗಲಾರವು.

ಈ ಅಗಾಧ ಸಾಧ್ಯತೆಯಿರುವ ಚಾಟ್-ಜಿಪಿಟಿಗೆ ಪ್ರಮುಖ ಪ್ರತಿಸ್ಪರ್ಧಿಗಳು ಯಾರು ಎಂದು ನೋಡಿದರೆ, ಅದಾಗಲೇ ಗೂಗಲ್, ಮೈಕ್ರೋಸಾಫ್ಟ್, ಮೆಟಾ, ಎಕ್ಸ್ ಮುಂತಾದವೆಲ್ಲ ತಮ್ಮದೇ ಆದ ಜನರೇಟಿವ್ ಎಐ ಟೂಲ್‌ಗಳನ್ನು ಸಿದ್ಧಪಡಿಸಿವೆ. ಎಲ್ಲವೂ ತಮ್ಮದೇ ಆದ ರೀತಿಯಲ್ಲಿ ನಾವು ಕೇಳಿದ್ದನ್ನು ಮಾಡಿಕೊಡಬಲ್ಲ ಸಾಮರ್ಥ್ಯ ಇರುವಂಥವು. ಅಂದರೆ ನಾವು ಯಾವುದೇ ಪ್ರಶ್ನೆ ಕೇಳಿದರೆ, ಅಂತರ್ಜಾಲವನ್ನೆಲ್ಲ ಜಾಲಾಡಿ, ತನ್ನಲ್ಲಿರುವ ದತ್ತಾಂಶ ಸಂಚಯ (ಡೇಟಾಬೇಸ್) ತಡಕಾಡಿ, ಹೆಚ್ಚು ನಿಖರವಾದ ಉತ್ತರವನ್ನು ನಮ್ಮ ಮುಂದೆ ತಂದಿಡಬಲ್ಲವು. ಮತ್ತು ವಿಡಿಯೊ ಮಾಡುವವರಿಗೆ ಸ್ಕ್ರಿಪ್ಟ್ ಮಾಡಿಕೊಡುತ್ತದೆ, ವಿಡಿಯೊ-ಆಡಿಯೊಗಳನ್ನೂ ಸೃಷ್ಟಿಸಿಕೊಡುತ್ತದೆ. ನಾವು ಸೂಕ್ತವಾದ ಪ್ರಾಂಪ್ಟ್ (ನಮಗೆ ಏನು ಬೇಕೋ ಅದರ ವಿವರಣೆ, ಸೂಕ್ತ ಕೀವರ್ಡ್ ಇರುವ ಅಕ್ಷರಪುಂಜ) ದಾಖಲಿಸಿದರೆ, ಅದಕ್ಕೆ ಅನುಗುಣವಾಗಿ ಸಹಜವೆಂಬಂತೆ ಕಾಣಿಸುವ ಚಿತ್ರಗಳನ್ನು ರಚಿಸಿಕೊಡುತ್ತದೆ.

ಇದುವರೆಗೆ ಪ್ರಯೋಗಾಲಯಗಳಿಗೆ ಸೀಮಿತವಾಗಿದ್ದ ಎಐ ಚಾಟ್‌ಬಾಟ್ ತಂತ್ರಜ್ಞಾನವು ಜನಸಾಮಾನ್ಯರಿಗೆ ಆ್ಯಪ್‌ಗಳ ರೂಪದಲ್ಲಿ, ವೆಬ್‌ಸೈಟ್‌ಗಳ ರೂಪದಲ್ಲಿ ದೊರೆಯುತ್ತಿವೆ. ಇಲ್ಲಿರುವ ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ (ಎಲ್‌ಎಲ್‌ಎಂ) ಪ್ರೋಗ್ರಾಂಗಳು ನಾವೇನು ಟೈಪ್ ಮಾಡುತ್ತೇವೋ ಅದನ್ನು ತಾನೇ ಅರಿತುಕೊಂಡು (ನಾವು ಹಿಂದೆ ಕೇಳಿದ ಪ್ರಶ್ನೆಗಳು ಅಥವಾ ಮಾಹಿತಿಯ ಆಧಾರದಲ್ಲಿ) ಸ್ವಯಂ-ಪೂರ್ಣಗೊಳಿಸುವ (ಆಟೋ-ಕಂಪ್ಲೀಟ್) ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತವೆ. ಅಂದರೆ ಮಾನವನು ಹಿಂದೆ ಊಡಿಸಿದ ಮಾಹಿತಿಯ ಆಧಾರದಲ್ಲಿಯೇ ಈ ಯಂತ್ರವು ಕೆಲಸ ಮಾಡುತ್ತದೆಯಾದರೂ, ಇದು ಮಾನವನಿಗೆ ಸರಿಸಾಟಿಯಾಗಲಾರದು. ಏಕೆಂದರೆ, ಅಂತಿಮವಾಗಿ, ಇದು ಸರಿ ಇದೆಯೇ ಇಲ್ಲವೇ ಎಂಬುದನ್ನು ಮನುಷ್ಯಜಾಣ್ಮೆಯೇ ನಿರ್ಧರಿಸಬೇಕಾಗುತ್ತದೆ.

ಚಾಟ್‌ಜಿಪಿಟಿಯ ಪ್ರಮುಖ ಪ್ರತಿಸ್ಪರ್ಧಿಗಳು

- **ಮೆಟಾ ಎಐ (Meta Llama 3):** ಇದು ಜಾಗತಿಕವಾಗಿ ಈಗ ಜನಸಾಮಾನ್ಯರ ಫೋನ್‌ಗಳಲ್ಲಿ ಲಭ್ಯವಾಗಲು ಶುರುವಾಗಿದೆ ಎಂದು ಮೆಟಾ ಸಂಸ್ಥೆಯು ಏ.18ರಂದು ಘೋಷಿಸಿದೆ. ತನ್ನ ವಾಟ್ಸ್‌ಆ್ಯಪ್, ಫೇಸ್‌ಬುಕ್, ಮೆಸೆಂಜರ್, ಇನ್‌ಸ್ಟಾಗ್ರಾಂಗಳಲ್ಲಿ ನೀವು ಕೇಳುವ ಪ್ರಶ್ನೆಗಳಿಗೆ ಉತ್ತರ, ನೀವು ಕೇಳಿದ ಚಿತ್ರ, ವಿಡಿಯೊಗಳ ಸೃಷ್ಟಿ ಇದರಿಂದ ಸಾಧ್ಯವಾಗುತ್ತದೆ. ಇದು www.meta.ai ಜಾಲತಾಣದಲ್ಲಿ ಕೂಡ ದೊರೆಯುತ್ತಿದೆ.
- **ಮೈಕ್ರೋಸಾಫ್ಟ್‌ನ ಕೋಪೈಲಟ್:** ಸಂಸ್ಥೆ ಮೈಕ್ರೋಸಾಫ್ಟ್ ಕೆಲವು ತಿಂಗಳ ಹಿಂದೆಯೇ ತನ್ನ 'ಬಿಂಗ್' ಎಂಬ ಸರ್ಚ್ ಎಂಜಿನ್ ಮೂಲಕ, ಚಾಟ್ ಜಿಪಿಟಿ-4 ನೆರವಿನಿಂದ ಎಐ ಚಾಟ್‌ಬಾಟ್ ತಂತ್ರಜ್ಞಾನವನ್ನು ಪರಿಚಯಿಸಿತ್ತು. ಇದೀಗ 'ಕೋಪೈಲಟ್' ಎಂದು ಮರುನಾಮಕರಣ ಮಾಡಿರುವ ಮೈಕ್ರೋಸಾಫ್ಟ್, ವಿಂಡೋಸ್ ಕಾರ್ಯಾಚರಣಾ ವ್ಯವಸ್ಥೆಯಲ್ಲಿ ಕಾರ್ಯಾಚರಿಸುವ ಎಲ್ಲ ಹೊಸ ಲ್ಯಾಪ್‌ಟಾಪ್ ಹಾಗೂ ಡೆಸ್ಕ್‌ಟಾಪ್ ಕಂಪ್ಯೂಟರುಗಳಿಗೆ ತಂತ್ರಾಂಶ ಅಪ್‌ಡೇಟ್ ಮೂಲಕ 'ಕೋಪೈಲಟ್' ಸುಲಭವಾಗಿ ಕೈಗೆ ಸಿಗುವಂತೆ ಮಾಡಿದೆ. ಸ್ಕ್ರೀನ್‌ನ ತಳಭಾಗದಲ್ಲಿರುವ ಟಾಸ್ಕ್‌ಬಾರ್‌ನಲ್ಲಿ ನೀಲಿ-ಹಳದಿ-ಗುಲಾಬಿ ಬಣ್ಣಗಳ ಐಕಾನ್ ಮೂಲಕ ಕೋಪೈಲಟ್‌ಗೆ ಶಾರ್ಟ್‌ಕಟ್ ಅನ್ನು ಮೈಕ್ರೋಸಾಫ್ಟ್ ಒದಗಿಸಿದೆ. ಅದನ್ನು ಕ್ಲಿಕ್ ಮಾಡಿ, ನಮಗೆ ಬೇಕಾದ ಪ್ರಶ್ನೆಗಳನ್ನು ಕೇಳಬಹುದು, ಬೇಕಾದ ಫೈಲನ್ನು ರಚಿಸಿಕೊಳ್ಳಬಹುದು. copilotai.com ಎಂಬ ಜಾಲತಾಣದಲ್ಲೂ ಇದು ಕೆಲಸ ಮಾಡುತ್ತದೆ.
- **ಗೂಗಲ್‌ನ ಜೆಮಿನಿ:** ಆರಂಭದಲ್ಲಿ ಬಾರ್ಡ್ ಹೆಸರಿನಲ್ಲಿದ್ದ ಗೂಗಲ್‌ನ ಎಐ ಸಹಾಯಕ ತಂತ್ರಜ್ಞಾನವೀಗ 'ಜೆಮಿನಿ' ಹೆಸರಿನಲ್ಲಿ ಕಾರ್ಯಾಚರಿಸುತ್ತಿದೆ. ಜೆಮಿನಿ ಎಐ ಚಾಟ್‌ಬಾಟ್ ನಮ್ಮ ಕಲ್ಪನೆಗಳಿಗೆ ಹೊಸ ಬಣ್ಣ ನೀಡಬಲ್ಲುದು, ಉತ್ಪಾದಕತೆಯನ್ನು ಹೆಚ್ಚಿಸಲು ನೆರವಾಗಬಲ್ಲದು ಮತ್ತು ಕಲ್ಪಿಸಿದ್ದಕ್ಕೆ ಜೀವ ಕೊಡಬಲ್ಲದು ಎಂದು ಗೂಗಲ್ ಹೇಳಿಕೊಳ್ಳುತ್ತಿದೆ. gemini.google.com ತಾಣದಲ್ಲಿಯೂ ಇದು ಲಭ್ಯ.
- **ಎಕ್ಸ್‌ನ ಗ್ರಾಕ್ (Grok):** ಎಕ್ಸ್ ಎಂದು ಮರುನಾಮಕರಣಗೊಂಡಿರುವ ಟ್ವಿಟರ್ ಕೂಡ ತನ್ನದೇ ಆದ ಎಐ ಚಾಟ್‌ಬಾಟ್ ಹೊರತಂದಿದ್ದು ಅದಕ್ಕೆ ಗ್ರಾಕ್ (Grok) ಎಂದು ಹೆಸರಿಸಲಾಗಿದೆ. ಆರಂಭದಲ್ಲಿ ಪ್ರೀಮಿಯಂ ಪ್ಲಸ್ ಚಂದಾದಾರರಿಗೆ ಮಾತ್ರ ಲಭ್ಯವಿದ್ದ ಈ ತಂತ್ರಜ್ಞಾನವು ಈಗ ಸಾಮಾನ್ಯ ಪ್ರೀಮಿಯಂ ಚಂದಾದಾರರಿಗೂ (ವಾರ್ಷಿಕ ಚಂದಾ ನೀಡುವ) ದೊರೆಯುತ್ತಿದೆ. 'ರಿಯಲ್ ಟೈಂ', ಎಂದರೆ ಆ ಕ್ಷಣದಲ್ಲಿನ ಬೆಳವಣಿಗೆ ಕುರಿತಾದ ಪ್ರಶ್ನೆಗಳಿಗೆ ಹೆಚ್ಚು ನಿಖರ ಉತ್ತರ ದೊರೆಯುತ್ತದೆ ಎಂಬುದು ಎಕ್ಸ್ ಹೇಳಿಕೆ. ಏಕೆಂದರೆ, ಎಕ್ಸ್‌ನಲ್ಲಿ ಹೆಚ್ಚಾಗಿ ಆ ಕ್ಷಣದ ಬೆಳವಣಿಗೆಗಳ ಮಾಹಿತಿ ದೊರೆಯುತ್ತಿದ್ದು, ಅದರ ಆಧಾರದಲ್ಲಿಯೇ ಚಾಟ್‌ಬಾಟ್ ಮಾಹಿತಿ ನೀಡುತ್ತದೆ. grok.x.ai ಜಾಲತಾಣದಲ್ಲಿಯೂ ಈ ಸೇವೆ ಲಭ್ಯ (ಹಣ ಪಾವತಿ ಮಾಡಬೇಕಾಗುತ್ತದೆ).

ಇವಿಷ್ಟು ಹೆಚ್ಚು ಜನಪ್ರಿಯವಾಗಿರುವ ಜಾಗತಿಕ ತಂತ್ರಜ್ಞಾನ ದೊಡ್ಡ ಸಂಸ್ಥೆಗಳು ಹೊರತಂದಿರುವ ಎಐ ಚಾಟ್‌ಬಾಟ್‌ಗಳಾಗಿದ್ದರೆ, ಕೆಲವು ಸಣ್ಣಪುಟ್ಟ ಸಂಸ್ಥೆಗಳು ಕೂಡ ಇದೇ ರೀತಿಯಲ್ಲಿ ನಮಗೆ ಬೇಕಾದ ಪಠ್ಯ, ಚಿತ್ರ, ವಿಡಿಯೊ, ಆಡಿಯೊ, ಕೋಡ್ ಮತ್ತಿತರ ಮಾಹಿತಿಯನ್ನು ನೀಡಬಲ್ಲವು ಮತ್ತು ಅನುವಾದವನ್ನೂ ಮಾಡಿಕೊಡಬಲ್ಲವು. ಅವುಗಳಲ್ಲಿ ಪ್ರಮುಖವಾದವೆಂದರೆ, ಯೂಚಾಟ್ (You.com ನಲ್ಲಿ YouChat), ಚಾಟ್‌ಸಾನಿಕ್, ಕ್ಲಾಡ್ (Claud by Anthrophic), ಮುರ್ಫ್ ಎಐ (Murf AI), ಕಾಪಿ ಎಐ ಹೊರತಂದಿರುವ ಚಾಟ್, ರೈಟರ್ ಡಾಟ್ ಕಾಂ (Writer.com), ಓಪನ್ ಎಐ ಪ್ಲೇಗ್ರೌಂಡ್, ಜಾಸ್ಪರ್ ಎಐ (Jasper AI) ಇತ್ಯಾದಿ. ಇವುಗಳು ಉಚಿತವಾಗಿಯೂ ಲಭ್ಯ ಮತ್ತು ಹಣ ಪಾವತಿಸಿದರೆ ಹೆಚ್ಚುವರಿ ವೈಶಿಷ್ಟ್ಯಗಳು, ಹೆಚ್ಚು ನಿಖರವಾದ ಮಾಹಿತಿ ನಮಗೆ ದೊರೆಯುತ್ತದೆ.

ಈ ಎಲ್ಲ ಚಾಟ್‌ಬಾಟ್‌ಗಳು ಅಂಗೈಯಲ್ಲೇ ಅರಮನೆ ಕಟ್ಟಬಲ್ಲ, ಕಲ್ಪಿಸಿದ್ದನ್ನು ಕೊಡುವ ಕಲ್ಪವೃಕ್ಷದಂತೆ, ಕಾಮಿಸಿದ್ದನ್ನು ನೀಡುವ ಕಾಮಧೇನುವಿನಂತೆ ಎಂದೆಲ್ಲ ಹೇಳಬಹುದಾದರೂ, ಮಾನವನ ಜಾಣ್ಮೆಗೆ ಎಂದಿಗೂ ಸರಿಸಾಟಿಯಾಗಲಾರವು. ವಿಶೇಷತಃ ಇವುಗಳು ಸೃಷ್ಟಿ ಮಾಡುವ ಪಠ್ಯ, ಚಿತ್ರ, ವಿಡಿಯೊಗಳೆಲ್ಲವೂ ಆಂಗ್ಲಭಾಷೆ ಆಧಾರಿತವಾಗಿ ಮತ್ತು ಆಂಗ್ಲ (ಯೂರೋಪ್, ಅಮೆರಿಕ ಮುಂತಾದ) ನಾಡಿನ ಆಚಾರ-ವಿಚಾರಗಳಿಗೆ ಅನುಗುಣವಾಗಿ ತಯಾರಾಗುತ್ತವೆ. ಇದುವರೆಗೂ ಭಾರತೀಯ ದೃಷ್ಟಿಕೋನದಿಂದ, ಭಾರತೀಯ ಭಾಷಾ ವೈವಿಧ್ಯದ ಆಧಾರದಲ್ಲಿ ಸೃಷ್ಟಿಯಾದ ಚಿತ್ರ, ವಿಡಿಯೊಗಳು ಕಡಿಮೆ. ❖



ಆಕ್ಟೋಪಸ್ ರೋಬಾಟ್ ಕೆಲಸಕ್ಕೆ ಸಿದ್ಧ!

ನೇಸರ ಕಾಡನಕುಪ್ಪೆ

ಆಕ್ಟೋಪಸ್‌ಗಳು ಪ್ರಕೃತಿಯ ಅದ್ಭುತ ಸೃಷ್ಟಿ ಎಂದೇ ಹೇಳಬಹುದು. ಅವುಗಳ ಕರಾಳಬಾಹುಗಳಿಗೆ ಸಿಲುಕಿದ ಜೀವಿಗಳು ಜೀವಸಹಿತ ಬದುಕಿ ಬರುವುದು ಅಸಾಧ್ಯವೇ ಸರಿ. ಆಕ್ಟೋಪಸ್‌ಗಳ ಬಾಹುಗಳಲ್ಲಿರುವ ವೃತ್ತಾಕಾರದ ಬಟ್ಟಲುಗಳಿಗೆ ನಿರ್ವಾತ ಸೃಷ್ಟಿಸಬಲ್ಲ ಸಾಮರ್ಥ್ಯವಿದ್ದು, ಅವು ಹಿಡಿದುಕೊಳ್ಳುವ ಪ್ರಾಣಿಯ ದೇಹದಿಂದ ರಕ್ತ, ಮಾಂಸ, ರಸಗಳನ್ನು ಹೀರಿಕೊಳ್ಳುವ ಶಕ್ತಿಯನ್ನು ಹೊಂದಿರುತ್ತವೆ. ಈ ಗುಣವನ್ನು ಸ್ಫೂರ್ತಿಯಾಗಿ ಸ್ವೀಕರಿಸಿರುವ ವಿಜ್ಞಾನಿಗಳು ಈಗ ಕೈಗಾರಿಕೆಗಳಲ್ಲಿ ಬಳಕೆಯಾಗುವ ಆಕ್ಟೋಪಸ್‌ನ್ನೇ ಹೋಲುವ ರೋಬಾಟ್‌ಗಳನ್ನು ಕಂಡುಹಿಡಿದಿದ್ದಾರೆ!

ಅಮೆರಿಕದ ರಾಷ್ಟ್ರೀಯ ವಿಜ್ಞಾನ ಸಂಸ್ಥೆಯ ಟಿಪ್ಪಣಿ ('ಪಿಎನ್‌ಎಎಸ್') ನಿಯತಕಾಲಿಕೆಯಲ್ಲಿ ಇಂಗ್ಲೆಂಡ್‌ನ ಬ್ರಿಸ್ಟಲ್ ರೊಬಾಟಿಕ್ಸ್ ಲ್ಯಾಬೊರೇಟರಿಯ ತಂಡವು ಸಂಶೋಧನಾ ಲೇಖನವನ್ನು ಪ್ರಕಟಿಸಿದೆ. ಈ ಲೇಖನದ ಪ್ರಕಾರ, 'ಆಕ್ಟೋಪಸ್‌ಗಳ ಬಾಹುಗಳಲ್ಲಿರುವ ಬಟ್ಟಲುಗಳಂತೆಯೇ ಕೃತಕವಾದ ಯಾಂತ್ರಿಕ ಬಟ್ಟಲುಗಳನ್ನು ಸೃಷ್ಟಿಸಿ ಅವುಗಳನ್ನು ರೋಬಾಟ್‌ಗಳಿಗೆ ಅಳವಡಿಸಬಹುದು. ಅವುಗಳ ಮೂಲಕ ಕೈಗಾರಿಕೆಗಳಲ್ಲಿ ವಿವಿಧ ಬಗೆಯ ಕ್ಲಿಷ್ಟಕರ ಕೆಲಸಗಳನ್ನು ಮಾಡಿಸಬಹುದು'.

'ಜೈವಿಕ ನಕಲು' ಎನ್ನುವುದು ಸಂಶೋಧನೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ನಿಸರ್ಗದಲ್ಲಿ ಈಗಾಗಲೇ ಇರುವ ಪ್ರಾಣಿ, ಪಕ್ಷಿ, ಕೀಟಗಳ ದೇಹರಚನೆ, ಗುಣಲಕ್ಷಣಗಳನ್ನು ನಕಲು ಮಾಡಿ ಸಂಶೋಧನೆಯನ್ನು ಮಾಡುವ ವಿಧಾನವಿದು. ಉದಾಹರಣೆಗೆ 'ಏರೋಪ್ಲೇನ್ ಚಿಟ್ಟೆ'ಯನ್ನು ನೋಡಿಯೇ ಹೆಲಿಕಾಪ್ಟರ್ ಅನ್ನು ರಚಿಸಿರುವುದು. ಇದೀಗ ಆಕ್ಟೋಪಸ್‌ನ ಸರದಿ. ಕೈಗಾರಿಕೆಗಳಲ್ಲಿ ಈಗಾಗಲೇ ನಿರ್ವಾತ ಬಟ್ಟಲುಗಳ ಮೂಲಕ ದ್ರಾವಣಗಳನ್ನು ಹೀರುವ ವಿಧಾನ ಇದೆಯಾದರೂ, ಅದನ್ನು ಆಕ್ಟೋಪಸ್‌ನ ಮಾದರಿಯಲ್ಲಿ ರೋಬಾಟ್ ಒಂದಕ್ಕೆ ಅಳವಡಿಸಿ ಅದರ ಮೂಲಕ ಕೆಲಸ ಮಾಡಿಸುತ್ತಿರುವುದು ಇದೇ ಮೊದಲು ಎನ್ನಬಹುದು.

> ಪ್ರಾಣಿ, ಪಕ್ಷಿ, ಕೀಟಗಳ ದೇಹರಚನೆ, ಗುಣಲಕ್ಷಣಗಳನ್ನು ನಕಲು ಮಾಡಿ ಸಂಶೋಧನೆಯನ್ನು ಮಾಡುವ ವಿಧಾನವಿದು.

ಬ್ರಿಸ್ಟಲ್ ರೊಬಾಟಿಕ್ಸ್ ಲ್ಯಾಬೊರೇಟರಿಯ ಮುಖ್ಯ ಸಂಶೋಧಕ ಟಿಯಾಂಕಿ ಯೂ ಅವರು, 'ರೋಬಾಟ್‌ಗಳಿಗೆ ಚಲನೆ ಅತಿ ಮುಖ್ಯವಾದ ಕೆಲಸ. ರೋಬಾಟ್‌ಗಳು ನಿಂತಲ್ಲೇ ಕಾರ್ಯನಿರ್ವಹಿಸುವುದು ಅವುಗಳ ಸಾಮರ್ಥ್ಯಕ್ಕೆ ವಿರುದ್ಧವಾದುದು ಎಂದೇ ವ್ಯಾಖ್ಯಾನಿಸಲ್ಪಡುತ್ತದೆ. ಕೈಗಾರಿಕೆಗಳಲ್ಲಿ ರೋಬಾಟ್‌ಗಳು ಚುರುಕಾಗಿ ಓಡಾಡುತ್ತ, ಮಾನವನು ಹೋಗಲಾರದ ಕಡೆ, ಅತಿ ವೇಗವಾಗಿ ಸಂಚರಿಸುತ್ತ, ಅತಿ ಬೇಗನೇ ಕೆಲಸ ಮಾಡಿ ಮುಗಿಸಬಲ್ಲ ಪಾತ್ರವನ್ನು ವಹಿಸಬೇಕು. ಉದಾಹರಣೆಗೆ, ಕಚ್ಚಾ ತೈಲದ ಬೃಹದಾಕಾರದ ಟ್ಯಾಂಕರ್‌ಗಳಿದ್ದಲ್ಲಿ ಅದರಿಂದ ತೈಲವನ್ನು ಹೀರಿ ಮತ್ತೊಂದೆಡೆಗೆ ಸಾಗಿಸಲು ಈಗ ಪಂಪ್ ಹಾಗೂ ಪೈಪ್‌ಲೈನ್‌ಗಳ ಬಳಕೆ ಇದೆ. ಅವುಗಳ ಅಳವಡಿಕೆ ಹಾಗೂ ನಿರ್ವಹಣೆ ಅತಿ ದುಬಾರಿ. ಇದರ ಬದಲು ಈ ಟ್ಯಾಂಕರುಗಳ ಒಳಗೇ ಹೋಗಿ ತೈಲವನ್ನು ಹೀರಿ, ನಿಗದಿತ ಜಾಗಕ್ಕೆ ತಲುಪಿ ಅಲ್ಲಿ ತೈಲವನ್ನು ತುಂಬುವ ಕೆಲಸವನ್ನು ಈ ಬಗೆಯ ರೋಬಾಟ್‌ಗಳಿಂದ ಮಾಡಿಸಬಹುದು' ಎಂದು ವ್ಯಾಖ್ಯಾನಿಸಿದ್ದಾರೆ.

ಅಲ್ಲದೇ, ಆಕ್ಟೋಪಸ್‌ಗಳು ಬದುಕುವುದು ನೀರಿನ ಒಳಗೆ ತಾನೇ. ಅಂತೆಯೇ, ದ್ರಾವಣಗಳಿರುವ ಟ್ಯಾಂಕರ್‌ಗಳ ಒಳಗೇ ಶಾಶ್ವತವಾಗಿ ಆಕ್ಟೋಪಸ್ ಮಾದರಿಯ ರೋಬಾಟ್‌ಗಳನ್ನು ಇರಿಸಿ ಅಲ್ಲಿಯೇ ಅವು ಕಾರ್ಯ ನಿರ್ವಹಿಸುವಂತೆ ಮಾಡುವ ಅವಕಾಶವಿದೆ. ರೋಬಾಟ್‌ಗಳ ಕಾರ್ಯನಿರ್ವಹಣೆಗೆ ಬೇಕಾದ ವಿದ್ಯುತ್, ಬ್ಯಾಟರಿ ಇತ್ಯಾದಿ ನಿರ್ವಹಣೆ ಇರುತ್ತದೆ. ಆದರೆ, ಕಾಲಾಂತರದಲ್ಲಿ ಸುಸ್ಥಿರತೆ ಸಾಧಿಸಬಲ್ಲ, ತಮ್ಮನ್ನು ತಾವೇ ನಿರ್ವಹಿಸಿಕೊಳ್ಳಬಲ್ಲ ರೋಬಾಟ್‌ಗಳನ್ನೂ ನಿರ್ಮಿಸುವುದು ಸಾಧ್ಯ ಎಂದು ಟಿಯಾಂಕಿ ಅಭಿಪ್ರಾಯಪಟ್ಟಿದ್ದಾರೆ.

ತೈಲ ಸಂಸ್ಕರಣ ಘಟಕಗಳು, ಅಪಾಯಕಾರಿ ಅನಿಲ ಅಥವಾ ದ್ರಾವಣ ಸಂಸ್ಕರಣಾ ಘಟಕಗಳಲ್ಲಿ ಕಾರ್ಮಿಕರು ಬಹು ಅಪಾಯಕಾರಿ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ರೋಬಾಟ್‌ಗಳು ಈ ಅಪಾಯವನ್ನು ತಪ್ಪಿಸುವ ನಿಟ್ಟಿನಲ್ಲಿ ಪ್ರಯೋಜನಕಾರಿಯಾಗಲಿವೆ. ವಿಷಗಾಳಿ, ವಿಷ ನೀರು ಮುಂತಾದ ಅಪಾಯಕಾರಿ ವಾತಾವರಣದಲ್ಲಿ ರೋಬಾಟ್‌ಗಳು ಯಾವುದೇ ರೀತಿಯ ತೊಂದರೆಗೆ ಒಳಗಾಗದಂತೆ ಕಾರ್ಯನಿರ್ವಹಿಸುತ್ತದೆ. ಕಾರ್ಮಿಕರು ಈ ಯಂತ್ರಗಳನ್ನು ನಿರ್ವಹಣೆ ಅಥವಾ ಉಸ್ತುವಾರಿ ಮಾಡಿದರಷ್ಟೇ ಸಾಕು ಎಂದು ವಿಶ್ಲೇಷಿಸಿದ್ದಾರೆ.

ಇದು ಕೇವಲ ದ್ರಾವಣ ನಿರ್ವಹಣೆಗಷ್ಟೇ ಸಹಾಯಕಾರಿಯಲ್ಲ. ಅತಿ ತೂಕದ ವಸ್ತುಗಳನ್ನು ಎತ್ತಬಲ್ಲ ಕಾರ್ಯಾಚರಣೆಗಳಲ್ಲೂ ಇದು ಕೆಲಸಕ್ಕೆ ಬರಲಿದೆ. ನಿರ್ವಾತ ಬಟ್ಟಲುಗಳನ್ನು ಬಳಸಿಕೊಂಡು, ಭಾರದ ವಸ್ತುಗಳನ್ನು ಎತ್ತುವ ತಂತ್ರಜ್ಞಾನವನ್ನು ಈಗಾಗಲೇ ಬಳಕೆಯಲ್ಲಿದೆ. ಆದರೆ, ಇಲ್ಲಿನ ಆಕ್ಟೋಪಸ್ ರೋಬಾಟ್‌ನ ಬಾಹುಗಳಲ್ಲಿ ಬಹುಸಂಖ್ಯೆಯಲ್ಲಿ ಈ ನಿರ್ವಾತ ಬಟ್ಟಲುಗಳು ಇರುವ ಕಾರಣ ತೂಕ ಎತ್ತುವ ಸಾಮರ್ಥ್ಯ ಹೆಚ್ಚುತ್ತದೆ. ಅಲ್ಲದೇ, ಆಕಸ್ಮಿಕವಾಗಿ ಅವಘಡಗಳು ಆಗುವ ಸಾಧ್ಯತೆಗಳೂ ಕಡಿಮೆ ಇರಲಿವೆ ಎಂದು ಈ ರೋಬಾಟ್‌ನ ವಿಶೇಷಣವನ್ನು ಸಂಶೋಧಕರು ವಿವರಿಸಿದ್ದಾರೆ. ❖

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

NEET CHEMISTRY

31) An incorrect statement with respect to SN1 and S_N^2 mechanism for alkyl halide is

a) A strong nucleophile the rate of favours S_N^2 reaction
b) Competing reaction for an SN^2 reaction is rearrangement
c) SN^1 reactions can be catalyzed by some Lewis acids
d) A weak nucleophile and a protic solvent increase the rate of favours SN^1 reaction

Ans- (b)
Competing reaction for an SN^2 reaction is rearrangement.

32) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

33) H_2O_2 cannot oxidize..............

(a) Na_2SO_3 (b) KI
(c) PbS (d) O_3

Ans:- d
Expln:- O_3 is a stronger oxidizing agent than H_2O_2.

34) The set of quantum numbers for the outermost electron for copper in its ground state is ....

a) 3, 2 , 2 , + ½ b) 4, 1, 1, + ½
c) 4 , 2 , 2 , + ½ d) 4 , 0 , 0 , + ½

Ans:- d

35) For the reversible reaction $A_{(g)} + B_{(g)} \rightleftharpoons C_{(g)} + D_{(g)};\ \Delta G^0 = -350\,kJ$
Which of the following statements is true?

a) Equilibrium constant is greater than 1
b) The entropy change is negative
c) The reaction is thermodynamically not feasible
d) The reaction should be instantaneous

Ans:- a

36) Copper is extracted from copper pyrites by heating in a Bessemer converter. The method is based on the principle that

a) Iron has less affinity for oxygen than sulphur at high temperature.
b) Sulphur has less affinity for oxygen at high temperature.
c) Copper has more affinity for oxygen than sulphur at high temperature.
d) Copper has less affinity for oxygen than sulphur at high temperature.


Ans: (C) Copper has more affinity for oxygen than sulphur at high temperature.

37) Sucrose is NOT a reducing sugar since

a) it is chemically stable
b) it contains no free aldehydes or keto group adjacent to a CH-OH group
c) it is built up of a fructose unit
d) it is optically active

Ans:- b

38) Which amongst the following options is correct graphical representation of Boyle's Law?



Ans:- C
Expln:- PV = nRT
P = nRT.(1/V)
Plot of P vs (1/V) would be straight line passing through origin having slope = nRT. At high temperatures, P vs (1/V) would have greater slope.

39) Which of the following will be able to show geometrical isomerism?

a) MA_2B_2 – Tetrahedral (b) MABCD – Tetrahedral
c) MA_3B – Square planar
d) MABCD – Square planar

Ans: **d**
Expln:- MABCD – Square planar complexes show 3 geometrical isomers.

40) Which one of the following is NOT true regarding electromeric effect?

a) It results in the appearance of partial charges on the carbon atoms
b) It is a temporary effect
c) It operates on multiple bonds
d) It requires an attacking reagent

Ans:- a

41) An organic compound 'A' burns with a sooty flame. It is negative towards Tollen's reagent test and positive for Borsche's reagent test. The compound 'A' is -

a) Benzaldehyde b) Acetophenone
c) Acetone d) Salicylic acid

Ans:- b

(Contd…..)

II PUC BIOLOGY

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MOLECULAR BASIS OF INHERITANCE

1. Who proposed the Double helix model of DNA?
Ans:- James D. Watson & F.H.C. Crick proposed the Double helix model of DNA in 1953.

2. What is a gene?
Ans: A gene is a segment of DNA that has complete information to synthesise a polypeptide or even a specific DNA.

3. What is the function of a regulator gene?
Ans:- The function of a regulator gene is to code for a protein that controls the expression of other genes usually at the level of transcription.

4. What is the chemical composition of DNA?
Ans:- DNA is made up of deoxyribose sugars, phosphoric acid molecules and nitrogenous bases which are purines and pyramidines.

5. Who found out the presence of the phosphoric acid and deoxyribose sugar in DNA?
Ans:- Levene found out the presence of the phosphoric acid and deoxyribose sugar in DNA.

6. Mention the purine bases present in DNA?
Ans:- The purine bases present in DNA are - adenine (A) and guanine (G).

7. Mention the pyramidine bases present in DNA?
Ans:-The pyramidine bases present in DNA arecytosine (C) and thymine (T).

8. Who noticed that purines are always equal to the pyramidines?
Ans:- Erwin Chargaff measured the quantity of the bases in DNA and noticed that A = T, and so concluded that purines are always equal to the pyramidines.

9. Mention the nucleosides present in DNA?
Ans:- The nucleosides of DNA are adenosine, guanosine, thymidine and cytidine.

10. What is the function of the enzyme Ligase?
Ans:- Ligase is an enzyme that catalyses the formation of a covalent bond between the free ends of two nucleic acids.

11. Into how many kinds RNA are classified?
Ans:- RNA are classified into four types, based on the physical nature and function. They are – Genetic RNA, Messenger RNA or mRNA, Transfer RNA or tRNA, Ribosomal RNA or rRNA.

12. What is the chemical composition of RNA?
Ans:- RNA is made up of ribose sugars, phosphoric acid molecules and nitrogenous bases which are purines and pyramidines.

13. Mention the purine bases present in RNA?
Ans:- Adenine (A) and guanine (G).

14. Mention the pyramidine bases present in RNA?
Ans:- Cytosine (C) and Uracil (U).

15. Mention the nucleosides present in RNA?
Ans:- The nucleosides of RNA are adenosine, guanosine, uridine and cytidine.

16. What is the function of the enzyme Protease?
Ans:- The function of the enzyme Protease is to catalyse the cleavage of a polypeptide or protein into smaller polypeptides.

17. What is Unique DNA?
Ans:- Unique DNA are those DNA segments whose base sequences are present only in single copy per genome i.e., their base sequences are not repeated in the genome.

18. What is Pallindromic DNA?
Ans:- Pallindromic DNA is a segment of DNA in which the base pair sequence reads the same in both directions from a point of symmetry.

19. What is Genetic RNA?
Ans:- Genetic RNAs are single stranded polynucleotide chains or rings with 5' phosphate – 3' –OH polarity. They exist in virus as single copy or two copy RNA. They do show the secondary structure and are always associated with capsid proteins. As these RNAs combine, replicate, undergo mutation and recombinations, they are called Genetic RNA.

20. Where is Genetic RNA found?
Ans:- Genetic RNA is found in some viruses – such as Tobacco Mosaic Virus (TMV), Rous sarcoma virus (RSV), Human AIDS virus, influenza virus etc.

21. What is a nucleoside ?
Ans:- A Nucleoside is a ribose or deoxyribose molecule attached to any purine or pyramidine base through the first carbon atom of the sugar.

22. What is a nucleotide ?
Ans:- A nucleotide is a building block of the nucleic acid having a pentose sugar, a nitrogenous base and phosphoric acid.

23. Which RNA carries amino acid to the ribosome during protein synthesis?
Ans:- Transfer RNA (tRNA)s carry amino acid to the ribosome during protein synthesis.

24. Which RNA carries the message of the DNA for protein synthesis?
Ans:- Messenger RNA (mRNA)s carry the message of the DNA in the form of triplet codons for protein synthesis.

(Contd……)

ಬುಧವಾರ, ಏಪ್ರಿಲ್ 24, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚುನಾವಣಾ ಪ್ರಚಾರ ಜೋಧಪುರ ವಿಮಾನ ನಿಲ್ದಾಣದಲ್ಲಿ ನಟ, ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಮಂಗಳವಾರ ಕಾಣಿಸಿದ್ದು ಹೀಗೆ...



ಆಳ-ಅಗಲ
ಚುನಾವಣಾ ಚಾಣಾಕ್ಷರಿಗೆ ಈಗ ಬಲು ಬೇಡಿಕೆ

'ಪ್ರತಿಕೂಲ ಹವಾಮಾನದಿಂದ ಹಣದುಬ್ಬರ ಏರಿಕೆ' 6

ರಿಲಯನ್ಸ್‌ಗೆ ₹28,607 ಕೋಟಿ ನಷ್ಟ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,738	22,368	₹73,790 (ಬೆಂಗಳೂರು)	₹82,300 (ಬೆಂಗಳೂರು)	83.32

ಅಮೆರಿಕದಲ್ಲಿ ಇಬ್ಬರು ಭಾರತೀಯರ ಸಾವು

ವಾಷಿಂಗ್ಟನ್(ಪಿಟಿಐ): ಅಮೆರಿಕದ ಅರಿಜೋನಾ ರಾಜ್ಯದ ಲೇಕ್ ಪ್ಲೆಸಂಟ್ ಸಮೀಪ ಎರಡು ಕಾರುಗಳ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಇಬ್ಬರು ಭಾರತೀಯ ವಿದ್ಯಾರ್ಥಿಗಳು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿವೇಶ್ ಮುಕ್ಕಾ (19) ಹಾಗೂ ಗೌತಮ್ ಪಾರ್ಸಿ (19) ಮೃತರು. ಅರಿಜೋನಾ ಸ್ಟೇಟ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಾಗಿದ್ದ ಇಬ್ಬರು ತೆಲಂಗಾಣದವರು ಎಂದು ತಿಳಿಸಿದ್ದಾರೆ.

'ಏಪ್ರಿಲ್ 20ರಂದು ಲೇಕ್ ಪ್ಲೆಸಂಟ್ ಬಳಿ ಕ್ಯಾಸಲ್ ಸ್ಪ್ರಿಂಗ್ಸ್ ರೋಡ್‌ನಲ್ಲಿ ಈ ಅಪಘಾತ ಸಂಭವಿಸಿದೆ. ಈ ಕುರಿತು ತನಿಖೆ ನಡೆಯುತ್ತಿದೆ' ಎಂದು ತಿಳಿಸಿದ್ದಾರೆ.

'ಮೃತ ವಿದ್ಯಾರ್ಥಿಗಳ ಕುಟುಂಬಗಳಿಗೆ ನೆರವು ನೀಡಲು ವಿಶ್ವವಿದ್ಯಾಲಯ ಎಲ್ಲ ಪ್ರಯತ್ನ ಮಾಡುತ್ತಿದೆ. ಈ ಸಂಬಂಧ, ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಕೇಂದ್ರವು ವಿದ್ಯಾರ್ಥಿಗಳ ಆಪ್ತಸಮಾಲೋಚನಾ ಸೇವೆಗಳ ವಿಭಾಗ, ವಿದ್ಯಾರ್ಥಿ ಪ್ರತಿನಿಧಿಗಳು ಹಾಗೂ ಮೃತರ ಸ್ನೇಹಿತರೊಂದಿಗೆ ನಿರಂತರ ಸಂಪರ್ಕದಲ್ಲಿದೆ' ಎಂದು ಅರಿಜೋನಾ ಸ್ಟೇಟ್ ವಿಶ್ವವಿದ್ಯಾಲಯ ತಿಳಿಸಿದೆ.

ಅಖಾಡದಲ್ಲಿ ನಟ–ನಟಿಯರ ಖದರು

ನವದೆಹಲಿ: ಲೋಕಸಭಾ ಚುನಾವಣಾ ಕಣಕ್ಕೆ ಹುರಿಯಾಳುಗಳಾಗಿ ಧುಮುಕಿರುವ ಹೆಸರಾಂತ ನಟ ನಟಿಯರು ಕಣದ ರಂಗನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ತಾರೆಯರು ದೊಡ್ಡ ಬಂಗಲೆ ಹಾಗೂ ಹವಾ ನಿಯಂತ್ರಿತ ಕಾರುಗಳನ್ನು ಬದಿಗಿಟ್ಟು ನಗರ ಹಾಗೂ ಹಳ್ಳಿಗಳಲ್ಲಿ ಬಿರು ಬಿಸಿಲಿನಲ್ಲಿ ಗೆಲುವಿಗಾಗಿ ಬೆವರು ಹರಿಸುತ್ತಿದ್ದಾರೆ. 5

ಖಾಸಗಿ ಕಂಪನಿಗಳ ನಿಲುವಿಗೆ ಹೈಕೋರ್ಟ್ ಕೆಂಡಾಮಂಡಲ

'ಕನ್ನಡಿಗರಿಗೆ ಜವಾನ ಹುದ್ದೆಯೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರ ನೆಲ-ಜಲವನ್ನು ಪಡೆದು ಅಲ್ಲಿ ಅಧಿಕಾರಿಗಳ ಹುದ್ದೆಗಳಿಗೆ ಕನ್ನಡಿಗರನ್ನು ನೇಮಿಸದೇ ಜವಾನ-ಜಾಡಮಾಲಿಯಂತಹ ಉದ್ಯೋಗಗಳಿಗೆ ಮಾತ್ರ ಕನ್ನಡಿಗರನ್ನು ನೇಮಕ ಮಾಡಿದರೆ ಉದ್ಯೋಗ ಕಲ್ಪಿಸಿದಂತಲ್ಲ. ಎಲ್ಲಾ ಹಂತದ ಹುದ್ದೆಗಳಿಗೂ ಕನ್ನಡಿಗರಿಗೆ ಅವಕಾಶ ಕಲ್ಪಿಸಬೇಕು' ಎಂದು ಕನ್ನಡೇತರ ಕಂಪನಿ ಸ್ಥಾಪಕರ ನಿಲುವಿಗೆ ಗಟ್ಟಿ ಧ್ವನಿಯಲ್ಲಿ ಹೈಕೋರ್ಟ್ ಚಾಟಿ ಬೀಸಿದೆ.

ತನಗೆ ಮಂಜೂರಾಗಿದ್ದ ನಾಲ್ಕು ಎಕರೆ ಜಮೀನನ್ನು ರದ್ದುಪಡಿಸಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕ್ರಮವನ್ನು ಪ್ರಶ್ನಿಸಿ ಐಡಿಬಿಐ ಬ್ಯಾಂಕ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಬ್ಯಾಂಕ್, ಕನ್ನಡಿಗರಿಗೆ ಉದ್ಯೋಗ ನೀಡಲು ಹಿಂದೇಟು ಹಾಕಿರುವ ಅಂಶವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, 'ಬರಿದೇ 'ಸಿ' ಹಾಗೂ 'ಡಿ' ವೃಂದದ ಉದ್ಯೋಗಗಳನ್ನು ಕನ್ನಡಿಗರಿಗೆ ನೀಡುವುದನ್ನು ಹೇಗೆ ತಾನೇ ಒಪ್ಪಲು ಸಾಧ್ಯ' ಎಂದು ಖಾರವಾಗಿ ಪ್ರಶ್ನಿಸಿತಲ್ಲದೆ 'ಎಲ್ಲಾ ಹಂತದ ಹುದ್ದೆಗಳಲ್ಲೂ ಕನ್ನಡಿಗರಿಗೆ ಅವಕಾಶ ಕಲ್ಪಿಸಬೇಕು' ಎಂದು ಎಚ್ಚರಿಸಿತು.

ಜಮೀನು ಹಂಚಿಕೆ ಮಾಡಿ ನೀಡಲಾಗಿದ್ದ ಮಂಜೂರಾತಿ ಪತ್ರವನ್ನು ರದ್ದುಪಡಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಕೆಐಎಡಿಬಿ ಮತ್ತು ಐಡಿಬಿಐ ಬ್ಯಾಂಕಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.



ಮುಖ್ಯಾಂಶಗಳು

- ಸಂಸ್ಥೆಯಲ್ಲಿ ಕನ್ನಡಿಗರಿಗೆ ಶೇ 80ರಷ್ಟು ಉದ್ಯೋಗ ನೀಡುವುದಾಗಿ ಪ್ರಮಾಣಪತ್ರ ಸಲ್ಲಿಸಿ
- ಐಡಿಬಿಐ ಬ್ಯಾಂಕ್‌ಗೆ ನ್ಯಾಯಪೀಠದ ಖಡಕ್ ತಾಕೀತು

ಪ್ರಕರಣವೇನು?:

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿ ಕೆಐಎಡಿಬಿ ಅಭಿವೃದ್ಧಿಪಡಿಸಿರುವ 'ಬೆಂಗಳೂರು ಹಾರ್ಡ್‌ವೇರ್ ಪಾರ್ಕ್‌ನಲ್ಲಿ 4.5 ಎಕರೆಯನ್ನು ಐಡಿಬಿಐ ಬ್ಯಾಂಕಿಗೆ 2013ರ ಫೆಬ್ರುವರಿ 15ರಂದು ಹಂಚಿಕೆ ಮಾಡಲಾಗಿತ್ತು. ಬ್ಯಾಂಕಿನ ರೀಜನಲ್ ಪ್ರೊಸೆಸಿಂಗ್ ಯೂನಿಟ್, ಕಾಲ್ ಸೆಂಟರ್, ಸಿಬ್ಬಂದಿ ವಸತಿ ನಿಲಯ ಸೇರಿದಂತೆ ಇನ್ನಿತರ ಕಟ್ಟಡ ನಿರ್ಮಾಣಕ್ಕೆ ಈ ಜಮೀನು ಹಂಚಿಕೆ ಮಾಡಲಾಗಿತ್ತು. ಎರಡು ವರ್ಷಗಳಲ್ಲಿ ಯೋಜನೆ ಜಾರಿಗೊಳಿಸಬೇಕು. ಅಧಿಕಾರಿ ಹುದ್ದೆಗಳಿಗೆ ಕನ್ನಡಿಗರನ್ನು ನೇಮಿಸಬೇಕು ಎಂದು ಜಮೀನು ಹಂಚಿಕೆ ಸಮಯದಲ್ಲಿ ಕೆಐಎಡಿಬಿ ಷರತ್ತು ವಿಧಿಸಿತ್ತು. ಹತ್ತು ವರ್ಷಗಳಾದರೂ ಯೋಜನೆ ಜಾರಿ ಮಾಡದ ಹಿನ್ನೆಲೆಯಲ್ಲಿ ಜಮೀನು ಹಂಚಿಕೆ ಪತ್ರ ರದ್ದುಪಡಿಸಿ 2023ರ ಜುಲೈ 14ರಂದು ಕೆಐಎಡಿಬಿ ಆದೇಶಿಸಿತ್ತು.

ಜಮೀನು ಹಂಚಿಕೆ ಪತ್ರ ರದ್ದುಪಡಿಸಿದ ಕ್ರಮವನ್ನು ಪ್ರಶ್ನಿಸಿ ಬ್ಯಾಂಕ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತ್ತು. ಆ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ 2024ರ ಮಾರ್ಚ್ 6ರಂದು ವಜಾಗೊಳಿಸಿತ್ತು. ಅಂತೆಯೇ, ಇಡೀ ಯೋಜನೆಯಲ್ಲಿ ವೈಯಕ್ತಿಕ ಅಧಿಕಾರಿ ಹುದ್ದೆಯೊಂದಕ್ಕೆ ಕನ್ನಡಿಗರನ್ನು ನೇಮಕ ಮಾಡಬೇಕೆಂಬ ಷರತ್ತು ಪಾಲಿಸದೇ ಹೋದದ್ದಕ್ಕೆ ಏಕಸದಸ್ಯ ನ್ಯಾಯಪೀಠ ಗಂಭೀರ ಆಕ್ಷೇಪ ವ್ಯಕ್ತಪಡಿಸಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಬ್ಯಾಂಕ್ ಮೇಲ್ಮನವಿ ಸಲ್ಲಿಸಿದೆ.

ಗಳಗನಾಥರ ಸ್ಮರಿಸಿದ ನ್ಯಾಯಮೂರ್ತಿ

ವಿಚಾರಣೆ ವೇಳೆ, 'ಕನ್ನಡಿಗರಿಗೆ ಕನ್ನಡಿಗರಿಂದ ಆದಷ್ಟು ಅನ್ಯಾಯ ಬೇರೆಯವರಿಂದ ಆಗಿಲ್ಲ' ಎಂಬ ಕನ್ನಡ ಕಾದಂಬರಿ ಪಿತಾಮಹ ಗಳಗನಾಥರ ಮಾತುಗಳನ್ನು ಪ್ರಸ್ತಾಪಿಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು, 'ಇಂತಹ ಅನ್ಯಾಯ ಬೇರೆಲ್ಲೂ ಆಗಿಲ್ಲ. ಬ್ರಿಟಿಷ್ ಅಧಿಕಾರಿ ರಾಬರ್ಟ್ ಕ್ಲೈವ್ ಸ್ಥಳೀಯರನ್ನು ಗ್ರೂಪ್ ಸಿ ಹುದ್ದೆಗೆ ನೇಮಿಸುತ್ತಿದ್ದರು. ಅದೇ ರೀತಿ ನೀವೂ ವರ್ತಿಸುವಂತಾಗಬಾರದು' ಎಂದು ಬ್ಯಾಂಕ್ ಪರ ವಕೀಲರಿಗೆ ಕಟುವಾಗಿ ತಾಕೀತು ಮಾಡಿದರು.



ಎನ್.ವಿ.ಅಂಜಾರಿಯಾ



ಕೃಷ್ಣ ಎಸ್.ದೀಕ್ಷಿತ್

ಕನ್ನಡಿಗರ ನೆಲ-ಜಲವನ್ನು ಪಡೆದು ಅವರಿಗೆ ಉದ್ಯೋಗ ನೀಡದಿದ್ದರೆ ಹೇಗೆ? ಉದ್ಯೋಗ ನೀಡದೇ ಹೋದರೆ ಕನ್ನಡಿಗರ ಆತ್ಮಸಾಕ್ಷಿಗೆ ಚುಚ್ಚಿದಂತಾಗಲಿದೆ

ಮುಖ್ಯ ನ್ಯಾಯಮೂರ್ತಿ **ಎನ್.ವಿ.ಅಂಜಾರಿಯಾ ಹಾಗೂ** ನ್ಯಾಯಮೂರ್ತಿ **ಕೃಷ್ಣ ಎಸ್.ದೀಕ್ಷಿತ್**



ಹನುಮನ ಭಕ್ತಿ...

ಕಲಬುರಗಿಯ ಕೋರಂಟಿ ಹನುಮ ಮಂದಿರದಲ್ಲಿ ಮಂಗಳವಾರ ಹನುಮ ಜಯಂತಿ ಪ್ರಯುಕ್ತ ಆಂಜನೇಯ ವೇಷಧಾರಿ ಬಾಲಕನ ಪಾದಕ್ಕೆ ಮಹಿಳೆಯೊಬ್ಬರು ಭಕ್ತಿಯಿಂದ ನಮಸ್ಕರಿಸಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ತಾಪಿ ನದಿಯಿಂದ ಪಿಸ್ತೂಲ್ ವಶಕ್ಕೆ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ನಿವಾಸದ ಎದುರು ಭಾನುವಾರ ನಡೆದಿದ್ದ ಗುಂಡಿನ ದಾಳಿಯಲ್ಲಿ ಬಳಸಿದ್ದು ಎನ್ನಲಾದ ಎರಡು ಪಿಸ್ತೂಲ್‌ಗಳು, ಮ್ಯಾಗಜಿನ್‌ಗಳು ಮತ್ತು ಗುಂಡುಗಳು ಗುಜರಾತ್‌ನ ತಾಪಿ ನದಿಯಲ್ಲಿ ಪತ್ತೆಯಾಗಿವೆ.

'ಎನ್‌ಕೌಂಟರ್ ಖ್ಯಾತಿ'ಯ ಹಿರಿಯ ಪೊಲೀಸ್ ಇನ್‌ಸ್ಪೆಕ್ಟರ್ ದಯಾನಾಯಕ್ ಸೇರಿದಂತೆ 12 ಅಧಿಕಾರಿಗಳ ತಂಡವು ಪಿಸ್ತೂಲ್ ಹುಡುಕುವ ಕಾರ್ಯಾಚರಣೆಯ ಉಸ್ತುವಾರಿ ವಹಿಸಿತ್ತು. ಸ್ಕೂಬಾ ಡೈವರ್‌ಗಳ ನೆರವಿನೊಂದಿಗೆ ಈ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಭಾನುವಾರ ಮುಂಬೈನ ಬಾಂದ್ರಾದಲ್ಲಿ ನಟ ಸಲ್ಮಾನ್ ಖಾನ್ ವಾಸವಿರುವ 'ಗೆಲಾಕ್ಸಿ' ವಸತಿ ಸಮುಚ್ಚಯದ ಬಳಿ ಗುಂಡಿನ ದಾಳಿ ನಡೆಸಿ ಬೈಕ್‌ನಲ್ಲಿ ಪರಾರಿಯಾಗಿದ್ದ ಆರೋಪಿಗಳಾದ ವಿಕ್ಕಿ ಗುಪ್ತಾ (24) ಮತ್ತು ಸಾಗರ್ ಪಾಲ್‌ನನ್ನು (21) ಗುಜರಾತ್‌ನ ಭುಜ್ ಪಟ್ಟಣದ ದೇವಸ್ಥಾನದ ಆವರಣದಲ್ಲಿ ಮುಂಬೈ ಮತ್ತು ಕಚ್ ಪೊಲೀಸ್ ತಂಡಗಳು ಜಂಟಿ ಕಾರ್ಯಾಚರಣೆ ನಡೆಸಿ ಏಪ್ರಿಲ್ 16ರಂದು ಬಂಧಿಸಿದ್ದವು.



ಸಲ್ಮಾನ್ ಖಾನ್

ಆ ಬಳಿಕ ಹೆಚ್ಚಿನ ವಿಚಾರಣೆಗಾಗಿ ಈ ಇಬ್ಬರು ಆರೋಪಿಗಳನ್ನು ಮುಂಬೈ ಪೊಲೀಸರ ವಶಕ್ಕೆ ನೀಡಲಾಗಿತ್ತು. ವಿಚಾರಣೆ ವೇಳೆ ತಾವು ಮುಂಬೈನಿಂದ ಸೂರತ್‌ಗೆ ರಸ್ತೆಮಾರ್ಗವಾಗಿ ಬಂದಿದ್ದು, ಅಲ್ಲಿಂದ ಭುಜ್‌ಗೆ ರೈಲಿನಲ್ಲಿ ತೆರಳುವಾಗ ಗುಂಡಿನ ದಾಳಿಗೆ ಬಳಸಿದ ಆಯುಧವನ್ನು 'ತಾಪಿ' ನದಿಯಲ್ಲಿ ಎಸೆದಿರುವುದಾಗಿ ಆರೋಪಿಗಳು ಹೇಳಿದ್ದರು ಎಂದು ಮೂಲಗಳು ತಿಳಿಸಿವೆ.

ಸಮಾಜದಲ್ಲಿ ಭೀತಿಯನ್ನು ಹುಟ್ಟುಹಾಕುವುದೇ ಸಲ್ಮಾನ್ ಖಾನ್ ಅವರ ನಿವಾಸದ ಎದುರು ಗುಂಡಿನ ದಾಳಿಯ ಹಿಂದಿನ ಉದ್ದೇಶವಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಈ ಪ್ರಕರಣದಲ್ಲಿ ಕಾರಾಗೃಹ-ದಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಮತ್ತು ಆತನ ಸೋದರ ಅನ್ಮೋಲ್ ಬಿಷ್ಣೋಯ್ ಅವರು ಸಹ ಆರೋಪಿಗಳಾಗಿದ್ದಾರೆ. ದಾಳಿಕೋರರಾದ ಗುಪ್ತಾ ಮತ್ತು ಪಾಲ್‌ಗೆ ಬಿಷ್ಣೋಯ್ ಸೋದರರು ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಕಾಂಗ್ರೆಸ್ ವಿರುದ್ಧ ಮತ್ತೆ ಟೀಕಾಪ್ರಹಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ

'ಮೀಸಲಾತಿ ಕಸಿದು ಮುಸ್ಲಿಮರಿಗೆ'

ಜೈಪುರ (ಪಿಟಿಐ): ಜನರ ಆಸ್ತಿ ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ವಿರುದ್ಧ ಆರೋಪ ಮಾಡಿ ವಿವಾದಕ್ಕೆ ಕಾರಣರಾಗಿರುವ ಪ್ರಧಾನಿ ಮೋದಿ ಮಂಗಳವಾರವೂ ವಾಗ್ದಾಳಿ ಮುಂದುವರೆಸಿದರು. ಕಾಂಗ್ರೆಸ್ ಪಕ್ಷವು ಧರ್ಮದ ಆಧಾರದ ಮೇಲೆ ಮೀಸಲಾತಿಯನ್ನು ವಿಸ್ತರಿಸಲು ಮತ್ತು ಅದನ್ನು ಮುಸ್ಲಿಮರಿಗೆ ನೀಡಲು ಪ್ರಯತ್ನಿಸಿದೆ ಎಂದು ಆರೋಪ ಮಾಡಿದರು.

ಟೊಂಕ್‌ನಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, '2004ರಲ್ಲಿ ಕಾಂಗ್ರೆಸ್, ಕೇಂದ್ರದಲ್ಲಿ ಸರ್ಕಾರ ರಚಿಸಿದ ನಂತರ ಅದು ಮಾಡಿದ ಮೊದಲ ಕೆಲಸ ಎಂದರೆ, ಆಂಧ್ರದಲ್ಲಿ ಎಸ್‌ಸಿ, ಎಸ್‌ಟಿ ಮೀಸಲಾತಿ ಕಡಿತಗೊಳಿಸಿ, ಅದನ್ನು ಮುಸ್ಲಿಮರಿಗೆ ನೀಡಲು ಪ್ರಯತ್ನಿಸಿದ್ದು. ಅದು ಪ್ರಾಯೋಗಿಕ ಯೋಜನೆಯಾಗಿದ್ದು, ದೇಶದಾದ್ಯಂತ ಜಾರಿ ಮಾಡಲು ಪಕ್ಷ ಯೋಜಿಸಿತ್ತು. 2004 ಮತ್ತು 2010ರ ನಡುವೆ ಆಂಧ್ರದಲ್ಲಿ ಮುಸ್ಲಿಂ ಮೀಸಲಾತಿ ಜಾರಿಗೊಳಿಸಲು ಕಾಂಗ್ರೆಸ್ ನಾಲ್ಕು ಬಾರಿ ಪ್ರಯತ್ನಿಸಿತು. ಆದರೆ, ಕಾನೂನು ತೊಡಕಿನಿಂದ ಮತ್ತು ಸುಪ್ರೀಂ ಕೋರ್ಟ್‌ನಿಂದ ಅದರ ಉದ್ದೇಶ ಈಡೇರಲಿಲ್ಲ' ಎಂದು ಹೇಳಿದರು.

'2011ರಲ್ಲಿ ಕಾಂಗ್ರೆಸ್ ಅದನ್ನು ದೇಶದಾದ್ಯಂತ ಜಾರಿಗೆ ತರಲು ಪ್ರಯತ್ನಿಸಿತು. ಎಸ್‌ಸಿ, ಎಸ್‌ಟಿ, ಒಬಿಸಿ ಹಕ್ಕುಗಳನ್ನು ಕಸಿದುಕೊಂಡು ಮತಬ್ಯಾಂಕ್ ರಾಜಕಾರಣಕ್ಕಾಗಿ ಅವುಗಳನ್ನು ಬೇರೆಯವರಿಗೆ ನೀಡಲು ಯೋಜಿಸಿತ್ತು. ಕಾಂಗ್ರೆಸ್ ಸಂವಿಧಾನವನ್ನು ಹಾಗೂ ಅಂಬೇಡ್ಕರ್ ಅವರನ್ನು ಲೆಕ್ಕಿಸದೇ ಪ್ರಜ್ಞಾಪೂರ್ವಕ-ವಾಗಿಯೇ ಅದನ್ನು ಮಾಡಿತ್ತು' ಎಂದು ಆರೋಪಿಸಿದರು.



ದಲಿತರು ಮತ್ತು ಆದಿವಾಸಿಗಳಿಗೆ ನೀಡಲಾಗಿರುವ ಮೀಸಲಾತಿಯ ಸಾಂವಿಧಾನಿಕ ಮಿತಿ 2020ಕ್ಕೆ ಅಂತ್ಯಗೊಂಡಿದ್ದು, ಅದನ್ನು ನಾನು 10 ವರ್ಷ ವಿಸ್ತರಿಸಿದ್ದೇನೆ

ನರೇಂದ್ರ ಮೋದಿ, ಪ್ರಧಾನಿ

'ಕರ್ನಾಟಕದಲ್ಲಿ ಬಿಜೆಪಿ ಸರ್ಕಾರಕ್ಕೆ ಅವಕಾಶ ಸಿಕ್ಕಾಗ ಅದು ಮಾಡಿದ ಮೊದಲ ಕೆಲಸ ಎಂದರೆ, ಎಸ್‌ಸಿ, ಎಸ್‌ಟಿಯಿಂದ ಕಸಿದುಕೊಂಡಿದ್ದ ಮುಸ್ಲಿಮರ ಮೀಸಲಾತಿ ರದ್ದುಪಡಿಸಿದ್ದು' ಎಂದು ಹೇಳಿದರು.

'ಮೋದಿ ನಿಮಗೆ ಗ್ಯಾರಂಟಿ ನೀಡುತ್ತಾರೆ... ದಲಿತರು, ಹಿಂದುಳಿದವರು, ಆದಿವಾಸಿಗಳ ಮೀಸಲಾತಿ ಕೊನೆಗೊಳ್ಳುವುದಿಲ್ಲ ಮತ್ತು ಧರ್ಮದ ಆಧಾರದಲ್ಲಿ ಅದನ್ನು ವಿಭಜಿಸಲು ಬಿಡುವುದಿಲ್ಲ' ಎಂದು ತಿಳಿಸಿದರು.

5ನೇ ಪುಟ ನೋಡಿ

'ಚಾಲೀಸಾ ಪಠಿಸುವುದು ಅಪರಾಧ'

ಹನುಮಾನ್ ಜಯಂತಿಯ ದಿನ ಅದರ ಆಧಾರದ ಮೇಲೆಯೇ ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

'ಕಾಂಗ್ರೆಸ್ ಆಡಳಿತದಲ್ಲಿ ಹನುಮಾನ್ ಚಾಲೀಸಾ ಪಠಿಸುವುದು ಕೂಡ ಅಪರಾಧವಾಗಿದೆ. ಅವರ ಆಡಳಿತದಲ್ಲಿ ಜನ ತಮ್ಮ ಆಚರಣೆಗಳನ್ನು ಪಾಲಿಸುವುದು ಕೂಡ ಕಷ್ಟವಾಗಿದೆ' ಎಂದು ಆರೋಪಿಸಿದರು. ತಮ್ಮ ಆರೋಪಕ್ಕೆ ಪೂರಕವಾಗಿ ಅವರು ಬೆಂಗಳೂರಿನಲ್ಲಿ ನಡೆದ ಘಟನೆಯನ್ನು ಪ್ರಸ್ತಾಪಿಸಿದರು.

'ಆಯೋಗ ನಿಷ್ಪಕ್ಷಪಾತವಾಗಿಲ್ಲ'

ಕಣ್ಣೂರು (ಪಿಟಿಐ): ಚುನಾವಣಾ ಆಯೋಗವು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸದೆ ಇರುವುದು 'ದುರದೃಷ್ಟಕರ' ಸಂಗತಿ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಸ್ಲಿಮರ ವಿರುದ್ಧದ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ಸಂಬಂಧ ಆಯೋಗ ತಕ್ಷಣವೇ ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಹೇಳಿದರು.

'ಈ ವಿಚಾರದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು. ಪ್ರಧಾನಿಯವರ ಇಂಥ ಹೇಳಿಕೆಗಳು ದೇಶದಲ್ಲಿ ಬಿಜೆಪಿ ವಿರೋಧಿ ಭಾವನೆಗಳಿಗೆ ಶಕ್ತಿ ತುಂಬಲಿವೆ' ಎಂದರು.

ಮತಗಟ್ಟೆ ಅಧಿಕಾರಿಗಳು ಗಡಿದಾಟಿಯೇ ಬರಬೇಕು

• ಗಣಪತಿ ಹೆಗಡೆ

ಕಾರವಾರ: ತಾಲ್ಲೂಕು ಕೇಂದ್ರದಿಂದ 35 ಕಿ.ಮೀ ದೂರ ದಟ್ಟ ಅರಣ್ಯದ ನಡುವೆ ಇರುವ 'ಕಮ್ಮರಗಾಂವ' ಗ್ರಾಮದಲ್ಲಿ ದಶಕದ ಹಿಂದೆ ಮುಚ್ಚಿರುವ ಶಾಲೆಯಲ್ಲಿ ಚುನಾವಣೆ ವೇಳೆ ಮತಗಟ್ಟೆ ತೆರೆಯಲಾಗುತ್ತದೆ.

ಇದು ರಾಜ್ಯದಲ್ಲೇ ಇದ್ದರೂ ಮತಗಟ್ಟೆಗೆ ಅಧಿಕಾರಿಗಳು 70 ಕಿ.ಮೀ ದೂರವನ್ನು ಗೋವಾ ರಾಜ್ಯದ ಮೂಲಕ ಕ್ರಮಿಸಿ, ಅಲ್ಲಿಂದ ಪುನಃ ರಾಜ್ಯದ ಗಡಿ ಪ್ರವೇಶಿಸಬೇಕು.

'ಚುನಾವಣೆ ಎದುರಾದಾಗ ಅಧಿಕಾರಿಗಳು ದೂರದಿಂದ ಮತಯಂತ್ರಗಳನ್ನು ತಂದು ನಮ್ಮ ಮತದ ಹಕ್ಕು ಚಲಾಯಿಸಲು ಅನುಕೂಲ ಕಲ್ಪಿಸುತ್ತಾರೆ. ಚುನಾವಣೆ ಹೊರತಾದ ದಿನಗಳಲ್ಲಿ ನಮ್ಮ ಸಂಕಷ್ಟವನ್ನು ಯಾರೂ ಕೇಳುವುದಿಲ್ಲ' ಎಂದು ಕಮ್ಮರಗಾಂವ ಗ್ರಾಮಸ್ಥ ತಾಬ್ಲೊ ವೆಳಿಪ ತಿಳಿಸಿದರು.

ಕಾರವಾರ ತಾಲ್ಲೂಕಿನ ಗೋಟೆಗಾಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಈ ಗ್ರಾಮದಲ್ಲಿ 35 ಮನೆಗಳಿವೆ. 67 ಪುರುಷ ಮತ್ತು 64 ಮಹಿಳೆಯರು ಸೇರಿ 131 ಮತದಾರ-ರಿದ್ದಾರೆ.

ವಿದ್ಯಾರ್ಥಿಗಳ ಕೊರತೆಯಿಂದಾಗಿ ಮುಚ್ಚಿದ್ದ ಶಾಲೆ ಈಗ ಮತಗಟ್ಟೆಯಾಗಿ ಬಳಕೆ ಆಗುತ್ತದೆ. ಗ್ರಾಮಕ್ಕೆ ರಸ್ತೆ ಸಂಪರ್ಕವಿಲ್ಲ. ಬಹುತೇಕ ಜನರದ್ದು ಕೂಲಿ ಕೆಲಸ. ಮಕ್ಕಳ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಕ್ಕೆ ಗೋವಾ ರಾಜ್ಯವನ್ನೇ ಅವಲಂಬಿಸಿದ್ದಾರೆ.

'ಸರ್ಕಾರ ಉಚಿತವಾಗಿ ನೀಡುವ ಪಡಿತರ ಪಡೆಯಲು ಪ್ರತಿ ತಿಂಗಳು ಐದಾರು ಸಾವಿರ ರೂಪಾಯಿ ಖರ್ಚು ಮಾಡಬೇಕು. ಗ್ರಾಮ ಪಂಚಾಯಿತಿ ಕಚೇರಿಗೆ ಹೋಗಲು 8 ಕಿ.ಮೀ ನಡೆಯಬೇಕು. ಪಡಿತರ ತರಲು ಸಹ 8 ಕಿ.ಮೀ ನಡೆಯಬೇಕು. ಅಕ್ಕಿಮೂಟೆ ಹೊತ್ತು ಅಷ್ಟು ದೂರ ನಡೆಯಲಾಗದ ಕಾರಣ ಬಾಡಿಗೆ ವಾಹನ ಪಡೆದು ಮಾಜಾಳಿ–ಗೋವಾ–ಬಾಡಪೋಲಿ ಕ್ರಾಸ್ ಮಾರ್ಗವಾಗಿ 70 ಕಿ.ಮೀ ವಾಹನದಲ್ಲಿ ಸಾಗಬೇಕು. ಇದಕ್ಕೆ ಹೆಚ್ಚು ವೆಚ್ಚವಾಗುತ್ತದೆ' ಎಂದು ಗ್ರಾಮಸ್ಥೆ ಸುಶೀಲಾ ಗಾಂವ್ಕರ ತಿಳಿಸಿದರು.

'ಅರಣ್ಯದ ನಡುವೆ ಇರುವ ಕಾರಣಕ್ಕೆ ನಮ್ಮ ಗ್ರಾಮಕ್ಕೆ ಈವರೆಗೆ ರಸ್ತೆ ನಿರ್ಮಿಸಲಾಗಿಲ್ಲ. ಅನಾರೋಗ್ಯಕ್ಕೆ ಒಳಗಾದರೆ, ಸಮೀಪದಲ್ಲಿ ಆಸ್ಪತ್ರೆಯೂ ಇಲ್ಲ. ಮಕ್ಕಳಿಗೆ ಶಿಕ್ಷಣ ಕೊಡಿಸಲು ಶಾಲೆಯೂ ಇಲ್ಲ' ಎಂದರು.



ಮತಗಟ್ಟೆಗೆ ಬೇಕಿರುವ ಸೌಲಭ್ಯ ಕಲ್ಪಿಸಲಾಗಿದೆ. ಗ್ರಾಮದ ಸಮಸ್ಯೆಗಳ ಪರಿಹಾರಕ್ಕೆ ಚುನಾವಣೆ ಮುಗಿದ ಬಳಿಕ ಪ್ರಯತ್ನಿಸಲಾಗುವುದು.

ಕೆ.ಪುರಂದರ, ತಹಶೀಲ್ದಾರ್, ಕಾರವಾರ

ಬರ ಪರಿಹಾರದಲ್ಲಿ ವಿಳಂಬ– ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಆಕ್ರೋಶ

ಗೋ ಬ್ಯಾಕ್ ಮೋದಿ: ಸಿದ್ದರಾಮಯ್ಯ

ರಾಜ್ಯಕ್ಕೆ ಬರ ಪರಿಹಾರ ಹಣ ಬಿಡುಗಡೆ ಮಾಡದ ನರೇಂದ್ರ ಮೋದಿ, ಅಮಿತ್ ಶಾ ಯಾವ ಮುಖ ಇಟ್ಟುಕೊಂಡು ಮತ ಕೇಳಲು ಕರ್ನಾಟಕಕ್ಕೆ ಬರುತ್ತಾರೆ. ರಾಜ್ಯಕ್ಕೆ ಬರಲು ಅವರಿಗೆ ಯಾವುದೇ ನೈತಿಕತೆ ಇಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

ನ್ಯಾಯ ಕೇಳಲು ಜನತಾ ನ್ಯಾಯಾಲಯದ ಮೊರೆ ಹೋಗುತ್ತೇವೆ. ಮೋದಿ ಸರ್ಕಾರವನ್ನು ಕರ್ನಾಟಕದಿಂದ ಮಾತ್ರವಲ್ಲದೆ ದೇಶದ ಇತರೆ ಕಡೆಗಳಿಂದಲೂ ಕಿತ್ತು ಹಾಕಲು ಪ್ರಯತ್ನಿಸುತ್ತೇವೆ

ರಣದೀಪ್ ಸಿಂಗ್ ಸುರ್ಜೇವಾಲ, ಕಾಂಗ್ರೆಸ್ ಉಸ್ತುವಾರಿ

ಬರ ಪರಿಹಾರ ಬಿಡುಗಡೆ ವಿಚಾರದಲ್ಲಿ ವಾರದಲ್ಲಿ ತೀರ್ಮಾನ ಮಾಡುವುದಾಗಿ ಕೋರ್ಟ್‌ನಲ್ಲಿ ಕೇಂದ್ರ ಸರ್ಕಾರ ಹೇಳಿದೆ. ಬಿಡುಗಡೆ ಮಾಡದಿದ್ದರೆ ಮತ್ತೆ ಕೋರ್ಟ್‌ಗೆ ಹೋಗುತ್ತೇವೆ

ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವನ್ನು ಮತ್ತು ರೈತರನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ದ್ವೇಷಿಸುತ್ತಾರೆ. ಕರ್ನಾಟಕಕ್ಕೆ ನ್ಯಾಯ ಕೊಡಿ ಎಂದು ಕೇಳಿದರೂ ಸ್ಪಂದಿಸುತ್ತಿಲ್ಲ. ಆದರೆ, ಮತ ಕೇಳಲು ಬರುತ್ತಿದ್ದಾರೆ. ಈ ಕಾರಣಕ್ಕೆ ಗೋ ಬ್ಯಾಕ್ ನರೇಂದ್ರ ಮೋದಿ, ಗೋ ಬ್ಯಾಕ್ ಅಮಿತ್ ಶಾ ಎನ್ನುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯಕ್ಕೆ ನೀಡಬೇಕಾಗಿರುವ ಬರ ಪರಿಹಾರದ ವಿಷಯದಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿ, ವಿಧಾನಸೌಧದ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಮೋದಿ ಅವರಿಗೆ ಕರ್ನಾಟಕ ನೆನಪಾಗುವುದು ಚುನಾವಣೆ ಸಂದರ್ಭದಲ್ಲಿ ಮಾತ್ರ. ಪ್ರವಾಹ, ಭೀಕರ ಬರಗಾಲದಲ್ಲಿಯೂ ರಾಜ್ಯಕ್ಕೆ ಅವರು ಬರಲಿಲ್ಲ' ಎಂದು ವಾಗ್ದಾಳಿ ನಡೆಸಿದರು.



ವಿಧಾನಸೌಧ ಮುಂಭಾಗದಲ್ಲಿರುವ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು. ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರಾದ ಕೃಷ್ಣ ಬೈರೇಗೌಡ, ರಾಮಲಿಂಗಾರೆಡ್ಡಿ ಇದ್ದರು –ಪ್ರಜಾವಾಣಿ ಚಿತ್ರ

'ಬರ ಪರಿಹಾರ ಕೋರಿ ಸೆಪ್ಟೆಂಬರ್ 22ರಂದೇ ಮನವಿ ಸಲ್ಲಿಸಿದ್ದು, ಕೇಂದ್ರದ ತಂಡ ನಾಲ್ಕು ದಿನ ಪರಿಶೀಲನೆ ಮಾಡಿ ವರದಿ ನೀಡಿದೆ. ರಾಜ್ಯದಲ್ಲಿ ಭೀಕರ ಬರಗಾಲವಿದ್ದು, 223 ತಾಲ್ಲೂಕು-ಗಳನ್ನು ಬರಗಾಲ ಪೀಡಿತ ಎಂದು ಘೋಷಿಸಿದ್ದೇವೆ. 100 ವರ್ಷಗಳ ನಂತರ ಇಂಥ ಬರಗಾಲ ಎದುರಾಗಿದೆ. ಮೊದಲೇ ಮನವಿ ಕೊಟ್ಟಿದ್ದರೂ, ಅಮಿತ್ ಶಾ ಚನ್ನಪಟ್ಟಣಕ್ಕೆ ಬಂದಿದ್ದ ಸಂದರ್ಭದಲ್ಲಿ ಮನವಿಯನ್ನು ವಿಳಂಬವಾಗಿ ಸಲ್ಲಿಸಿದ್ದಾರೆ ಎಂದು ಹೇಳಿದ್ದರು' ಎಂದರು.

'ಗ್ಯಾರಂಟಿ ಯೋಜನೆಗಳಿಗೆ ಹಣ ಕೇಳುತ್ತಿದ್ದಾರೆ, ಬರ ಪರಿಹಾರಕ್ಕೆ ಅಲ್ಲ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ನಾವು ಗ್ಯಾರಂಟಿಗಳಿಗೆ ಒಂದೇ ಒಂದು ಪೈಸೆಯನ್ನೂ ಕೇಂದ್ರದಿಂದ ಕೇಳಿಲ್ಲ. ನಮಗೆ ಬೇಕಾಗಿಯೂ ಇಲ್ಲ. ನಾವು ಬರಗಾಲವನ್ನು ಈವರೆಗೆ ಸಮರ್ಥವಾಗಿ ಎದುರಿಸಿದ್ದೇವೆ. ಕುಡಿಯುವ ನೀರು, ಮೇವು ಒದಗಿಸಿದ್ದೇವೆ, ಜನರಿಗೆ ಕೆಲಸ ಕೊಟ್ಟು, ಗುಳೇ ಹೋಗುವುದನ್ನು ತಪ್ಪಿಸಲು ಯತ್ನಿಸಿದ್ದೇವೆ, ರೈತರಿಗೆ ಮೊದಲ ಕಂತಿನ ಪರಿಹಾರ ನೀಡುವುದನ್ನು ಮಾಡಿದ್ದೇವೆ' ಎಂದರು.

'ಕೊಡಿ ಕೊಡಿ ಬರ ಪರಿಹಾರ ಕೊಡಿ, ನಮ್ಮ ತೆರಿಗೆ ನಮ್ಮ ಹಕ್ಕು, ನರೇಂದ್ರ ಚೊಂಬೇಶ್ವರನಿಗೆ, ಚೊಂಬು ಕೊಟ್ಟ ಮೋದಿಗೆ, ಕರ್ನಾಟಕಕ್ಕೆ ಖಾಲಿ ಚೊಂಬು ಕೊಟ್ಟ ಬಿಜೆಪಿಗೆ ಧಿಕ್ಕಾರ ಎಂದು ಪ್ರತಿಭಟನಾ ನಿರತರು ಘೋಷಣೆ ಕೂಗಿದರು.

ಸಚಿವರಾದ ಕೆ.ಜೆ. ಜಾರ್ಜ್, ರಾಮಲಿಂಗಾ ರೆಡ್ಡಿ, ಬೈರತಿ ಸುರೇಶ್, ಶಾಸಕ ರಿಜ್ವಾನ್ ಅರ್ಷದ್ ಇದ್ದರು.

'ಕಾಂಗ್ರೆಸ್‌ನ ಸಂಭ್ರಮಾಚರಣೆ ಹುಸಿ'

ಪರಿಹಾರ ಬಿಡುಗಡೆಗೆ ಚುನಾವಣಾ ಆಯೋಗ ಅನುಮತಿ: ಅಶೋಕ ಕುಟುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ ಪರಿಹಾರ ಬಿಡುಗಡೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಯಾವುದೇ ನಿರ್ದೇಶನ ನೀಡಿಲ್ಲ. ಕೇಂದ್ರ ಸರ್ಕಾರವೇ ಚುನಾವಣಾ ಆಯೋಗದ ಅನುಮತಿ ಕೇಳಿದ್ದು, ಅದಕ್ಕೆ ಆಯೋಗ ಅನುಮತಿ ನೀಡಿದೆ. ಈ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಈ ವಿಚಾರವನ್ನೇ ಕಾಂಗ್ರೆಸ್ ಪಕ್ಷ ತಮಗೆ ಸಿಕ್ಕ ಜಯ ಎಂಬಂತೆ ಬಿಂಬಿಸಿ-ಕೊಳ್ಳುತ್ತಿದೆ. ಜಯ ಸಿಗಲು ಕಾಂಗ್ರೆಸ್‌ನ ವಕೀಲರು ಏನೂ ವಾದ ಮಾಡಿಲ್ಲ. ಇದು ಹತಾಶೆಯ ವಿಜಯೋತ್ಸವ ಎಂದು ಅವರು ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕುಟುಕಿದರು.

ಕಾಂಗ್ರೆಸ್ ಸರ್ಕಾರ ಬರ ಪರಿಹಾರಕ್ಕೆ ಕೋರಿ ಮೂರು ತಿಂಗಳು ತಡವಾಗಿ ಕೇಂದ್ರಕ್ಕೆ ಪತ್ರ ಬರೆದಿತ್ತು. ಚುನಾವಣೆ ದಿನಾಂಕ ಪ್ರಕಟವಾದ ಕಾರಣ ಚುನಾವಣಾ ಆಯೋಗ ಪರಿಹಾರ ಬಿಡುಗಡೆಗೆ ತಡೆ ನೀಡಿತ್ತು. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿದ್ದರು ಎಂದರು.

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿಲ್ಲ, ನಿರ್ದೇಶನವನ್ನೂ ನೀಡಿಲ್ಲ. ಆದರೆ, ಹುಸಿ ಸಂಭ್ರಮಾಚರಣೆಯಲ್ಲಿ ಕಾಂಗ್ರೆಸ್ ತೊಡಗಿದೆ. ಚುನಾವಣಾ ಆಯೋಗದ ತಡೆ ಇದ್ದ ಕಾರಣಕ್ಕೆ ಕೇಂದ್ರ ಪರಿಹಾರ ಬಿಡುಗಡೆ ಮಾಡಿರಲಿಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ಈ ವಿಚಾರ ಬಂದಾಗ ಕೇಂದ್ರ ಸರ್ಕಾರವು ಚುನಾವಣಾ ಆಯೋಗದ ಅನುಮತಿ ಕೇಳುತ್ತೇವೆ ಎಂದು ಹೇಳಿತ್ತು. ಆ ಬಳಿಕ ಅನುಮತಿ ಕೇಳಿತ್ತು. ಇದರಲ್ಲಿ ಕಾಂಗ್ರೆಸ್ ಪಕ್ಷದ್ದು ಒಂದು ಕಾಳಿನಷ್ಟು ಪ್ರಯತ್ನವೂ ಇಲ್ಲ ಎಂದರು.

ಕೇಂದ್ರ ಸರ್ಕಾರ ಎಸ್‌ಡಿಆರ್‌ಎಫ್ ಅಡಿ ಈಗಾಗಲೇ ₹700 ಕೋಟಿ ಬಿಡುಗಡೆ ಮಾಡಿದೆ. ಆ ಹಣದಲ್ಲೇ ₹2,000 ಪರಿಹಾರವನ್ನೂ ನೀಡುತ್ತಿದೆ. ಆದರೆ, ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣದ ಬಗ್ಗೆ ಎಲ್ಲೂ ಪ್ರಸ್ತಾಪ ಮಾಡುತ್ತಿಲ್ಲ. ಈ ₹700 ಕೋಟಿಯಲ್ಲಿ ಶೇ 25ರಷ್ಟು ಹಣವನ್ನು ರಾಜ್ಯ ಸರ್ಕಾರ ನೀಡಬೇಕು ಎಂದರು.

ಸಾಮಾನ್ಯವಾಗಿ ಬರಕ್ಕೆ ಸಂಬಂಧಿಸಿದಂತೆ ಎಲ್ಲ ರಾಜ್ಯಗಳಿಂದ ವರದಿ ಬಂದ ಬಳಿಕವೇ ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡಲಾಗುತ್ತದೆ. ಹಿಂದಿನಿಂದಲೂ ಇದೇ ಪರಂಪರೆ ನಡೆದುಕೊಂಡು ಬಂದಿದೆ. ಆದರೆ, ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಐದು ಗ್ಯಾರಂಟಿಗಳನ್ನು ಜಾರಿ ತಂದಿತು. ಅದಕ್ಕೆ ಯಾವುದೇ ತಯಾರಿ ಮಾಡಿಕೊಂಡಿರಲಿಲ್ಲ. ಇದರಿಂದಾಗಿ ಸರ್ಕಾರದ ಖಜಾನೆ ಖಾಲಿ ಆಗಿದೆ. ಜನ ರೊಚ್ಚಿಗೆದ್ದಿದ್ದಾರೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ. ಈ ಕೆಲಸಗಳಿಗೆ ನೀಡಲು ಸರ್ಕಾರದ ಬಳಿ ಹಣವೂ ಇಲ್ಲ. ತೆರಿಗೆ ಸಂಗ್ರಹಣೆ ಪ್ರಮಾಣವೂ ಕಡಿಮೆ ಆಗಿದೆ. ಹಾಲಿನ ಸಬ್ಸಿಡಿ ₹700 ಕೋಟಿಯನ್ನು ರೈತರಿಗೆ ಕೊಟ್ಟಿಲ್ಲ ಎಂದರು.



ವಿರೋಧ ಪಕ್ಷದ ನಾಯಕ ಆರ್.ಅಶೋಕ ರಾಜ್ಯ ಸರ್ಕಾರದ ವಿರುದ್ಧದ ಭಿತ್ತಿಪತ್ರ ಬಿಡುಗಡೆ ಮಾಡಿದರು. ಪಿ.ರಾಜೀವ್, ಅಖಂಡ ಶ್ರೀನಿವಾಸಮೂರ್ತಿ ಇದ್ದರು.

ಕಾಂಗ್ರೆಸ್ ಸರ್ಕಾರ ಸರಿಯಾದ ಸಮಯಕ್ಕೆ ಪರಿಹಾರಕ್ಕೆ ಕೋರಿಕೆ ಪತ್ರ ಕಳಿಸಲಿಲ್ಲ. ರಾಜ್ಯ ತನ್ನ ಬೊಕ್ಕಸ ದಿಂದ ಒಂದು ಪೈಸೆಯನ್ನೂ ಕೊಟ್ಟಿಲ್ಲ. ಕೊನೆಗೆ ಕೇಂದ್ರವೇ ನೆರವಿಗೆ ಬಂತು

ಬಸವರಾಜ ಬೊಮ್ಮಾಯಿ
ಹಾವೇರಿ ಬಿಜೆಪಿ ಅಭ್ಯರ್ಥಿ


ಹಿಂದೆ ಸಿದ್ದರಾಮಯ್ಯ ಅವಧಿಯಲ್ಲಿ ನಿರಂತರ ಬರ ಇತ್ತು. ಆಗ ಕೇಂದ್ರದಲ್ಲಿದ್ದ ಮನಮೋಹನ್ ಸಿಂಗ್ ಸರ್ಕಾರ ಬರ ಪರಿಹಾರ ನೀಡಲು 8 ರಿಂದ 9 ತಿಂಗಳು ತಡ ಮಾಡಿತ್ತು.

ಆರ್.ಅಶೋಕ
ವಿರೋಧ ಪಕ್ಷದ ನಾಯಕ

ಕರ್ನಾಟಕದಲ್ಲಿ ಆರ್ಥಿಕ ದಿವಾಳಿತನ ಎದ್ದಿದೆ. ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಇಲ್ಲಸಲ್ಲದ ಆರೋಪ ಮಾಡುವುದರಲ್ಲಿ ಸಿದ್ದರಾಮಯ್ಯ ಬ್ಯುಸಿಯಾಗಿದ್ದಾರೆ. ಇವರು ಅಸಮರ್ಥ ಮುಖ್ಯಮಂತ್ರಿ

ಪಿ.ರಾಜೀವ್
ಪ್ರಧಾನಕಾರ್ಯದರ್ಶಿ, ಬಿಜೆಪಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿಮ್ಮ ಚಿಂತನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಲು ಧೈರ್ಯ ಮಾಡಿ. ಏಕೆಂದರೆ ಅವು ನಿಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ.

-ಆಲ್ಬರ್ಟ್ ಐನ್‌ಸ್ಟೀನ್

ಹಲವು ಪಾಠಗಳನ್ನು ಕಲಿಸಿದ ದುಬೈ ಮಹಾಮಳೆ ದುರಂತ

ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ದುಬೈ ನಗರದಲ್ಲಿ ಹಿಂದೆಂದೂ ಕಂಡರಿಯದಂತಹ ಮಹಾಮಳೆ ಸುರಿದು ಅಪಾರ ಹಾನಿ ಉಂಟುಮಾಡಿದೆ. ಇದು ಹವಾಮಾನ ವೈಪರೀತ್ಯದ ಪರಿಣಾಮ ಎನ್ನುವುದಕ್ಕಿಂತ ಮನುಷ್ಯನ ಕೆಲಸಗಳಿಂದ ಆಗಿರುವ ಪ್ರಮಾದ. ದುಬೈಯಲ್ಲಿ ಒಂದೇ ದಿನ 254 ಮಿ.ಮೀ. ಮಳೆಯಾಗಿದೆ. ಇದು ಆ ಪ್ರದೇಶದಲ್ಲಿ 18 ತಿಂಗಳಲ್ಲಿ ಬೀಳುವ ಮಳೆಗೆ ಸಮಾನ. 1949ರಲ್ಲಿ ಹವಾಮಾನ ದಾಖಲಾತಿ ಆರಂಭವಾದಾಗಿನಿಂದಲೂ ಇದು ಗರಿಷ್ಠ ಪ್ರಮಾಣದ ಮಳೆ. ಇಲ್ಲಿನ ವಿಮಾನ ನಿಲ್ದಾಣದಲ್ಲಿ ಭಾರಿ ಪ್ರವಾಹ ಪರಿಸ್ಥಿತಿ ತಲೆದೋರಿತು. ಜಗತ್ತಿನ ಅತ್ಯುತ್ತಮ ವಿಮಾನ ನಿಲ್ದಾಣವು ಜಲಾವೃತಗೊಂಡಿತು. ವಿಮಾನ ಹಾರಾಟ ವ್ಯತ್ಯಯಗೊಂಡಿತು; ಶಾಲೆಗಳನ್ನು ಮುಚ್ಚಬೇಕಾಯಿತು ಮತ್ತು ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿತು. ಕಾರುಗಳು ಪ್ರವಾಹದಲ್ಲಿ ತೇಲಿಹೋದವು, ವಿದ್ಯುತ್ ಸಂಪರ್ಕ ಕಡಿತಗೊಂಡಿತು ಮತ್ತು ಜನರು ಕೆಲಸದ ಸ್ಥಳ ಅಥವಾ ರಸ್ತೆಗಳಲ್ಲಿಯೇ ಸಿಲುಕಿಕೊಂಡರು. ನಷ್ಟದ ಮೊತ್ತವು ಕೋಟ್ಯಂತರ ಡಾಲರ್. ಸಮರ್ಪಕವಾದ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸಮಸ್ಯೆಯನ್ನು ಉಲ್ಬಣಗೊಳಿಸಿತು. ಮರಳುಗಾಡಿನಲ್ಲಿ ಈ ಪ್ರಮಾಣದ ಮಳೆ ಬಿದ್ದಿರುವುದು ಹಲವು ಪ್ರಶ್ನೆಗಳನ್ನು ಎತ್ತಿತು. ಹಲವು ವಿಚಾರಗಳು ಚರ್ಚೆಗೊಳಗಾದವು. ನಿಸರ್ಗದ ಮೇಲೆ ಮನುಷ್ಯನ ದಾಳಿ ಮತ್ತು ಅದರ ಪರಿಣಾಮವೇ ಈಗಿನ ಸ್ಥಿತಿಗೆ ಕಾರಣ ಎಂಬುದೇ ಈ ಚರ್ಚೆಗಳಲ್ಲಿ ಪ್ರಸ್ತಾಪವಾದ ಮುಖ್ಯ ವಿಚಾರಗಳಾಗಿದ್ದವು.



ಹವಾಮಾನ ಬದಲಾವಣೆಯನ್ನು ತಡೆಯುವ ದಿಸೆಯಲ್ಲಿ ಮಾಡಬೇಕಾದ ಕೆಲಸಗಳನ್ನು ಬಹಳ ಬೇಗನೆ ಮಾಡಬೇಕಿದೆ ಎಂಬುದಕ್ಕೆ ದುಬೈ ದುರಂತವು ಒಂದು ಎಚ್ಚರಿಕೆ ಗಂಟೆಯಾಗಿದೆ

ಜಗತ್ತಿನ ಅತ್ಯಂತ ಬೆರಗಿನ ನಗರವಾಗಬೇಕು ಎಂಬುದು ದುಬೈಯ ಇಚ್ಛೆಯಾಗಿತ್ತು. ಅದಕ್ಕಾಗಿ ನಿರ್ಮಾಣ ಚಟುವಟಿಕೆ ನಿರಂತರವಾಗಿ ನಡೆಯಿತು. ಗಗನಚುಂಬಿ ಕಟ್ಟಡಗಳು, ರಸ್ತೆ, ವಿಮಾನ ನಿಲ್ದಾಣಗಳ ನಿರ್ಮಾಣದ ಮೂಲಕ ವಾಸ್ತುಶಿಲ್ಪದ ಅದ್ಭುತಗಳನ್ನು ರೂಪಿಸಲಾಯಿತು. ಇವೆಲ್ಲವೂ ಕೆಲವೇ ವರ್ಷಗಳಲ್ಲಿ ನಡೆದುಹೋದವು. ಬಹಳಷ್ಟನ್ನು ಅಲ್ಪಾವಧಿಯಲ್ಲಿ ಮಾಡಲಾಯಿತು. ಈ ತರಾತುರಿಯಿಂದಾಗಿ ಎಲ್ಲ ಅಂಶಗಳ ಕಡೆಗೆ ಸಂಪೂರ್ಣ ಗಮನ ಕೊಡಲು ಸಾಧ್ಯವಾಗಲಿಲ್ಲ. ಮಳೆನೀರು ಹರಿದುಹೋಗಲು ಸಮರ್ಪಕವಾದ ಚರಂಡಿ ವ್ಯವಸ್ಥೆಯನ್ನು ನಿರ್ಮಿಸುವ ಕಡೆಗೆ ಗಮನವನ್ನೇ ಕೊಡಲಿಲ್ಲ. ಮಳೆಯೇ ಇಲ್ಲದ ಮರಳುಗಾಡಿನಲ್ಲಿ ಮಳೆನೀರು ಚರಂಡಿ ಏಕೆ ಎಂಬ ಅಸಡ್ಡೆ ಇದಕ್ಕೆ ಕಾರಣ. ಹಲವು ಪ್ರದೇಶಗಳಲ್ಲಿ ಮಳೆನೀರು ಹರಿಯಲು ಅಥವಾ ಭೂಮಿಯೊಳಕ್ಕೆ ಇಂಗಲು ವ್ಯವಸ್ಥೆಯೇ ಇಲ್ಲ. ಮಳೆಯೇ ಇಲ್ಲದ ಈ ಪ್ರದೇಶದಲ್ಲಿ ಮೋಡ ಬಿತ್ತನೆಯ ಮೂಲಕ ಮಳೆ ಬರಿಸುವ ವಿಧಾನವನ್ನು ಬಹಳ ವರ್ಷಗಳಿಂದಲೂ ಅನುಸರಿಸಿಕೊಂಡು ಬರಲಾಗುತ್ತಿದೆ. ಈ ಬಾರಿಯ ಮಹಾಮಳೆಗೆ ಮೋಡಬಿತ್ತನೆಯೂ ಒಂದು ಕಾರಣ ಎಂದೂ ಹೇಳಲಾಗುತ್ತಿದೆ. ಮಹಾಮಳೆಗೂ ಮುನ್ನ ಮೋಡಬಿತ್ತನೆ ಮಾಡಿರಲಿಲ್ಲ ಎಂದು ಯುಎಇ ಹೇಳಿದೆ. ಈಗ ಬಿದ್ದಿರುವ ಮಳೆ ಮತ್ತು ಮೋಡಬಿತ್ತನೆ ನಡುವೆ ಯಾವುದೇ ಸಂಬಂಧ ಇಲ್ಲ ಎಂದು ಪರಿಣತರೂ ಹೇಳಿದ್ದಾರೆ. ಎಲ್ ನಿನೊ ವಿದ್ಯಮಾನವೇ ಭಾರಿ ಮಳೆಗೆ ಕಾರಣ ಎಂದೂ ಹೇಳಲಾಗುತ್ತಿದೆ. ಹವಾಮಾನ ಬದಲಾವಣೆಯಿಂದಾಗಿ ಉಂಟಾದ ವಿಶಿಷ್ಟವಾದ ವಾತಾವರಣ ಸ್ಥಿತಿಯೇ ಮಹಾಮಳೆ ಮತ್ತು ಪ್ರವಾಹಕ್ಕೆ ಕಾರಣ ಎಂಬುದು ಪರಿಣತರ ಒಂದು ವರ್ಗದ ಅಭಿಪ್ರಾಯ.

ಜಗತ್ತಿನ ವಿವಿಧ ಭಾಗಗಳಲ್ಲಿ ಕಂಡುಬರುತ್ತಿರುವ ಹವಾಮಾನದ ಅತಿರೇಕಗಳಿಗೆ ಹವಾಮಾನ ಬದಲಾವಣೆಯೇ ಕಾರಣ ಎಂದು ಹೇಳಲಾಗುತ್ತಿದೆ. ಮರಳುಗಾಡಿನಲ್ಲಿ ಮಳೆ, ಮಳೆ ಪ್ರದೇಶದಲ್ಲಿ ಬರಗಾಲದಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿ ಜಗತ್ತಿನ ಹಲವು ಭಾಗಗಳಲ್ಲಿ ತಲೆದೋರಿದೆ. ರಾಜಸ್ಥಾನದ ಮರುಭೂಮಿಯು ಚಂಡಮಾರುತದಿಂದಾದ ಪ್ರವಾಹಕ್ಕೆ ಸಾಕ್ಷಿಯಾಗಿದೆ. ಹಾಗೆಯೇ ಮುಂಗಾರು ಮಳೆಯು ಸಮೃದ್ಧವಾಗಿ ಸುರಿಯುವ ಪ್ರದೇಶಗಳು ಮಳೆ ಕೊರತೆಯಿಂದ ಕಂಗೆಟ್ಟಿವೆ. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಮಳೆಯು ಭಾರಿ ಪ್ರಮಾಣದಲ್ಲಿ ಸುರಿಯುತ್ತದೆ ಎಂದು ಹಲವು ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಹವಾಮಾನ ಬದಲಾವಣೆಯನ್ನು ತಡೆಯುವ ದಿಸೆಯಲ್ಲಿ ಮಾಡಬೇಕಾದ ಕೆಲಸಗಳನ್ನು ಬಹಳ ಬೇಗನೆ ಮಾಡಬೇಕಿದೆ ಎಂಬುದಕ್ಕೆ ದುಬೈ ದುರಂತವು ಒಂದು ಎಚ್ಚರಿಕೆ ಗಂಟೆಯಾಗಿದೆ. ಜಗತ್ತಿನ ಹೆಚ್ಚಿನ ನಗರಗಳು ಹೊಂದಿಲ್ಲದ ಹಣ, ತಂತ್ರಜ್ಞಾನ ಮತ್ತು ಉದ್ಯಮಶೀಲತೆಯ ಬೆಂಬಲ ದುಬೈಗೆ ಇದೆ. ಆದರೆ, ಎಲ್ಲವೂ ಇರುವ ಈ ನಗರವನ್ನೇ ನಿಸರ್ಗವು ಥರಗುಟ್ಟುವಂತೆ ಮಾಡಿದೆ.

ಪ್ರೀತಿಯಲ್ಲಿ ದೌರ್ಜನ್ಯವಿರುವುದಿಲ್ಲ, ಕೊಲೆಗೆ ಸಮರ್ಥನೆಯಿಲ್ಲ, ಅಪರಾಧಕ್ಕೆ ಧರ್ಮವಿಲ್ಲ

ಹುಡುಗಿಯರು ಬಲಿಯಾಗುತ್ತಲೇ ಇರಬೇಕೇ?



ವಿಶ್ಲೇಷಣೆ

ಸಬಿತಾ ಬನ್ನಾಡಿ

ಇದೆಂಥಾ ದೌರ್ಭಾಗ್ಯ? ಅರಳಬೇಕಾದ ನೇಹದ ಮೊಗ್ಗೊಂದು ಹೀಗೆ ಅನ್ಯಾಯವಾಗಿ ಬಲಿಯಾಗಿದ್ದನ್ನು ಸಹಿಸುವುದು ಹೇಗೆ? ಹುಡುಗಿಯರು ಹೀಗೇ ಬಲಿಯಾಗುತ್ತಲೇ ಇರಬೇಕೇ? ಅರಳಿ ಘಮಘಮಿಸಬೇಕಾದ ಮಕ್ಕಳು ಅಮಾನುಷವಾಗಿ ಸಾಯುವ ದುರಂತ ಒಂದೆಡೆಯಾದರೆ, ಸಾರಿ ಸಾರಿ ಹೇಳಿದರೂ ಸ್ತ್ರೀಬಲಿಯ ಹಿಂದಿನ ಕಾರಣಗಳನ್ನು ಗಂಭೀರವಾಗಿ ಪರಿಗಣಿಸದ ಸಮಾಜ ಇನ್ನೊಂದೆಡೆ. ಒಂದೆಡೆ, ಇಂತಹ ದಾರುಣ ಸಾವುಗಳು ಕರುಳು ಕೊಯ್ಯುತ್ತಿದ್ದರೆ, ಇನ್ನೊಂದೆಡೆ, ಅವನ್ನು ತಮ್ಮ ಲಾಭದ ಭಿತ್ತಿಯಾಗಿಸಿಕೊಳ್ಳಲು ಯಾರ ಕೊರಳನ್ನಾದರೂ ಕೊಯ್ಯುವ ರಣ ಉತ್ಸಾಹದಲ್ಲಿ, ಹೆಣ ಬೀಳುವುದನ್ನೇ ಕಾಯುವವರ ನಿರ್ಲಜ್ಜೆಯ ನಿರಂಕುಶತೆಯ ಅಟ್ಟಹಾಸ ಬೆಚ್ಚಿಬೀಳಿಸುತ್ತದೆ. ಜನಪ್ರತಿನಿಧಿಗಳ ಅಸೂಕ್ಷ್ಮ ಹೇಳಿಕೆಗಳು, ವರ್ತನೆಗಳು ವಿಷಾದದ ಬೇಗೆಯನ್ನು ಹೆಚ್ಚಿಸುತ್ತವೆ. ಯಾರಿಗೂ ಅರ್ಥವಾಗದಿರುವುದು ಮತ್ತು ಬೇಕಿಲ್ಲದೇ ಇರುವುದು ತನ್ನದಲ್ಲದ ಕಾರಣಕ್ಕೆ ಹೆಣ್ಣೇ ಯಾಕೆ ಹೆಣವಾಗುತ್ತಿದ್ದಾಳೆ ಎಂಬ ಸತ್ಯ ಮಾತ್ರ!

ಹುಡುಗಿಯು ಹುಡುಗನ ಪ್ರೇಮವನ್ನು ಸ್ವೀಕರಿಸಿದರೂ ಕಷ್ಟ, ನಿರಾಕರಿಸಿದರೂ ಕಷ್ಟ. ಹುಡುಗಿಯರಿಗೆ ಬಹಳ ಸ್ವಾತಂತ್ರ್ಯ ಸಿಕ್ಕಿದೆ, ಎಲ್ಲವನ್ನೂ ಅವಳೇ ನಿರ್ಧರಿಸುವವಳಾಗಿದ್ದಾಳೆ ಎಂಬ ಕಥನ ಮೇಲ್ನೋಟಕ್ಕೆ ಬಹಳ ಚಲಾವಣೆಯಲ್ಲಿದೆ. ಆದರೆ ಅವಳ ಮನಸ್ಸನ್ನು ರೂಪಿಸುವಾಗಲೇ ಅವಳು 'ಅವನಿಗೆ' ಸರಿಯಾಗಿ ತನ್ನನ್ನು ಅಡಕಗೊಳಿಸಿಕೊಳ್ಳಬೇಕು ಎಂಬುದನ್ನು ಆಳದಲ್ಲಿ ಬೇರು ಬಿಡುವಂತೆ ನೀರೆರೆಯಲಾಗಿರುತ್ತದೆ. ಪ್ರೀತಿಯ ಹೆಸರಿನಲ್ಲಿ ಯಜಮಾನಿಕೆಯನ್ನು ಹೇರಿಕೆ ಮಾಡಲಾಗಿರುತ್ತದೆ. ಯಜಮಾನಿಕೆ ತೋರಿಸುವುದೇ ಪ್ರೀತಿ ಎಂಬಂತೆ ತಪ್ಪು ಸಂದೇಶಗಳನ್ನು ವಿವಿಧ ಮನರಂಜನಾ ಮಾಧ್ಯಮಗಳಲ್ಲಿ ಬಹಳ ಒರಟಾಗಿ ಬಿಂಬಿಸಲಾಗಿರುತ್ತದೆ. ಅವನು ಅವಳ ಬೆನ್ನುಬಿದ್ದು ಅವಳನ್ನು ತನ್ನವಳಾಗಿಸಿಕೊಳ್ಳುವುದನ್ನು ಎಷ್ಟು ಕೆಟ್ಟದಾಗಿ ದೃಶ್ಯಮಾಧ್ಯಮಗಳಲ್ಲಿ ತೋರಿಸಲಾಗುತ್ತದೆಯೆಂದರೆ, ಆ ಹಿಂಸೆಯೇ ಪ್ರೀತಿ ಎನ್ನುವುದಾದರೆ, ಅದಕ್ಕಿಂತ ದೊಡ್ಡ ಶಿಕ್ಷೆ ಇನ್ನೊಂದಿರಲಾರದು.

ಇಂತಹ ಒರಟುತನವನ್ನು ವೈಭವೀಕರಿಸಿ ಹುಡುಗಿಯೂ ಹುಡುಗನ ಈ ನಡೆಯನ್ನು ಗಂಡಸುತನ ಎಂದು ಭಾವಿಸಿ, ಪ್ರೀತಿ ಇರುವುದೇ ಹೀಗೆ ಎಂಬ ಭ್ರಮೆಗೆ ಒಳಗಾಗುತ್ತಾಳೆ ಮತ್ತು ಇಂತಹ ನಿರೂಪಣೆಗಳಿಗೆ ಸಿಗುವ ವ್ಯಾಪಕ ಸ್ವಾಗತವಂತೂ ನಿರಾಸೆಯುಂಟುಮಾಡುತ್ತದೆ. ಇತ್ತೀಚೆಗೆ 'ಅನಿಮಲ್' ಎಂಬ ಸಿನಿಮಾ ಹೆಣ್ಣನ್ನು ತುಚ್ಛವಾಗಿ ಚಿತ್ರಿಸಿದ ಆರೋಪಕ್ಕೆ ಒಳಗಾಯಿತು. ಆದರೆ ಅದು ಕೋಟಿಗಳನ್ನು ದೋಚುವಲ್ಲಿ ದಾಖಲೆ ಮಾಡಿತು. ಅದರ ನಾಯಕಿಯೂ ಸ್ತ್ರೀದ್ವೇಷ ಎಂದೆಲ್ಲ ಏನೂ ಇಲ್ಲ, ಅಂತಹ ಪದಬಳಕೆಯಲ್ಲೇ ತನಗೆ ನಂಬಿಕೆಯಿಲ್ಲ ಎಂಬ ಹೇಳಿಕೆಯನ್ನೂ ಕೊಟ್ಟರು. ಆದರೆ ಅಂತಹ ನಿರೂಪಣೆಗಳು ಇಲ್ಲೆಲ್ಲೋ ಬದುಕುವ ನಿಷ್ಪಾಪಿ ಹುಡುಗಿಯರ ಪ್ರಾಣಕ್ಕೆ ಸಂಚಕಾರವಾಗುತ್ತವೆ. ಲಾಭ ಮತ್ತು ಮನರಂಜನೆ ಮಾತ್ರ ತಾವು ಮಾಡುವ ಸಿನಿಮಾದ ಗುರಿ ಎನ್ನುವವರು ಇದನ್ನೆಲ್ಲ ಕಿವಿಯ ಬೀಳಿಗೂ ಹಾಕಿಕೊಳ್ಳುವುದಿಲ್ಲ.

ಕೆಲವೊಮ್ಮೆ ಆಶಯದಲ್ಲಿ ಒಳ್ಳೆಯ ಅಂಶ ಇರುವ ಸಿನಿಮಾಗಳೂ ಹೆಣ್ಣನ್ನು ಅಸೂಕ್ಷ್ಮವಾಗಿ ಚಿತ್ರಿಸುತ್ತವೆ. 'ಮದ್ರಾಸ್' ಎಂಬ ತಮಿಳು ಸಿನಿಮಾ, ರಾಜಕಾರಣದಲ್ಲಿ ಯಾರದೋ ಲಾಭಕ್ಕೆ ಯುವಕರು ಹೆಣವಾಗುವ ಕತೆಯನ್ನು ಹೇಳುತ್ತದೆ. ಆದರೆ ಅಲ್ಲಿಯೂ ಅತ್ಯಂತ ಒರಟಾಗಿ ವರ್ತಿಸುವ ಗಂಡನ್ನು ಹೆಣ್ಣು ಮೆಚ್ಚುತ್ತಾಳೆ ಎಂಬಂತೆ ತಪ್ಪಾಗಿ ಚಿತ್ರಿಸಲಾಗಿದೆ. ಹೀಗೆ ಚಿತ್ರಿಸಿ ಹುಡುಗಿಯರ ಸಂಕಟ ಹೆಚ್ಚು ಮಾಡಲಾಗುತ್ತಿದೆ. ಹುಡುಗರಿಗೆ ಪ್ರೀತಿಯ ಅಭಿವ್ಯಕ್ತಿ ಬಗೆಗೆ ತಪ್ಪು ದಾರಿ ತೋರಿಸಲಾಗುತ್ತಿದೆ. ಇನ್ನೊಂದೆಡೆ, ಹೆಣ್ಣು ಪ್ರೀತಿಯಿಂದ ಹೊರಗೆ ಬಂದರೆ ಅವಳನ್ನು ಕೊಚ್ಚಿಬಿಡಬೇಕು ಎಂದು ಅವನ ತಲೆಗೆ ತಪ್ಪಾಗಿ ತುಂಬಲಾಗುತ್ತದೆ. ಪ್ರೀತಿಯ ಮೂಲ ಸ್ನೇಹವೇ ವಿನಾ ದೌರ್ಜನ್ಯ ಅಲ್ಲವೇ ಅಲ್ಲ.

ಕೆಲವೇ ತಿಂಗಳುಗಳ ಹಿಂದೆ ಇದೇ ರೀತಿ ಪ್ರೇಮ ಸಂಬಂಧವನ್ನು ನಿರಾಕರಿಸಿದ್ದಕ್ಕಾಗಿ ಉಡುಪಿಯ ಯುವತಿ ಮಾತ್ರವಲ್ಲದೆ ಆಕೆಯ ಕುಟುಂಬದ ಇನ್ನೂ ಮೂವರನ್ನು ಅವಳ ಜೊತೆಗೇ ಕೊಂದು ಹಾಕಲಾಯಿತು. ಎಲ್ಲ ವಿಷಯಕ್ಕೂ ಧರ್ಮವನ್ನು ತಳುಕು ಹಾಕುವ ಇಂದಿನ ದಿನಮಾನದಲ್ಲಿ, ಆ ಪ್ರಕರಣದಲ್ಲಿ ಅಪರಾಧಿ ಹಿಂದೂವಾಗಿದ್ದ. ಸಂತ್ರಸ್ತ ಯುವತಿ ಮುಸ್ಲಿಮಳಾಗಿದ್ದಳು. ಹೀಗಾಗಿ, ಇದು ದೊಡ್ಡ ಸದ್ದು ಮಾಡಲಿಲ್ಲ. ನಾಡಿಗೆ ಬೆಂಕಿ ಬೀಳಲಿಲ್ಲ. ಸೌಜನ್ಯಾ ಪ್ರಕರಣದಲ್ಲಿ ಧರ್ಮದ ಲೇಪ ಇಲ್ಲ. ಆ ಕಾರಣಕ್ಕೆ ಆ ಬಗ್ಗೆ ಕೆಲವರು ಮಾತೇ ಆಡುವುದಿಲ್ಲ. ಹಿಂದಿನ ತಿಂಗಳು ತುಮಕೂರಿನಲ್ಲಿ ರುಕ್ಸಾನ ಎಂಬಾಕೆ ಪ್ರದೀಪ್ ಎಂಬ, ತಾನು ಪ್ರೀತಿಸಿದ ವ್ಯಕ್ತಿಯಿಂದ ಅಮಾನುಷವಾಗಿ ಕೊಲೆಯಾದಳು. ಆ ಪ್ರಕರಣವು ಸುದ್ದಿಯೇ ಆಗಲಿಲ್ಲ. ವಾಸ್ತವದಲ್ಲಿ ಇಂತಹ ಪ್ರಕರಣಗಳೇ ಸಂಭವಿಸಬಾರದು. ಕಾನೂನು ಸುವ್ಯವಸ್ಥೆ ಅಷ್ಟು ಬಿಗಿಯಾಗಿ ಕೆಲಸ ಮಾಡಬೇಕು ಎನ್ನುವುದು ಎಷ್ಟು ನಿಜವೋ ಹೆಣ್ಣುಮಕ್ಕಳ ಮೇಲಿನ ಆಕ್ರಮಣ ಸಹಜ ಎಂಬಂತೆ ಇರುವ ಮನಃಸ್ಥಿತಿಯನ್ನು ನಾಶ ಮಾಡಬೇಕಿರುವುದೂ ಅಷ್ಟೇ ಮುಖ್ಯ.

ಇಂತಹ ಪ್ರಕರಣದಲ್ಲಿ ಅಪರಾಧಿಗಳ ಧರ್ಮದ ಆಧಾರದಲ್ಲಿ ಪ್ರಕರಣಗಳನ್ನು ಪರಿಗಣಿಸುವುದು, ಅಪರಾಧದ ಇನ್ನೊಂದು ರೂಪವಷ್ಟೇ ಆಗಿರುತ್ತದೆ. ಆರೋಪಿಯ ಹಿನ್ನೆಲೆ ತನಗೆ ಅನುಕೂಲಕರ ಅನ್ನಿಸಿದರೆ ಆ ಸಂಭ್ರಮ ಎಷ್ಟಿರುತ್ತದೆಂದರೆ, ಸಂತ್ರಸ್ತಳ ನೋವು ಟಿಆರ್‌ಪಿಯ ಹಿನ್ನೆಲೆ ಸಂಗೀತದಂತೆ ಇವರಿಗೆ ಕೇಳಿಸುತ್ತದೆ. ಬಕಪಕ್ಷಿಯ ಉನ್ಮಾದ, ರಣಹದ್ದಿನ ಕೇಕೆಗಳಿಗೆ ನ್ಯಾಯ ಅನ್ಯಾಯದ, ಸರಿ ತಪ್ಪಿನ ವಿವೇಚನೆಯೇ ಇರುವುದಿಲ್ಲ. ಕೆಲವರಿಗೆ ಇದು ವೋಟು ತಂದುಕೊಡುವ ಅಕ್ಷಯ ಪಾತ್ರೆಯಂತೆ ಕಂಡರೆ, ಇನ್ನು ಕೆಲವರಿಗೆ ಇದು ಎಲ್ಲಿ ವೋಟನ್ನು ಕಳೆದುಬಿಡುತ್ತದೋ ಎಂಬ ಆತಂಕ ಮಾತ್ರ ಆಗುತ್ತದೆ. ಕಳೆದುಕೊಂಡವರ ನೋವನ್ನೂ ಊಟದ ತಟ್ಟೆಯ ಅನ್ನ ಎಂಬಂತೆ ಗಪಗಪಿಸುವ ಇವರ ವರ್ತನೆಗಳನ್ನು ಅಳೆಯಲಾರದ ಮಂದಿಯ ಮೊದ್ದುತನ ವಿಷಾದಪರ್ವದ ಇನ್ನೊಂದು ಅಧ್ಯಾಯ. ಇಂತಹ ಪ್ರಕರಣಗಳನ್ನು ಸ್ಪಷ್ಟವಾಗಿ, ದಿಟ್ಟವಾಗಿ, ಖಚಿತವಾಗಿ ಒಕ್ಕೊರಲಿನಿಂದ ಧಿಕ್ಕರಿಸುವ ನಡೆಯೇ ಕಾಣಿಸದಿರುವುದು ಏನನ್ನು ಹೇಳುತ್ತಿದೆ?



ಒಂದು ಸಮಾಜವಾಗಿ ನಾವು ಹೇಗೆ ವ್ಯವಹರಿಸುತ್ತಿದ್ದೇವೆ? ನಮಗೆ ಬೇಕಾದಾಗ ಅಬ್ಬರಿಸಿ, ಬೇಡವಾದಾಗ ಮೌನಕ್ಕೆ ಶರಣಾಗುತ್ತೇವೆ. ವ್ಯಕ್ತಿಗತ ಸ್ಪಂದನೆ ಮತ್ತು ಜವಾಬ್ದಾರಿಗಳನ್ನು ನಾವು ಸರಿಯಾಗಿ ನಿರ್ವಹಿಸುತ್ತಿದ್ದೇವೆಯೇ? ನಾವು ಹಾಗೆ ನಿರ್ವಹಿಸದೇ ಇದ್ದಲ್ಲಿ ಪರೋಕ್ಷವಾಗಿ ಕೆಲವು ಕೊಲೆ, ಅತ್ಯಾಚಾರಗಳನ್ನು ಬೆಂಬಲಿಸಿದಂತೆ ಆಗುವುದಿಲ್ಲವೇ? ಆ ಬಗ್ಗೆ ನಮ್ಮ ಆತ್ಮಸಾಕ್ಷಿ ಮಾತಾಡುವುದಿಲ್ಲವೇ? ನಮ್ಮ ಜಾತಿ, ಧರ್ಮ, ಪಕ್ಷ, ಪಂಥದ ಬಗೆಗಿನ ಪ್ರೀತಿಯು ಮನುಷ್ಯತ್ವವನ್ನೇ ಬಲಿ ಕೊಡುತ್ತಿದೆ. ಆದರೆ ಇದರ ಪರಿಣಾಮವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ತಪ್ಪು ಯಾರು ಮಾಡಿದರೂ ತಪ್ಪೇ. ತಪ್ಪು ಸರಿಯ ವಿವೇಚನೆಯೊಂದೇ ಅಂತಿಮ ಮಾನದಂಡವಾಗಬೇಕು. ನೇಹಾ ಪ್ರಕರಣದಲ್ಲಿ ತಪ್ಪಿತಸ್ಥನ ಬಂಧನ ಆಗಿದೆ. ಆದರೆ ಇದಿಷ್ಟೇ ಸಾಲದು. ತಕ್ಷಣವೇ ಆತನಿಗೆ ಯಾವ ಕಠಿಣ ಶಿಕ್ಷೆ ಆಗಬೇಕೋ ಅದು ಆಗಬೇಕು. ಇದರಲ್ಲಿ ವಿಳಂಬವಾದರೆ ಅದಕ್ಕೆ ಯಾವ ಸಮರ್ಥನೆಯೂ ಇರುವುದಿಲ್ಲ.

ಕೊಲೆಗೆ ಕಾರಣಗಳನ್ನು ಹುಡುಕುವುದು ಅರ್ಥಹೀನ. ಯಾವ ಕಾರಣವೂ ಕೊಲೆಗೆ ಸಮರ್ಥನೆಯಾಗುವುದಿಲ್ಲ. ಹಿಂದಿನ ಹತ್ತಾರು ವರ್ಷಗಳಿಂದ ದೇಶದಾದ್ಯಂತ ನಡೆದ ಅತ್ಯಾಚಾರ ಮತ್ತು ಕೊಲೆಯ ಪ್ರಕರಣಗಳಲ್ಲಿ ಅಪರಾಧಿ ಮತ್ತು ಸಂತ್ರಸ್ತರ ಹಿನ್ನೆಲೆಯು ಹೆಚ್ಚು ಸದ್ದು ಮಾಡಿರುವುದು ಕಂಡುಬರುತ್ತಿದೆ. ನಿರ್ಭಯಾ ಪ್ರಕರಣದಲ್ಲಿ ದೇಶದಾದ್ಯಂತ ಕಾಣಿಸಿದ ಆಕ್ರೋಶ ಮತ್ತು ಪ್ರತಿಭಟನೆ ಆನಂತರದಲ್ಲಿ ಸಂಘಟಿತವಾಗಿ ಕಾಣಿಸುತ್ತಿಲ್ಲ. ಇದೆಲ್ಲಾ ಚಿಂತಾಜನಕ ಸಂಗತಿ.

ಹೆಣ್ಣಿನ ಬಗೆಗಿರುವ ತುಚ್ಛ ಭಾವನೆ, ಅವಳು ತನ್ನ ಸೊತ್ತು ಎಂಬ ಮೂರ್ಖ ಚಿಂತನೆ, ಅವಳು ಗಂಡಿನ ಭೋಗಕ್ಕಾಗಿ, ಸೇವೆಗಾಗಿ ಹುಟ್ಟಿದವಳು ಎಂಬ ಅನೀತಿ, ಗಂಡನ್ನು ಹೆಣ್ಣು ಉಡುಗೆ ತೊಡುಗೆ ವರ್ತನೆಗಳಿಂದ ಪ್ರಚೋದಿಸಿದಾಗ ಅವನಿಗೆ ನಿಯಂತ್ರಣ ಇರುವುದಿಲ್ಲ ಎಂಬೆಲ್ಲಾ ರಿಯಾಯಿತಿಯ ಮಾತುಗಳಿಂದ ಅಪರಾಧಿಗಳನ್ನು ರಕ್ಷಿಸುವ ಕುತಂತ್ರ ಇವೆಲ್ಲವೂ ಶಿಕ್ಷಾರ್ಹ ಸಂಗತಿಗಳೇ. ಮೊದಲು ಇವನ್ನು ಅಳಿಸಿಹಾಕಬೇಕಿದೆ. ಹೆಣ್ಣು ಸಮಾನ ಮೌಲ್ಯವುಳ್ಳವಳು ಎಂಬುದನ್ನು ಬಾಲ್ಯದಿಂದಲೇ ಅರೆದು ಕುಡಿಸಬೇಕಾಗಿದೆ. ಕೆಲಸವಿಲ್ಲದ ಬೇಜವಾಬ್ದಾರಿ ಹುಡುಗರು ಕುಡಿತ, ಗಾಂಜಾ, ರಮ್ಮಿ, ಸೆಕ್ಸ್ ವಿಡಿಯೊಗಳ ದಾಸರಾಗಿ ಪರಿವೆ ಇಲ್ಲದೆ ಬೀಡುಬಿಟ್ಟಿರುವುದಕ್ಕೂ ನಮ್ಮ ಆಡಳಿತ ನೀತಿಗೂ ಸಂಬಂಧ ಇಲ್ಲವೇ? ಅಪರಾಧಿಗಳು ಬದಲಾಗದೆ ಅಪರಾಧ ಬದಲಾಗುವುದೇ? ಇಂತಹ ದುರಂತಗಳು ಮತ್ತೆ ಘಟಿಸದಿರಲಿ.

ಚುರುಮುರಿ



ಚೊಂಬಿಗೆ ಕೊಂಬು

• ಮಣ್ಣೆ ರಾಜು

ಚೊಂಬಿನ ಅಂಗಡಿ ಓನರ್ ಶಂಕ್ರಿ, ಸುಮಿಯನ್ನು ಸ್ವಾಗತಿಸಿ, 'ಬನ್ನಿ ಸಾರ್, ನಮ್ಮಲ್ಲಿ ವಿವಿಧ ಗಾತ್ರ-ಘನತೆಯ ಎಲ್ಲಾ ವೆರೈಟಿ ಚೊಂಬುಗಳಿವೆ' ಎಂದ.

'ಚುನಾವಣೆ ಗದ್ದಲ ಶುರುವಾದಾಗಿನಿಂದ ಚೊಂಬಿಗೆ ಕೊಂಬು ಬಂದುಬಿಟ್ಟಿದೆ ಸಾರ್?' ಶಂಕ್ರಿ ನಕ್ಕ.

'ಹೌದು ಸಾರ್, ಚೊಂಬಿನ ಮಾರ್ಕೆಟ್ ಮಾನ್ಯತೆ ಹೆಚ್ಚಾಗಿದೆ. ಮತದಾರರಿಗೆ ಹಂಚಲೆಂದು ಅವರ್‍ಯಾರೋ ಒಂದು ಲೋಡು ಚೊಂಬು ಕೊಂಡುಕೊಂಡರು. ಇನ್ನೊಂದು ಲೋಡ್‌ಗೆ ಆರ್ಡರ್ ಕೊಟ್ಟಿದ್ದಾರೆ' ಓನರ್ ಪಿಸುಗುಟ್ಟಿದ.

'ಸೀರೆ, ಕುಕ್ಕರ್ ಬದಲು ಮತದಾರರಿಗೆ ಚೊಂಬು ಕೊಡಲು ಶುರುಮಾಡಿದ್ದಾರಾ?' ಅಂದಳು ಸುಮಿ.

'ಹೌದು ಮೇಡಂ, ಮನೆ ಅಂದ್ಮೇಲೆ ಚೊಂಬು ಇರಲೇಬೇಕು. ಚೊಂಬು ಇಲ್ಲದ ಮನೆ ಯಾವುದಿದೆ ಹೇಳಿ? ಈಗ ಹಂಡೆ, ಗುಂಡಿ, ಕೊಳಗ, ಬಿಂದಿಗೆ, ಬಕೆಟ್‌ನ ಸ್ಕೋಪ್ ಕಮ್ಮಿಯಾಗಿ ಚೊಂಬಿಗೆ ಡಿಮ್ಯಾಂಡ್ ಬಂದಿದೆ. ಗೃಹೋಪಯೋಗಿ ಪಾತ್ರೆಗಳಲ್ಲಿ ಚೊಂಬಿನ ಪಾತ್ರ ದೊಡ್ಡದು'.

'ನೀರಿನ ಪ್ರತಿಭಟನೆಗಳಲ್ಲಿ ಖಾಲಿ ಕೊಡ ಪ್ರದರ್ಶನಕ್ಕಿಂತ ಖಾಲಿ ಚೊಂಬು ಪ್ರದರ್ಶನ ಕಂಫರ್ಟಬಲ್' ಅಂದ ಶಂಕ್ರಿ.

'ಬಾಟಲ್‌ನಲ್ಲಿ ನೀರು ಕುಡಿಯೋದು ಅನಾರೋಗ್ಯಕರ, ಅನಾಗರಿಕತನ. ಚೊಂಬಿನಲ್ಲಿ ನೀರು ಕುಡಿದರೆ ಆರೋಗ್ಯ, ಸೌಭಾಗ್ಯ ವೃದ್ಧಿಯಾಗುತ್ತದೆ ಎಂದು ಟಿ.ವಿ. ಚಾನೆಲ್ ಜ್ಯೋತಿಷಿ ಹೇಳಿದ್ದನ್ನು ನನ್ನ ಫ್ರೆಂಡ್ ವಾಟ್ಸ್‌ಆ್ಯಪ್ ಮಾಡಿದ್ದಾಳೆ' ಸುಮಿ ಮೊಬೈಲ್ ತೋರಿಸಿದಳು.

'ಚೊಂಬಿನ ಮಹಿಮೆ ಅಪಾರ. ನಾನು ಖಾಲಿ ಚೊಂಬು ಹಿಡಿದು ಬಂದು ವ್ಯವಹಾರ ಶುರುಮಾಡಿದೆ, ಚೊಂಬು ಅಕ್ಷಯ ಪಾತ್ರೆಯಾಗಿ ಇಂದು ಚೊಂಬಿನ ವ್ಯವಹಾರ ದೊಡ್ಡದಾಗಿದೆ'.

'ಸರಿ, ಹೆಂಡ್ತಿ ಕೋಪಗೊಂಡು ಎಸೆದರೂ ಡ್ಯಾಮೇಜ್ ಆಗದ ಗಟ್ಟಿಮುಟ್ಟಾದ ಚೊಂಬು ಕೊಡಿ'.

'ಇಪ್ಪತ್ತು ಚೊಂಬು ಪ್ಯಾಕ್ ಮಾಡಿ' ಅಂದಳು ಸುಮಿ.

'ಇಪ್ಪತ್ತು ಯಾಕೆ?'

'ಬಂಧುಬಳಗದ ಮದುವೆ, ನಾಮಕರಣ, ಗೃಹಪ್ರವೇಶದಲ್ಲಿ ಚೊಂಬು ಮುಯ್ಯಿ ಕೊಡೋಣ ಕಣ್ರೀ...' ಎಂದಳು ಸುಮಿ.

ದಿನದ ಟ್ವೀಟ್

ಪ್ರಬುದ್ಧ ಉತ್ತರ!



ಪಂಕಜಾ ಮುಂಡೆ ಅವರು ಸ್ಪರ್ಧಿಸಿರುವ ಬೀಡ್ ಕ್ಷೇತ್ರದಲ್ಲಿನ ಒಂದು ಪ್ರತ್ಯಕ್ಷ ವರದಿ... 'ಯಾರಿಗೆ ವೋಟು ಹಾಕುತ್ತೀರಿ?' ಎಂದು 7-8 ಜನರನ್ನು ವರದಿಗಾರ ಪ್ರಶ್ನಿಸಿದರು. ನೋಟಾ, ರೈತರ ಪಕ್ಷ ಎಂದು ತಲಾ ಒಬ್ಬರು ಹೇಳಿದರೆ, ಉಳಿದವರು ಎಂವಿಎ... ಎನ್‌ಸಿಪಿ- ಎಸ್‌ಪಿ ಅಭ್ಯರ್ಥಿ ಎಂದರು. ಹಿರಿಯ ರೈತರೊಬ್ಬರು 'ಇ.ಡಿ., ಸಿ.ಡಿ. ಅಂಥವಕ್ಕೆಲ್ಲ ಹೆದರಿಕೊಂಡು ಯಾರು ಓಡಿಹೋದರೋ ಅವರೆಲ್ಲರಿಗೂ ಪಾಠ ಕಲಿಸಲಿದ್ದೇವೆ' ಎಂದು ಹೇಳಿದ ಉತ್ತರ ಮಾತ್ರ ಉತ್ತಮವಾಗಿತ್ತು.

ಅರುಣ್ ಗಿರಿ

ಕಿಡಿನುಡಿ



ಒಳ್ಳೆಯ ಬಿಕ್ಕಟ್ಟನ್ನು ಎಂದಿಗೂ ವ್ಯರ್ಥವಾಗಲು ಬಿಡಬಾರದು! ನೀರು ಅಪಾರ ಪ್ರಮಾಣದಲ್ಲಿ ಇದ್ದಾಗ ಯಾರೂ ಕಿವಿಗೊಡದ ಜಲಸಂರಕ್ಷಣೆಯ ಉತ್ತಮ ಮಾದರಿಗಳನ್ನು ಕಾರ್ಯಗತಗೊಳಿಸಲು ಇದು ಸಕಾಲ!

(ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಅಂತರ್ಜಲ ಕಾರ್ಯಪಡೆ ರಚಿಸಲು ಮತ್ತು ಕೃತಕ ಬುದ್ಧಿಮತ್ತೆ ಆಧರಿಸಿದ ಅಂತರ್ಜಲ ಮೇಲ್ವಿಚಾರಣಾ ವ್ಯವಸ್ಥೆ ಅಳವಡಿಸಿಕೊಳ್ಳಲು ನಿರ್ಧರಿಸಿರುವುದಕ್ಕೆ ಪ್ರತಿಕ್ರಿಯೆ)

ಸ್ಯಾನ್ ಬ್ಯಾನರ್ಜಿ, ಸಹಸಂಸ್ಥಾಪಕಿ ಮತ್ತು ಸಿಇಒ, ಅಡ್ಡಾ ಸಾಫ್ಟ್‌ವೇರ್

25 ವರ್ಷಗಳ ಹಿಂದೆ

ಶನಿವಾರ, 24-4-1999

• ಬೇಗ ಕಸರತ್ತು ಮುಗಿಸಿ ಸೋನಿಯಾಗೆ ತಾಕೀತು

ನವದೆಹಲಿ, ಏ. 23- ಪರ್ಯಾಯ ಸರ್ಕಾರ ರಚನೆ ಸಾಧ್ಯತೆಯ ಕಸರತ್ತನ್ನು 'ಆದಷ್ಟು ಕೂಡಲೇ ಮುಗಿಸಲು' ಇತರ ಪ್ರತಿಪಕ್ಷಗಳ ಜತೆ ಸಮಾಲೋಚನೆ ನಡೆಸಲು ರಾಷ್ಟ್ರಪತಿ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಇಂದು ರಾತ್ರಿ ಮತ್ತಷ್ಟು ಕಾಲಾವಕಾಶ ನೀಡಿದ್ದಾರೆ. ಆದರೂ ಕಾಂಗ್ರೆಸ್ಸೇತರ ಪ್ರತಿಪಕ್ಷಗಳಲ್ಲಿ ಇನ್ನೂ ಅಸ್ಪಷ್ಟ ನಿಲುವು ಮುಂದುವರಿದಿರುವುದರಿಂದ ನೂತನ ಸರ್ಕಾರ ರಚನೆಯ ಪ್ರಶ್ನೆ ಡೋಲಾಯಮಾನವಾಗಿಯೇ ಇದೆ.

ಲೋಕಸಭೆಯಲ್ಲಿ ಎರಡನೇ ಪ್ರಮುಖ ಪಕ್ಷವಾದ ಕಾಂಗ್ರೆಸ್ ನೂತನ ಸರ್ಕಾರ ರಚಿಸುವ ಸಾಧ್ಯತೆಗಳನ್ನು ಪರಿಶೀಲಿಸಲು ಸೋನಿಯಾ ಗಾಂಧಿ ಅವರಿಗೆ ಎರಡು ದಿನ ಕಾಲಾವಕಾಶ ನೀಡಿದ್ದರು. ಈ ಅವಧಿ ಇಂದು ಮುಗಿದು, ಇಂದಿನವರೆವಿಗೆ 233 ಸದಸ್ಯರ ಬೆಂಬಲವನ್ನು ಮಾತ್ರ ಗಳಿಸಿದ್ದ ಅವರಿಗೆ ಪರ್ಯಾಯ ಸರ್ಕಾರ ರಚನೆಗೆ ಮತ್ತಷ್ಟು ಕಾಲಾವಕಾಶ ನೀಡಲಾಗಿದೆ.

• ಚುನಾವಣೆ ತಪ್ಪಿಸಲು ಅಟಲ್‌ಗೆ ಮೈತ್ರಿಕೂಟ ಅಧಿಕಾರ

ನವದೆಹಲಿ, ಏ. 23- ಕಾಂಗ್ರೆಸ್ ಬಣವು ಪರ್ಯಾಯ ಸರ್ಕಾರ ರಚನೆ ಮಾಡುವಲ್ಲಿ ವಿಫಲಗೊಂಡರೆ, ಮತ್ತೆ ಸರ್ಕಾರ ರಚನೆಗೆ ಮುಂದಾಗಲು ವಾಜಪೇಯಿ ಅವರನ್ನು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಇಂದು ತಮ್ಮ ಸಂಸದೀಯ ನಾಯಕನನ್ನಾಗಿ ಪುನರಾಯ್ಕೆ ಮಾಡಿಕೊಂಡಿವೆ.

ವಾಜಪೇಯಿ ಅವರು ಸಂಸದೀಯ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿ, ಹೊಸ ನಾಯಕನನ್ನು ಆಯ್ಕೆ ಮಾಡಿಕೊಳ್ಳುವಂತೆ ಮಾಡಿದ ಸಲಹೆಯನ್ನು ಸಭೆ ತಿರಸ್ಕರಿಸಿತು. ನಂತರ ಸಭೆಯು ವಾಜಪೇಯಿ ಅವರ ನಾಯಕತ್ವದಲ್ಲಿ ಮತ್ತೆ ಪೂರ್ಣ ವಿಶ್ವಾಸ ವ್ಯಕ್ತಪಡಿಸಿ ಅವರನ್ನೇ ಸಂಸದೀಯ ನಾಯಕನನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿಕೊಂಡಿದ್ದು ಇಂದಿನ ವಿಶೇಷ ಬೆಳವಣಿಗೆ.

50 ವರ್ಷಗಳ ಹಿಂದೆ

ಬುಧವಾರ, 24-4-1974

• ಲೋಕಸಭೆ ಮರು ಚುನಾವಣೆ: ಕಲ್ಬುರ್ಗಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ 88 ಸಾವಿರ ಅಧಿಕ ಮತಗಳ ಜಯ

ಬೆಂಗಳೂರು, ಏ. 23- ರಾಜ್ಯದ ರಾಜಕೀಯ ದೃಷ್ಟಿಯಿಂದ ಮಹತ್ವಪೂರ್ಣವಾದುದೆಂದು ಭಾವಿಸಲಾಗಿದ್ದ ಕಲ್ಬುರ್ಗಿ ಲೋಕಸಭಾ ಕ್ಷೇತ್ರದ ಮರು ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮರೆಡ್ಡಿ ಅವರು 87,791 ಮತಗಳಿಂದ ಭಾರಿ ಜಯ ಗಳಿಸಿದ್ದಾರೆ.

1971ರ ಐತಿಹಾಸಿಕ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲ 27 ಸ್ಥಾನಗಳನ್ನೂ ಗಳಿಸಿದ್ದ ಕಾಂಗ್ರೆಸ್, ಎರಡನೇ ಬಾರಿಗೆ ನಡೆದ ಪರೀಕ್ಷೆಯಲ್ಲಿ ಜಯ ಗಳಿಸಿ ತನ್ನ ಹಿಂದಿನ ವಿಕ್ರಮವನ್ನು ಉಳಿಸಿಕೊಂಡಿದೆ.

1971ರ ನಂತರ ಮಂಡ್ಯ ಕ್ಷೇತ್ರದಲ್ಲಿ ನಡೆದ ಮರು ಚುನಾವಣೆಯಲ್ಲಿ ಪಕ್ಷ ತನ್ನ ಸ್ಥಾನವನ್ನು ಉಳಿಸಿಕೊಂಡಿತು.

ಆನಂತರ ಕಲ್ಬುರ್ಗಿ ಕ್ಷೇತ್ರದಲ್ಲಿ ನಡೆದ ಮರು ಚುನಾವಣೆಯಲ್ಲೂ ಈಗ ತನ್ನ ಸ್ಥಾನವನ್ನು ಕಾಂಗ್ರೆಸ್ ಉಳಿಸಿಕೊಂಡಿದೆ.

ಸಂಗತ

ಪರಂಪರೆಯ ರಕ್ಷಣೆಗೆ ಅಮೆರಿಕದ ಬದ್ಧತೆ

ಇಂತಹ ಪ್ರತಿ ಯೋಜನೆಯಲ್ಲಿ, ಈ ಸಂಪ್ರದಾಯಗಳನ್ನೇ ಉಸಿರಾಗಿಸಿಕೊಂಡವರ ಜೊತೆ ಅಮೆರಿಕವು ಬಹಳ ಹತ್ತಿರದಿಂದ ಕೆಲಸ ಮಾಡುತ್ತದೆ

• ಕ್ರಿಸ್ ಹಾಜಸ್

ವಿಶ್ವ ಪಾರಂಪರಿಕ ದಿನವನ್ನು ನಾವು ಈಚೆಗೆ ಆಚರಿಸಿದ್ದೇವೆ. ನಮ್ಮ ಇತಿಹಾಸದ ವೈವಿಧ್ಯ ಹಾಗೂ ಆಳವನ್ನು ಹೇಳುವ ಸ್ಮಾರಕಗಳನ್ನು ಗುರುತಿಸುವ ಕೆಲಸ ಮಾಡುವ ದಿನ ಇದು. ನಮ್ಮ ಪರಂಪರೆಗಳನ್ನು ಸಂಭ್ರಮದಿಂದ ಕಾಣುವ ಸಂದರ್ಭದಲ್ಲಿ ನಾವು ನಿರ್ದಿಷ್ಟ ಕಟ್ಟಡಗಳು ಅಥವಾ ಕಲಾತ್ಮಕ ವಸ್ತುಗಳನ್ನು ಅರ್ಥಮಾಡಿಕೊಳ್ಳುವುದರ ಆಚೆಯೂ ನೋಟ ಹರಿಸುತ್ತೇವೆ. ಅವು ಪ್ರತಿನಿಧಿಸುವ ಸಾಂಸ್ಕೃತಿಕ ಇತಿಹಾಸ, ಸಂಬಂಧಗಳನ್ನು, ಅವು ಹೇಳುವ ಕಥೆಗಳನ್ನು ನಾವು ಕಾಣಲು ಮುಂದಾಗುತ್ತೇವೆ. ಅಮೆರಿಕ ಮತ್ತು ಭಾರತವು ಒಟ್ಟಾಗಿ ಕೆಲಸ ಮಾಡುವ ಕ್ಷೇತ್ರಗಳಲ್ಲಿ, ನಮ್ಮ ಪರಂಪರೆಯ ಪಾಲಿನ ಆಭರಣಗಳನ್ನು ರಕ್ಷಿಸಲು ನಾವು ಮಾಡುತ್ತಿರುವ ಕೆಲಸವು ಬೇರೆ ಯಾವುದೇ ಕ್ಷೇತ್ರದಲ್ಲಿನ ಕೆಲಸಕ್ಕಿಂತ ಹೆಚ್ಚು ಚೈತನ್ಯಶಾಲಿಯಾಗಿದೆ, ಹೆಚ್ಚು ವಿಶಿಷ್ಟವಾಗಿದೆ.

ಎರಡು ದಶಕಗಳಿಗೂ ಹೆಚ್ಚಿನ ಅವಧಿಯಿಂದ ಅಮೆರಿಕವು ವಿಶ್ವದಾದ್ಯಂತ ಇರುವ ಸಾಂಸ್ಕೃತಿಕ ಸಂಪತ್ತನ್ನು ಸಂರಕ್ಷಿಸಲು 'ಸಾಂಸ್ಕೃತಿಕ ಸಂರಕ್ಷಣೆಗಾಗಿ ರಾಯಭಾರಿಗಳ ನಿಧಿ' (ಎಎಫ್‌ಸಿಪಿ) ಹೆಸರಿನ ಕಾರ್ಯಕ್ರಮ ಜಾರಿಗೆ ತಂದಿದೆ. ಭಾರತದಲ್ಲಿ ಅಮೆರಿಕವು ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವದ ಹಲವು ಸ್ಮಾರಕಗಳನ್ನು ಸಂರಕ್ಷಿಸಲು 2.5 ಮಿಲಿಯನ್ ಅಮೆರಿಕನ್ ಡಾಲರ್‌ಗಿಂತ (₹ 20.82 ಕೋಟಿ) ಹೆಚ್ಚು ಮೊತ್ತ ವಿನಿಯೋಗಿಸಿದೆ. ಸುಂದರ್‌ವಾಲಾ ಬುರ್ಜ್, ಬತಾಶೆವಾಲಾ ಮೊಘಲ್ ಗೋರಿ ಸಂಕೀರ್ಣ ಅವುಗಳಲ್ಲಿ ಸೇರಿವೆ. ಅಲ್ಲದೆ, ಭಾರತದ ಜೊತೆ ಪಾಲುದಾರಿಕೆಯಲ್ಲಿ ನಾವು ಸ್ಥಾಯಿಯಲ್ಲದ ಇನ್ನೂ ಹಲವು ಆಸ್ತಿಗಳ ಸಂರಕ್ಷಣೆಗೆ ಈ ನಿಧಿಯನ್ನು ವಿನಿಯೋಗಿಸಿದ್ದೇವೆ. ನಶಿಸಿಹೋಗುತ್ತಿರುವ ಕೆಲವು ಜಾನಪದ ಸಂಗೀತ ಪ್ರಕಾರಗಳು, ತಾಳೆಗರಿ ಹಸ್ತಪ್ರತಿಗಳು ಹಾಗೂ ಬೆಂಗಳೂರಿನ ಯುನೈಟೆಡ್ ಥಿಯೊಲಾಜಿಕಲ್ ಕಾಲೇಜಿನಲ್ಲಿನ ಕೆಲವು ಅಪರೂಪದ ಪುಸ್ತಕಗಳ ಸಂರಕ್ಷಣೆ ಇವುಗಳಲ್ಲಿ ಸೇರಿವೆ. ಈ ಯತ್ನಗಳು ನಿನ್ನೆ ಮತ್ತು ನಾಳೆಗಳ ನಡುವೆ ಸೇತುವೆಯನ್ನು ನಿರ್ಮಿಸುತ್ತವೆ, ಹಿಂದಿನ ತಲೆಮಾರಿನ ಹಿರಿಮೆಗಳಿಂದ ಸ್ಫೂರ್ತಿ ಪಡೆಯಲು ನಾಳಿನ ತಲೆಮಾರುಗಳಿಗೆ ನೆರವಾಗುತ್ತವೆ.

ಮೈಸೂರಿನ ಜಯಲಕ್ಷ್ಮಿ ವಿಲಾಸ ಅರಮನೆಯಲ್ಲಿನ ಸಂಪತ್ತಿನ ಸಂರಕ್ಷಣೆಗೆ 3 ಲಕ್ಷ ಡಾಲರ್ (₹ 2.49 ಕೋಟಿ) ಒದಗಿಸಲು ಮೈಸೂರು ವಿಶ್ವವಿದ್ಯಾಲಯ ಹಾಗೂ ಡೆಕ್ಕನ್ ಹೆರಿಟೇಜ್ ಫೌಂಡೇಷನ್ ಜೊತೆ ಅಮೆರಿಕ ಮಾಡಿಕೊಂಡಿರುವ ಪಾಲುದಾರಿಕೆಯು ಒಂದು ಉದಾಹರಣೆ. ಅಲ್ಲಿ ಸಂರಕ್ಷಿಸಿ ಈಗ ಜಾನಪದ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇರಿಸಿರುವ ಸಂಗೀತ ವಾದ್ಯಗಳು, ನೃತ್ಯಕಲಾವಿದರ ಉಡುಗೆಗಳು, ಪುರಾಣ ಪಾತ್ರಗಳ ಬೊಂಬೆಗಳು ಅವುಗಳನ್ನು ರೂಪಿಸಿರುವ ಬಟ್ಟೆ, ಮರ, ಲೋಹದ ಪರಿಧಿಯನ್ನು ಮೀರಿ ನಿಲ್ಲುತ್ತವೆ. ಅವು ಹಿಂದಿನ ಕಾಲವನ್ನು ಕಾಣಲು ಕಿಟಕಿಗಳಿದ್ದಂತೆ, ಅವುಗಳನ್ನು ಬಳಸಿದವರ ಜೀವನದ ಮೇಲೊಂದು ನೋಟ ಹರಿಸಲು ಅವಕಾಶ ಕಲ್ಪಿಸುತ್ತವೆ. ಜಗತ್ತಿನಲ್ಲಿ ನಮ್ಮ ಅಸ್ಮಿತೆ ಹಾಗೂ ನಮ್ಮ ಸ್ಥಾನದ ಬಗ್ಗೆ ಅವು ನೀಡುವ ಒಳನೋಟಗಳಿಗೆ ಬೆಲೆ ಕಟ್ಟಲು ಆಗದು.

ಈ ಎಲ್ಲ ಕಾರ್ಯಕ್ರಮಗಳ ಮೂಲ ದ್ರವ್ಯ ಪಾಲುದಾರಿಕೆ. ಇಂತಹ ಪ್ರತಿಯೊಂದು ಯೋಜನೆಯಲ್ಲಿ, ಈ ಸಂಪ್ರದಾಯಗಳನ್ನೇ ಉಸಿರಾಗಿಸಿಕೊಂಡವರ ಜೊತೆ ಅಮೆರಿಕವು ಬಹಳ ಹತ್ತಿರದಿಂದ ಕೆಲಸ ಮಾಡುತ್ತದೆ. ಇದರಿಂದಾಗಿ, ಈ ಪರಂಪರೆಯನ್ನು ನಮಗೆಲ್ಲರಿಗಾಗಿ – ಸಂರಕ್ಷಣೆಯಲ್ಲಿ ನಿರತರಾದ ವೃತ್ತಿಪರರಿಗಾಗಿ, ನಿಪುಣ ಕಲಾವಿದರಿಗಾಗಿ, ಸಮುದಾಯಗಳ ನಾಯಕರಿಗಾಗಿ – ಸಜೀವಗೊಳಿಸುವ ಕೆಲಸ ಆಗುತ್ತದೆ. ಎಎಫ್‌ಸಿಪಿ ಯೋಜನೆಯು ಯಶಸ್ಸು ಕಾಣುವುದು ಕಲ್ಲು, ಮಣ್ಣುಗಳಿಂದ ಅಲ್ಲ. ಬದಲಿಗೆ, ಪ್ರತಿಯೊಬ್ಬ ಪಾಲುದಾರ ಹೊಂದಿರುವ ಬದ್ಧತೆ, ಪ್ರೀತಿಯಿಂದ.

ಈ ಯೋಜನೆಗಳು ಅಲ್ಲಿಗೆ ಭೇಟಿ ನೀಡುವವರಿಗೆ ಸ್ಫೂರ್ತಿ ಒದಗಿಸುತ್ತವೆ, ಸ್ಥಳೀಯ ಕರಕುಶಲಕರ್ಮಿಗಳಿಗೆ ಉದ್ಯೋಗ ಸೃಷ್ಟಿಸಿಕೊಡುತ್ತವೆ, ಸಮುದಾಯಗಳಿಗೆ ತಮ್ಮದೇ ಪರಂಪರೆಯ ಮಾಲೀಕತ್ವ ಹೊಂದಲು ನೆರವಾಗುತ್ತವೆ. ಮೈಸೂರಿನಲ್ಲಿ ಪುನರ್‌ನಿರ್ಮಿಸಲಾಗಿರುವ ಜಯಲಕ್ಷ್ಮಿ ವಿಲಾಸ ಅರಮನೆಯು ಕಲಿಕೆಯ ಕೇಂದ್ರವಾಗಲಿದೆ. ಅದು ಹೊಸ ಪ್ರವಾಸಿಗರನ್ನು ಸೆಳೆಯಲಿದೆ, ಇಡೀ ಪ್ರದೇಶಕ್ಕೆ ಆರ್ಥಿಕವಾಗಿ ಅನುಕೂಲಗಳನ್ನು ಹೊತ್ತು ತರಲಿದೆ. ಅಮೆರಿಕ ಮತ್ತು ಭಾರತದ ನಡುವಿನ ಸಾಂಸ್ಕೃತಿಕ ಪಾಲುದಾರಿಕೆಯು ಇಡೀ ಸಂಕಥನದ ಕೇಂದ್ರಭಾಗದಲ್ಲಿ ಜನರನ್ನು ಹೊಂದಿರುತ್ತದೆಯಾದ ಕಾರಣ, ಆ ಜನರ ಅನುಭವದ ಬಹುತ್ವ ಮತ್ತು ಅನುಭವದ ಸೌಂದರ್ಯವನ್ನು ಸಂಭ್ರಮದಿಂದ ಕಾಣುತ್ತದೆಯಾದ ಕಾರಣ, ಆ ಪಾಲುದಾರಿಕೆಯು ಯಶಸ್ಸು ಕಾಣುತ್ತದೆ. ಭಿನ್ನ ಅಭಿಪ್ರಾಯಗಳ ಕಾರಣಕ್ಕಾಗಿ ಬಹಳಷ್ಟು ಒಡೆದುಹೋಗಿರುವ ಜಗತ್ತಿನಲ್ಲಿ, ನಮ್ಮೆಲ್ಲರನ್ನು ಒಂದುಗೂಡಿಸುವ ಮಾನವತ್ವವನ್ನು ಇಂಥ ಕಾರ್ಯಕ್ರಮಗಳು ಮುಂಚೂಣಿಯಲ್ಲಿ ಇರಿಸುತ್ತವೆ.



ಸಂರಕ್ಷಣೆಯ ಹಾಗೂ ಸಂಭ್ರಮದ ಈ ಪಯಣವನ್ನು ಅಮೆರಿಕ ಮತ್ತು ಭಾರತ ಮುಂದುವರಿಸಲಿವೆ. ನಮ್ಮ ಪರಂಪರೆಯ ಅತ್ಯಂತ ಅಮೂಲ್ಯವಾದ ಸಂಗತಿಗಳನ್ನು ಸಂರಕ್ಷಿಸಲು ಹೊಸ ಪಾಲುದಾರಿಕೆಗಳನ್ನು ರೂಪಿಸಿಕೊಳ್ಳಲಿವೆ. ಪ್ರತಿಯೊಂದು ಪರಂಪರೆ, ಸ್ಮಾರಕ ಹಾಗೂ ಕಲಾಕೃತಿಗಳ ಹಿಂದಿನ ಮಾನವ ಪ್ರಯತ್ನವನ್ನು ನಾವು ಯಾವತ್ತಿಗೂ ಬಹಳ ಜಾಗರೂಕವಾಗಿ ಗುರುತಿಸುತ್ತೇವೆ. ವಿಶ್ವ ಪಾರಂಪರಿಕ ದಿನಾಚರಣೆ ನಡೆದಿರುವ ಈ ಸಂದರ್ಭದಲ್ಲಿ ನಾವು ಮಾನವ ಪರಂಪರೆಯನ್ನು ರಕ್ಷಿಸುವ ಬದ್ಧತೆಯನ್ನು ಮತ್ತೊಮ್ಮೆ ಖಚಿತಪಡಿಸುತ್ತಿದ್ದೇವೆ. ಹೀಗೆ ಹೇಳುವಾಗ ನಾವು, ನಮ್ಮ ಪರಂಪರೆಯು ಇತಿಹಾಸದ ಅವಶೇಷ ಮಾತ್ರವೇ ಅಲ್ಲ; ಬದಲಿಗೆ, ಅದು ಉಜ್ವಲ ಭವಿಷ್ಯಕ್ಕೆ ಒಂದು ಕೀಲಿಕೈ ಕೂಡ ಹೌದು ಎಂಬುದನ್ನು ಖಾತರಿಪಡಿಸುತ್ತೇವೆ.

ಲೇಖಕ: ಅಮೆರಿಕದ ಕಾನ್ಸುಲ್ ಜನರಲ್

ವಾಚಕರ ವಾಣಿ

ಚುನಾವಣಾ ಹಬ್ಬ: ಸಂಭ್ರಮದಿಂದ ಆಚರಿಸೋಣ

ಜಾತಿ-ಮತ- ಪಂಥವೆನ್ನದೆ, ಲಿಂಗಭೇದವಿಲ್ಲದೆ 18 ವರ್ಷ ಮೇಲ್ಪಟ್ಟ ಯುವಜನರಿಂದ ಹಿಡಿದು ಹಿರಿಯ ನಾಗರಿಕರವರೆಗೂ ಮತ ಚಲಾಯಿಸುವ ಹಕ್ಕನ್ನು ಸಂವಿಧಾನ ಕಲ್ಪಿಸಿಕೊಟ್ಟಿದೆ. ಉತ್ತಮ ಜನಪ್ರತಿನಿಧಿಯನ್ನು ಆಯ್ಕೆ ಮಾಡುವ ಜವಾಬ್ದಾರಿ ನಮ್ಮದಾಗಬೇಕಿದೆ. ಆಸೆ, ಆಮಿಷಗಳಿಗೆ ಒಳಗಾಗದೆ ನಿರಂಕುಶಮತಿಗಳಾಗಿ ಮತ ಹಾಕುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಪ್ರತಿ ಮತಕ್ಕೂ ಅದರದೇ ಆದ ಮಹತ್ವ ಇರುತ್ತದೆ. ಅದು, ಯೋಗ್ಯ ಜನಪ್ರತಿನಿಧಿಯ ಆಯ್ಕೆಗೆ ನೆರವಾದರೆ ಅದರ ಮೌಲ್ಯ ಇನ್ನಷ್ಟು ಹೆಚ್ಚುತ್ತದೆ ಮತ್ತು ನಮ್ಮ ಮನಃಸಾಕ್ಷಿಗೂ ಹಿತ. ಸ್ವವಿವೇಚನೆಯಿಂದ ಮತ ಚಲಾಯಿಸೋಣ. ಚುನಾವಣೆಯ ಈ ಹಬ್ಬವನ್ನು ಉತ್ಸಾಹ, ಉಲ್ಲಾಸದಿಂದ ಆಚರಿಸೋಣ. ದೇಶದ ವಿಕಾಸಕ್ಕೆ ಪೂರಕವಾಗುವಂತಹ ಉತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡೋಣ. ಈ ಸದವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳೋಣ.

ಸೋಮನಾಥ ಡಿ., ಹಾವೇರಿ

ಆರ್‌ಸಿಬಿ ಸೋತಿಲ್ಲ, ಗೆದ್ದಿದೆ!

ಐಪಿಎಲ್ ಪಂದ್ಯಗಳಲ್ಲಿ ಆರ್‌ಸಿಬಿ ತಂಡದ ಪ್ರದರ್ಶನವು ಅಭಿಮಾನಿಗಳಿಗೆ ನಿರಾಸೆ ತಂದಿದೆ, ನಿಜ. ಆದರೆ ಈ ತಂಡದ ಪ್ರವರ್ತಕರು ನೀರಿನ ಬವಣೆ ಹೆಚ್ಚಾಗಿರುವ ಬೆಂಗಳೂರಿನ ಮೂರು ಕೆರೆಗಳನ್ನು ಮರು ಅಭಿವೃದ್ಧಿಗೊಳಿಸಲು ಮುಂದಾಗಿದ್ದು, ಹಸಿರು ಅಭಿಯಾನ ಯೋಜನೆಯಲ್ಲಿ ತೊಡಗಿಕೊಂಡಿದ್ದು, ಈ ಮೂಲಕ ಇಂದಿನ ಅವಶ್ಯಕತೆಗೆ ನೀಡಿದ ತುರ್ತು ಗಮನ ಶ್ಲಾಘನೀಯ. ಆರ್‌ಸಿಬಿ ಖಂಡಿತವಾಗಿ ಈ ದಿಸೆಯಲ್ಲಿ ಜನಮನ ಗೆದ್ದಿದೆ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಕಟ್ಟಬೇಕಿದೆ ಮಹಿಳಾ ಪಕ್ಷ

ಮಹಿಳಾ ಮತದಾರರಿಗೆ ನೀಡಬೇಕಾದ ಪ್ರಾಮುಖ್ಯ ಕುರಿತ ನಟರಾಜ್ ಹುಳಿಯಾರ್ ಅವರ ಲೇಖನವನ್ನು (ಪ್ರ.ವಾ., ಏ. 23) ಓದಿದಾಗ, ಬಹುದಿನಗಳಿಂದ ಗಾಢವಾಗಿ ಕಾಡುತ್ತಿದ್ದ ವಿಚಾರಗಳು ಮುನ್ನೆಲೆಗೆ ಬಂದವು. ಪ್ರಸ್ತುತ ಭಾರತದ ಜನಸಂಖ್ಯೆಯ ಅರ್ಧದಷ್ಟು ಮತ್ತು ಮತದಾರರ ಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ರಾಜಕಾರಣದಲ್ಲಿ ತೊಡಗಿಕೊಳ್ಳಲು ಹಿಂಜರಿಯುತ್ತಿರುವುದು ಪುರುಷ ರಾಜಕಾರಣಿಗಳ ಸ್ವಾರ್ಥದ ಅಬ್ಬರದಿಂದಾಗಿ, ಮಹಿಳೆಯರಲ್ಲಿ ಬೇರುಬಿಟ್ಟ ಕೀಳರಿಮೆಯಿಂದಾಗಿ ಮತ್ತು ಆತ್ಮವಿಶ್ವಾಸದ ಕೊರತೆಯಿಂದಾಗಿ. ಇಂಥ ಅನೇಕ ಆತಂಕಗಳಿದ್ದರೂ ಅವುಗಳನ್ನು ಕಿತ್ತೊಗೆದು ಮಹಿಳೆ ಧೈರ್ಯದಿಂದ ಮುನ್ನುಗ್ಗುವ ಮನಸ್ಸು ಮಾಡದಿದ್ದರೆ, ಆಕೆಯ ಸಮಸ್ಯೆಗಳಿಗೆ ಪರಿಹಾರಗಳು ಸಿಕ್ಕಲಾರವು ಮತ್ತು ಸಂವಿಧಾನವು ನಮಗೆ ನೀಡಿದ ಪುರುಷ ಮತ್ತು ಮಹಿಳೆಯರ ಸರಿಸಮಾನತೆಯ ಹಕ್ಕು ನಿರರ್ಥಕವಾಗುತ್ತದೆ.

ಇಂದಿನ ರಾಜಕಾರಣವು ನೈತಿಕವಾಗಿ ಅಧಃಪತನಗೊಂಡಿರುವುದಕ್ಕೆ ಇರುವ ಕಾರಣಗಳನ್ನು ಕಂಡುಕೊಂಡು, ಅವುಗಳನ್ನು ತಡೆಯಲು ಮಹಿಳೆಯರು ಹಿಂಜರಿಯದೇ ಪ್ರಯತ್ನಿಸಬೇಕು. ರಾಜಕೀಯದಲ್ಲಿ ಪುರುಷರ ಅನ್ಯಾಯಗಳ ವಿರುದ್ಧ ಹೋರಾಡುವ ಧೈರ್ಯವನ್ನು ತಂದುಕೊಳ್ಳಬೇಕು. ತನ್ನ ಮನೆಯಲ್ಲಿ ಪತಿ ಮತ್ತು ಮಕ್ಕಳ ಅನುಮತಿಯನ್ನು ಪಡೆಯುವುದರಲ್ಲಿ ಯಶಸ್ವಿಯಾಗಬೇಕು. ಮಹಿಳೆಯು ದೃಢನಿರ್ಧಾರದೊಂದಿಗೆ ದೇಶದಲ್ಲಿ ಇದೇ ಮೊದಲಿಗೆ ಒಂದು ಸ್ವತಂತ್ರ ಮಹಿಳಾ ಪಕ್ಷವನ್ನು ಕಟ್ಟಬೇಕಾದ ಅನಿವಾರ್ಯ ಎಂದಿಗಿಂತಲೂ ಈಗ ತುಂಬ ಇದೆ. ಇದನ್ನು ಅರಿತು ನಮ್ಮ ಮಹಿಳೆಯರು ದಿಟ್ಟ ಹೆಜ್ಜೆ ಇಡಲು ಮುಂದಾಗಬೇಕಾಗಿದೆ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಕುದಿಯುವವರನ್ನು ಮಣಿಸುವವರು...!

'ಕುದಿಯುವವರು ಕುದಿಯಲಿ ಉರಿಯುವವರು ಉರಿಯಲಿ, ನಿನ್ನ ಪಾಡಿಗೆ ನೀನಿರು. ಕುದಿಯುವವರು ಆವಿಯಾಗುತ್ತಾರೆ, ಉರಿಯುವವರು ಬೂದಿಯಾಗುತ್ತಾರೆ' ಎಂಬ ಸಿದ್ಧೇಶ್ವರ ಸ್ವಾಮಿಗಳ ಸುಭಾಷಿತ (ಪ್ರ.ಜಾ., ಏ. 23) ಇಂದಿನ ರಾಜಕೀಯ ಹಾಗೂ ಸಾಮಾಜಿಕ ವಾತಾವರಣವನ್ನು ನೋಡಿ ಹೇಳಿದಂತಿದೆ.

ಎಲ್ಲ ಪಕ್ಷಗಳ ರಾಜಕೀಯ ಧುರೀಣರು ಕುದಿಯುತ್ತಾ, ಉರಿದುಕೊಳ್ಳುತ್ತಾ ತಾವೆಲ್ಲ ಅಜರಾಮರರೆಂಬ ಭ್ರಮೆಯಲ್ಲಿ ತೇಲುತ್ತಾ ಬಾಯಿಗೆ ಬಂದಂತೆ ಮಾತನಾಡುತ್ತಾ ತಲೆಬಿಸಿ ಮಾಡಿಕೊಂಡಿದ್ದಾರೆ. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿರುವ ಮತದಾರ ಮಾತ್ರ ಅಭ್ಯರ್ಥಿಗಳನ್ನು ಆವಿ ಮಾಡುವ, ಬೂದಿ ಮಾಡುವ ಶಕ್ತಿ ತನಗಿದೆ ಎಂಬುದು ಗೊತ್ತಿದ್ದರೂ ಎಂದೆಂದಿಗೂ ತನ್ನ ಬದುಕನ್ನು ತಾನೇ ಕಟ್ಟಿಕೊಳ್ಳಬೇಕೆನ್ನುವ ಸತ್ಯವನ್ನರಿತು ತನ್ನ ಪಾಡಿಗೆ ತಾನಿದ್ದಾನೆ ತಣ್ಣಗೆ.

ಬಿ.ಎಲ್.ಎಸ್.ಮೂರ್ತಿ, ಬೆಂಗಳೂರು

ಎದುರಾಳಿಗಳನ್ನು ಹಣಿಯಲು ಇಂಥ ಹೀನ ಕೃತ್ಯವೇ?

ರಾಜಕೀಯ ಯಾವ ಮಟ್ಟಕ್ಕೆ ಅಧಃಪತನಗೊಂಡಿದೆ ಎಂಬುದಕ್ಕೆ, ಹಾಸನ ಜಿಲ್ಲೆಯಲ್ಲಿ ಪೆನ್‌ಡ್ರೈವ್‌ಗಳ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿರುವ ಕೆಲವು ಹೆಣ್ಣುಮಕ್ಕಳ ಖಾಸಗಿ ಕ್ಷಣಗಳ ವಿಡಿಯೊಗಳು ಸ್ಪಷ್ಟ ನಿದರ್ಶನ. ಈ ವಿಡಿಯೊಗಳ ಮುಖ್ಯ ಗುರಿ ರಾಜಕೀಯ ಎದುರಾಳಿ ಹೌದು. ಆದರೆ ಆ ಚುನಾವಣಾ ಅಭ್ಯರ್ಥಿಗಿಂತ ಹೆಚ್ಚಾಗಿ ಇಲ್ಲಿ ಹಾನಿಗೆ ಒಳಗಾಗಿರುವವರು ಆ ವಿಡಿಯೊಗಳಲ್ಲಿರುವ ಹೆಣ್ಣುಮಕ್ಕಳು. ಅವರಿಗೆ ಸಂಬಂಧಿಸಿದ ಸರಿ ತಪ್ಪುಗಳ ಲೆಕ್ಕಾಚಾರ ಇಲ್ಲಿ ಅಪ್ರಸ್ತುತ. ತಮ್ಮ ಎದುರಾಳಿಯನ್ನು ಹಣಿಯಲು ಈ ಮಹಿಳೆಯರ ಮರ್ಯಾದೆಯನ್ನು ಏಕೆ ಬೀದಿಗೆ ತರಬೇಕು? ಅವರ ಕುಟುಂಬದವರ ಮರ್ಯಾದೆಯ ಪಾಡೇನು?

ಈ ವಿಡಿಯೊಗಳನ್ನು ಲೀಕ್ ಮಾಡಿರುವುದರ ಹಿಂದೆ ರಾಜಕೀಯ ಮುಖಂಡರ ಕೈವಾಡವನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲಾಗುವುದಿಲ್ಲ. ಎಲ್ಲಾ ಪಕ್ಷಗಳ ನಾಯಕರು ಮಹಿಳೆಯರ ಬಗ್ಗೆ, ಅವರ ಸುರಕ್ಷತೆಯ ಬಗ್ಗೆ, ಸಬಲೀಕರಣದಂತಹ ಸಂಗತಿಗಳ ಬಗ್ಗೆ ಸಕ್ಕರೆಲೇಪಿತ ಮಾತುಗಳನ್ನಾಡಿ, ತಾವೇ ಮಹಿಳೆಯರ ಉದ್ಧಾರಕರು ಎಂಬಂತೆ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾರೆ. ಆದರೆ ಹೀನ ಮಟ್ಟಕ್ಕೆ ಇಳಿಯುವಂತಹವರನ್ನು ತಮ್ಮ ಪಕ್ಷಗಳಿಗೆ ಸೇರಿಸಿಕೊಂಡಿರುತ್ತಾರೆ. ಈ ವಿಡಿಯೊಗಳ ಸೋರಿಕೆಯ ಹೀನ ಕೃತ್ಯದ ಹಿಂದಿರುವವರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಜರುಗಿಸಬೇಕು.

ಎ.ಜೆ.ಜಾವೀದ್, ಹಾಸನ

ಚುನಾವಣಾ ಚಾಣಾಕ್ಷರಿಗೆ ಈಗ ಬಲು ಬೇಡಿಕೆ



ಚುನಾವಣೆ ಬಂತೆಂದರೆ, ಪಕ್ಷಗಳ ಕಾರ್ಯಾಲಯಗಳು ಗಿಜಿ ಗಿಜಿ ಎನ್ನುತ್ತವೆ. ಚುನಾವಣೆ ಮುಗಿಯುವವರೆಗೂ ಇದೇ ಸ್ಥಿತಿ. ಚುನಾವಣೆಯಲ್ಲಿ ಪಕ್ಷದ ಕಾರ್ಯತಂತ್ರ ಏನಾಗಿರಬೇಕು, ಪ್ರಣಾಳಿಕೆ ಏನು, ಜನರು ಏನು ಬಯಸುತ್ತಿದ್ದಾರೆ... ಇವೇ ಮಾತುಕತೆಗಳು. ಆದರೆ, ಈಗ ಈ ಎಲ್ಲ ಚರ್ಚೆಗಳು ಈಗ ಒಂದು ಕೋಣೆಗೆ ಸೀಮಿತವಾಗಿವೆ. ಒಂದು ಲ್ಯಾಪ್‌ಟಾಪ್‌ಗೆ ಸೀಮಿತವಾಗಿವೆ. ಪಕ್ಷಗಳ ಚುನಾವಣಾ ಕಾರ್ಯತಂತ್ರ ರೂಪಿಸುವುದು ಪಕ್ಷಗಳ ನಾಯಕರಾಗಲಿ, ಕಾರ್ಯಕರ್ತರಾಗಲಿ ಅಲ್ಲ. ಬದಲಿಗೆ, ಚುನಾವಣಾ ಕಾರ್ಯತಂತ್ರ ರೂಪಿಸುವ ಸಂಸ್ಥೆಗಳು. ಇವುಗಳೇ ರಾಜಕೀಯ ಪಕ್ಷಗಳ ಗೆಲುವಿನ ಜೀವಾಳವಾಗಿವೆ. ಭಾರತದ ಚುನಾವಣೆ ರಾಜಕೀಯ ತಂತ್ರಗಾರಿಕೆಯನ್ನೇ ಈ ಸಂಸ್ಥೆಗಳು ಬದಲಾಯಿಸಿ ಬಿಟ್ಟಿವೆ...

• ಸುಕೃತ ಎಸ್.

‘ನಿಮ್ಮ ಬಳಿ ಶಕ್ತಿಯುತ ಸಂಕಥನವೊಂದಿರಬೇಕು. ನಿಮ್ಮ ವಿರೋಧಿಗಳಿಗಲ್ಲ, ನಿಮಗೇ ಯಾಕೆ ಜನ ಮತ ಹಾಕಬೇಕು ಎಂಬುದನ್ನು ಒತ್ತಿ ಹೇಳುವುದಕ್ಕೆ, ಜನರು ನಂಬುವಂಥ ಕತೆಗಳನ್ನು ಹೇಳಬೇಕು. ನಿಮ್ಮ ಬಳಿ ಇಂಥದ್ದೊಂದು ಕತೆ ಇದ್ದರೆ, ಜನರು ನಿಮಗೆ ಮತ ನೀಡುತ್ತಾರೆ’ ಎನ್ನುತ್ತಾರೆ ರಾಜಕೀಯ ವಿಶ್ಲೇಷಕ, ಪ್ರೊಫೆಸರ್ ಕೆ. ನಾಗೇಶ್ವರ್. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಆಂಧ್ರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಎರಡು ಬಾರಿ ಇವರು ಗೆಲುವು ಸಾಧಿಸಿದ್ದಾರೆ.

ನಾಗೇಶ್ವರ್ ಅವರು ಹೇಳಿದ ಸಂಕಥನಗಳನ್ನು ಈ ಮೊದಲು ರಾಜಕೀಯ ಪಕ್ಷಗಳೇ ರೂಪಿಸುತ್ತಿದ್ದವು. ತಮ್ಮ ಆಡಳಿತದಿಂದ, ತಮ್ಮ ನಡವಳಿಕೆಯಿಂದ, ತಮ್ಮದೇ ಕಾರ್ಯಕರ್ತರ ಪಡೆಗಳಿಂದ... ಆದರೆ, ಈಗ ಇಂಥ ಸಂಕಥನಗಳನ್ನು ರೂಪಿಸುವುದು ರಾಜಕೀಯ ಕಾರ್ಯತಂತ್ರ ರೂಪಿಸಲು ಸಲಹೆ, ಸಹಕಾರ ನೀಡುವಂಥ ಸಂಸ್ಥೆಗಳು. 2014ರ ಲೋಕಸಭಾ ಚುನಾವಣೆ ವೇಳೆಗೆ ದೇಶದಲ್ಲಿ ಇಂಥ 150 ಸಂಸ್ಥೆಗಳು ಕಾರ್ಯಾರಂಭ ಮಾಡಿದ್ದವು. 2024ರ ಹೊತ್ತಿಗೆ ಇವುಗಳ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ ಎಂದು ಅಂದಾಜಿಸಲಾಗಿದೆ. ರಾಜಕೀಯ ಪಕ್ಷಗಳು, ರಾಜಕಾರಣಿಗಳು ಇಂಥ ಸಂಸ್ಥೆಗಳಿಗೆ ಕೋಟಿ ಕೋಟಿ ಹಣ ನೀಡಿ, ಚುನಾವಣೆಯಲ್ಲಿ ಗೆಲುವಿನ ಹಾದಿ ಹಿಡಿದಿದ್ದಾರೆ, ಈ ಬಾರಿಯೂ ಗೆಲುವು ಸಾಧಿಸುವ ಹುಮ್ಮಸ್ಸಿನಲ್ಲಿದ್ದಾರೆ.

ಇದು ಭಾರತದಲ್ಲಿನ ವಿದ್ಯಮಾನ ಮಾತ್ರವಲ್ಲ. ಎಲ್ಲ ದೇಶಗಳ ದೊಡ್ಡ ದೊಡ್ಡ ನಾಯಕರು ಚುನಾವಣೆ ವೇಳೆಯಲ್ಲಿ ಇಂಥ ಸಂಸ್ಥೆಗಳ ನೆರವು ಪಡೆದುಕೊಂಡಿದ್ದಾರೆ. ಅಮೆರಿಕದಂಥ ದೇಶಗಳಲ್ಲಿ ಇದು ಹೊಸ ವಿಚಾರವೇನೂ ಅಲ್ಲ. ಆದರೆ, ಭಾರತದ ಮಟ್ಟಿಗೆ ಇಂಥ ಸಂಸ್ಥೆಗಳ ಕಾರ್ಯಾಚರಣೆ ಆರಂಭವಾದದ್ದು 2014ರಲ್ಲಿ. ಗುಜರಾತ್ ಮುಖ್ಯಮಂತ್ರಿ ಆಗಿದ್ದ ನರೇಂದ್ರ ಮೋದಿ ಅವರನ್ನು ‘ಅಭಿವೃದ್ಧಿಯ ಹರಿಕಾರ’ ಎಂದು ಬಿಂಬಿಸುವುದರ ಮೂಲಕವಾಗಿ. ಅಲ್ಲಿಂದೀಚೆಗೆ, ಕಾಂಗ್ರೆಸ್, ಟಿಎಂಸಿ, ಎಎಪಿ ಸೇರಿದಂತೆ ಹಲವು ಪಕ್ಷಗಳು ಇಂತಹ ಸಂಸ್ಥೆಗಳ ಮೊರೆ ಹೋಗಿವೆ. ರಾಜಕೀಯ ಪಕ್ಷ ಮಾತ್ರವಲ್ಲದೆ, ರಾಜಕಾರಣಿಗಳಿಗೂ ಇಂಥ ಸಂಸ್ಥೆಗಳು ನೆರವು ನೀಡುತ್ತವೆ.



ಬದಲಾದ ಕಾರ್ಯತಂತ್ರ

ಚುನಾವಣೆಯಲ್ಲಿ ಗೆದ್ದ ರಾಜಕಾರಣಿಯು ಐದು ವರ್ಷ ತನ್ನ ಕ್ಷೇತ್ರದಲ್ಲಿ ದುಡಿದು, ಜನರ ಸ್ಮೃತಿಗಳಲ್ಲಿ ಉಳಿದುಕೊಳ್ಳುವಂಥ ಕೆಲಸಗಳನ್ನು ಮಾಡಬೇಕಿತ್ತು. ಆದರೆ, ಈಗ ಜನರಿಗೆ ‘ಕಾಣಿಸುವಂಥ’ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೆ ಸಾಕು. ಕಾಣಿಸುವುದು ಎಂದರೆ, ಸಾಮಾಜಿಕ ಜಾಲತಾಣಗಳ ಉಪಯೋಗ. ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಕುರಿತು ಸಂಕಥನಗಳನ್ನು ಕಟ್ಟಿಕೊಳ್ಳಬೇಕು. ಅದು ಆಡಳಿತ ಪಕ್ಷದವರಿಗೂ ಸರಿಯೇ, ವಿರೋಧ ಪಕ್ಷದ ರಾಜಕಾರಣಿಗೂ ಸರಿಯೇ. ಅವರನ್ನು ಅವರು ಎಷ್ಟರ ಮಟ್ಟಿಗೆ ಕಾಣಿಸಿಕೊಳ್ಳುತ್ತಾರೊ ಅಷ್ಟರ ಮಟ್ಟಿಗೆ ಅವರು ಚಾಲ್ತಿಯಲ್ಲಿರುತ್ತಾರೆ. ಇಂಥ ಕೆಲಸಗಳನ್ನು ಈಗ ಇಂಥ ಸಂಸ್ಥೆಗಳು ಮಾಡುತ್ತಿವೆ.

ಇಂಥ ಪಕ್ಷಕ್ಕೆ, ಇಂಥ ವ್ಯಕ್ತಿಗೆ ಮತ ನೀಡುವುದು ಎನ್ನುವುದು ಒಂದು ಕುಟುಂಬದ, ಒಂದು ಸಮುದಾಯದ ನಿರ್ಧಾರವಾಗಿತ್ತು. ಆದರೆ, ಯುವಕರು ಈಗ ಇಂಥ ವರ್ತುಲಗಳಿಂದ ಹೊರಬಂದಿದ್ದಾರೆ. ಪೋಷಕರ ಅಭಿಪ್ರಾಯವೇ ಬೇರೆ, ಯುವಜನರ ಆಲೋಚನೆಗಳೇ ಬೇರೆ. ಇದನ್ನು ಸಾಧ್ಯವಾಗಿಸಿದ್ದು ಸಾಮಾಜಿಕ ಜಾಲತಾಣಗಳ ಬಳಕೆ. ಯುವಕರ ದಂಡೇ ಇರುವ ನಮ್ಮ ದೇಶದಲ್ಲಿ ಹೀಗೆ, ಸಾಂಪ್ರದಾಯಿಕ ಆಲೋಚನೆಗಳಿಂದ ಯುವಕರನ್ನು ಹೊರತಂದದ್ದು, 2014ರ ಚುನಾವಣೆ ಎಂದೇ ಹೇಳಬೇಕು. ‘ಗುಜರಾತ್ ಮಾದರಿ’ ಎನ್ನುವ ಸಂಕಥನ, ‘ಚಾಯ್ ಪೇ ಚರ್ಚಾ’ ಎನ್ನುವ ಚರ್ಚಾ ಕಾರ್ಯಕ್ರಮ ಯುವಜನರ ಗಮನವನ್ನು ಸೆಳೆಯಿತು. ಆಗ, ಭ್ರಷ್ಟಾಚಾರ ಎನ್ನುವ ಪೆಡಂಭೂತವನ್ನು ಓಡಿಸುವ ಮತ್ತು ಹೊಸ ಯುಗದ ಅಭಿವೃದ್ಧಿ ದೇಶವಾಗಿಸುವ ಸಂಕಥನವನ್ನು ರೂಪಿಸಿದ್ದು ರಾಜಕೀಯ ತಂತ್ರ ಪರಿಣತ ಪ್ರಶಾಂತ್ ಕಿಶೋರ್.

ಪಿ.ಕೆ ಎಂದೇ ಪ್ರಸಿದ್ಧರಾಗಿರುವ ಇವರು, ಗುಜರಾತ್‌ನ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರೊಂದಿಗೆ 2011ರಿಂದ ಕೆಲಸ ಶುರುವಿಟ್ಟಿದ್ದರು. 2013ರಲ್ಲಿ ಪಿ.ಕೆ ಅವರು ತಮ್ಮದೇ ಆದ, ‘ಸಿಟಿಜನ್ ಫಾರ್ ಅಕೌಂಟೆಬಲ್ ಗವರ್ನೆನ್ಸ್’ ಎನ್ನುವ ಎನ್‌ಜಿಒ ಅನ್ನು ಹುಟ್ಟು ಹಾಕಿದರು. ಐಐಎಂ, ಐಐಟಿಯಂಥ ಕಾಲೇಜುಗಳ ಉತ್ಸಾಹಿ ಯುವಕರ ತಂಡ ಅದಾಗಿತ್ತು. ಎರಡು ವರ್ಷಗಳ ಬಳಿಕ, ‘ಇಂಡಿಯನ್ ಪೊಲಿಟಿಕಲ್ ಆ್ಯಕ್ಷನ್ ಕಮಿಟಿ’ ಎಂದು ಸಂಸ್ಥೆಗೆ ಮರುನಾಮಕರಣ ಮಾಡಲಾಯಿತು. ಭಾರತದಲ್ಲಿ ಈಗಿರುವ ಇಂಥ ನೂರಾರು ಸಂಸ್ಥೆಗಳನ್ನು ಹುಟ್ಟು ಹಾಕಿದವರು, ಪ್ರಶಾಂತ್ ಕಿಶೋರ್ ಅವರ ಈ ಸಂಸ್ಥೆಯಲ್ಲಿಯೇ ಕೆಲಸ ಕಲಿತವರು.

ರಾಜಕಾರಣಿಯೊಬ್ಬರ ‘ಇಮೇಜ್’ ಏನೇ ಇರಲಿ. ಮಾಧ್ಯಮಗಳಲ್ಲಿ ವ್ಯಕ್ತಿಯ ಕುರಿತು ಯಾವ ರೀತಿ ಸುದ್ದಿಗಳು ಬಿತ್ತರವಾಗುವಂತೆ ಮಾಡಬೇಕು ಎಂಬುದನ್ನು ಈ ಸಂಸ್ಥೆಗಳು ನಿರ್ಧರಿಸುತ್ತವೆ. ಸಾಮಾಜಿಕ ಜಾಲತಾಣಗಳ ಮೂಲಕ ಆ ರಾಜಕಾರಣಿಯ ಇಮೇಜ್ ಅನ್ನು, ಜನಾನುರಾಗಿ ಆಗಿಸುವಲ್ಲಿ ಇಂಥ ಸಂಸ್ಥೆಗಳ ಕೆಲಸ ಮಾಡುತ್ತವೆ. ಆ ಮೂಲಕ ಆ ರಾಜಕಾರಣಿಯು ಗೆಲ್ಲುವುದಕ್ಕೆ ಸಹಕಾರ ನೀಡುತ್ತವೆ.

‘ಮೊದಲೆಲ್ಲಾ, ಚುನಾವಣೆಯಲ್ಲಿ ಗೆಲ್ಲುವುದು ಅಥವಾ ಸೋಲುವುದು ಎನ್ನುವುದು ಆಯಾ ನಾಯಕರ ಮೇಲೆ ನಿರ್ಧಾರವಾಗಿರುತ್ತಿತ್ತು. ಸ್ವಾತಂತ್ರ್ಯ ಚಳವಳಿಯಲ್ಲಿ ಹೋರಾಡಿದ ನಾಯಕರಿದ್ದರು. ಅದಕ್ಕಾಗಿಯೇ ಅವರಿಗೆ ಯಾವುದೇ ತಜ್ಞತೆಯ, ತಂತ್ರಗಾರಿಕೆಯ ಅವಶ್ಯಕತೆ ಇರಲಿಲ್ಲ. ಅವರು ಸೋಲು ಗೆಲುವುಗಳು ಮುಂದಿನ 15 ವರ್ಷಕ್ಕೆ ನಿರ್ಧರಿತವಾಗಿರುತ್ತಿದ್ದವು. ನಂತರ, ರಾಜನ ಮಗ ರಾಜನಾಗುತ್ತಾನೆ ಎನ್ನುವ ಸಂಪ್ರದಾಯ ಬಂತು. ಇದೇ ಮನಃಸ್ಥಿತಿಯು ಹಲವು ವರ್ಷಗಳ ಕಾಲ ಉಳಿದುಕೊಂಡಿತ್ತು. ಆದ್ದರಿಂದ, ರಾಜಕೀಯ ತಂತ್ರಗಾರಿಕೆಗಾಗಿ ಸಂಸ್ಥೆಗಳ ಜನನವು, ರಾಜಕಾರಣದಲ್ಲಿ ಹೊಸ ಅಧ್ಯಾಯದಂತಾಗಿದೆ’ ಎನ್ನುತ್ತಾರೆ ‘ಆ್ಯಕ್ಸಿಸ್ ಮೈ ಇಂಡಿಯಾ’ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಗುಪ್ತಾ.

ಮೊದಲೆಲ್ಲಾ ತಮ್ಮ ಕ್ಷೇತ್ರಗಳ ಮನೆ ಮನೆ ಮಾಹಿತಿಗಳು ಆಯಾ ರಾಜಕಾರಣಿಗಳಿಗೇ ಗೊತ್ತಿರುತ್ತಿತ್ತು. ಕಾರ್ಯಕರ್ತರಿಗೆ ಗೊತ್ತಿರುತ್ತಿತ್ತು. ಆದರೆ, ಈಗ ಕಾಲ ಬದಲಾಗಿದೆ. ಒಂದು ಹಂತದವರೆಗೆ, ಈಗಲೂ ಹಿರಿಯ ರಾಜಕಾರಣಿಗಳಿಗೆ ಇಂಥ ಮಾಹಿತಿಗಳಿವೆ. ಆದರೆ, ಯುವ ರಾಜಕಾರಣಿಗಳ ಮಾಹಿತಿ ಕಣಜ ಖಾಲಿ ಇದೆ. ಇಂಥ ರಾಜಕಾರಣಿಗಳಿಗೆ ಇಂಥ ಸಂಸ್ಥೆಗಳು ಸಹಕರಿಸುತ್ತವೆ.

ಮಿತಿಗಳೂ ಇವೆ

ಇಂಥ ಸಂಸ್ಥೆಗಳ ಸಹಾಯದಿಂದ ಗೆಲುವೇನೊ ದೊರಕೀತು. ಹಾಗೆಂದ ಮಾತ್ರಕ್ಕೆ ಆ ಗೆಲುವು ಅನಂತವೇನಲ್ಲ. ಅದು ಆ ಚುನಾವಣೆಯ ಮಟ್ಟಿಗಿನ ಕಾರ್ಯತಂತ್ರದ ಭಾಗವಾಗಿ ದೊರೆತ ಗೆಲುವಷ್ಟೆ. ಪಕ್ಷಗಳೇ ಇರಲಿ, ರಾಜಕಾರಣಿಯೇ ಇರಲಿ, ತಮ್ಮ ಆಡಳಿತದಿಂದ ಮಾತ್ರ ಈ ಗೆಲುವನ್ನು ಉಳಿಸಿಕೊಳ್ಳುವುದು ಸಾಧ್ಯ. ಚುನಾವಣೆ ಸಮಯದ ಇಂಥ ತಂತ್ರಗಾರಿಕೆಯ ಅರಿವು ಜನರಿಗೆ ಕ್ರಮೇಣ ತಿಳಿದುಬಿಡಲಿದೆ. ಇದೇ ಈ ಉದ್ಯಮದ ದೊಡ್ಡ ಮಿತಿ. ಒಂದು ಪಕ್ಷಕಷ್ಟೇ ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಸಂಸ್ಥೆಗಳೂ ಇವೆ. ಆದರೆ, ಹಲವು ಸಂಸ್ಥೆಗಳು ಚುನಾವಣಾ ಹೊತ್ತಿನಲ್ಲಷ್ಟೇ ಸಕ್ರಿಯವಾಗುತ್ತವೆ.

ಅಮೆರಿಕದಲ್ಲಿ ಒಂದು ಘಟನೆ ನಡೆಯಿತು. ಲಕ್ಷಗಟ್ಟಲೇ ಫೇಸ್‌ಬುಕ್ ಖಾತೆದಾರರು ನ್ಯಾಯಾಲಯದ ಮೆಟ್ಟಿಲೇರಿದ್ದರು. ತಮ್ಮ ಅನುಮತಿ ಇಲ್ಲದೆಯೇ, ತಮ್ಮ ಖಾಸಗಿ ಮಾಹಿತಿಗಳನ್ನು ಡೊನಾಲ್ಡ್ ಟ್ರಂಪ್ ಅವರಿಗೆ ಕಾರ್ಯತಂತ್ರ ರೂಪಿಸುತ್ತಿದ್ದ ಸಂಸ್ಥೆಯೊಂದಕ್ಕೆ ನೀಡಲಾಗಿದೆ ಎಂಬುದು ಆ ದೂರಾಗಿತ್ತು. ಆಡಳಿತದಲ್ಲಿರುವ ಪಕ್ಷಗಳು ಕಾರ್ಯಯೋಜನೆ ರೂಪಿಸುವುದಕ್ಕಾಗಿ, ತಮ್ಮ ಬಳಿ ಇರುವ ಮತದಾರರ ಮಾಹಿತಿಗಳನ್ನು ಇಂಥ ಖಾಸಗಿ ಸಂಸ್ಥೆಗಳಿಗೆ ನೀಡುತ್ತವೆ. ಇದು ಅಪಾಯಕಾರಿಯಾದಂಥ ಸಂಗತಿಯಾಗಿದೆ. ಆಂಧ್ರ ಪ್ರದೇಶದಲ್ಲಿ, ಟಿಡಿಪಿ ಸರ್ಕಾರವು ತನ್ನ ಮತದಾರರ ಎಲ್ಲ ಮಾಹಿತಿಗಳನ್ನು ರಾಜಕೀಯ ಕಾರ್ಯತಂತ್ರ ರೂಪಿಸುವ ಸಂಸ್ಥೆಯೊಂದರ ಸುಪರ್ದಿಗೆ ನೀಡಿದೆ ಎಂಬ ಆರೋಪಗಳನ್ನು ಮಾಡಿ, ವೈಎಸ್‌ಆರ್ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ನಂತರ, ಈ ಪ್ರಕ್ರಿಯೆಯನ್ನು ಸರ್ಕಾರ ನಿಲ್ಲಿಸಿತು.

ಗೆಲುವಿಗಾಗಿ ಇಡೀ ವ್ಯವಸ್ಥೆಯನ್ನೇ ಇಂಥ ಸಂಸ್ಥೆಗಳು ತಮ್ಮ ಕೈಗೆ ತೆಗೆದುಕೊಂಡು ಬಿಡುತ್ತದೆ. ಪಕ್ಷವೊಂದರ ಭಾರಿ ಗೆಲುವಿನ ಕಾರಣವು ಇಂಥ ಸಂಸ್ಥೆಗಳಾಗಿರುವುದರಿಂದ, ‘ಇಮೇಜ್ ಬಿಲ್ಡಿಂಗ್’ ನೆಪದಲ್ಲಿ ಇವುಗಳು ಸರ್ಕಾರದ ಆಡಳಿತದಲ್ಲಿಯೂ ಮೂಗು ತೂರಿಸುವ ಅಪಾಯವೂ ಇರುತ್ತದೆ. ಇದು ಕೂಡ ಅಪಾಯಕಾರಿ ಸನ್ನಿವೇಶಗಳನ್ನು ತಂದೊಡ್ಡಬಲ್ಲದು.

ಮೊದಲೇ ಹೇಳಿದ ಹಾಗೆ, ಇಂಥ ಸಂಸ್ಥೆಗಳ ಏಕಮೇವ ಗುರಿಯು ತಮ್ಮ ಗ್ರಾಹಕನನ್ನು ಗೆಲ್ಲಿಸುವುದು. ಸೈದ್ಧಾಂತಿಕವಾಗಿ ಯಾವ ಸ್ಪಷ್ಟತೆಯೂ ಇಲ್ಲದ, ಹಣವೇ ಮುಖ್ಯವಾಗಿರುವ ವ್ಯವಸ್ಥೆಯಿಂದ ಆದರ್ಶಪ್ರಾಯವಾದದ್ದನ್ನು ನಿರೀಕ್ಷಿಸಲಾಗದು. ದೇಶದಲ್ಲಿರುವ ಹಲವು ಇಂಥ ಸಂಸ್ಥೆಗಳ ಮೇಲೆ ಇಂಥ ಆರೋಪಗಳಿವೆ.

ಆಧಾರ: ಪಿಟಿಐ, ಅಲ್‌ಜಜೀರಾ, ಬಿಬಿಸಿ



‘ಇಮೇಜ್ ಬಿಲ್ಡಿಂಗ್’ ಕಾರ್ಯತಂತ್ರ ಏನು, ಎತ್ತ?

ಆಗಷ್ಟೇ ಐಐಟಿ, ಐಐಎಂ ಸೇರಿದಂತೆ ಇನ್ನಿತರ ಉನ್ನತ ಶಿಕ್ಷಣಗಳನ್ನು ಮುಗಿಸಿದ ಯುವಕರನ್ನೇ ಇಂಥ ಸಂಸ್ಥೆಗಳು ತಮ್ಮೊಳಗೆ ಸೇರಿಸಿಕೊಳ್ಳುತ್ತವೆ. ಈ ಉದ್ಯಮ ಬಲ್ಲವರು ಹೇಳುವಂತೆ, 25–26 ವರ್ಷ ಯುವಕರನ್ನೇ ಇಂಥ ಸಂಸ್ಥೆಗಳು ಆಯ್ಕೆ ಮಾಡಿಕೊಳ್ಳುತ್ತವೆ. ಇದಕ್ಕೆ ಹಲವು ಕಾರಣಗಳಿವೆ. ಒಂದು, ಅವರಿಗೆ ಕೆಲಸ ಮಾಡುವ ಉತ್ಸಾಹ ಇರುತ್ತದೆ. ಎರಡನೆಯದು ಮತ್ತು ಮುಖ್ಯವಾದ ಕಾರಣವೇನೆಂದರೆ, ಇಂಥ ಯುವಕರಿಗೆ ಬಹುಪಾಲು ಯಾವುದೇ ಪಕ್ಷದ ಸಿದ್ಧಾಂತದ ಬಗ್ಗೆ ಒಲವು ಇರುವುದಿಲ್ಲ ಮತ್ತು ಬದ್ಧರೂ ಆಗಿರುವುದಿಲ್ಲ. ಹೀಗಾಗಿಯೇ ಇಂಥ ಸಂಸ್ಥೆಗಳಿಗೆ ರಾಜಕೀಯ ಪಕ್ಷಗಳ, ಅವುಗಳ ಸಿದ್ಧಾಂತಗಳ ಗೊಡವೆ ಇರುವುದಿಲ್ಲ. ಇಂತಹ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಅಗತ್ಯವಾಗಿ ಬೇಕಾದ ಗುಣ ಇದು. ಏಕೆಂದರೆ, ಉತ್ತರ ಪ್ರದೇಶದಲ್ಲಿ ಬಿಜೆಪಿಗಾಗಿ ಒಂದು ಸಂಸ್ಥೆ ಕೆಲಸ ಮಾಡುತ್ತಿದೆ ಎಂದಾದರೆ, ಅದೇ ಸಂಸ್ಥೆಯು ಅದೇ ಕಾಲಘಟ್ಟದಲ್ಲಿ ಆಂಧ್ರ ಪ್ರದೇಶದಲ್ಲಿ ಬಿಜೆಪಿಯ ವಿರೋಧಿ ಪಕ್ಷಕ್ಕೂ ಕೆಲಸ ಮಾಡಿಕೊಡುತ್ತಿರುತ್ತದೆ.

ಪಕ್ಷಗಳ ಕುರಿತು, ವ್ಯಕ್ತಿಗಳ ಕುರಿತು ಸಂಕಥನಗಳನ್ನು ರೂಪಿಸುವುದು ಸುಲಭದ ಮಾತಲ್ಲ. ಅದಕ್ಕಾಗಿ ಇಂಥ ಸಂಸ್ಥೆಗಳು ಹಲವು ತಿಂಗಳು ಮನೆ ಮನೆ ಸಮೀಕ್ಷೆ ನಡೆಸುತ್ತವೆ. ಜನರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತವೆ. ಜನರ ಒಲವು–ನಿಲುವುಗಳ ಸಂಪೂರ್ಣ ಮಾಹಿತಿಗಳನ್ನು ಕಲೆ ಹಾಕಿದ ನಂತರವಷ್ಟೇ ಕಾರ್ಯತಂತ್ರ ರೂಪಿಸುತ್ತವೆ. ಪಕ್ಷಗಳ ಕಾರ್ಯಕರ್ತರ ಪಡೆಗಳನ್ನು ಒಗ್ಗೂಡಿಸುತ್ತವೆ. ಒಂದು ಕೇಂದ್ರೀಕೃತ ವ್ಯವಸ್ಥೆಯನ್ನು ರೂಪಿಸಿ ಕೊಳ್ಳುತ್ತವೆ. ಒಂದರ್ಥದಲ್ಲಿ ಇಡೀ ಪಕ್ಷದ ಕಾರ್ಯ ಚಟುವಟಿಕೆಗಳನ್ನು ಅಥವಾ ರಾಜಕಾರಣಿಯೊಬ್ಬರ ಕಾರ್ಯಪಡೆಗಳನ್ನು ಸಂಪೂರ್ಣ ತನ್ನ ತೆಕ್ಕೆಗೆ ತಂದುಕೊಳ್ಳುತ್ತವೆ. ‘ಯಾವ ಸಂಸ್ಥೆಯ ಸಮೀಕ್ಷೆಯ ಮಾದರಿಯು ಹೆಚ್ಚು ಕ್ರಿಯಾಶೀಲವಾಗಿಯೂ, ಹೆಚ್ಚು ಸ್ಪಷ್ಟವಾಗಿಯೂ ಇರುತ್ತದೆಯೋ ಅದರ ಕಾರ್ಯತಂತ್ರವೂ ಫಲಿಸುತ್ತದೆ’ ಎನ್ನುತ್ತಾರೆ ಉದ್ಯಮದ ತಜ್ಞರು. ಪ್ರಣಾಳಿಕೆ ಹೇಗಿರಬೇಕು, ಪಕ್ಷದ ನಾಯಕನು ಯಾರೊಂದಿಗೆ ಮಾತನಾಡಬೇಕು, ಭಾಷಣದಲ್ಲಿ ಯಾವ ವಿಷಯಗಳನ್ನು ಪ್ರಸ್ತಾಪಿಸಬೇಕು ಎಲ್ಲವನ್ನೂ ಇಂಥ ಸಂಸ್ಥೆಗಳು ನಿರ್ಧರಿಸುತ್ತವೆ. ತಮ್ಮ ಸಮೀಕ್ಷೆಗಳ ಆಧಾರದಲ್ಲಿಯೇ ಇಂಥ ಕಾರ್ಯಚಟುವಟಿಕೆಗಳನ್ನು ಸಂಸ್ಥೆಗಳು ರೂಪಿಸುತ್ತವೆ.

ಸಿನಿ ಬಿಟ್ಸ್



ಧನಂಜಯಗೆ ಜೋಡಿಯಾದ ಐಶ್ವರ್ಯ

ಧನಂಜಯ ನಟನೆಯ ‘ಉತ್ತರಕಾಂಡ’ ಸಿನಿಮಾದಿಂದ ನಟಿ ರಮ್ಯಾ ಹೊರನಡೆದ ಬಳಿಕ ಆ ಸ್ಥಾನಕ್ಕೆ ಯಾರು ಬರಲಿದ್ದಾರೆ ಎನ್ನುವ ಕುತೂಹಲಕ್ಕೆ ತೆರೆಬಿದ್ದಿದೆ. ಬಹುಭಾಷಾ ನಟಿ ಐಶ್ವರ್ಯ ರಾಜೇಶ್ ಧನಂಜಯಗೆ ಜೋಡಿಯಾಗಿ ನಟಿಸಲಿದ್ದಾರೆ.

‘ದುರ್ಗಿ’ ಎಂಬ ಪಾತ್ರದಲ್ಲಿ ಅವರು ನಟಿಸಲಿದ್ದು, ಈಗಾಗಲೇ ತಂಡ ಸೇರಿಕೊಂಡಿದ್ದಾರೆ. ‘ದಿ ಗ್ರೇಟ್ ಇಂಡಿಯನ್ ಕಿಚನ್’, ‘ದಿ ವರ್ಲ್ಡ್ ಫೇಮಸ್ ಲವರ್’, ‘ವಡಾ ಚೆನ್ನೈ’, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ‘ಕಾಕ ಮುತ್ತೈ’, ‘ಜೋಮೋಂಡೆ ಸುವಿಶೇಷಂಗಳ್’ ಸೇರಿದಂತೆ ಹಲವಾರು ಹಿಟ್ ಚಿತ್ರಗಳಲ್ಲಿ ಐಶ್ವರ್ಯ ನಟಿಸಿದ್ದಾರೆ.

ರೋಹಿತ್ ಪದಕಿ ಸಾರಥ್ಯದಲ್ಲಿ ಚಿತ್ರದ ಮೊದಲ ಹಂತದ ಚಿತ್ರೀಕರಣ ವಿಜಯಪುರದಲ್ಲಿ ನಡೆಯುತ್ತಿದೆ. ಚಿತ್ರದ ವಿಶೇಷ ಏನು ಎಂದರೆ ನಿರ್ದೇಶಕ ಯೋಗರಾಜ್ ಭಟ್ ಅವರೂ ‘ಪಾಟೀಲ’ ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಮಲಯಾಳ ಚಿತ್ರರಂಗದ ನಟ ವಿಜಯ್ ಬಾಬು, ರಂಗಾಯಣ ರಘು, ಉಮಾಶ್ರೀ, ಗೋಪಾಲಕೃಷ್ಣ ದೇಶಪಾಂಡೆ ತಾರಾಬಳಗದಲ್ಲಿದ್ದಾರೆ.

ಪ್ರೇಮ್ ಹೊಸ ಚಿತ್ರ



ಇತ್ತೀಚೆಗಷ್ಟೇ ‘ನೆನಪಿರಲಿ’ ಪ್ರೇಮ್ ಅಭಿನಯದ ‘ಅಪ್ಪಾ ಐ ಲವ್ ಯೂ’ ಚಿತ್ರ ತೆರೆ ಕಂಡಿತ್ತು. ಒಂದು ವಿರಾಮದ ಬಳಿಕ ಚಿತ್ರರಂಗದಲ್ಲಿ ಮತ್ತೆ ಸಕ್ರಿಯವಾಗಿರುವ ಪ್ರೇಮ್ ಮತ್ತೊಂದು ಚಿತ್ರ ಘೋಷಿಸಿದ್ದಾರೆ.

ಹೆಸರಿಡದ ಚಿತ್ರದಲ್ಲಿ ಪ್ರೇಮ್ ರಗಡ್ ಅವತಾರ ತಾಳಿದ್ದಾರೆ. ಸಿನಿಮಾದ ಮುಹೂರ್ತ ನೆರವೇರಿದ್ದು, ಹನ್ನೊಂದು ವರ್ಷಗಳ ಬಳಿಕ ಮತ್ತೆ ಅವರು ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ತೇಜಸ್ ಬಿ.ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಮಧು ಗೌಡ ಬಂಡವಾಳ ಹೂಡಿದ್ದಾರೆ. ‘ಇದು ನನ್ನ ಮೊದಲ ಸಿನಿಮಾ. ಸಸ್ಪೆನ್ಸ್, ಥ್ರಿಲ್ಲರ್ ಚಿತ್ರ ಇದಾಗಿದೆ. ಟೈಟಲ್ ಚರ್ಚೆಯಲ್ಲಿದೆ. ರಂಗಾಯಣ ರಘು ಚಿತ್ರದ ಭಾಗವಾಗಿದ್ದಾರೆ. ಈ ತಿಂಗಳ ಅಂತ್ಯದಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ’ ಎಂದರು ನಿರ್ದೇಶಕರು. ‘ಈ ಮೊದಲು ಆ್ಯಕ್ಷನ್ ಸಿನಿಮಾ ಮಾಡಿದ್ದೆ. ಆದರೆ ಬಹಳಷ್ಟು ಗ್ಯಾಪ್ ಆಗಿತ್ತು. ಪ್ರೇಮಕಥೆಗಳಿಗೆ ಬ್ರ್ಯಾಂಡ್ ಆಗಿದ್ದೆ. ಒಂದೊಳ್ಳೆ ಕಥೆ ಸಿಕ್ಕಿದೆ. ಹೀಗಾಗಿ ಈ ಚಿತ್ರ ಒಪ್ಪಿಕೊಂಡೆ. ಸಿನಿಮಾದಲ್ಲಿ ಖಡಕ್ ಪೊಲೀಸ್ ಅಧಿಕಾರಿ ಪಾತ್ರ ನಿರ್ವಹಿಸುತ್ತಿದ್ದೇನೆ’ ಎಂದು ಪ್ರೇಮ್ ತಿಳಿಸಿದರು. ವಾಸುಕಿ ವೈಭವ್ ಸಂಗೀತ, ಆನಂದ್ ಮೀನಾಕ್ಷಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನುಡಿ ಬೆಳಗು

ಅನಾಥ ಭಾವದ ನೆನಪುಗಳು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಗೆಳೆಯರು ಸಿಕ್ಕಾಗ ಹೀಗೆ ಬಾಲ್ಯದ ನೆನಪುಗಳಿಗೆ ಜಾರುವುದು ವಾಡಿಕೆ. ಒಬ್ಬರೆಂದರು ‘ನನ್ನನ್ನು ಅಪ್ಪ ಒಂದನೇ ತರಗತಿಗೇನೆ ಹಾಸ್ಟೆಲ್‌ಗೆ ಸೇರಿಸಿದರು. ನಾನು ಆ ದಿನ ಅಳತೊಡಗಿದೆ. ವಾರ್ಡನ್ ನಿನ್ನ ತಂದೆ ಸಂಜೆಯೊತ್ತಿಗೆ ಬರುತ್ತಾರೆ ಎಂದು ಸಮಾಧಾನ ಹೇಳಿದರು. ರಾತ್ರಿ ತನಕ ಕಾದರೂ ಅವರು ಬರಲಿಲ್ಲ. ಅವರಿಗೆ ಹಳ್ಳೀಲಿ ಕೆಲಸವಿದೆಯಂತೆ ನಾಳೆ ಬರುತ್ತಾರೆ ಎಂದರು. ಆ ನಾಳೆಯೂ ಮುಗಿಯಿತು. ಮುಂದಿನ ವಾರ ಎಂದರು. ನಂತರ ಅನೇಕ ವಾರಗಳು ಹೀಗೆ ಉರುಳಿದವು. ಕಾದು ಸುಸ್ತಾಗಿ ನಾನು ಆ ಜಾಗಕ್ಕೆ ಅನಿವಾರ್ಯವಾಗಿ ಒಗ್ಗತೊಡಗಿದ್ದೆ. ಮನೆಯ ನೆನಪು ತುಂಬಾ ಕಾಡಿಸುತ್ತಿತ್ತು. ಅಪ್ಪ ಅಮ್ಮ ಯಾಕೆ ನನ್ನ ಹೀಗೆ ಹೊರಗಟ್ಟಿದರು ಎಂದು ಸಿಟ್ಟು ಬರುತ್ತಿತ್ತು. ಅವರಿಗೆ ನನ್ನ ಮೇಲೆ ಪ್ರೀತಿ ಇಲ್ಲ ಎಂದು ಮನಸ್ಸು ಹೇಳುತ್ತಿತ್ತು. ನನ್ನ ಹಾಗೆಯೇ ಮನೆ ಬಿಟ್ಟು ಬಂದ ಜೊತೆಗಾರರ ಅಳಲು ಒಂದು ಬಗೆಯ ಸಮಾಧಾನ ಕೊಡುತ್ತಿತು. ಆ ದಿನ ಅಪ್ಪನಿಗೆ ನನ್ನ ಅಟ್ಟಿದ್ದು ಸರಿ ಎಂದು ಈಗ ಅನ್ನಿಸುತಿದೆ. ಹಳ್ಳೀಲಿ ಇದಿದ್ದರೆ ನಾನು ಈ ಮಟ್ಟಕ್ಕೆ ಓದಿ ಬೆಳೆದು ವೈದ್ಯನಾಗಲು ಸಾಧ್ಯವಿರಲಿಲ್ಲ. ನಮ್ಮೂರಲ್ಲೇ ಉಳಿದ ನನ್ನ ಓರಗೆಯವರು ರೈತಾಪಿಗಳಾದರು. ಕೂಲಿಯಾಳುಗಳಾದರು. ಬಸ್ಸೂ ಇಲ್ಲದ, ಶಾಲೆಯೂ ಇಲ್ಲದ, ದಾರಿಯೂ ಕಾಣದ ಆ ಕುಗ್ರಾಮದಿಂದ ನಾನು ಬರುವಾಗ ಅತ್ತಿದ್ದೆ. ಈಗ ಅದೇ ಹಳ್ಳಿಯ ಜನರನ್ನು ಹೋಗಿ ಕಂಡು ಮಾತಾಡುವಾಗ ಸಂತಸ ಎನಿಸುತ್ತೆ. ಅವರ ಆರೋಗ್ಯ ವಿಚಾರಿಸಿ, ನನ್ನ ಕೈಲಾದ ಚಿಕಿತ್ಸೆ ಕೊಡುವುದು ತೃಪ್ತಿ ಎನಿಸುತ್ತದೆ. ನಮ್ಮೂರಿನ ಜನರ ಸೇವೆ ನೀನು ಮಾಡಬೇಕು ಎಂದು ಅಪ್ಪ ಹೇಳಿದ ಮಾತನ್ನು ಈಗಲೂ ನೆರವೇರಿಸುತ್ತಿದ್ದೇನೆ’ ಎಂದರು.

ಮತ್ತೊಬ್ಬರು ‘ನಾನು ಹೆಣ್ಣು ಮಗಳಾದ ಕಾರಣ ಅಪ್ಪ ನೆಂಟರಿಷ್ಟರ ಮನೆಗಳಲ್ಲಿ ಬಿಟ್ಟರು. ಅವರಿಗೆ ಆಗ ಮಕ್ಕಳಿರಲಿಲ್ಲ. ಆಗ ನನ್ನ ಚೆನ್ನಾಗಿ ನೋಡಿಕೊಂಡರು. ಅವರಿಗೇ ಮಕ್ಕಳಾದಾಗ ಸಹಜವಾಗಿ ನನ್ನ ಮೇಲಿನ ಕರುಣೆ ಮತ್ತು ಕಾಳಜಿ ಕಡಿಮೆಯಾಯಿತು. ಮನೆಗೆಲಸದಲ್ಲಿ ಕೈ ಜೋಡಿಸಿ ಓದುತ್ತಿದ್ದೆ. ಏನೋ ಒಂದು ಅನಾಥ ಭಾವ ಕಾಡುತ್ತಿತ್ತು. ಪ್ರೀತಿಯ ಕೊರತೆ ಕಾಡಿಸುತ್ತಿತ್ತು. ಮುಂದೆ ಮತ್ತೊಂದು ಸಂಬಂಧಿಕರ ಮನೆಯಲ್ಲಿ ಇದ್ದು ಓದು ಮುಂದುವರಿಸುವಾಗ ಅವರ ಮನೆಗೆ ಬರುವ ನೆಂಟರು ನನ್ನ ಕೆಲಸದಾಳಿನಂತೆ ಕಾಣುತ್ತಿದ್ದರು. ಒಂದು ಬಗೆಯ ಬಲವಂತದಲ್ಲೇ ಅವರು ನನಗೆ ಇರಲು ಜಾಗ ಕೊಟ್ಟಿದ್ದರು. ಅನೇಕ ಸಲ ಅವರ ಮಾತು, ವರ್ತನೆ ಹಿಂಸೆ ಎನಿಸುತ್ತಿತ್ತು. ಏನೂ ಹಿಂತಿರುಗಿ ಮಾತಾಡಲು ಸಾಧ್ಯವಿರಲಿಲ್ಲ. ಮೂಕಿಯಂತೆ ಇದ್ದುಬಿಟ್ಟೆ. ಆ ವಿಚಿತ್ರ ಸಂಕಷ್ಟಗಳು ನನ್ನ ಛಲವನ್ನು ಗಟ್ಟಿ ಮಾಡಿದವು. ಚೆನ್ನಾಗಿ ಓದಿ ಒಳ್ಳೆಯ ಕೆಲಸ ಪಡೆಯಬೇಕೆಂಬ ದೃಢತೆಯನ್ನು ಹುಟ್ಟಿಸಿದವು. ಈ ಕ್ಷಣಕ್ಕೂ ಅವೆಲ್ಲಾ ನೆನಪಾಗುತ್ತವೆ’ ಎಂದರು.

ಮನೆ ತೊರೆದು ಅನ್ಯರ ಮನೆಗಳಲ್ಲಿ, ಹಾಸ್ಟೆಲ್‌ಗಳಲ್ಲಿ ಇದ್ದು ಓದಿದವರ ಅನುಭವಗಳು ಹೆಚ್ಚು ಕಡಿಮೆ ಹೀಗೆ ಇದ್ದೀತು. ಬಾಲ್ಯದಲ್ಲೇ ಮನೆಯ ಪ್ರೀತಿ ಕಳಕೊಂಡವರು ತಮ್ಮ ಬದುಕಿನ ಸಾಧನೆಯಲ್ಲಿ ಈಗ ಮುಂದಿರಬಹುದು. ಆದರೆ ಅಂದು ಸಿಗದೆ ಹೋದ ಅವ್ವ ಅಪ್ಪನ ಬೆಚ್ಚಗಿನ ಪ್ರೀತಿ, ಬಾಂಧವ್ಯ ನೆನೆದು ಈಗಲೂ ಭಾವುಕರಾಗುತ್ತಾರೆ. ಜಗದ ಪ್ರೀತಿ ಪ್ರೇಮದ ಸಣ್ಣ ಹನಿಗೂ ಜಾತಕ ಪಕ್ಷಿಯಂತೆ ಕಾಯುತ್ತಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಏಪ್ರಿಲ್ 24, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಪ್ರತಿಪದ್ ಅಹೋರಾತ್ರ ನಕ್ಷತ್ರ ಸ್ವಾತಿ ಗಂ. 24-41 ಯೋಗ: ಸಿದ್ಧಿ(ಆಸ್ರಿಕ್) ಗಂ. 29-05 ಕರಣ : ಬಾಲವ ಗಂ. 18-06, ಮೇಷ ಮಾಸದ 12 ನೇ ದಿನ,

ಮಳೆನಕ್ಷತ್ರ: ಅಶ್ವಿನಿ 4.

ರಾಹುಕಾಲ : ಮಧ್ಯಾಹ್ನ 12-00 - 01-30

ಸೂರ್ಯೋದಯ : 06-16 ಸೂರ್ಯಾಸ್ತ : 06-41

ಮುಸ್ಲಿಂ ದಿನಾಂಕ : 14 ಶವ್ವಾಲ್ ಅದೃಷ್ಟ ಸಂಖ್ಯೆ : 5, 9

ಮೇಷ: ಜೀವನದ ಕಷ್ಟ ಸುಖಗಳು ತಿರುಗುವ ಚಕ್ರದಂತಿರುವುದರಿಂದ ನಿಮ್ಮ ಜೀವನದಲ್ಲೂ ಒಳ್ಳೆಯ ದಿನಗಳು ಬರಲಿವೆ ಎಂಬ ಆಶಾ ಭಾವನೆ ಮರೆಯದಿರಿ. ಮನೆಯಲ್ಲಿ ಮಕ್ಕಳ ಒಡನಾಟದಿಂದ ಮನಸ್ಸು ಉಲ್ಲಸಿತವಾಗುವುದು.

ವೃಷಭ: ಮನೆ ನಿರ್ಮಾಣ ಅಥವಾ ನವೀಕರಿಸುವಂತಹ ಆಲೋಚನೆಯಲ್ಲಿ ತೊಡಗುವಿರಿ. ನಿಮ್ಮ ಅಂತರಾತ್ಮದ ಮಾತು ಕೇಳುವುದರಿಂದ ಶ್ರೇಯಸ್ಸು ಉಂಟಾಗುತ್ತದೆ. ಸಣ್ಣ ಕೈಗಾರಿಕೆ ಉದ್ಯಮಿಗಳಿಗೆ ಅಧಿಕ ಲಾಭವಿದೆ.

ಮಿಥುನ: ಅಡಿಕೆ ಬೆಳೆಗಾರರು ನಷ್ಟದಿಂದ ಪಾರಾಗಲು ಪರ್ಯಾಯ ಬೆಳೆ ಬೆಳೆಯುವುದು ಸೂಕ್ತ ಎಂಬ ಯೋಚನೆ ಬರಬಹುದು. ನಿಮ್ಮ ಇತಿ ಮಿತಿಯ ಬಗ್ಗೆ ಮೇಲಿನ ಅಧಿಕಾರಿಗಳು ಅರಿವು ಮೂಡಿಸಲಿದ್ದಾರೆ.

ಕರ್ಕಾಟಕ: ನಿಮ್ಮ ಕೆಲವೊಂದು ಯೋಜನೆಗಳು ಇಂದು ನಿಮ್ಮನ್ನು ಹೊರತುಪಡಿಸಿ ಬೇರೆಯವರಿಗೂ ಸಹಾಯಕವಾಗಿರುತ್ತವೆ. ನಿಮ್ಮ ವಾಕ್ಚಾತುರ್ಯವು ಇಂದು ಸರಿಯಾದ ಸಮಯಕ್ಕೆ ನಿಮ್ಮ ಸಹಾಯಕ್ಕೆ ಬರಲಿದೆ.

ಸಿಂಹ: ಕ್ಷಿಪ್ರ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲ ನೀವು ಮತ್ತೊಮ್ಮೆ ಮರುಪರಿಶೀಲಿಸಲು ಹೋಗಿ ದಾರಿ ತಪ್ಪಬೇಡಿ. ಖರ್ಚು ಕಡಿಮೆ ಗಳಿಕೆ ಹೆಚ್ಚಿರುವುದರಿಂದ ನಿಮ್ಮ ಸಂಪಾದನೆಯಲ್ಲಿ ಹೆಚ್ಚಿನ ಪಾಲು ಉಳಿಸಬಹುದು.

ಕನ್ಯಾ: ಮನೆಯಲ್ಲಿ ಸಣ್ಣ ಕಲಹಕ್ಕೆ ನೀವು ಕಾರಣರಾದಿರಿ ಎಂದು ದುಃಖಿಸುವಂತಾಗಲಿದೆ. ನಿಮ್ಮನ್ನು ನೀವೇ ವಿಮರ್ಶಿಕೊಳ್ಳಬೇಕಾದ ಸ್ಥಿತಿ ಬರಲಿದೆ. ಅನಿರೀಕ್ಷಿತವಾಗಿ ಎದುರಾಗುವ ಅಡ್ಡಿ-ಆತಂಕಗಳಿಗೆ ಧೈರ್ಯಗೆಡದಿರಿ.

ತುಲಾ: ಮನುಷ್ಯ ಪ್ರಯತ್ನದ ಜೊತೆ ದೇವರ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ಎದುರಾಳಿಗಳು ಮರುಪ್ರಶ್ನೆ ಮಾಡಲಾಗದಂಥ ಮಾತನ್ನು ನೀವು ಆಡಿದಲ್ಲಿ ಉದ್ಯೋಗದ ಗೆಲುವು ನಿಮ್ಮದೆ ಆಗಿರುತ್ತದೆ.

ವೃಶ್ಚಿಕ: ರಾಜಕಾರಣಿಗಳು ಎಲ್ಲರೊಂದಿಗೆ ಸಹಕಾರ ಮನೋಭಾವನೆ ಮತ್ತು ಸರಳತೆಯಿಂದ ಮುಂದುವರಿದಲ್ಲಿ ಯಶಸ್ಸು ಇನ್ನೂ ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತದೆ. ಸ್ಟೀಲ್ ವ್ಯಾಪಾರಿಗಳಿಗೆ ಲಾಭವಾಗಲಿದೆ.

ಧನು: ಚಂಚಲ ಸ್ವಭಾವದ ನೀವು ಇಂದು ಅಚಲ ನಿರ್ಧಾರ ಕೈಗೊಳ್ಳುವುದು ಒಳಿತು. ಧಾರ್ಮಿಕ ಕೆಲಸದಲ್ಲಿ ಶ್ರದ್ಧೆ ತೋರಿದಷ್ಟೂ, ಅಭಿವೃದ್ಧಿಯ ದಾರಿ ಕಾಣಬಹುದು. ಗಣಪತಿಯ ಆರಾಧನೆ ವಿಘ್ನ ನಿವಾರಣೆ ಆಗಲಿದೆ.

ಮಕರ: ಉತ್ಪತ್ತಿಯನ್ನು ಲೆಕ್ಕಿಸಿ ಅರಸಿ ಬಂದ ಉದ್ಯೋಗ ದೂರಮಾಡುವುದು ನಿಮ್ಮ ಮೂರ್ಖತನವಾಗಲಿದೆ. ಸಂಜೆ ಕಾಲದ ವೇಳೆ ಆತ್ಮೀಯರ ಮನೆಯಲ್ಲಿನ ಸಮಾರಂಭಗಳಲ್ಲಿ ಭಾಗವಹಿಸಲಿದ್ದೀರಿ.

ಕುಂಭ: ರಾಜಕೀಯ ಸಂಬಂಧ ಹೊಂದಿರುವ ವ್ಯಕ್ತಿಗಳು ಇಂದು ನಿಮ್ಮ ಬಳಿ ದೇಹಿ ಎಂದು ಬರಲಿದ್ದು, ಅವರನ್ನು ನೀವು ಗೌರವಿಸುವಿರಿ. ನಿಮ್ಮ ವರ್ಚಸ್ಸು ವೃದ್ಧಿಸಿಕೊಳ್ಳಲು ಇತರರ ಜತೆ ಸಂವಾದದಲ್ಲಿ ಉತ್ತಮ ಭಾಷೆ ಬಳಸಿ.

ಮೀನ: ದಿನ ನಿತ್ಯದ ವಸ್ತುಗಳ ಖರೀದಿಯಿಂದ ಕುಟುಂಬ ಸದಸ್ಯರಿಂದ ದೂಷಣೆಗೆ ಒಳಗಾಗುವ ಸಾಧ್ಯತೆ ಇದೆ. ಮನೆಯ ಸಮೀಪ ನಡೆಯುವ ಸಾರ್ವಜನಿಕ ಕಾರ್ಯಕ್ರಮದಿಂದ ನಿಮಗೆ ಕಿರಿಕಿರಿಯಾಗಲಿದೆ.

ಪದಬಂಧ 5660


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ದೇಹದ ಒಂದು ಭಾಗ (4)
3. ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ (3)
5. ನಿಂತು ನಿಂತು ಬರುವ ಅಸ್ಪಷ್ಟ ಮಾತು (3)
7. ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8. ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11. ಗದ್ದಲ ಇಲ್ಲಿ ನಡೆಯುತ್ತಿದೆ (3)
12. ನರಿ ಹಿಡಿದಿರುವ ಜೇನುತುಪ್ಪ (3)
15. ಪ್ರತ್ಯಕ್ಷದ ವಿರುದ್ಧ ಪದ! (3)
16. ದಂತ ಮುಂದು ಮಾಡಿ ಯಾಚಿಸು! (4)
13. ರೀತಿಯೊಡನೆ ಒಡಗೂಡುವ ಸಂಪ್ರದಾಯ (3)

ಮೇಲಿಂದ ಕೆಳಕ್ಕೆ

1. ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2. ಬಿಡಲು ಯೋಗ್ಯವಾದುದು (2)
3. ಕೈಯಲ್ಲಿರುವ ಕಚ್ಚಾಪ್ರತಿ (3)
4. ವನಿತೆ ಸರಿಸಿದ ತೆರೆ! (4)
6. ಆ ದಿವಸ ತಂದುಕೊಂಡ ಕಾಳುಕಡಿ (3)
7. ಕೆಲಸಕ್ಕೆ ಬಾರದ ಮಾತು (5)
9. ನಯವಾಗಿ ಹೊಳೆಯುತ್ತಿರುವ ಅಕ್ಷಿ (3)
10. ಅತಿಯಾದ ದುಃಖ ಈ ಪರಿ ಬಂದಿದೆ (4)
11. ಬೆಳಕಿನ ಕಿಂಡಿಯಿದು (3)
14. ಉದಾಹರಣೆ ನೀಡುವಾಗಿನ ಬಾಯಾರಿಕೆ (2)



5659ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1. ಗೈರುಹಾಜರು 3. ಸಮಾಸ 5. ನಜ್ಜಾ 7. ಸುರಂಗ 8. ತಪ್ಪು ಕಲ್ಪನೆ 11. ಹಗುರ 12. ಹಬೆ 14. ಲುಬ್ಧಕ 15. ಅಂಕುರಾರ್ಪಣ

ಮೇಲಿಂದ ಕೆಳಕ್ಕೆ

1. ಗೈರುವಿಲೆ 2. ಜತನ 4. ಸಭಾಂಗಣ 6. ಜ್ಞಾತಿಕಲಹ 7. ಸುಲನೆ 8. ತವರ 9. ತಹಸೀಲು 10. ಅವಗುಣ 13. ಬೆಳಕು

ಸುಡೊಕು 6045

9		7						
	6		4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8			7	
6		4		9		1		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6044 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9



ಮೊದಲ ಮತದ ಸಂಭ್ರಮ



ಮೊದಲ ಬಾರಿ ಹಕ್ಕು ಚಲಾಯಿಸುತ್ತಿದ್ದೇನೆ. ಮತದಾನ ಪ್ರಕ್ರಿಯೆ ಹೇಗೆ ಇರುತ್ತದೆ ಎಂಬ ಕುತೂಹಲ ಇದ್ದೇ ಇದೆ. ಎಲ್ಲರಿಗೂ ಒಳ್ಳೆಯದನ್ನು ಬಯಸುವ, ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸುವ ವ್ಯಕ್ತಿಯ ಆಯ್ಕೆಗೆ ಒತ್ತು ನೀಡಲಾಗುವುದು. ಈಗ ಕಣದಲ್ಲಿರುವ ಅಭ್ಯರ್ಥಿಗಳಲ್ಲಿ ಸೂಕ್ತವಾದವರಿಗೆ ಮತ ಚಲಾಯಿಸುತ್ತೇನೆ. ಕಾಂಗ್ರೆಸ್, ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿಗಳು ನೀಡಿದ ಭರವಸೆಗಳನ್ನು ಪರಿಗಣಿಸಲಾಗುವುದು

ಎಸ್.ಸುಮಿತ್ರಾ, ತುಮಕೂರು



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವು ಸಾರ್ವಜನಿಕರ ದನಿ. ಮತದಾನ ನನ್ನ ಹಕ್ಕು ಮತ್ತು ಸಾಂವಿಧಾನಿಕ ಕರ್ತವ್ಯವೂ ಹೌದು. ಮರೆಯದೆ ಮತ ಚಲಾಯಿಸಿ, ಸದೃಢ ದೇಶ-ರಾಜ್ಯ ನಿರ್ಮಾಣಕ್ಕೆ ಕೊಡುಗೆ ನೀಡಬೇಕು. ನಮ್ಮ ಒಂದು ಮತದ ಮೇಲೆ ಸೂಕ್ತ ಜನಪ್ರತಿನಿಧಿಯ ಆಯ್ಕೆ ಮತ್ತು ರಾಜ್ಯ, ದೇಶದ ಅಭಿವೃದ್ಧಿಗೆ ಪೂರಕವಾಗುತ್ತದೆ. ಹೀಗಾಗಿ ಅಭ್ಯರ್ಥಿಗಳ ಬಗ್ಗೆ ಅರಿತುಕೊಂಡು ಮತ ಚಲಾಯಿಸಬೇಕು. ಮತದಾನ ದೇಶದ ಅಭಿವೃದ್ಧಿಗೆ ಪೂರಕವಾಗಬೇಕು.


ಪ್ರಾಂಜಲ ಪ್ರಶಾಂತ ರೇವಣಕರ, ವಿದ್ಯಾರ್ಥಿ, ಕಾರವಾರ

ಮತ ಆಮಿಷ: ಆಯೋಗದ ವಶ

₹85.09 ಕೋಟಿ ನಗದು

ಉಚಿತ ಉಡುಗೊರೆ	₹ 80.44 ಕೋಟಿ
ಮದ್ಯ	₹ 177.59 ಕೋಟಿ (1.47ಕೋಟಿ ಲೀ)
ಮಾದಕವಸ್ತು	₹ 11.29 ಕೋಟಿ (540 ಕೆ.ಜಿ.)
ಚಿನ್ನ	₹ 73.80 ಕೋಟಿ (131.43 ಕೆ.ಜಿ.)
ಬೆಳ್ಳಿ	₹1.18 ಲಕ್ಷ (301.89 ಕೆ.ಜಿ.)

ಎಂಥಾ ಮಾತು!



ಯುಪಿಎ ಅಧಿಕಾರ ಅವಧಿಯಲ್ಲಿ 10 ಗ್ರಾಂ ಚಿನ್ನದ ಬೆಲೆ ₹26 ಸಾವಿರ ಇತ್ತು. ಪ್ರಧಾನಿ ನರೇಂದ್ರ ಮೋದಿ ಅಧಿಕಾರಾವಧಿಯಲ್ಲಿ ₹74 ಸಾವಿರ ಆಗಿದೆ. ಹೆಣ್ಣು ಮಕ್ಕಳು ಚಿನ್ನದ ಬದಲು, ಕಬ್ಬಿಣದ ಸರ ಮಾಡಿಸಿಕೊಳ್ಳುವ ಸ್ಥಿತಿ ಇದೆ. ಬೆಲೆ ಏರಿಕೆ ಕುರಿತು ಯುಪಿಎ ವಿರುದ್ಧ ಬಿಜೆಪಿಯವರು ನಿತ್ಯ ಪ್ರತಿಭಟಿಸುತ್ತಿದ್ದರು. ಈಗ ಮೋದಿಯವರ ಅವಧಿಯಲ್ಲೇ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಗಗನಕ್ಕೇರಿದೆ

ಶಿವಾನಂದ ಪಾಟೀಲ, ಸಕ್ಕರೆ ಸಚಿವ



ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನಿಯನ್ನು ನೇರವಾಗಿ ಆಯ್ಕೆ ಮಾಡುವ ಅಧಿಕಾರ ಜನರಿಗಿಲ್ಲ. ಸ್ಥಳೀಯ ಜನರ ಸಮಸ್ಯೆಗಳಿಗೆ ಸ್ಪಂದಿಸುವ, ಕ್ಷೇತ್ರದ ಅಭಿವೃದ್ಧಿಗೆ ದುಡಿಯುವ ಪ್ರತಿನಿಧಿಗಳನ್ನು ಸಂಸತ್‌ಗೆ ಆಯ್ಕೆ ಮಾಡಬೇಕು. ಅಂತಹ ಎಲ್ಲ ಲೋಕಸಭಾ ಸದಸ್ಯರು ಸೇರಿ ಪ್ರಧಾನಿಯನ್ನು ಆಯ್ಕೆ ಮಾಡುತ್ತಾರೆ. ಪ್ರಧಾನಿ ಆಗುವವರ ಮುಖ ನೋಡಿ ಮತಚಲಾಯಿಸಿದರೆ ಕಂಗನಾ ರಣಾವತ್, ಗೌತಮ್ ಗಂಭೀರ್, ತೇಜಸ್ವಿಸೂರ್ಯ, ಹೇಮಮಾಲಿನಿ, ರಾಮನ ವೇಷ ಹಾಕುವ ವಿದೂಷಕರು ಸಂಸತ್ ಪ್ರವೇಶಿಸಿಬಿಡುತ್ತಾರೆ. ನಟಮಣಿಯೊಬ್ಬರು ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದು 2014ರಲ್ಲಿ ಅನ್ನುತ್ತಾರೆ. ಹಾಗೆ ಹೇಳಿದ್ದಕ್ಕಾಗಿಯೇ ಅವರಿಗೆ ಲೋಕಸಭಾ ಟಿಕೆಟ್ ನೀಡಲಾಗಿದೆ. ಈಗ ಮಹಾಪ್ರಭುವಿನ ಆಸ್ಥಾನಕ್ಕೆ ಮೈಸೂರಿನ ಮಹಾಪ್ರಭುಗಳು ಹೊಗಳುಭಟರಾಗಿ ಹೋಗುತ್ತಿದ್ದಾರೆ. ಇಂಥವರು ದೇಶದ ಬಡವರು, ಅವರ ಶಿಕ್ಷಣ, ಆರೋಗ್ಯದ ಬಗ್ಗೆ ಯೋಚಿಸುತ್ತಾರೆಯೇ?

ಪ್ರಕಾಶ್ ರಾಜ್, ನಟ.

ರಾಜಕೀಯ ಪಕ್ಷಗಳ 'ಚಿಪ್ಪು' ಪದ ಬಳಕೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ



ಹುಳಿಯಾರು: ರಾಜಕೀಯ ಪಕ್ಷಗಳ ಕೆಸರೆರಚಾಟದಲ್ಲಿ ಕಲ್ಪತರು ನಾಡಿನ ಮುಖ್ಯ ಬೆಳೆ ತೆಂಗಿನಕಾಯಿಗೆ ಅಪಮಾನವಾಗುತ್ತಿದೆ. ರಾಜಕೀಯ ನಾಯಕರು ತೆಂಗಿನಕಾಯಿ ಚಿಪ್ಪನ್ನು ಅಣಕವಾಡುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿದೆ.

ತೆಂಗಿನ ಚಿಪ್ಪು ಇಲ್ಲಿನ ರೈತರ ಪ್ರತೀಕ. ಪರಿಸರ ಸ್ನೇಹಿಯಾಗಿರುವ ಈ ಚಿಪ್ಪು ಪಾನೀಯ ಕುಡಿಯುವ ನೈಸರ್ಗಿಕ ಸಾಧನ. ಪ್ಲಾಸ್ಟಿಕ್ ಹಾಗೂ ಲೋಹದ ಲೋಟಗಳು ಮಾರುಕಟ್ಟೆಗೆ ಬರುವ ಮೊದಲು ಗ್ರಾಮೀಣ ಭಾಗದಲ್ಲಿ ಚಿಪ್ಪು ಮುಖ್ಯ ಸಾಧನವಾಗಿತ್ತು ಎಂದು ನೆಟ್ಟಿಗರು ಅಭಿಪ್ರಾಯ ಹರಿಯಬಿಡುತ್ತಿದ್ದಾರೆ.

ಚಿಪ್ಪಿನಿಂದ ಸುಂದರ ಲೋಟದ ಮಾದರಿ ತಯಾರಿಸಿ ಉತ್ತಮ ವ್ಯಾಪಾರ ಕಂಡು ಕೊಂಡಿದ್ದಾರೆ. ಚಿಪ್ಪಿನ ವ್ಯಾಪಾರ ಮಾಡುತ್ತ ಹಲವರು ಬದುಕು ಕಟ್ಟಿಕೊಂಡಿದ್ದಾರೆ ಎಂದೂ ಅಭಿಪ್ರಾಯಪಟ್ಟಿದ್ದಾರೆ.

'ಚಿಪ್ಪನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡು ಅಣಕಿಸಿದರೆ ಈ ಭಾಗದ ಜನರು ಸುಮ್ಮನಿರುವುದಿಲ್ಲ. ಚಿಕ್ಕನಾಯಕನಹಳ್ಳಿ ಚಿಪ್ಪಿನ ತಂಟೆಗೆ ಬಂದು ಹೀಯಾಳಿಸಿದ ನಿಮಗೆ ತಕ್ಕ ಪಾಠ ಕಲಿಸಲಾಗುವುದು' ಎಂದು ಚಿಕ್ಕನಾಯಕನಹಳ್ಳಿಯ ಗಂಗಾಧರ್ ಮಗ್ಗದಮನೆ ಎಂಬುವರು ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಕೆ ನೀಡಿದ್ದಾರೆ.

ವಯನಾಡ್: ರಾಹುಲ್ ಗಾಂಧಿ ಪರ ಸಚಿವ ಮುನಿಯಪ್ಪ ಪ್ರಚಾರ

ಪನಮರಂ (ಕೇರಳ): ವಯನಾಡ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಹುಲ್ ಗಾಂಧಿ ಪರ ರಾಜ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ಪನಮರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಚಾರ ನಡೆಸಿದರು.



ಸಚಿವ ಕೆ.ಎಚ್. ಮುನಿಯಪ್ಪ ಕೇರಳದ ವಯನಾಡಿನಲ್ಲಿ ರಾಹುಲ್ ಗಾಂಧಿ ಪರ ಪ್ರಚಾರ ನಡೆಸಿದರು.

ಪನಮರಂನಲ್ಲಿ ನಡೆದ ಬೂತ್ ಮಟ್ಟದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಸನ್ನಿವೇಶದಲ್ಲಿ ದೇಶಕ್ಕೆ ಕಾಂಗ್ರೆಸ್ ಏಕೆ ಅಗತ್ಯ ಎಂದು ಜನರಿಗೆ ಮನದಟ್ಟು ಮಾಡಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದ ಐದು ಜನಪರ ಗ್ಯಾರಂಟಿ ಯೋಜನೆ ಹೇಗೆ ಯಶಸ್ವಿಯಾಗಿವೆ ಎಂದು ವಿವರಿಸಿದ ಅವರು, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣ ರೈತರ ಸಾಲಮನ್ನಾ ಮಾಡುವುದಾಗಿ ಹೇಳಿದರು.

ಕೆ.ವಿ. ಜಾನ್ಸನ್, ಎಂ.ಡಿ ಬಿಜು, ಯುಡಿಎಫ್ ಮುಖಂಡರಾದ ಮೊಯಿದ್ದೀನ್ ಹಾಗೂ ಕಾರ್ಯಕರ್ತರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

'ಮುಸ್ಲಿಮರ ಮತವಿಲ್ಲದೆ ಗೆದ್ದು ತೋರಿಸಲಿ'

ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ಸ್ಪರ್ಧಿಸಿ – ಎಚ್‌ಡಿಕೆಗೆ ಡಿ.ಕೆ.ಶಿವಕುಮಾರ್ ಸವಾಲು

ಪ್ರಜಾವಾಣಿ ವಾರ್ತೆ

ರಾಮನಗರ/ಹಾರೋಹಳ್ಳಿ: 'ಮುಸ್ಲಿಮರ ಮತ ಬೇಕಿಲ್ಲ ಎನ್ನುವ ಎಚ್.ಡಿ.ಕುಮಾರಸ್ವಾಮಿ ಅವರು ತಾಕತ್ತಿದ್ದರೆ ಚನ್ನಪಟ್ಟಣದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ಸ್ಪರ್ಧಿಸಲಿ. ಆಗ ಮುಸ್ಲಿಮರ ಶಕ್ತಿ ಏನೆಂದು ಗೊತ್ತಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದ್ದಾರೆ.

ರಾಮನಗರ ಮತ್ತು ಹಾರೋಹಳ್ಳಿಯಲ್ಲಿ ಮಂಗಳವಾರ ಸಹೋದರ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಪರವಾಗಿ ನಡೆದ ಬಹಿರಂಗ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಜಾತ್ಯತೀತ ತತ್ವದ ಆಧಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ ಎಂದೇ ಮುಸ್ಲಿಮರು ಅವರಿಗೆ ಮತ ಹಾಕಿ ಗೆಲ್ಲಿಸಿದ್ದರು. ಈಗ ಅವರ ಮತವೇ ಬೇಡ ಎನ್ನುವ ಕುಮಾರಸ್ವಾಮಿ ಮತ್ತೆ ಸ್ಪರ್ಧಿಸಿ ನೋಡಲಿ' ಎಂದರು.

'ಕೇವಲ ಮೂರು ಕ್ಷೇತ್ರಕ್ಕಾಗಿ ಪಕ್ಷ ಮತ್ತು ತಮ್ಮನ್ನು ತಂದೆ-ಮಕ್ಕಳು ಬಿಜೆಪಿಗೆ ಅಡವಿಟ್ಟುಕೊಂಡಿದ್ದಾರೆ. ಈಗ ಕಣ್ಣೀರು ಹಾಕಿ ಹೊಸ ನಾಟಕ ಮಾಡುತ್ತಿದ್ದಾರೆ. ಈಗ ದೇವೇಗೌಡರ ಮಗ, ಮೊಮ್ಮಗ, ಅಳಿಯ ಕಣಕ್ಕಿಳಿದಿದ್ದಾರೆ. ಕುಟುಂಬದವರು ಬಿಟ್ಟು ಬೇರೆ ಯಾರೂ ಕಾಣುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಮೋಸ ಮಾಡಿದ್ದೀನಾ?': 'ಸೋಲಿನ ಭೀತಿಯಿಂದ ಸುರೇಶ್ ಆಪ್ತರ ಮೇಲೆ ಐ.ಟಿ ದಾಳಿ ಮಾಡಿಸಿದರು. ನನ್ನನ್ನು ಜೈಲಿಗೆ ಹಾಕಿದರು. ಯಾರಿಗಾದರೂ ನಾನು ತೊಂದರೆ ಮಾಡಿದ್ದೀನಾ? ಮೋಸ ಮಾಡಿದ್ದೀನಾ' ಎಂದು ಶಿವಕುಮಾರ್ ಪ್ರಶ್ನಿಸಿದರು.

'ಮಾತೆತ್ತಿದರೆ ಕಲ್ಲು ಒಡೆದೆ ಎಂದು ಕುಮಾರಸ್ವಾಮಿ ಹೇಳುತ್ತಾನೆ. ನನ್ನ ಜಮೀನಿನಲ್ಲಿ ಕಲ್ಲು ಒಡೆದರೆ ನಿನಗೇನು ತೊಂದರೆ? ಎಂಟು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಎಂದಾದರೂ ನನ್ನ ಮೇಲೆ ಆಪಾದನೆ ಬಂದಿದೆಯಾ' ಎಂದು ಕೇಳಿದರು.

'ಎಚ್‌ಡಿಕೆಯನ್ನು ದೇವರು ಕ್ಷಮಿಸಲಾರ': 'ಅನಿತಕ್ಕ ಶಾಸಕಿಯಾಗಬೇಕು ಎಂದು ಬಿಜೆಪಿ ಅಭ್ಯರ್ಥಿ ನಾಮಪತ್ರ ಹಿಂಪಡೆಯುವಂತೆ ಮಾಡಿದೆ. ಕುಮಾರಸ್ವಾಮಿಯನ್ನು ಸಿ.ಎಂ ಮಾಡಿದೆ. ಆತನ ಬೆನ್ನಿಗೆ ನಿಂತು ಕೆಲಸ ಮಾಡಿದೆ. ಆದರೂ ನಾನು ವಿಷ ಹಾಕಿದೆ ಎಂದು ಹೇಳುತ್ತೀಯಲ್ಲಾ' ಎಂದು ಪ್ರಶ್ನಿಸಿದರು.

'ನಿನ್ನನ್ನು ದೇವರು ಹಾಗೂ ಈ ಮತದಾರರು ಕ್ಷಮಿಸುವುದಿಲ್ಲ. ಇದಕ್ಕೆಲ್ಲಾ ಮತದಾರರು ಚುನಾವಣೆಯಲ್ಲಿ ಉತ್ತರ ನೀಡಬೇಕು' ಎಂದು ಡಿ.ಕೆ.ಶಿವಕುಮಾರ್ ಕೋರಿದರು.



ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಾರೋಹಳ್ಳಿಯಲ್ಲಿ ಮಂಗಳವಾರ ತಮ್ಮ ಸಹೋದರ, ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಪರ ನಡೆಸಿದ ಬಹಿರಂಗ ಪ್ರಚಾರ ಸಭೆಯಲ್ಲಿ ಕಾರ್ಯಕರ್ತರು ಸೇಬುಗಳ ಬೃಹತ್ ಹಾರವನ್ನು ಕ್ರೇನ್ ಮೂಲಕ ಹಾಕಿದರು. ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಜೊತೆಗಿದ್ದರು.

'ಪೆನ್ ಡ್ರೈವ್' ಸಂಚಲನ

ಪ್ರಜಾವಾಣಿ ವಾರ್ತೆ

ಹಾಸನ: ಲೋಕಸಭೆ ಚುನಾವಣೆಗೆ ಇನ್ನೆರಡು ದಿನ ಉಳಿದಿರುವಂತೆ, ಜಿಲ್ಲೆಯ ರಾಜಕೀಯ ಯುವ ನಾಯಕರೊಬ್ಬರ ಖಾಸಗಿ ಚಟುವಟಿಕೆಗಳ ಮಾಹಿತಿಯುಳ್ಳ ಪೆನ್ ಡ್ರೈವ್‌ಗಳು ಪಾರ್ಕ್, ಕ್ರೀಡಾಂಗಣ ಹಾಗೂ ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ದೊರೆಯುತ್ತಿವೆ ಎಂಬ ವದಂತಿ ಹರಡಿದ್ದು, ಸಂಚಲನ ಮೂಡಿಸಿದೆ.

ಯುವ ನಾಯಕರೊಬ್ಬರ ಖಾಸಗಿ ಚಟುವಟಿಕೆಗಳಿರುವ ವಿಡಿಯೋಗಳನ್ನು ಪೆನ್ ಡ್ರೈವ್‌ಗಳಲ್ಲಿ ತುಂಬಿ ಅನಾಮಧೇಯವಾಗಿ ಹರಡಲಾಗುತ್ತಿದೆ ಎಂಬ ಚರ್ಚೆ ನಡೆದಿದೆ.

ಕೆಲ ತಿಂಗಳ ಹಿಂದೆ ಯುವ ನಾಯಕರು ನ್ಯಾಯಾಲಯದ ಮೊರೆ ಹೋಗಿ, ತಮಗೆ ಸಂಬಂಧಿಸಿದ ಯಾವುದೇ ವಿಡಿಯೋಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಬಾರದೆಂದು ತಡೆಯಾಜ್ಞೆ ತಂದಿದ್ದರು ಎನ್ನಲಾಗಿದೆ.

ಇದೀಗ, ಎರಡು ದಿನದಿಂದ ವಿಡಿಯೋಗಳು ಪೆನ್‌ಡ್ರೈವ್‌ಗಳ ಮೂಲಕ ಹರಿದಾಡುತ್ತಿವೆ ಎನ್ನಲಾಗಿದೆ.

ಈಶ್ವರಪ್ಪ ಉಚ್ಚಾಟನೆ ಜಗಳ

ನಮ್ಮ ಪಾತ್ರವಿಲ್ಲ –ಬಿಎಸ್‌ವೈ



ಶಿವಮೊಗ್ಗ: 'ಶಿವಮೊಗ್ಗ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ಎಸ್. ಈಶ್ವರಪ್ಪ ವಿರುದ್ಧ ಪಕ್ಷದ ರಾಜ್ಯ ಶಿಸ್ತು ಸಮಿತಿ ಉಚ್ಚಾಟನೆಯ ಕ್ರಮ ಕೈಗೊಂಡಿದೆ. ಇದರಲ್ಲಿ ನಮ್ಮ ಪಾತ್ರವೇನೂ ಇಲ್ಲ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮಂಗಳವಾರ ತಿಳಿಸಿದರು.

ಜಿಲ್ಲೆಯ ಶಿಕಾರಿಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪನವರೇ ಅಪೇಕ್ಷಿಸಿದಂತೆಯೇ ಅವರ ಉಚ್ಚಾಟನೆ ಆಗಿದೆ' ಎಂದು ಸ್ಪಷ್ಟಪಡಿಸಿದರು.

'ಬಿಜೆಪಿಗೆ ರಾಜ್ಯದಲ್ಲಿ ಪೂರಕ ವಾತಾವರಣವಿದೆ. ಎಲ್ಲ 28 ಕ್ಷೇತ್ರಗಳಲ್ಲೂ ಗೆಲ್ಲಲಿದ್ದೇವೆ. ನರೇಂದ್ರ ಮೋದಿ ಪರ ಅಲೆಯಿಂದ ಬಿಜೆಪಿ ಹೆಚ್ಚು ಸ್ಥಾನ ಪಡೆಯಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳಿಗೆ ಈಗ ಪೂರಕ ವಾತಾವರಣವಿದೆ. ಜನ ನಮಗೆ ಆಶೀರ್ವಾದ ಮಾಡಲಿದ್ದಾರೆ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಬಂದರು ಏನೂ ಪರಿಣಾಮವಾಗದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಈಶ್ವರಪ್ಪ ಅವರ ಉಚ್ಚಾಟನೆಗೆ ಮುನ್ನ ತಿದ್ದಿಕೊಳ್ಳಲು ಅವಕಾಶ ನೀಡಲಾಗಿತ್ತು. ಈಶ್ವರಪ್ಪ ತಿದ್ದಿಕೊಳ್ಳದ ಕಾರಣ ಶಿಸ್ತು ಕ್ರಮ ಜರುಗಿದೆ' ಎಂದರು.

ಅಪ್ಪ ಮಕ್ಕಳ ಕುತಂತ್ರ- ಕೆಎಸ್‌ಇ



ಶಿವಮೊಗ್ಗ: 'ಅಪ್ಪ- ಮಕ್ಕಳ (ಯಡಿಯೂರಪ್ಪ ಹಾಗೂ ಪುತ್ರರಾದ ವಿಜಯೇಂದ್ರ, ರಾಘವೇಂದ್ರ) ಕುತಂತ್ರದಿಂದ ನನ್ನನ್ನು ಉಚ್ಚಾಟಿಸಲಾಗಿದೆ. ಇದು ತಾತ್ಕಾಲಿಕ. ಚುನಾವಣೆಯಲ್ಲಿ ಗೆದ್ದು ಮತ್ತೆ ಬಿಜೆಪಿ ಸೇರುತ್ತೇನೆ' ಎಂದು ಶಿವಮೊಗ್ಗ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೆ.ಎಸ್. ಈಶ್ವರಪ್ಪ ಹೇಳಿದರು.

'ವಿಜಯೇಂದ್ರ ಎಳಸು. ಅಪ್ಪನ (ಯಡಿಯೂರಪ್ಪ) ಮಾತು ಕೇಳಿ ಉಚ್ಚಾಟಿಸಿದ್ದಾರೆ. ಇದು ಪಕ್ಷದ ಕಾರ್ಯಕರ್ತರಿಗೆ ನೋವುಂಟು ಮಾಡಿದೆ. 'ಬಿಜೆಪಿ ಕಟ್ಟಿದ ನಿಮಗೆ ಹೀಗೆ ಆಗಬಾರದಿತ್ತು' ಎಂದು ಬಿಜೆಪಿ ನಿಷ್ಠಾವಂತ ಕಾರ್ಯಕರ್ತರು ಹೇಳುತ್ತಿದ್ದಾರೆ' ಎಂದರು.

'ಯಡಿಯೂರಪ್ಪ ಕೆಜೆಪಿಗೆ ಹೋಗಿ ಬಂದಿದ್ದಾರೆ. ಅವರು ಬಿಜೆಪಿಯ ಡೂಪ್ಲಿಕೇಟ್ ಕಾರ್ಯಕರ್ತ. ನಾನೇ ಒರಿಜಿನಲ್. ಶಿವಮೊಗ್ಗದಲ್ಲಿ ಬಿ.ವೈ. ರಾಘವೇಂದ್ರ ಸೋತ ಬಳಿಕ ಒಂದು ಸಮಸ್ಯೆ ನಿವಾರಣೆ ಆಗಲಿದೆ. ಲೋಕಸಭೆ ಚುನಾವಣೆ ಬಳಿಕ ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಇದರಿಂದ ಇನ್ನೊಂದು ಸಮಸ್ಯೆ ನಿವಾರಣೆ ಆದಂತಾಗಲಿದೆ. ನಾನು ಶಿವಮೊಗ್ಗದಲ್ಲಿ ಗೆದ್ದ ಕೂಡಲೇ ಯಡಿಯೂರಪ್ಪ ಅವರೇ ಸ್ವತಃ ಬಂದು ಬಿಜೆಪಿಗೆ ಕರೆದುಕೊಂಡು ಹೋಗಲಿದ್ದಾರೆ' ಎಂದರು.

'ಪ್ರಧಾನಿಯಾಗುವ ಯೋಗ್ಯತೆ ಮೋದಿಗೆ ಮಾತ್ರ'

ಪ್ರಜಾವಾಣಿ ವಾರ್ತೆ



ದೇವೇಗೌಡ

ಹಾರೋಹಳ್ಳಿ: 'ನರೇಂದ್ರ ಮೋದಿ ಅವರೊಬ್ಬರನ್ನು ಬಿಟ್ಟರೆ ಈ ದೇಶದ ಪ್ರಧಾನಿಯಾಗುವ ಯೋಗ್ಯತೆ ಯಾರಿಗೂ ಇಲ್ಲ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮಂಗಳವಾರ ಇಲ್ಲಿ ಹೇಳಿದರು.

ಮರಳವಾಡಿಯಲ್ಲಿ ಬಿಜೆಪಿ ಅಭ್ಯರ್ಥಿ, ಅಳಿಯ ಡಾ. ಸಿ.ಎನ್. ಮಂಜುನಾಥ್ ಪರ ಪ್ರಚಾರ ನಡೆಸಿದರು. 'ಅವರಿಗೆ (ಡಿ.ಕೆ.ಸಹೋದರರಿಗೆ) ಸಡ್ಡು ಹೊಡೆಯಬೇಕು. ಈ ಸಲ ಅವರ ಅಂತ್ಯ ಆಗಲೇಬೇಕು' ಎಂದರು.

'ಇದೇ ಉದ್ದೇಶದಿಂದ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಒತ್ತಾಯಿಸಿದ್ದರಿಂದ ಡಾ. ಮಂಜುನಾಥ್ ಅವರನ್ನು ನಿಲ್ಲಿಸಿದ್ದೇವೆ. ಅವರ ಸೇವೆ ರಾಷ್ಟ್ರ ಮಟ್ಟದಲ್ಲಿ ಸಿಗಬೇಕೆಂದು ಮೋದಿ ಬಯಸಿದ್ದಾರೆ. ನಿರ್ಭೀತಿಯಿಂದ ಬಂದು ಮಂಜುನಾಥ್ ಅವರಿಗೆ ಮತ ಹಾಕಿ' ಎಂದು ಕೋರಿದರು.

'ಡಾ.ಮಂಜುನಾಥ್ ನನ್ನ ಅಳಿಯ ಅನ್ನುವುದಕ್ಕಿಂತ ಅಪಾರ ಸೇವೆ ಮಾಡಿ ಹೆಸರು ಮಾಡಿದವರು. ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ಜಯದೇವ ಆಸ್ಪತ್ರೆ ನಿರ್ದೇಶಕರಾಗಿದ್ದ ಮಂಜುನಾಥ್ ವಿರುದ್ಧ ಈ ಮಹಾನುಭಾವ (ಡಿ.ಕೆ.ಶಿವಕುಮಾರ್) ತನಿಖೆ ಮಾಡಿಸಿದ್ದ' ಎಂದು ವಾಗ್ದಾಳಿ ನಡೆಸಿದರು.

'ಕುಮಾರಸ್ವಾಮಿ ಸಿ.ಎಂ ಆಗಿದ್ದಾಗ ರಾಮನಗರ, ಚಿಕ್ಕಬಳ್ಳಾಪುರ ಜಿಲ್ಲೆ ಮಾಡಿದರು. ದೇಶದಲ್ಲಿ ₹25 ಸಾವಿರ ಕೋಟಿ ಸಾಲ ಮನ್ನಾ ಮಾಡಿದ ಏಕೈಕ ಮುಖ್ಯಮಂತ್ರಿ ಕುಮಾರಸ್ವಾಮಿ. ಕೇಂದ್ರದಲ್ಲಿ ಅವರ ಸೇವೆ ಬಳಸಿಕೊಳ್ಳಲು ಮಂಡ್ಯದಿಂದ ಸ್ಪರ್ಧಿಸಲು ಮೋದಿ ಅವರೇ ಹೇಳಿದ್ದರು' ಎಂದರು.

ಚೊಂಬು ತೋರಿಸಿದ್ದು ಹುಡುಗಾಟಿಕೆ: ಚೊಂಬು ಜಾಹೀರಾತನ್ನು ಪರೋಕ್ಷವಾಗಿ ಉಲ್ಲೇಖಿಸಿದ ಅವರು, 'ಅಭಿವೃದ್ಧಿ ಮಾಡಿದವರಿಗೆ ಚೊಂಬು ತೋರಿಸುವುದು ಹುಡುಗಾಟಿಕೆಯೇ. ರಾಜ್ಯದ ಭ್ರಷ್ಟ ಸರ್ಕಾರವನ್ನು ತೆಗೆಯುವವರೆಗೆ ವಿರಮಿಸುವುದಿಲ್ಲ' ಎಂದು ದೇವೇಗೌಡರು ಆಕ್ರೋಶ ವ್ಯಕ್ತಪಡಿಸಿದರು.

ರಾಹುಲ್, ಖರ್ಗೆಗೆ ಅರ್ಹತೆ ಇದೆ: ಸಿದ್ದರಾಮಯ್ಯ

ತುಮಕೂರು: 'ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರಧಾನಿಯಾಗುವ ಅರ್ಹತೆ ಇದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ನಗರದ ಹೊರ ವಲಯದಲ್ಲಿ ಮಂಗಳವಾರ ರಾತ್ರಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ಪರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಪ್ರಧಾನಿಯಾಗಲು ಕಾಂಗ್ರೆಸ್‌ನಲ್ಲಿ ಯಾರಿದ್ದಾರೆ? ನರೇಂದ್ರ ಮೋದಿ ಬಿಟ್ಟರೆ ಪ್ರಧಾನಿಯಾಗುವ ಅರ್ಹತೆ ಯಾರಿಗೂ ಇಲ್ಲ ಎಂದು ಎಚ್.ಡಿ.ದೇವೇಗೌಡರು ಹೇಳಿದ್ದಾರೆ. ಮೋದಿ ಮೆಚ್ಚಿಸಲು ಸ್ವಾರ್ಥಕ್ಕಾಗಿ ಇಂತಹ ಮಾತು ಆಡುತ್ತಿದ್ದಾರೆ. ಪ್ರಧಾನಿಯಾಗಲು ಯೋಗ್ಯರಾದ ಸಾಕಷ್ಟು ಮುಖಂಡರು ಕಾಂಗ್ರೆಸ್‌ನಲ್ಲಿದ್ದಾರೆ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಏಕೆ ಪ್ರಧಾನಿಯಾಗಬಾರದು' ಎಂದು ಕೇಳಿದರು.

ಸುಳ್ಳು ಹೇಳಲು ಹಾಲಿ ಪ್ರಧಾನಿ, ಮಾಜಿ ಪ್ರಧಾನಿ ಪೈಪೋಟಿ ನಡೆಸಿದ್ದಾರೆ. ಮೋದಿ ಸುಳ್ಳು ಹೇಳಿದರೆ, ಗೌಡರು ಅದಕ್ಕಿಂತ ಹೆಚ್ಚು ಸುಳ್ಳು ಹೇಳುತ್ತಿದ್ದಾರೆ. ಸುಳ್ಳು ಹೇಳಿ ಇಬ್ಬರು ಮಾನ, ಮರ್ಯಾದೆ ಇಲ್ಲದಂತೆ ಮಾಡಿಕೊಂಡಿದ್ದಾರೆ. ಗೌಡರು ಯೋಗ್ಯತೆಗೆ ತಕ್ಕಂತೆ ಮಾತನಾಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಸಂಕ್ಷಿಪ್ತ ಸುದ್ದಿ

ದ್ವೇಷ ಭಾಷಣ: ಮೋದಿ ವಿರುದ್ಧ ಆಯೋಗಕ್ಕೆ ದೂರು



ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ಕಾಂಗ್ರೆಸ್ ಪಕ್ಷ ಬಂದರೆ ಜನರ ಸಂಪತ್ತನ್ನು ಮುಸ್ಲಿಮರಿಗೆ ಮರು ಹಂಚಿಕೆ ಮಾಡುತ್ತದೆ ಎಂದು ಹೇಳಿರುವ ಪ್ರಧಾನಿ ಮೋದಿ ವಿರುದ್ಧ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ ಎಂದು ಸಿಪಿಎಂ ನಾಯಕಿ ಬೃಂದಾ ಕಾರಟ್ ತಿಳಿಸಿದ್ದಾರೆ.

ಪಕ್ಷದ ಅಭ್ಯರ್ಥಿ ಎಂ.ಪಿ. ಮುನಿವೆಂಕಟಪ್ಪ ಪರ ಪಟ್ಟಣದಲ್ಲಿ ಮಂಗಳವಾರ ನಡೆದ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ದ್ವೇಷ ಭಾಷಣ ಮಾಡಿದರೂ ಪ್ರಧಾನಿ ವಿರುದ್ಧ ಚುನಾವಣಾ ಆಯೋಗದ ಅಧಿಕಾರಿಗಳು ಏಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಪ್ರಶ್ನಿಸಿದರು. ಒಂದು ಧರ್ಮದವರ ವಿರುದ್ಧ ಪ್ರಧಾನಿ ದ್ವೇಷ ಭಾಷಣ ಮಾಡಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿ ಇರುವ ಮೋದಿ ರಾಜಕೀಯಕ್ಕಾಗಿ ಕೋಮು ಸಂಘರ್ಷಕ್ಕೆ ಕಾರಣವಾಗುವ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಯತ್ನಾಳ ವಿರುದ್ಧ ದೂರು: ಸಚಿವ ಶಿವಾನಂದ ಪಾಟೀಲ

ವಿಜಯಪುರ: 'ಸಕ್ಕರೆ ಕಾರ್ಖಾನೆಗಳಿಂದ ಚುನಾವಣೆಗಾಗಿ ಹಣ ಸಂಗ್ರಹಿಸುತ್ತಿರುವೆ ಎಂದು ಆಧಾರ ರಹಿತ ಆರೋಪ ಮಾಡಿದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇನೆ' ಎಂದು ಸಚಿವ ಶಿವಾನಂದ ಪಾಟೀಲ ಇಲ್ಲಿ ತಿಳಿಸಿದರು.

'ಆಯೋಗವ ಯತ್ನಾಳ ವಿರುದ್ಧ ಕ್ರಮಕೈಗೊಳ್ಳುವ ವಿಶ್ವಾಸವಿದೆ. ಯತ್ನಾಳ ಮಾಡಿದ ಆರೋಪ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ ಸ್ವೀಕರಿಸುವೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಮೋದಿ ಹತಾಶೆಯ ಹೇಳಿಕೆ

ಮಂಗಳೂರು: 'ಸೋಲಿನ ಮುನ್ಸೂಚನೆಯಿಂದ ಹತಾಶರಾಗಿ ಪ್ರಧಾನಿ ನರೇಂದ್ರ ಮೋದಿ ಕೀಳು ಅಭಿರುಚಿಯ ಹೇಳಿಕೆ ನೀಡುತ್ತಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಮಂಗಳವಾರ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ತಮ್ಮನ್ನು ಕೆಳಗಿಳಿಸಲು ವಿದೇಶಿ ಶಕ್ತಿಗಳ ಜೊತೆ ಕೈಜೋಡಿಸಲಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಂಪತ್ತನ್ನು ಮುಸ್ಲಿಮ ರಿಗೆ ಹಂಚಲಿದೆ, ಕರಿಮಣಿ ಸರಕ್ಕೂ ಕುತ್ತು ಬರಲಿದೆ ಎನ್ನುವಾಗ ಅವರಿಗೆ 'ಸಬ್ ಕಾ ಸಾತ್, ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್' ಹೇಳಿಕೆ ನೆನಪಿಗೆ ಬರಲಿಲ್ಲವೇ? ಹಿಂದಿನ ಯಾವ ಪ್ರಧಾನಿಯೂ ಇಷ್ಟು ಕೆಳಮಟ್ಟಕ್ಕೆ ಇಳಿದಿಲ್ಲ' ಎಂದರು.



ಸಿದ್ಧತೆ...

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿಯ ಗೋದಾವಿನಲ್ಲಿ ಮಂಗಳವಾರ ಚುನಾವಣಾ ಸಿಬ್ಬಂದಿ ಮತಯಂತ್ರಗಳ ಪೆಟ್ಟಿಗೆಗಳನ್ನು ಜೋಡಿಸಿಟ್ಟರು

ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

'ಪ್ರಗತಿಯ ಛಲಕ್ಕೆ ಸರ್ವರ ಬೆಂಬಲ'

ರಾಯಚೂರು ಲೋಕಸಭಾ (ಪರಿಶಿಷ್ಟ ಪಂಗಡದ ಮೀಸಲು) ಕ್ಷೇತ್ರದಿಂದ ನಿವೃತ್ತ ಐಎಎಸ್ ಅಧಿಕಾರಿ ಜಿ.ಕುಮಾರ ನಾಯಕ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಇಳಿದಿದ್ದಾರೆ. 35 ವರ್ಷ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವದೊಂದಿಗೆ ಜನ ಸೇವೆಗೆ ಮುಂದಾಗಿದ್ದು, ಬಿಡುವಿಲ್ಲದಂತೆ ಪ್ರಚಾರದಲ್ಲಿ ತೊಡಗಿದ್ದಾರೆ. ಪ್ರಚಾರದ ಧಾವಂತದಲ್ಲೇ ಒಂದಿಷ್ಟು ಬಿಡುವು ಮಾಡಿಕೊಂಡು ಮಾತನಾಡಿದ್ದಾರೆ. ಜಿ.ಕುಮಾರ ನಾಯಕ ನೀಡಿದ ವಿಶೇಷ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ಚಂದ್ರಕಾಂತ ಮಸಾನಿ

ಪ್ರಜಾವಾಣಿ ಸಂದರ್ಶನ

ಜಿ.ಕುಮಾರ ನಾಯಕ, ಕಾಂಗ್ರೆಸ್ ಅಭ್ಯರ್ಥಿ

• ರಾಜಕೀಯ ಕ್ಷೇತ್ರ ನಿಮಗೆ ಹೊಸದಲ್ಲವೇ?

ನಾನು ರಾಯಕೀಯಕ್ಕೆ ಹೊಸದಾಗಿ ಬಂದಿರಬಹುದು. ಆದರೆ, ಜಿಲ್ಲಾಧಿಕಾರಿಯಾಗಿದ್ದಾಗ ಮಾಡಿದ ಕೆಲಸಗಳಿಂದಾಗಿಯೆ ಜನರು ಗುರುತಿಸುತ್ತಿದ್ದಾರೆ. ಉತ್ಸಾಹದಿಂದ ಪ್ರಚಾರ ಸಭೆಗಳಿಗೂ ಬರುತ್ತಿದ್ದಾರೆ. 15–20 ವರ್ಷಗಳಿಂದ ರಾಜಕೀಯದಲ್ಲಿ ಇರುವವರ ದೌರ್ಬಲ್ಯ ಎಲ್ಲ ವರ್ಗದ ಜನರಿಗೂ ಗೊತ್ತಿದೆ.

• ವಿಮಾನ ನಿಲ್ದಾಣ ಅಭಿವೃದ್ಧಿಯಾಗಿಲ್ಲ. ಜವಳಿ ಪಾರ್ಕ್ ಮಂಜೂರಾಗಿಲ್ಲ. ಇಂತಹ ಬೃಹತ್ ಯೋಜನೆ ಕಾರ್ಯಗತಗೊಳಿಸಲು ನಿಮ್ಮಿಂದ ಸಾಧ್ಯವೇ?

ರಾಯಚೂರು ಕೃಷಿ ಉದ್ಯಮದಲ್ಲಿ ಮುಂಚೂಣಿಯಲ್ಲಿದೆ. ಏಮ್ಸ್ ಸ್ಥಾಪನೆ ಆಗಬೇಕಿದೆ. ಜವಳಿ ಪಾರ್ಕ್ ಸರಪಳಿ ರೂಪದಲ್ಲಿ ಬೆಳೆಯುತ್ತಿದೆ. ಜವಳಿ ಪಾರ್ಕ್‌ನಿಂದ ಉದ್ಯೋಗ ಹೆಚ್ಚಾಗಲಿದೆ. ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಯ ದಿಸೆಯಲ್ಲಿ ಪ್ರಯತ್ನ ಮಾಡಲಾಗುವುದು.

• ಕ್ಷೇತ್ರಕ್ಕೆ ವಲಸೆ ಬಂದಿರುವ ನಿಮಗೆ ಜನ ಏಕೆ ಮತ ಕೊಡಬೇಕು?

ಬೇರೆ ಪಕ್ಷದ ಆಡಳಿತವನ್ನು ಜನರು ನೋಡಿದ್ದಾರೆ. ನನ್ನ 35 ವರ್ಷಗಳ ಆಡಳಿತ ಸೇವೆಯನ್ನು ಗಮನಿಸಿದ್ದಾರೆ. ಸಾಮಾಜಿಕ ಸೇವೆಯ ನನ್ನ ತುಡಿತ ಹಾಗೂ ಕೋಮುಸೌಹಾರ್ದ ಉಳಿಸಿಕೊಂಡು ಹೋಗಲು ಮತದಾರರು ಆಶೀರ್ವದಿಸಬೇಕು. ಅಭಿವೃದ್ಧಿಯ ಛಲ ಹೊಂದಿರುವ ಸುಶಿಕ್ಷಿತ ಅಭ್ಯರ್ಥಿಗೆ ವಿದ್ಯಾವಂತರು ಮತ ಕೊಡಬೇಕು ಹಾಗೂ ಕೊಡುತ್ತಾರೆ ಎಂಬ ವಿಶ್ವಾಸವಿದೆ.

• ಬಿಜೆಪಿಯವರು ಈಗಲೂ ನರೇಂದ್ರ ಮೋದಿ ಹವಾ ಇದೆ ಎನ್ನುತ್ತಿದ್ದಾರಲ್ಲ?

ಮೋದಿ ಅವರು ಈ ದೇಶದ ಪ್ರಧಾನಿ. ಜನರಿಗೆ ಪರಿಚಿತವಾದ ಹೆಸರು. ಬಿಜೆಪಿ ಮುಖಂಡರು 2014ರಿಂದಲೂ ಹೇಳಿದ್ದನ್ನೇ ಹೇಳತೊಡಗಿದ್ದಾರೆ. ಅವರು ಮೋದಿ ಹೆಸರು ಬಳಸಿಕೊಳ್ಳುತ್ತಿದ್ದಾರೆ. ಹೊಸದೇನೂ ಇಲ್ಲ; ಈ ಕ್ಷೇತ್ರದಲ್ಲಿ ಯಾವುದೇ ಹವಾ ಇಲ್ಲ.

• ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು 'ಕೈ' ಹಿಡಿಯಲಿವೆಯೇ?

ಕಾಂಗ್ರೆಸ್ ಪಕ್ಷ ಕೊಟ್ಟಿದ್ದ ಭರವಸೆಗಳನ್ನು ಅಧಿಕಾರಕ್ಕೆ ಬಂದ ತಕ್ಷಣ ಈಡೇರಿಸಿದೆ. ನುಡಿದಂತೆ ನಡೆದದ್ದೇ ದೊಡ್ಡ ಗ್ಯಾರಂಟಿ. ಜನರು ಹಾಗೂ ಸರ್ಕಾರದ ನಡುವಿನ ಬಾಂಧವ್ಯ ಗಟ್ಟಿಯಾಗಿದೆ. ಅದುವೇ ನಿಜವಾದ ಗ್ಯಾರಂಟಿ. ಕಾಂಗ್ರೆಸ್ ಮೇಲೆ ಜನ ಇಟ್ಟಿರುವ ನಂಬಿಕೆಯಿಂದಲೇ ಹೆಚ್ಚಿನ ಮತಗಳು ಬರಲಿವೆ.

• ಪಕ್ಷದಲ್ಲಿರುವ ಎರಡು ಬಣಗಳು ತೊಡಕಾಗುವುದಿಲ್ಲವೇ?


ರಾಜಕೀಯ ಪಕ್ಷಗಳಲ್ಲಿ ಬಣಗಳು ಸಹಜ. ಬಣಗಳು ಇಲ್ಲದಿದ್ದರೆ ಪ್ರಜಾಪ್ರಭುತ್ವ ಅನಿಸುವುದಿಲ್ಲ. ಅದೊಂದು ಸಹಜ ಪ್ರಕ್ರಿಯೆ ಎಂದು ಭಾವಿಸಿರುವೆ. ಬಣಗಳಲ್ಲಿ ಇರುವ ಮುಖಂಡರೆಲ್ಲರೂ ನನ್ನೊಂದಿಗೆ ಆತ್ಮೀಯವಾಗಿದ್ದಾರೆ.

• ನಿಮ್ಮ ಅಧಿಕಾರವಧಿಯ ಹೆಗ್ಗುರುತಿನ ಕಾರ್ಯಗಳು ಯಾವುದು?

ರಾಯಚೂರು ನಗರದಲ್ಲಿ 10 ತಿಂಗಳಲ್ಲಿ ಸುಸಜ್ಜಿತ ಗ್ರಂಥಾಲಯ ನಿರ್ಮಿಸಿದ್ದೇನೆ. ಅದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ ಯೋಜನೆಯನ್ನು ಕಡಿಮೆ ಅವಧಿಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಿದ ಹೆಮ್ಮೆ ನನಗಿದೆ. ಆಗ ಸರ್ಕಾರವು ಶ್ಲಾಘಿಸಿತ್ತು.

• ಶಿಕ್ಷಣ, ಉದ್ಯೋಗ, ಕುಡಿಯುವ ನೀರು ಪೂರೈಕೆಯಲ್ಲಿ ಜಿಲ್ಲೆ ಈಗಲೂ ಹಿಂದೆ ಬಿದ್ದಿದೆಯಲ್ಲ?

371 (ಜೆ) ಕಲಂ ಜಾರಿಗೊಳಿಸಿದ ಮೇಲೆ ಸಾಕಷ್ಟು ಅನುಕೂಲವಾಗಿದೆ. ಶಿಕ್ಷಕರು ಈಗ ವರ್ಗಾವಣೆ ಪಡೆದು ಹೋಗುತ್ತಿಲ್ಲ. ಜಿಲ್ಲೆಯಲ್ಲಿ ತಲಾ ಆದಾಯ ಸಮಾನಾಂತರವಾಗಿ ಹಂಚಿ ಹೋಗಿಲ್ಲ. ಹೀಗಾಗಿ ಉದ್ಯೋಗ ಸೃಷ್ಟಿಯಲ್ಲಿ ಹಿಂದೆ ಬಿದ್ದಿದೆ. ಅದನ್ನು ಸರಿಪಡಿಸುವ ಪ್ರಯತ್ನ ಸಾಮೂಹಿಕವಾಗಿ ನಡೆಯಬೇಕಿದೆ.



ಅಖಾಡದಲ್ಲಿ ನಟ – ನಟಿಯರ ಖದರು

• ಮಂಜುನಾಥ ಹೆಬ್ಬಾರ್



ಹೇಮಾಮಾಲಿನಿ



ಮನೋಜ್ ತಿವಾರಿ



ಕಂಗನಾ ರನೌತ್



ಸುರೇಶ್ ಗೋಪಿ

ಲೋಕಸಭಾ ಚುನಾವಣಾ ಕಣಕ್ಕೆ ಹುರಿಯಾಳುಗಳಾಗಿ ಧುಮುಕಿರುವ ಹೆಸರಾಂತ ನಟ ನಟಿಯರು ಕಣದ ರಂಗನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ತಾರೆಯರು ದೊಡ್ಡ ಬಂಗಲೆ ಹಾಗೂ ಹವಾನಿಯಂತ್ರಿತ ಕಾರುಗಳನ್ನು ಬದಿಗಿಟ್ಟು ನಗರ ಹಾಗೂ ಹಳ್ಳಿಗಳಲ್ಲಿ ಬಿರು ಬಿಸಿಲಿನಲ್ಲಿ ಗೆಲುವಿಗಾಗಿ ಬೆವರು ಹರಿಸುತ್ತಿದ್ದಾರೆ. ಈ ಮೂಲಕ ತಮ್ಮ ನೆಲೆ ವಿಸ್ತರಿಸಲು ಹೊರಟಿದ್ದಾರೆ. ಅಖಾಡದಲ್ಲಿರುವ ನಟ– ನಟಿಯರ ಬಗ್ಗೆ ಇಲ್ಲಿದೆ ಇಣುಕು ನೋಟ.

ಗೋಪಿಯಿಂದ ಕಂಗನಾ ವರೆಗೆ...

ನವದೆಹಲಿ: ಈ ಚುನಾವಣೆಯಲ್ಲಿ 370 ಸ್ಥಾನಗಳನ್ನು ಗೆಲ್ಲುವ ಮಹದಾಸೆ ಇಟ್ಟುಕೊಂಡಿರುವ ಬಿಜೆಪಿಯು ಸಿನಿಮಾ ರಂಗದವರ ಪ್ರಖ್ಯಾತಿಯನ್ನು ಮತಗಳನ್ನಾಗಿ ಪರಿವರ್ತಿಸಲು ಮುಂದಾಗಿದೆ. ಕನಸಿನ ಕನ್ಯೆ ಎಂದೇ ಪ್ರಖ್ಯಾತರಾಗಿರುವ ಹೇಮಾಮಾಲಿನಿ ಅವರು 'ಕೃಷ್ಣನ ಜನ್ಮಸ್ಥಾನ' ಮಥುರಾದಿಂದ ಮತ್ತೆ ಕಣಕ್ಕೆ ಇಳಿದಿದ್ದಾರೆ. ರಾಜ್ಯಸಭಾ ಸದಸ್ಯೆಯಾಗಿದ್ದ ಅವರು 2014ರಲ್ಲಿ ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. 2014 ಹಾಗೂ 2019ರಲ್ಲಿ ಗೆದ್ದಿದ್ದರು. ಈ ಸಲ ಅಖಾಡದಲ್ಲಿರುವ ಹೇಮಾ ಅವರು ಮತದಾರರನ್ನು ಸೆಳೆಯಲು ಬಗೆ ಬಗೆಯ ಕಸರತ್ತುಗಳನ್ನು ನಡೆಸುತ್ತಿದ್ದಾರೆ.

ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ನಟಿ ಕಂಗನಾ ರನೌತ್ ಸ್ಪರ್ಧಿಸುತ್ತಿದ್ದಾರೆ. ಅವರು ಕಾಂಗ್ರೆಸ್‌ನ ಪ್ರಭಾವಿ ಮುಖಂಡ ವಿಕ್ರಮಾದಿತ್ಯ ಸಿಂಗ್ ಸವಾಲನ್ನು ಎದುರಿಸಬೇಕಿದೆ. ಇತ್ತೀಚಿನ ದಿನಗಳಲ್ಲಿ ವಿವಾದಾತ್ಮಕ ಹೇಳಿಕೆಗಳಿಂದಲೇ ಸುದ್ದಿಯಲ್ಲಿರುವ ಕಂಗನಾ ಅವರು ಬಿಜೆಪಿ ಹಾಗೂ ಬಲಪಂಥೀಯ ಸಿದ್ಧಾಂತದ ಪ್ರಬಲ ಪ್ರತಿಪಾದಕರು. ಪ್ರಧಾನಿ ನರೇಂದ್ರ ಮೋದಿ ಅವರನ್ನು ಸದಾ ಹೊಗಳುತ್ತಲೇ ಬಂದವರು.

ಪಕ್ಷವು ಮೂವರು ಭೋಜ್‌ಪುರಿ ನಟರಿಗೆ ಮಣೆ ಹಾಕಿದೆ. ಯೋಗಿ ಆದಿತ್ಯನಾಥ ಅವರು ಪ್ರತಿನಿಧಿಸಿದ್ದ ಗೋರಖಪುರ ಕ್ಷೇತ್ರದಲ್ಲಿ ಭೋಜ್‌ಪುರಿ ನಟ ರವಿಕಿಶನ್ ಅವರಿಗೆ ಪಕ್ಷ ಮತ್ತೆ ಅವಕಾಶ ನೀಡಿದೆ. ಈಶಾನ್ಯ ದೆಹಲಿ ಕ್ಷೇತ್ರದಲ್ಲಿ ಎರಡು ಬಾರಿ ಗೆಲುವಿನ ನಗೆ ಬೀರಿರುವ ಭೋಜ್‌ಪುರಿ ನಟ ಹಾಗೂ ಗಾಯಕ ಮನೋಜ್ ತಿವಾರಿ ಅವರಿಗೆ ಈ ಸಲ ಪ್ರಖರ ಮಾತುಗಾರ ಕನ್ಹಯ್ಯ ಕುಮಾರ್ ಅವರಿಂದ ಸವಾಲು ಎದುರಾಗಿದೆ. 2014 ಹಾಗೂ 2019ರ ಚುನಾವಣೆಗಳಲ್ಲಿ ದೆಹಲಿಯ ಎಲ್ಲ ಏಳು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಹಾಲಿ ಸಂಸದರ ಪೈಕಿ ತಿವಾರಿ ಅವರಿಗೆ ಮಾತ್ರ ಪಕ್ಷ ಈ ಸಲ ಟಿಕೆಟ್ ನೀಡಿದೆ. ಅವರು ಬಿಜೆಪಿ ದೆಹಲಿ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. 2009ರ ಚುನಾವಣೆಯಲ್ಲಿ ಮನೋಜ್ ಅವರು ಗೋರಖಪುರದಲ್ಲಿ ಸಮಾಜವಾದಿ ಪಕ್ಷದ ಟಿಕೆಟ್‌ನಿಂದ ಸ್ಪರ್ಧಿಸಿ, ಯೋಗಿ ಆದಿತ್ಯನಾಥ ಎದುರು ಪರಾಭವಗೊಂಡಿದ್ದರು. ಬಳಿಕ ಬಿಜೆಪಿಗೆ ಸೇರಿದ್ದರು.

ಉತ್ತರ ಪ್ರದೇಶದ ಅಜಂಗಢದಿಂದ ಹಾಲಿ ಸಂಸದ ದಿನೇಶ್ ಲಾಲ್ ಯಾದವ್ ಅವರಿಗೆ ಕಮಲ ಪಾಳಯ ಮತ್ತೆ ಮಣೆ ಹಾಕಿದೆ. ಭೋಜ್‌ಪುರಿ ನಟರಾಗಿರುವ ಅವರು 2022ರ ಉಪಚುನಾವಣೆಯಲ್ಲಿ ಗೆದ್ದಿದ್ದರು. 2019ರಲ್ಲಿ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಎದುರು ದಿನೇಶ್ ಲಾಲ್ ಸೋತಿದ್ದರು.

'ಕೈ'ಕೊಟ್ಟ ಪವನ್ ಸಿಂಗ್

.ಬಿಜೆಪಿಯು ಮೊದಲ ಪಟ್ಟಿಯಲ್ಲಿ 195 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿತ್ತು. ಭೋಜ್‌ಪುರಿ ನಟ ಹಾಗೂ ಗಾಯಕ ಪವನ್ ಸಿಂಗ್ ಅವರನ್ನು ಸದ್ಯ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಶತ್ರುಘ್ನ ಸಿನ್ಹಾ ಪ್ರತಿನಿಧಿಸುವ ಪಶ್ಚಿಮ ಬಂಗಾಳದ ಅನಸೋಲ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂದು ಪಕ್ಷವು ಘೋಷಿಸಿತ್ತು. ತಾವು ಸ್ಪರ್ಧಿಸುವುದಿಲ್ಲವೆಂದು ಪವನ್ ಸಿಂಗ್ ಮರುದಿನವೇ ಪ್ರಕಟಿಸಿದ್ದರು. ಇದರಿಂದ ಬಿಜೆಪಿ ತೀವ್ರ ಮುಜುಗರಕ್ಕೆ ಒಳಗಾಗಿತ್ತು.

ಮೀರಠ್‌ನಲ್ಲಿ ರಾಮನ ಪಾತ್ರಧಾರಿ

ಅಯೋಧ್ಯೆಯಲ್ಲಿ ರಾಮಮಂದಿರ ಸಾಕಾರಗೊಂಡಿದೆ. ರಾಮನ ಅಲೆಯನ್ನು ಚುನಾವಣೆಯಲ್ಲಿ ಬಳಸಿಕೊಳ್ಳಲು ರಾಮನ ಪಾತ್ರಧಾರಿಗೂ ಕೇಸರಿ ಪಡೆ ಅವಕಾಶ ನೀಡಿದೆ. ಮೀರಠ್ ಕ್ಷೇತ್ರದಿಂದ ಕಿರುತೆರೆ ನಟ ಅರುಣ್ ಗೋವಿಲ್ ಅವರನ್ನು ಪಕ್ಷ ಕಣಕ್ಕೆ ಇಳಿಸಿದೆ. ಅರುಣ್ ಅವರು 1987ರಲ್ಲಿ ದೂರದರ್ಶನದಲ್ಲಿ ಪ್ರಸಾರಗೊಂಡಿದ್ದ ರಮಾನಂದ ಸಾಗರ್ ಅವರ 'ರಾಮಾಯಣ' ಧಾರಾವಾಹಿಯಲ್ಲಿ ರಾಮನ ಪಾತ್ರದಲ್ಲಿ ನಟಿಸುವ ಮೂಲಕ ಮನೆ ಮಾತಾಗಿದ್ದರು. ಅರುಣ್ ಅವರು 2021ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅರುಣ್ ಅವರು ರಾಮನ ಹೆಸರನ್ನು ದುರ್ಬಳಕೆ ಮಾಡುತ್ತಿದ್ದಾರೆ ಎಂದು ಟೀಕೆಗಳು ವ್ಯಕ್ತವಾಗಿವೆ.

ದೇವರ ಸ್ವಂತ ನಾಡು ಎಂದು ಪ್ರಖ್ಯಾತವಾಗಿರುವ ಕೇರಳದಲ್ಲಿ ನೆಲೆ ವಿಸ್ತರಿಸಲು ಬಿಜೆಪಿಗೆ ಈವರೆಗೆ ಸಾಧ್ಯವಾಗಿಲ್ಲ. ಈ ಸಲ ಖಾತೆ ತೆರೆಯಲೇಬೇಕು ಎಂದು ಪಣ ತೊಟ್ಟಿರುವ ಪಕ್ಷವು ಹಲವು ಪ್ರಯೋಗಗಳನ್ನು ಮಾಡಿದೆ. ಮಲಯಾಳಂ ಭಾಷೆಯ ನಟ ಸುರೇಶ್ ಗೋಪಿ ಅವರನ್ನು ಈ ಹಿಂದೆ ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿತ್ತು. ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ತ್ರಿಶ್ಶೂರ್ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು. ಈ ಬಾರಿಯೂ ಅದೇ ಕ್ಷೇತ್ರದಿಂದ ಅವರು ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ನಟರಿಗೆ ಟಿಎಂಸಿ ಮೊರೆ

ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ) ಹಲವು ನಟರಿಗೆ ಅವಕಾಶ ಕಲ್ಪಿಸಿದೆ. ಆಸನ್‌ಸೋಲ್ ಕ್ಷೇತ್ರದಲ್ಲಿ 2022ರಲ್ಲಿ ನಡೆದ ಉಪಚುನಾವಣೆಯಲ್ಲಿ ನಟ ಶತ್ರುಘ್ನ ಸಿನ್ಹಾ ಗೆದ್ದಿದ್ದರು. ಅವರು ಈ ಸಲ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ನಟರೂ ಆದ ಹಾಲಿ ಶಾಸಕಿ ಜೂನ್ ಮಲಿಯಾ (ಮೇದಿನಿಪುರ), ಸಯೋನಿ ಘೋಷ್ (ಜಾದವ್‌ಪುರ), ರಚನಾ ಬ್ಯಾನರ್ಜಿ (ಹೂಗ್ಲಿ) ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಅವರಲ್ಲದೆ ನಟರಾದ ದೇವ್ (ಘಟಾಲ್) ಮತ್ತು ಶತಾಬ್ದಿ ರಾಯ್ (ಬಿರ್‌ಭೂಮ್) ಮರು ಆಯ್ಕೆ ಬಯಸಿದ್ದಾರೆ. ಆದರೆ, ಕಳೆದ ಚುನಾವಣೆಯಲ್ಲಿ ಗೆದ್ದಿದ್ದ ನಟಿಯರಾದ ಮಿಮಿ ಚಕ್ರವರ್ತಿ ಹಾಗೂ ನುಸ್ರತ್ ಜಹಾನ್ ಅವರಿಗೆ ಪಕ್ಷ ಈ ಸಲ ಕೊಕ್ ನೀಡಿದೆ.

ಚುನಾವಣಾ ಕಣದಲ್ಲಿ...

ಟಿಡಿಪಿ ಅಭ್ಯರ್ಥಿ ಆಸ್ತಿ ₹5,785 ಕೋಟಿ



ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಗುಂಟೂರು ಲೋಕಸಭಾ ಕ್ಷೇತ್ರದ ಟಿಡಿಪಿ ಅಭ್ಯರ್ಥಿ ಪಿ. ಚಂದ್ರಶೇಖರ್ ಅವರು, ತಮ್ಮ ಕುಟುಂಬದ ಆಸ್ತಿ ₹5,785 ಕೋಟಿ ಎಂದು ಘೋಷಿಸಿಸುವ ಮೂಲಕ ಲೋಕಸಭಾ ಚುನಾವಣೆಯ ಕಣದಲ್ಲಿರುವ ಅತ್ಯಂತ ಶ್ರೀಮಂತ ಅಭ್ಯರ್ಥಿಗಳಲ್ಲಿ ಒಬ್ಬರೆನಿಸಿದ್ದಾರೆ.

ತಮ್ಮ ಬಳಿ ₹2,448.72 ಕೋಟಿಯ ವೈಯಕ್ತಿಕ ಆಸ್ತಿ ಇದೆ ಮತ್ತು ಪತ್ನಿ ಶ್ರೀರತ್ನಾ ಅವರ ಬಳಿ ₹2,343.78 ಮೌಲ್ಯದ ಆಸ್ತಿ ಇದೆ ಎಂದು ಚಂದ್ರಶೇಖರ್ ಅವರು ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಮಕ್ಕಳ ಬಳಿ ₹1000 ಕೋಟಿ ಮೌಲ್ಯದ ಆಸ್ತಿ ಇದೆ ಎಂದೂ ಘೋಷಿಸಿದ್ದಾರೆ. ₹1,138 ಕೋಟಿಯ ಬ್ಯಾಂಕ್ ಸಾಲ ಇದೆ ಎಂದಿದ್ದಾರೆ.

'ರಾಹುಲ್ ಡಿಎನ್‌ಎ ಪರೀಕ್ಷಿಸಬೇಕು'

ತಿರುವನಂತಪುರ: 'ನೆಹರೂ ವಂಶಸ್ಥರಿಂದ ನಿರೀಕ್ಷಿಸುವ ಗುಣಮಟ್ಟವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರದರ್ಶಿಸುತ್ತಿಲ್ಲ, ಈ ಕಾರಣಕ್ಕೆ ಅವರ ಡಿಎನ್‌ಎಯನ್ನು ಪರೀಕ್ಷೆ ಮಾಡುವ ಅಗತ್ಯ ಇದೆ' ಎಂದು ಸಿಪಿಎಂ ಬೆಂಬಲಿತ ಪಕ್ಷೇತರ ಶಾಸಕ ಪಿ.ವಿ. ಅನ್ವರ್ ಅವರು ಲೇವಡಿ ಮಾಡಿದ್ದಾರೆ.

ಪಾಲಕ್ಕಾಡ್‌ನಲ್ಲಿ ನಡೆದ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅನ್ವರ್ ಅವರು, 'ರಾಹುಲ್ ಅವರು ಗಾಂಧಿ ಎಂಬ ಉಪನಾಮವನ್ನೂ ಬಳಸಲಾಗದ ನಾಲ್ಕನೇ ದರ್ಜೆಯ ವ್ಯಕ್ತಿಯಾಗಿದ್ದಾರೆ. ನೆಹರೂ ವಂಶದ ವ್ಯಕ್ತಿಗೆ ಈ ರೀತಿ ಮಾತನಾಡಲು ಸಾಧ್ಯವೇ? ಆ ವಿಚಾರದಲ್ಲಿ ನನಗೆ ಸಂಶಯವಿದೆ' ಎಂದು ಹೇಳಿದ್ದಾರೆ.

ಅನ್ವರ್ ಅವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳಬೇಕೆಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಹಂಗಾಮಿ ಅಧ್ಯಕ್ಷ ಎಂ.ಎಂ. ಹಸನ್ ಆಗ್ರಹಿಸಿದ್ದಾರೆ. ಈ ಕುರಿತು ಕಾಂಗ್ರೆಸ್ ಚುನಾವಣಾ ಆಯೋಗಕ್ಕೂ ದೂರು ನೀಡಿದೆ.

ಅನ್ವರ್ ಅವರು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪರವಾಗಿ ಮಾತನಾಡುತ್ತಿದ್ದಾರೆ ಎಂದು ಹಸನ್ ಆರೋಪಿಸಿದ್ದಾರೆ.

'ಸ್ಕೂಟರ್ ಕೀ ತಗುಲಿ ಕೊಲ್ಲಂ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಣ್ಣಿಗೆ ಗಾಯ'

ಕೊಲ್ಲಂ (ಪಿಟಿಐ): ಕೇರಳದ ಕೊಲ್ಲಂ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಿ. ಕೃಷ್ಣಕುಮಾರ್ ಅವರ ಕಣ್ಣಿಗೆ ಅವರದೇ ಪಕ್ಷದ ಮುಖಂಡರೊಬ್ಬರ ಕೈಯಲ್ಲಿದ್ದ ಸ್ಕೂಟರ್ ಕೀ ತಗುಲಿ ಗಾಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಚಾರದ ವೇಳೆ ತನ್ನ ಮೇಲೆ ಆಯುಧದಿಂದ ದಾಳಿ ನಡೆದಿದ್ದು, ರಾಜಕೀಯ ವಿರೋಧಿಗಳು ಈ ಕೃತ್ಯ ಎಸಗಿರುವ ಸಾಧ್ಯತೆ ಇದೆ ಎಂದು ಕೃಷ್ಣಕುಮಾರ್ ಅವರು ಈ ಹಿಂದೆ ಪೊಲೀಸರಿಗೆ ದೂರು ನೀಡಿದ್ದರು.

ಈ ಸಂಬಂಧ ಸ್ಥಳೀಯ ಬಿಜೆಪಿ ಮುಖಂಡ ಸನಲ್ ಪುತ್ತನ್‌ವಿಳ ಅವರನ್ನು ಪೊಲೀಸರು ಬಂಧಿಸಿ, ಬಳಿಕ ಜಾಮೀನಿನಲ್ಲಿ ಬಿಡುಗಡೆಗೊಳಿಸಿದರು.

ಕಣ್ಣಿಗೆ ಗಾಯವಾಗಿರುವ ಕುರಿತು ಕೃಷ್ಣಕುಮಾರ್ ಅವರು ಎಕ್ಸ್ ಮಾಧ್ಯಮದಲ್ಲೂ ಮಾಹಿತಿ ಹಂಚಿಕೊಂಡಿದ್ದರು.

'ಮೀಸಲಾತಿ ಕಸಿದು ಮುಸ್ಲಿಮರಿಗೆ'

ಒಂದನೇ ಪುಟದಿಂದ...

'ಕಾಂಗ್ರೆಸ್ ಏಕೆ ಸತ್ಯ ಮುಚ್ಚಿಡುತ್ತಿದೆ' ಎಂದು ಪ್ರಶ್ನಿಸಿದ ಅವರು, 'ನೀವು ನಿಯಮ ಮಾಡಿದಿರಿ, ನಿರ್ಧಾರ ತೆಗೆದುಕೊಂಡಿರಿ. ಮೋದಿ ನಿಮ್ಮ ಗುಟ್ಟನ್ನು ಬಹಿರಂಗಪಡಿಸಿ, ಗುಪ್ತ ಕಾರ್ಯಸೂಚಿ ಹೊರಬಂದ ನಂತರ, ನೀವು ಕಂಪಿಸುತ್ತಿದ್ದೀರಿ' ಎಂದು ಹೇಳಿದರು.

ಕಾಂಗ್ರೆಸ್ ಜನರ ಆಸ್ತಿ ಕಸಿದುಕೊಂಡು ಅದನ್ನು 'ಆಯ್ದ ಜನರಿಗೆ' ನೀಡಲು 'ಆಳವಾದ ಕುತಂತ್ರ' ಹೆಣೆದಿದೆ ಎಂದು ಪ್ರಧಾನಿ ಮೋದಿ ತಮ್ಮ ಆರೋಪವನ್ನು ಪುನರುಚ್ಚರಿಸಿದರು.

'ಸಂಪತ್ತಿನ ಎಕ್ಸ್‌ರೇ ಮಾಡುವುದಾಗಿ ಅವರ ನಾಯಕ ತಿಳಿಸಿದ್ದಾರೆ. ಅದರರ್ಥ, ಪೆಟ್ಟಿಗೆಯಲ್ಲಿ ಅಥವಾ ಗೋಡೆಯಲ್ಲಿ ಏನನ್ನಾದರೂ ಬಚ್ಚಿಟ್ಟಿದ್ದರೆ, ಅದನ್ನು ಎಕ್ಸ್‌ರೇ ಮೂಲಕ ಪರಿಶೀಲನೆ ಮಾಡಲಾಗುವುದು. ನಂತರ ಅವರು ನಿಮ್ಮ ಎಲ್ಲ ಸಂಪತ್ತನ್ನು ವಶಕ್ಕೆ ಪಡೆಯುತ್ತಾರೆ ಮತ್ತು ಅದನ್ನು ಜನರಿಗೆ ಹಂಚುತ್ತಾರೆ' ಎಂದು ತಿಳಿಸಿದರು.

'ರಾಜಸ್ಥಾನದಲ್ಲಿ ಕಾಂಗ್ರೆಸ್ ಆಡಳಿತ ಇದ್ದಾಗ ರಾಮನವಮಿ ಮೆರವಣಿಗೆಯ ಮೇಲೆ ಕಲ್ಲು ಎಸೆದಿದ್ದವರಿಗೆ ರಕ್ಷಣೆ ನೀಡಿ, ಅಂಥ ಮೆರವಣಿಗೆಗಳ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿತ್ತು. ಬಿಜೆಪಿ ಆಡಳಿತದಲ್ಲಿ ಯಾರಿಗೂ ಅಂಥ ಆಚರಣೆಗಳನ್ನು ಪ್ರಶ್ನಿಸುವ ಧೈರ್ಯವಿಲ್ಲ' ಎಂದು ಹೇಳಿದರು. 'ಮೋದಿ ಸಂವಿಧಾನಕ್ಕೆ ಬದ್ಧರಾಗಿರುವ, ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಆರಾಧಿಸುವ ವ್ಯಕ್ತಿ' ಎಂದು ಹೇಳಿದರು.

'ಮಾತುಗಳಲ್ಲೇ ಫಲಿತಾಂಶದ ಬಿಂಬ'

ಅಲಿಗಢ (ಪಿಟಿಐ): ಬಿಜೆಪಿ ಮುಖಂಡರು ನೀಡುತ್ತಿರುವ ಹೇಳಿಕೆಗಳು ಚುನಾವಣಾ ಫಲಿತಾಂಶ ಏನಾಗಬಹುದು ಎನ್ನುವುದರ ಪ್ರತಿಬಿಂಬದಂತೆ ಕಾಣುತ್ತಿವೆ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಹೇಳಿದ್ದಾರೆ.

ಅಲೀಗಢ ಮತ್ತು ಹತ್ರಾಸ್ ಲೋಕಸಭಾ ಕ್ಷೇತ್ರಗಳ 'ಇಂಡಿಯಾ' ಮೈತ್ರಿ ಅಭ್ಯರ್ಥಿಗಳ ಪರ ಪ್ರಚಾರ ರ‍್ಯಾಲಿಯಲ್ಲಿ ಮಂಗಳವಾರ ಭಾಗವಹಿಸಿ ಮಾತನಾಡಿದ ಅವರು, 'ಚುನಾವಣೆಯ ದಿಕ್ಕು ಮುಂದಿನ ದಿನಗಳಲ್ಲಿ ತಿಳಿಯಲಿದೆ. ಆದರೆ, ನೀವು ದೆಹಲಿ ಜನರ (ಪ್ರಧಾನಿ) ಮತ್ತು ಲಖನೌ ಜನರ (ಉತ್ತರಪ್ರದೇಶ ಮುಖ್ಯಮಂತ್ರಿ) ಭಾಷಣಗಳನ್ನು ಕೇಳಲೇಬೇಕು. ಚುನಾವಣೆ ಬಳಿಕ ಅಧಿಕಾರದಿಂದ ಕೆಳಗೆ ಇಳಿಯಲಿರುವವರ ಮಾತುಗಳು ಚುನಾವಣಾ ಫಲಿತಾಂಶ ವ್ಯಕ್ತವಾಗುತ್ತಿದೆ' ಎಂದು ಹೇಳಿದರು.

'ದೇಶದಾದ್ಯಂತ ನಡೆದ ಮೊದಲ ಹಂತದ ಮತದಾನದ ವೇಳೆ ಬಿಜೆಪಿ ಹೀನಾಯ ಸ್ಥಿತಿಗೆ ತಲುಪಿದೆ. ಇದೀಗ ಸಂವಿಧಾನದ ಕುರಿತು ಮಾತನಾಡುವ ಕಾಲ ಬಂದಿದೆ ಎಂಬುದನ್ನು ಅವರಿಗೆ (ಬಿಜೆಪಿಗೆ) ಮತ್ತೆ ಹೇಳಲು ಬಯಸುತ್ತೇವೆ' ಎಂದು ಹೇಳಿದರು.



ಪ್ರಚಾರ ರ‍್ಯಾಲಿ

ಜಾರ್ಖಂಡ್‌ನ ಖುಂತಿ ಜಿಲ್ಲೆಯಲ್ಲಿ ಕೇಂದ್ರ ಸಚಿವ ಹಾಗೂ ಬಿಜೆಪಿ ಅಭ್ಯರ್ಥಿ ಅರ್ಜುನ ಮುಂಡಾ ಅವರು ನಾಮಪತ್ರ ಸಲ್ಲಿಸಿದ ಬಳಿಕ ನಡೆದ ಪ್ರಚಾರ ರ‍್ಯಾಲಿಯಲ್ಲಿ ಬುಡಕಟ್ಟು ಸಮುದಾಯದವರು ಸಂಗೀತ ವಾದ್ಯಗಳನ್ನು ನುಡಿಸಿದರು –ಪಿಟಿಐ ಚಿತ್ರ

ಮೋದಿ ವಿರುದ್ಧದ ದೂರುಗಳ ಪರಿಶೀಲನೆ

ನವದೆಹಲಿ (ಪಿಟಿಐ): ದ್ವೇಷ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಿವಿಧ ಪಕ್ಷಗಳ ಪ್ರತಿನಿಧಿಗಳು, ಸಾಮಾಜಿಕ ಸಂಘಟನೆಗಳು ಅನೇಕ ದೂರುಗಳನ್ನು ಸಲ್ಲಿಸಿದ್ದು, ಚುನಾವಣಾ ಆಯೋಗವು ಅವುಗಳ ಪರಿಶೀಲನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್, ಸಿಪಿಎಂ, ಸಿಪಿಐ ಮತ್ತು ಸಿಪಿಐ (ಎಂಎಲ್) ಹಾಗೂ 'ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ' (ಪಿಯುಸಿಎಲ್), 'ಸಂವಿಧಾನ್ ಬಚಾವೋ ನಾಗರಿಕ್ ಅಭಿಯಾನ್', ಸಂಯುಕ್ತ ಕಿಸಾನ್ ಮೋರ್ಚಾ ಸೇರಿದಂತೆ ಹಲವು ಸಂಘಟನೆಗಳು ಆಯೋಗಕ್ಕೆ ಮತ್ತು ಪೊಲೀಸರಿಗೆ ದೂರುಗಳನ್ನು ಸಲ್ಲಿಸಿದ್ದು, ಎಫ್‌ಐಆರ್ ದಾಖಲಿಸುವಂತೆ ಆಗ್ರಹಿಸಿವೆ.

'ಬಿಎಸ್‌ಪಿ ಬಿಜೆಪಿಯ ಬಿ ಟೀಂ'

ನವದೆಹಲಿ/ ಅಮ್ರೋಹಾ (ಪಿಟಿಐ): 'ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಎಸ್‌ಪಿಯು ಬಿಜೆಪಿಯ ಬಿ ಟೀಂನಂತೆ ಕೆಲಸ ಮಾಡುತ್ತಿದೆ. ಅಲ್ಲದೇ ಬಿಎಸ್‌ಪಿಯ ಅಭ್ಯರ್ಥಿಗಳನ್ನು ಕೇಂದ್ರದ ಆಡಳಿತಾರೂಢ ಪಕ್ಷವೇ ನಿರ್ಧರಿಸುತ್ತಿದೆ' ಎಂದು ಕಾಂಗ್ರೆಸ್ ನಾಯಕ ಡ್ಯಾನಿಶ್ ಅಲಿ ಮಂಗಳವಾರ ಆರೋಪಿಸಿದ್ದಾರೆ.

'ಅಮ್ರೋಹಾದಲ್ಲಿ ಕಳೆದ ವಾರ ನಡೆದ ಬಿಜೆಪಿ ರ‍್ಯಾಲಿ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನನ್ನನ್ನು ಟೀಕಿಸಿದ್ದು ನೋಡಿದರೆ ಅವರೆಷ್ಟು ಹತಾಶರಾಗಿದ್ದಾರೆ ಎಂಬುದು ತಿಳಿಯುತ್ತದೆ' ಎಂದಿದ್ದಾರೆ.

'ಪ್ರಜಾಪ್ರಭುತ್ವ ಹಬ್ಬ'ದಲ್ಲಿ ಪಾಲ್ಗೊಳ್ಳಲಾಗದ ನೊಂದ ಜೀವಗಳು

ವೃಂದಾವನದ ವಿಧವೆಯರಿಗೆ ಮತದಾನದ ಹಕ್ಕೂ ಇಲ್ಲ



ವೃಂದಾವನದ ಆಶ್ರಮವೊಂದರಲ್ಲಿ ವಿಧವೆಯರು –ಪಿಟಿಐ ಚಿತ್ರ

ವೃಂದಾವನ (ಪಿಟಿಐ): ದೇಶದಾದ್ಯಂತ ಲೋಕಸಭಾ ಚುನಾವಣೆಯ ಗದ್ದಲ, ಚುನಾವಣಾ ಪ್ರಚಾರದ ಅಬ್ಬರ ಕೇಳಿಬರುತ್ತಿದ್ದರೂ ವೃಂದಾವನದಲ್ಲಿ ಮಾತ್ರ ಮೌನ ಆವರಿಸಿದೆ. ಕನಿಷ್ಠ ಮತದಾರರ ಗುರುತಿನ ಚೀಟಿಯೂ ಇಲ್ಲದಿರುವ ವೃಂದಾವನದ ಸಾವಿರಾರು ವಿಧವೆಯರು ಚುನಾವಣೆಯ ಕಾಲದಲ್ಲಿಯೂ ಅಂಚಿನಲ್ಲೇ ಉಳಿದಿದ್ದಾರೆ.

ತಮ್ಮ ಮನೆ ಮಂದಿಗೆ ಬೇಡವಾಗಿರುವ, ಗಂಡ ಸತ್ತ 60, 70 ವರ್ಷ ವಯಸ್ಸಿನ ಮಹಿಳೆಯರು ದೇವಾಲಯಗಳ ನಗರಿಯಲ್ಲಿ ಆಶ್ರಯ ಪಡೆದಿದ್ದಾರೆ. ಇವರಿಗಾಗಿ ಯಾವ ಪಕ್ಷವೂ ಯಾವ ಭರವಸೆ ಹೊತ್ತುತಂದಿಲ್ಲ. ಬಹುತೇಕರು ಇದು ತಮ್ಮ ಹಣೆಬರಹ ಎಂದುಕೊಂಡು ಸುಮ್ಮನಾದರೆ, ಕೆಲವರು ಹೋರಾಡುವುದೂ ಉಂಟು.

'ಕೋಲ್ಕತ್ತದಲ್ಲಿದ್ದಾಗ ನಾನು ಪ್ರತಿಯೊಂದು ಚುನಾವಣೆಯಲ್ಲಿಯೂ ಮತದಾನ ಮಾಡಿದ್ದೇನೆ. ನಾನು ಈ ದೇಶದ ಪ್ರಜೆಯಾಗಿದ್ದು, ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳಬೇಕೆಂಬ ಬಯಕೆ ಇದೆ. ಬಹುಶಃ ಅದು ಈಗ ಸಾಧ್ಯವಿಲ್ಲ. ಅದಕ್ಕಾಗಿ ದುಃಖಿಸುವುದರಲ್ಲಿ ಏನು ಅರ್ಥವಿದೆ' ಎಂದು ರಾಜಕೀಯ ತಿಳಿವಳಿಕೆ ಇರುವ 67 ವರ್ಷದ ಗಾಯತ್ರಿ ಹೇಳುತ್ತಾರೆ.

ತಮ್ಮ ಕುಟುಂಬದಿಂದ ದೂರ ಉಳಿಯಬೇಕಾಗಿರುವ ಅನಿತಾ ದಾಸ್ ಅವರಿಗೂ ಇದು ಚುನಾವಣೆಯ ಕಾಲ ಎಂದು ಗೊತ್ತಿದೆ. ಆದರೆ, ತಮ್ಮಂಥ ಮಹಿಳೆಯರಿಗೆ ಅದರಿಂದ ಏನಾಗಬೇಕಿದೆ ಎನ್ನುವ ನಿರ್ಲಿಪ್ತ ಸ್ಥಿತಿಗೆ ಅವರು ತಲುಪಿದ್ದಾರೆ.

ತಮ್ಮ ಪತಿಯ ಸಾವಿನ ನಂತರ ವೃಂದಾವನಕ್ಕೆ ಬಂದ ಅನಿತಾ ಅವರು, 17 ವರ್ಷಗಳ ವೈಧವ್ಯವನ್ನು ಮಥುರಾ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವೃಂದಾವನದ ಬೀದಿಗಳಲ್ಲಿಯೇ ಕಳೆದಿದ್ದಾರೆ.

ಬಿಳಿಯ ಸೀರೆ ಉಟ್ಟು ಭಿಕ್ಷೆ ಬೇಡುತ್ತಾ, ದೇವಾಲಯಗಳ ಹೊರಗೆ 'ಭಂಡಾರ'ಕ್ಕಾಗಿ (ಉಚಿತ ಊಟ) ಕಾಯುತ್ತಾ ಅಥವಾ ಕೇವಲ ₹10ಕ್ಕಾಗಿ ಗಂಟೆಗಟ್ಟಲೆ ಭಜನೆಗಳನ್ನು ಹಾಡುತ್ತಾ ಬದುಕು ಸವೆಸುತ್ತಿರುವ ವಿಧವೆಯರ ಕತೆಗಳು ವೃಂದಾವನದ ಕಿರಿದಾದ ರಸ್ತೆಗಳಲ್ಲಿ, ರಾಧಾಕುಂಡ್ ಮತ್ತು ಗೋವರ್ಧನ ಪ್ರದೇಶಗಳ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸುತ್ತಿವೆ.

ದೇವಾಲಯಗಳ ನಗರಿಯಿಂದ ದೂರ ಹೋಗಲು ಇವರು ಸಿದ್ಧರಿಲ್ಲ. ಏಕೆಂದರೆ, ಅದರಿಂದ ಅವರ ಪ್ರತಿದಿನದ ಕೃಷ್ಣ ದರ್ಶನಕ್ಕೆ ಮತ್ತು ಭಜನೆಗಳನ್ನು ಹಾಡುವುದಕ್ಕೆ ತೊಂದರೆಯಾಗುತ್ತದೆ.

'ನಮಗೆ ಅವರ ಬಗ್ಗೆ ಕಾಳಜಿ ಇದೆ. ಅದಕ್ಕಾಗಿಯೇ ಅವರಿಗಾಗಿ ಆಧುನಿಕ ಸೌಲಭ್ಯಗಳೊಂದಿಗೆ 2018ರಲ್ಲಿ ಕೃಷ್ಣ ಕುಟೀರ ನಿರ್ಮಿಸಿದೆವು. ಆದರೆ, ಅಲ್ಲಿ ಉಳಿಯುವಂತೆ ಅವರ ಮನ ಒಲಿಸುವುದು ಕಷ್ಟ. ತಾವು ಎಲ್ಲಿದ್ದೇವೋ ಅಲ್ಲೇ ವಾಸ ಮಾಡುತ್ತೇವೆ ಎನ್ನುವುದು ಅವರ ನಿಲುವು. ನಾವೇನು ಮಾಡಲು ಸಾಧ್ಯ' ಎನ್ನುತ್ತಾರೆ ಮಥುರಾದ ಎರಡು ಬಾರಿಯ ಸಂಸದೆ, ಬಿಜೆಪಿ ಅಭ್ಯರ್ಥಿ ಹೇಮಾಮಾಲಿನಿ.

ಕೆಲವರು ಖಾಸಗಿ ಅಥವಾ ಸರ್ಕಾರಿ ಆಶ್ರಮಗಳಲ್ಲಿ ವಾಸ ಮಾಡುತ್ತಾರೆ. ಹೆಚ್ಚಿನವರು ಇಕ್ಕಟ್ಟಾದ ಕೊಳಕು ಬಾಡಿಗೆ ಕೊಠಡಿಗಳಲ್ಲಿ ಆಶ್ರಯ ಪಡೆದಿದ್ದಾರೆ. ದೇವಾಲಯಗಳ ನಗರಿಯಲ್ಲಿ ಭಜನೆಗಳನ್ನು ಹಾಡಲು ಅವರು ಟೋಕನ್ ಪಡೆಯುತ್ತಾರೆ. ನಾಲ್ಕು ಗಂಟೆ ಹಾಡಿದರೆ ಅವರಿಗೆ ಊಟ, ಟೀ ಜತೆಗೆ ₹10 ಸಿಗುತ್ತದೆ. ಭಜನೆ ಹಾಡಲು ತಮ್ಮ ಸರದಿಗಾಗಿ ಅವರು ತುಂಬಾ ಸಮಯ ಕಾಯಬೇಕಾಗುತ್ತದೆ.

ಚುನಾವಣೆಯ ಕಾಲದಲ್ಲಿಯೂ ಏಕಾಂಗಿಯಾಗಿ ಜೀವಿಸುತ್ತಿರುವ ವೃಂದಾವನದ ವಿಧವೆಯರು, ಹಾಗೆ ಬದುಕುವುದು ಮತ್ತು ಇಲ್ಲಿನ ಬೀದಿಗಳಲ್ಲಿ ಅನಾಮಿಕವಾಗಿ ಸಾಯುವುದು ತಮ್ಮ ಹಣೆಬರಹ ಎಂದೇ ಭಾವಿಸಿದ್ದಾರೆ.

ಅಧಿಕೃತ ಸಂಖ್ಯೆಯೇ ಗೊತ್ತಿಲ್ಲ

18 ಲಕ್ಷ ಮತದಾರರಿರುವ ಮಥುರಾ ಕ್ಷೇತ್ರದಲ್ಲಿ ವೃಂದಾವನದ ವಿಧವೆಯರ ಸಂಖ್ಯೆ ಶೇ ಒಂದಕ್ಕಿಂತಲೂ ಕಡಿಮೆ. ಸರ್ಕಾರೇತರ ಸಂಸ್ಥೆಗಳ ಪ್ರಕಾರ, ಅವರ ಸಂಖ್ಯೆ 10 ಸಾವಿರದಿಂದ 12 ಸಾವಿರ ಇದೆ. ಅವರ ಪೈಕಿ ಹೆಚ್ಚಿನವರು ಪಶ್ಚಿಮ ಬಂಗಾಳದವರು.

2007ರ ನಂತರ ಇವರ ಗಣತಿಯನ್ನೇ ಮಾಡಿಲ್ಲ ಎಂದು ಮೈತ್ರಿ ವಿಧವಾ ಆಶ್ರಮದ ಸಹ ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ವಿನ್ನಿ ಸಿಂಗ್ ಹೇಳುತ್ತಾರೆ.

'ಬಂಗಾಳದಿಂದಲ್ಲದೇ ಈಗ ಮಹಾರಾಷ್ಟ್ರ, ಗುಜರಾತ್, ಛತ್ತೀಸಗಢ, ಮಧ್ಯಪ್ರದೇಶ ರಾಜ್ಯಗಳಿಂದಲೂ ಇಲ್ಲಿಗೆ ಮಹಿಳೆಯರು ಬರುತ್ತಾರೆ. ನಾವು 400 ಮಂದಿಯ ಆರೈಕೆ ಮಾಡುತ್ತೇವೆ. ಆದರೆ, ಹೆಚ್ಚಿನವರು ಬೀದಿಗಳಲ್ಲಿಯೇ ಬದುಕುತ್ತಿದ್ದಾರೆ. ಅವರಿಗೆ ಮತದಾರರ ಚೀಟಿಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆದೂ ಅಲೆದೂ ನಮಗೆ ಸಾಕಾಗಿ ಹೋಗಿದೆ' ಎಂದು ಹೇಳುತ್ತಾರೆ.

ಚುಟುಕು

ಗುಜರಾತ್: ಸೋನಿಯಾ, ರಾಹುಲ್, ಖರ್ಗೆ ತಾರಾ ಪ್ರಚಾರಕರು

ಅಹಮದಾಬಾದ್ (ಪಿಟಿಐ): ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ 40 ಮಂದಿಯನ್ನು ಗುಜರಾತ್‌ನಲ್ಲಿ ಪ್ರಚಾರ ನಡೆಸಲು ಪಕ್ಷವು ತಾರಾ ಪ್ರಚಾರಕರನ್ನಾಗಿ ಹೆಸರಿಸಿದೆ.

ಪಕ್ಷದ ಗುಜರಾತ್ ರಾಜ್ಯ ಘಟಕವು ತಾರಾ ಪ್ರಚಾರಕರ ಪಟ್ಟಿಯನ್ನು ಮಂಗಳವಾರ ಹಂಚಿಕೊಂಡಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ರಾಜಸ್ಥಾನ ಶಾಸಕ ಸಚಿನ್ ಪೈಲಟ್ ಅವರ ಹೆಸರುಗಳು ಕೂಡ ತಾರಾ ಪ್ರಚಾರಕರ ಪಟ್ಟಿಯಲ್ಲಿವೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮುಖಂಡರಾದ ಕೆ.ಸಿ. ವೇಣುಗೋಪಾಲ್, ಮುಕುಲ್ ವಾಸ್ನಿಕ್ ಮತ್ತಿತರರೂ ಇಲ್ಲಿ ಪ್ರಚಾರ ನಡೆಸುವರು ಎಂದಿವೆ. ಮೇ7ರಂದು ಗುಜರಾತ್‌ನ ಎಲ್ಲಾ ಕ್ಷೇತ್ರಗಳಿಗೂ ಮತದಾನ ನಡೆಯಲಿದೆ.

26 ಕ್ಷೇತ್ರಗಳ ಪೈಕಿ 23ರಲ್ಲಿ ಕಾಂಗ್ರೆಸ್ ಹಾಗೂ ಎರಡು ಕ್ಷೇತ್ರಗಳಲ್ಲಿ 'ಇಂಡಿಯಾ' ಒಕ್ಕೂಟದ ಜೊತೆಗಿರುವ ಎಎಪಿ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ. ಸೂರತ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರ ಈಚೆಗೆ ತಿರಸ್ಕೃತಗೊಂಡಿತ್ತು.

ಜಿಗಿ–ನೆಗೆದಾಟ

ಎನ್‌ಸಿಪಿ ಅಜಿತ್ ಪವಾರ್ ಬಣಕ್ಕೆ ಮುಷ್ತಾಕ್ ಅಂತುಲೆ ಸೇರ್ಪಡೆ

ಮುಂಬೈ: ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಬ್ದುಲ್ ರೆಹಮಾನ್ ಅಂತುಲೆ ಅವರ ಅಳಿಯ ಹಾಗೂ ಕಾಂಗ್ರೆಸ್ ಮುಖಂಡ ಮುಷ್ತಾಕ್ ಅಂತುಲೆ ಅವರು ಎನ್‌ಸಿಪಿಯ ಅಜಿತ್ ಪವಾರ್ ಬಣಕ್ಕೆ ಸೇರ್ಪಡೆಗೊಂಡರು.

ಅಂತುಲೆ ಅವರು ಪಕ್ಷ ತೊರೆದಿರುವುದರಿಂದ ಕಾಂಗ್ರೆಸ್ ಮತ್ತು 'ಮಹಾ ವಿಕಾಸ್ ಆಘಾಡಿ'ಗೆ ಮಹಾರಾಷ್ಟ್ರದಲ್ಲಿ ಹಿನ್ನಡೆಯಾಗಿದೆ.

'ಮಹಾರಾಷ್ಟ್ರದ ಅಭಿವೃದ್ಧಿಗಾಗಿ ಎನ್‌ಸಿಪಿಯ ಅಜಿತ್ ಪವಾರ್ ಬಣಕ್ಕೆ ಸೇರಿದ್ದೇನೆ' ಎಂದು ಮುಷ್ತಾಕ್ ತಿಳಿಸಿದರು.

ಎಂಥಾ ಮಾತು!



ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷವು ಅಧಿಕಾರದಲ್ಲಿದ್ದಾಗ ಬಡ್ತಿಯಲ್ಲಿ ಮೀಸಲಾತಿಯನ್ನು ಕೊನೆಗೊಳಿಸಿತು ಎಂದು ನಾನು ಎಸ್‌ಸಿ, ಎಸ್‌ಟಿ ಸಮುದಾಯಗಳ ಜನರಿಗೆ ನೆನಪಿಸಲು ಬಯಸುತ್ತೇನೆ. ಈ ವರ್ಗಗಳ ಜನ ತಮ್ಮ ಮೀಸಲಾತಿಯನ್ನು ಅಂತ್ಯಗೊಳಿಸಲು ನೋಡಿದ ಪಕ್ಷಕ್ಕೆ ಮತ ನೀಡಿ ಅದನ್ನು ವ್ಯರ್ಥ ಮಾಡುತ್ತಾರೆಯೇ. ಸಮಾಜವಾದಿ ಪಕ್ಷಕ್ಕೆ ಎಸ್‌ಸಿ, ಎಸ್‌ಟಿ ಜನ ಮೀಸಲಾತಿಯ ಸಂಪೂರ್ಣ ಪ್ರಯೋಜನ ಪಡೆಯುವುದು ಬೇಕಿಲ್ಲ. ರಾಜ್ಯಸಭೆಯಲ್ಲಿ ಬಡ್ತಿ ಮೀಸಲಾತಿ ತಿದ್ದುಪಡಿ ಮಸೂದೆ ಮಂಡಿಸಿದಾಗ ಎಸ್‌ಪಿ ಸಂಸದರು ಅದನ್ನು ಹರಿದುಹಾಕಿದ್ದರು. ಅಂಥ ಪಕ್ಷವು ದಲಿತರಿಗೆ ಮತ್ತು ಶೋಷಿತರಿಗೆ ಒಳಿತನ್ನು ಮಾಡುವುದೇ?

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ



ಪ್ರಧಾನಿಯು ತಮ್ಮ ಗಮನವನ್ನು ಉತ್ತರ ಭಾರತದಿಂದ ದಕ್ಷಿಣದೆಡೆಗೆ ಹರಿಸಿದ್ದು, ದಕ್ಷಿಣ ಭಾರತದಲ್ಲಿ ಬೀದಿ ಬೀದಿಯಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಏಕೆಂದರೆ, ಬಿಜೆಪಿಯು ಉತ್ತರ ಭಾರತದ ಕ್ಷೇತ್ರಗಳಲ್ಲಿ ಭಾರಿ ನಷ್ಟ ಅನುಭವಿಸುತ್ತಿದೆ. ಆ ನಷ್ಟವನ್ನು ಸರಿದೂಗಿಸಲು ಅವರು ದಕ್ಷಿಣದಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಕಾಂಗ್ರೆಸ್ ಮುಕ್ತ ಭಾರತದ ಹಗಲುಗನಸನ್ನು ಜನ ದಕ್ಷಿಣ ಭಾರತದಿಂದ ಬೇರುಸಮೇತ ಕಿತ್ತೊಗೆಯಲಿದ್ದಾರೆ.

ಅಲ್ಕಾ ಲಂಬಾ, ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ

ಕ್ಷೇತ್ರ ಮಹಾತ್ಮೆ



ಒಡಿಶಾದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಪುರಿ ಲೋಕಸಭಾ ಕ್ಷೇತ್ರವು ಈ ಬಾರಿ ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗಲಿದೆ. ಆಡಳಿತಾರೂಢ ಬಿಜು ಜನತಾ ದಳವು (ಬಿಜೆಡಿ) ಮಾಜಿ ಐಪಿಎಸ್ ಅಧಿಕಾರಿ ಅರೂಪ್ ಪಟ್ನಾಯಕ್ ಅವರನ್ನು ಕಣಕ್ಕಿಳಿಸಿದೆ. ಬಿಜೆಪಿಯು ಪಕ್ಷದ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಅವರನ್ನು ಅಖಾಡಕ್ಕಿಳಿಸಿದರೆ, ಕಾಂಗ್ರೆಸ್ ಪಕ್ಷವು ಪತ್ರಕರ್ತೆ ಸುಚರಿತಾ ಮೊಹಂತಿ ಅವರನ್ನು ಅಭ್ಯರ್ಥಿಯಾಗಿಸಿದೆ. 2019ರ ಚುನಾವಣೆಯಲ್ಲಿ ಬಿಜೆಡಿಯ ಪಿನಾಕಿ ಮಿಶ್ರಾ ಅವರು 11,714 ಮತಗಳ ಅಂತರದಿಂದ ಸಂಬಿತ್ ಪಾತ್ರಾ ಅವರನ್ನು ಪರಾಭವಗೊಳಿಸಿದ್ದರು. ಮುಂಬೈನ ಮಾಜಿ ಪೊಲೀಸ್ ಆಯುಕ್ತರಾಗಿರುವ ಅರೂಪ್ ಪಟ್ನಾಯಕ್ ಅವರು 2018ರಲ್ಲಿ ಬಿಜೆಡಿ ಸೇರುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದ್ದರು. ಆಡಳಿತಾರೂಢ ಪಕ್ಷದ ಅಭಿವೃದ್ಧಿ ಕಾರ್ಯಗಳು ತಮ್ಮ ಕೈಹಿಡಿಯಬಹುದೆಂಬ ವಿಶ್ವಾಸದಲ್ಲಿ ಅರೂಪ್ ಅವರಿದ್ದಾರೆ. ಕಳೆದ ಚುನಾವಣೆಯಲ್ಲಿ ಇವರು ಭುವನೇಶ್ವರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಬಿಜೆಪಿಯಿಂದ ಸ್ಪರ್ಧಿಸಿದ್ದ ಮಾಜಿ ಐಎಎಸ್ ಅಧಿಕಾರಿ ಅಪರಾಜಿತಾ ಸಾರಂಗಿ ಅವರು ಅಲ್ಲಿ ಗೆದ್ದಿದ್ದರು. ಸಂಬಿತ್ ಪಾತ್ರಾ ಅವರು ಕಳೆದ ಚುನಾವಣೆಯಲ್ಲಿ ಪಿನಾಕಿ ಮಿಶ್ರಾ ಅವರಿಗೆ ತೀವ್ರ ಪೈಪೋಟಿ ನೀಡಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದರು. ಈ ಬಾರಿ ಮೂರು ಪಕ್ಷಗಳೂ ಪ್ರಬಲ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಿರುವುದರಿಂದ ಮತದಾರರು ಯಾರ ಕೈಹಿಡಿಯುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಸೋಲಾಪುರ



ಪ್ರಣೀತಿ ಶಿಂದೆ (ಕಾಂಗ್ರೆಸ್)



ರಾಮ್ ಸತ್ಪುತೆ (ಬಿಜೆಪಿ)

V/S

ಮಹಾರಾಷ್ಟ್ರದ ಸೋಲಾಪುರ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಹಾಗೂ ಕಾಂಗ್ರೆಸ್, ಈ ಬಾರಿ ಹಾಲಿ ಶಾಸಕರನ್ನು ಕಣಕ್ಕಿಳಿಸಿವೆ. ಕಾಂಗ್ರೆಸ್ ಪಕ್ಷವು ಸೋಲಾಪುರ ಸಿಟಿ ಸೆಂಟ್ರಲ್ ಕ್ಷೇತ್ರದ ಶಾಸಕಿ ಹಾಗೂ ಕೇಂದ್ರದ ಮಾಜಿ ಸಚಿವ ಸುಶೀಲ್ ಕುಮಾರ್ ಶಿಂದೆ ಅವರ ಮಗಳು ಪ್ರಣೀತಿ ಶಿಂದೆ ಅವರನ್ನು ಅಖಾಡಕ್ಕಿಳಿಸಿದೆ. ಇವರು ಮೂರು ಬಾರಿ ಶಾಸಕಿಯಾಗಿ ಆಯ್ಕೆಯಾಗಿದ್ದು, ಸ್ಥಳೀಯವಾಗಿಯೂ ಪ್ರಭಾವಿ ನಾಯಕಿಯಾಗಿದ್ದಾರೆ. ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷೆಯಾಗಿರುವ ಪ್ರಣೀತಿ ಅವರು ಸಾಮಾಜಿಕ ಕಾರ್ಯಕರ್ತೆಯಾಗಿಯೂ ಕಾರ್ಯನಿರ್ವಹಿಸಿದವರು. ಈ ಕಾರಣಕ್ಕೆ ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದಾರೆ. 'ಮಹಾ ವಿಕಾಸ ಆಘಾಡಿ'ಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವುದರಿಂದ ಇವರು ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸ ಕ್ಷೇತ್ರದ ಕಾಂಗ್ರೆಸ್ ಮುಖಂಡರಲ್ಲಿದೆ. 2009ರಲ್ಲಿ ಸುಶೀಲ್ ಕುಮಾರ್ ಶಿಂದೆ ಅವರು ಈ ಕ್ಷೇತ್ರದಿಂದ ಗೆದ್ದಿದ್ದರು.

ಸೋಲಾಪುರ ಲೋಕಸಭಾ ಕ್ಷೇತ್ರದಿಂದ ಪ್ರಣೀತಿ ಶಿಂದೆ ಅವರ ಪ್ರತಿಸ್ಪರ್ಧಿಯಾಗಿ ಬಿಜೆಪಿಯು ಮಾಲ್‌ಶಿರಸ್ ಕ್ಷೇತ್ರದ ಶಾಸಕ ರಾಮ್ ಸತ್ಪುತೆ ಅವರನ್ನು ಸ್ಪರ್ಧಾ ಕಣಕ್ಕಿಳಿಸಿದೆ. ರಾಮ್ ಅವರು ಪಕ್ಷದ ಯುವ ಮೋರ್ಚಾ ರಾಷ್ಟ್ರೀಯ ಉಪಾಧ್ಯಕ್ಷರೂ ಹೌದು. ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದಿರುವ ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ರಾಜಕೀಯ ಪ್ರವೇಶಿಸಿದವರು. ಎಬಿವಿಪಿಯಲ್ಲಿದ್ದಾಗ ಹಲವು ವಿದ್ಯಾರ್ಥಿ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಮಹಾರಾಷ್ಟ್ರದಲ್ಲಿ ನಡೆದ ನಕ್ಸಲ್ ವಿರೋಧಿ ಹೋರಾಟದಲ್ಲಿ ರಾಮ್ ಅವರು ಮುಂಚೂಣಿಯಲ್ಲಿದ್ದರು. 2019ರಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿಯ ಜೈಸಿದ್ದೇಶ್ವರ ಸ್ವಾಮೀಜಿ 1,58,608 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಸುಶೀಲ್ ಕುಮಾರ್ ಶಿಂದೆ ಅವರನ್ನು ಪರಾಭವಗೊಳಿಸಿದ್ದರು. 2014ರಲ್ಲೂ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯೇ ಗೆದ್ದಿದ್ದರು. ಇದು ರಾಮ್ ಅವರಲ್ಲಿ ಗೆಲ್ಲುವ ವಿಶ್ವಾಸವನ್ನು ಹೆಚ್ಚಿಸಿದೆ.

ಟೇಬಲ್ ಟೆನಿಸ್ ರ್‍ಯಾಂಕಿಂಗ್: ಎರಡನೇ ಸ್ಥಾನಕ್ಕೆ ಸರಿದ ಮಣಿಕಾ ಬಾತ್ರಾ

ಭಾರತದ ಅಗ್ರ ಆಟಗಾರ್ತಿ ಶ್ರೀಜಾ


ಶ್ರೀಜಾ ಆಕುಲಾ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಮಿಕ್ಸೆಡ್ ಡಬಲ್ಸ್ ಚಾಂಪಿಯನ್ ಶ್ರೀಜಾ ಆಕುಲಾ ಅವರು ಮಂಗಳವಾರ ಭಾರತದ ಅಗ್ರಮಾನ್ಯ ಟೇಬಲ್ ಟೆನಿಸ್ ಆಟಗಾರ್ತಿ ಎನಿಸಿದರು. ಇತ್ತೀಚಿನ ಐಟಿಟಿಎಫ್ ಪಟ್ಟಿಯಲ್ಲಿ ಅವರು ಮಣಿಕಾ ಬಾತ್ರಾ ಅವರನ್ನು ಹಿಂದೆಹಾಕಿದ್ದು 38ನೇ ಸ್ಥಾನಕ್ಕೆ ಏರಿದ್ದಾರೆ.


ಮಣಿಕಾ ಈ ಹಿಂದಿನ ರ್‍ಯಾಂಕಿಂಗ್‌ಗಿಂತ ಎಂಟು ಸ್ಥಾನ ಕೆಳಗಿಳಿದು 39ನೇ ಸ್ಥಾನದಲ್ಲಿದ್ದಾರೆ.

25 ವರ್ಷದ ಶ್ರೀಜಾ, ಈ ವರ್ಷ ಉತ್ತಮ ಸಾಧನೆ ತೋರಿದ್ದು, ಡಬ್ಲ್ಯುಟಿಟಿ ಫೀಡರ್ ಕಾರ್ಪಸ್ ಕ್ರಿಸ್ತಿ ಮತ್ತು ಡಬ್ಲ್ಯುಟಿಟಿ ಫೀಡರ್ ಬೇರೂತ್‌ನಲ್ಲಿ ನಡೆದ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದ್ದರು. ಇವು ಕ್ರಮವಾಗಿ ಜನವರಿ ಮತ್ತು ಮಾರ್ಚ್‌ನಲ್ಲಿ ನಡೆದಿದ್ದವು. ಇದರ ಜೊತೆಗೆ ಗೋವಾದಲ್ಲಿ ನಡೆದ ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ್ದರು.

ಯಶಸ್ವಿನಿ ಘೋರ್ಪಡೆ ಮತ್ತು ಅರ್ಚನಾ ಕಾಮತ್ ಅವರು 99ನೇ ಮತ್ತು 100ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಶರತ್ ಕಮಲ್ ಪುರುಷರ ವಿಭಾಗದಲ್ಲಿ ಭಾರತದ ಆಟಗಾರರ ಪೈಕಿ ಮುಂಚೂಣಿಯಲ್ಲಿದ್ದು 37ನೇ ಸ್ಥಾನದಲ್ಲಿದ್ದಾರೆ. ಜಿ.ಸತ್ಯನ್ ಮತ್ತು ಮಾನವ್ ಠಕ್ಕರ್ ಅವರು 60 ಮತ್ತು 61ನೇ ಸ್ಥಾನದಲ್ಲಿದ್ದಾರೆ. ರಾಷ್ಟ್ರೀಯ ಚಾಂಪಿಯನ್ ಹರ್ಮೀತ್ ದೇಸಾಯಿ ಅವರು 64ನೇ ಸ್ಥಾನಕ್ಕೆ ಸರಿದಿದ್ದಾರೆ. ಭಾರತ ಟಿ.ಟಿ. ತಂಡಗಳು ಈಗಾಗಲೇ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿವೆ. ಭಾರತ ಟೇಬಲ್ ಟೆನಿಸ್ ಫೆಡರೇಷನ್, ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಎರಡು ಸಿಂಗಲ್ಸ್ ಪ್ರವೇಶಗಳನ್ನು ಮೇ 16ರೊಳಗೆ ಆಗಿನ ವಿಶ್ವ ರ್‍ಯಾಂಕಿಂಗ್ ಪರಿಗಣಿಸಿ ನಿರ್ಧರಿಸಬೇಕಾಗಿದೆ.

ಒಲಿಂಪಿಕ್ಸ್ ಸವಾಲಿಗೆ ಸಿದ್ಧ: ಲವ್ಲಿನಾ


ಲವ್ಲಿನಾ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಕಂಚಿನ ಪದಕ ಜಯಿಸಿದ್ದ ಭಾರತದ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಇದೀಗ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 75 ಕೆಜಿ ವಿಭಾಗದಲ್ಲಿ ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ. ಅದರಲ್ಲಿಯೂ ಪದಕ ಜಯಿಸುವ ವಿಶ್ವಾಸದಲ್ಲಿದ್ದಾರೆ.

'ತೂಕ ವಿಭಾಗದಲ್ಲಿ ಬದಲಾವಣೆ ಮಾಡಿಕೊಂಡ ನಂತರ ಉತ್ತಮ ಫಲಿತಾಂಶ ಪಡೆದಿದ್ದೇನೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಲಿಂಪಿಕ್ ಅರ್ಹತಾ ವಿಭಾಗದಲ್ಲಿ ಗೆದ್ದಿರುವುದು ದೊಡ್ಡ ಸಾಧನೆ. ಅದರಿಂದಲೇ ಆತ್ಮವಿಶ್ವಾಸ ಹೆಚ್ಚಿದೆ. ಮೊದಲಿನ ತೂಕದ ವಿಭಾಗದಲ್ಲಿ (69 ಕೆಜಿ) ಇದ್ದಾಗ ದೇಹತೂಕವನ್ನು ನಿಯಂತ್ರಿಸಬೇಕಿತ್ತು. ಈಗ ಅಂತಹ ಒತ್ತಡವಿಲ್ಲ. ಸಾಮರ್ಥ್ಯವೂ ಹೆಚ್ಚಾಗಿದೆ' ಎಂದು ಪಿಟಿಐ ಸಂದರ್ಶನದಲ್ಲಿ ಹೇಳಿದ್ದಾರೆ.

ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ 69 ಕೆಜಿ ವಿಭಾಗವನ್ನು ಕೈಬಿಡಲಾಗಿತ್ತು. ಆದ್ದರಿಂದ 70 ರಿಂದ 75 ಕೆಜಿ ವಿಭಾಗದಲ್ಲಿ ಲವ್ಲಿನಾ ಅವರು ಸ್ಪರ್ಧಿಸುತ್ತಿದ್ದಾರೆ. ಅವರು 2022ರಲ್ಲಿ ಏಷ್ಯನ್ ಚಾಂಪಿಯನ್‌ಷಿಪ್ ಹಾಗೂ 2023ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಹಾಗೂ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

'ಈಗ ನಾನು ಸ್ಪರ್ಧಿಸುತ್ತಿರುವ ವಿಭಾಗದಲ್ಲಿ ಬರುವ ಎಲ್ಲ ಬಾಕ್ಸರ್‌ಗಳು ಬಲಶಾಲಿಗಳಾಗಿದ್ದಾರೆ. ಆದರೆ ನನ್ನ ಸಿದ್ಧತೆಯೂ ಚೆನ್ನಾಗಿದೆ. ತೂಕ ನಿಯಂತ್ರಣದ ಒತ್ತಡವಿಲ್ಲದ ಕಾರಣ ಹೆಚ್ಚು ಪೌಷ್ಠಿಕ ಆಹಾರ ಸೇವಿಸುತ್ತೇನೆ. ಸ್ಟ್ರೆಂತ್ ಮತ್ತು ಕಂಡಿಷನಿಂಗ್ ಅಭ್ಯಾಸ ಹೆಚ್ಚು ಮಾಡುತ್ತೇನೆ. ಇದರಿಂದ ನನ್ನ ಮಾಂಸಖಂಡ ಮತ್ತು ಸ್ನಾಯುಗಳ ದಾರ್ಢ್ಯತೆ ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ' ಎಂದು ಅಸ್ಸಾಂ ಬಾಕ್ಸರ್ ಲವ್ಲಿನಾ ಹೇಳಿದರು.

'ವಿಭಾಗಕ್ಕೆ ತಕ್ಕಂತೆ ನನ್ನ ಕೌಶಲಗಳಲ್ಲಿ ಒಂದಿಷ್ಟು ಬದಲಾವಣೆಗಳನ್ನು ಮಾಡಿಕೊಂಡಿರುವುದು ನಿಜ. ಇದರಿಂದ ನನಗೆ ಹೆಚ್ಚು ಅನುಕೂಲವಾಗಿದೆ. ರಿಂಗ್‌ನಲ್ಲಿ ಹೆಚ್ಚು ಸಮಚಿತ್ತ ಮತ್ತು ಶಾಂತಚಿತ್ತದಿಂದ ಇರುವುದನ್ನು ರೂಢಿಸಿಕೊಂಡಿದ್ದೇನೆ' ಎಂದರು.

ಶೂಟಿಂಗ್: ಸಿಮ್ರನ್‌ಪ್ರೀತ್, ಭಾವೇಶ್ ಶೇಖಾವತ್‌ಗೆ ಪ್ರಶಸ್ತಿ


ಸಿಮ್ರನ್‌ಪ್ರೀತ್ ಕೌರ್ ಬ್ರಾರ್

ನವದೆಹಲಿ (ಪಿಟಿಐ): ಭಾವೇಶ್ ಶೇಖಾವತ್ ಮತ್ತು ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ಇಲ್ಲಿನ ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ ಆಯ್ಕೆ ಟ್ರಯಲ್ಸ್‌ನಲ್ಲಿ ಕ್ರಮವಾಗಿ ಪುರುಷರ 25 ಮೀಟರ್ ರ್‍ಯಾಪಿಡ್ ಫೈರ್ ಪಿಸ್ತೂಲ್ ಮತ್ತು ಮಹಿಳೆಯರ 25 ಮೀ ಪಿಸ್ತೂಲ್ (ಟಿ2) ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದರು.

ಫೈನಲ್‌ನಲ್ಲಿ ಭಾವೇಶ್ 34 ಪಾಯಿಂಟ್ಸ್‌ನೊಂದಿಗೆ ಅಗ್ರಸ್ಥಾನಿಯಾದರೆ, ಒಎಸ್‌ಟಿ ಟಿ1 ವಿಜೇತ ಅನೀಶ್ ಭನ್ವಾಲ (29) ದ್ವಿತೀಯ ಸ್ಥಾನ ಪಡೆದರು. ವಿಜಯವೀರ್ ಸಿಧು (22), ಆದರ್ಶ್ ಸಿಂಗ್ (17), ಅಂಕುರ್ ಗೋಯೆಲ್ ಕ್ರಮವಾಗಿ ನಂತರದ ಸ್ಥಾನಗಳನ್ನು ಗಳಿಸಿದರು.

ಸಿಮ್ರನ್‌ಪ್ರೀತ್ ಅವರು ಫೈನಲ್‌ನಲ್ಲಿ 37 ಪಾಯಿಂಟ್ಸ್‌ನೊಂದಿಗೆ ಅಗ್ರಸ್ಥಾನಿಯಾದರು. ಒಲಿಂಪಿಯನ್ ಮನು ಭಾಕರ್ (35) ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟರು. ಇಶಾ ಸಿಂಗ್ (30) ಮೂರನೇ ಸ್ಥಾನ ಗಳಿಸಿದರು. ರಿದಮ್ ಸಾಂಗ್ವಾನ್ (24) ಮತ್ತು ಅಭಿದ್ನ್ಯಾ ಪಾಟೀಲ (16) ನಂತರದ ಸ್ಥಾನ ಪಡೆದರು.

'ರಾಷ್ಟ್ರೀಯ ತಂಡಕ್ಕೆ ಮರಳುವುದಿಲ್ಲ'


ಸುನಿಲ್ ನಾರಾಯಣ್ ಪಿಟಿಐ ಚಿತ್ರ

ನವದೆಹಲಿ (ಎಎಫ್‌ಪಿ): ವೆಸ್ಟ್ ಇಂಡೀಸ್ ತಂಡಕ್ಕೆ ಪುನರಾಗಮನದ 'ಬಾಗಿಲು ಮುಚ್ಚಿದೆ' ಎಂದು ಸುನಿಲ್ ನಾರಾಯಣ್ ಹೇಳಿದ್ದಾರೆ.

ಐಪಿಎಲ್ ಟೂರ್ನಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಪರ ಆಲ್‌ರೌಂಡ್ ಪ್ರದರ್ಶನ ನೀಡಿದ ಬೆನ್ನಲ್ಲೇ ಅವರನ್ನು ಟಿ20 ವಿಶ್ವ ಕಪ್ ತಂಡಕ್ಕೆ ಕರೆಸಿಕೊಳ್ಳಬೇಕೆಂಬ ಮಾತುಗಳು ಕೇಳಿಬಂದಿದ್ದವು.

ನಾಲ್ಕು ವರ್ಷ ಕೆಳಗೆ ವೆಸ್ಟ್ ಇಂಡೀಸ್ ಟಿ20 ತಂಡದಲ್ಲಿ ಕೊನೆಯ ಬಾರಿ ಆಡಿದ್ದ ಸುನಿಲ್ ನಾರಾಯಣ್ ಕಳೆದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.

35 ವರ್ಷದ ಆಟಗಾರ ಈ ಬಾರಿಯ ಲೀಗ್‌ನಲ್ಲಿ ಒಂದು ಶತಕ, ಒಂದು ಅರ್ಧ ಶತಕ ಒಳಗೊಂಡ 286 ರನ್ ಗಳಿಸಿರುವ ಸುನಿಲ್, 7.10ರ ಇಕಾನಮಿ ದರದಲ್ಲಿ 9 ವಿಕೆಟ್‌ಗಳನ್ನೂ ಪಡೆದಿದ್ದು ಆಲ್‌ರೌಂಡ್ ಪ್ರದರ್ಶನ ನೀಡಿದ್ದಾರೆ.

ಕ್ರಿಕೆಟ್‌ಗೆ ಪುನರಾಗಮನ ಮಾಡುವಂತೆ ವೆಸ್ಟ್ ಇಂಡೀಸ್ ತಂಡದ ನಾಯಕ ರೋವ್ಮನ್ ಪಾವೆಲ್ ಅವರು ಚಂದ್ರಪಾಲ್ ಅವರಿಗೆ ಒತ್ತಾಯಿಸಿದ್ದರು. ಟಿ20 ವಿಶ್ವಕಪ್ ಜೂನ್‌ನಲ್ಲಿ ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿದೆ.

'ನಿವೃತ್ತಿಯ ನಿರ್ಧಾರಕ್ಕೆ ಬದ್ಧನಾಗಿದ್ದೇನೆ. ಮರಳಿ ಬರುವ ಬಾಗಿಲು ಮುಚ್ಚಿದೆ. ಜೂನ್‌ನಲ್ಲಿ ಕಣಕ್ಕಿಳಿಯುವ ವೆಸ್ಟ್ ಇಂಡೀಸ್ ಆಟಗಾರರನ್ನು ಬೆಂಬಲಿಸುತ್ತೇನೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಸುನೀಲ್ ನಾರಾಯಣ್ ಬರೆದುಕೊಂಡಿದ್ದಾರೆ.

ವಿಶ್ವ 10ಕೆ ಓಟಕ್ಕೆ ಭರದ ಸಿದ್ಧತೆ

28ಕ್ಕೆ ಬೆಂಗಳೂರಿನಲ್ಲಿ ಆಯೋಜನೆ: ಸಂಚಾರ ಮಾರ್ಗದಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಟಿಸಿಎಸ್ ವಿಶ್ವ 10ಕೆ ಬೆಂಗಳೂರು-2024' ಓಟವನ್ನು ಇದೇ 28ರಂದು ಆಯೋಜಿಸಲಾಗಿದ್ದು, ಅಂದು ಹಲವು ರಸ್ತೆಗಳಲ್ಲಿ ವಾಹನ ಸಂಚಾರಗಳನ್ನು ನಿರ್ಬಂಧಿಸಲಾಗಿದೆ.

ಬೆಳಿಗ್ಗೆ 4ರಿಂದ 10 ಗಂಟೆಯವರೆಗೆ ಓಟ ನಡೆಯಲಿದೆ. ಹಲವು ರಸ್ತೆಗಳ ವಾಹನ ಸಂಚಾರದಲ್ಲಿ ಬದಲಾವಣೆ ಮಾಡಿದ್ದು, ಪರ್ಯಾಯ ಮಾರ್ಗದಲ್ಲಿ ಸವಾರರು, ಚಾಲಕರು ತೆರಳುವಂತೆ ಎಂದು ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

ಸಂಚಾರ ನಿರ್ಬಂಧಿಸಲಾದ ರಸ್ತೆಗಳು:

- ವಿಧಾನಸೌಧದ ಕಡೆಗೆ ಸಂಚರಿಸುವ ವಾಹನಗಳನ್ನು ಕೆ.ಆರ್. ಸರ್ಕಲ್‌ನಲ್ಲಿ ಮಾರ್ಗ ಬದಲಾಯಿಸಿ ಪೊಲೀಸ್ ಕಾರ್ನರ್ ಕಡೆಗೆ ತೆರಳಲು ಅವಕಾಶ ಕಲ್ಪಿಸಲಾಗಿದೆ. ವಿಧಾನಸೌಧದ ಕಡೆಗೆ ಯಾವುದೇ ವಾಹನಗಳ ಪ್ರವೇಶಕ್ಕೆ ಅವಕಾಶವಿಲ್ಲ.
- ಬಾಳೇಕುಂದ್ರಿ ವೃತ್ತದಿಂದ ವಿಧಾನಸೌಧದ ಕಡೆಗೆ ಬರುವ ವಾಹನಗಳನ್ನು ಬಾಳೇಕುಂದ್ರಿ ಜಂಕ್ಷನ್‌ನಲ್ಲಿ ಮಾರ್ಗ ಬದಲಾಯಿಸಿ ಕನಿಂಗ್‌ಹ್ಯಾಮ್ ರಸ್ತೆ ಕಡೆಗೆ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ.
- ಕಬ್ಬನ್‌ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಕಡೆಯಿಂದ ಸಿ.ಟಿ.ಒ ವೃತ್ತದವರೆಗೆ ಎರಡೂ ಕಡೆಯಲ್ಲೂ ವಾಹನ ಸಂಚಾರ ನಿರ್ಬಂಧಿಸಲಾಗಿದೆ.
- ಕಾಫಿಬೋರ್ಡ್‌ನಿಂದ ಬರುವ ಎಲ್ಲಾ ವಾಹನಗಳಿಗೆ ಸಿ.ಟಿ.ಒ. ಸರ್ಕಲ್ ಕಡೆಗೆ ಚಲಿಸಲು ಅವಕಾಶವಿರುವುದಿಲ್ಲ. ಟ್ರಾಫಿಕ್ ಹೆಡ್‌ಕ್ವಾರ್ಟರ್ ಜಂಕ್ಷನ್‌ನಿಂದ ನೇರವಾಗಿ ಸಂಚರಿಸಬೇಕು.
- ಇಂದಿರಾನಗರ, ಕೆ.ಆರ್.ಪುರಂ, ವೈಟ್‌ಫೀಲ್ಡ್‌ನಿಂದ ಬರುವ ವಾಹನಗಳ ಸಂಚಾರವನ್ನು ಆಂಜನೇಯ ಜಂಕ್ಷನ್‌ನಲ್ಲಿ ಹಲಸೂರು ಕೆರೆ ಕಡೆಗೆ ಬಲತಿರುವು ನಿಷೇಧಿಸಲಾಗಿದೆ.
- ಸಿಂಧಿ ಕಾಲೊನಿ ಜಂಕ್ಷನ್ ಮತ್ತು ಕೀರ್ತಿ ಸಾಗರ್ ಜಂಕ್ಷನ್‌ನಲ್ಲಿ ಅಸ್ಸಾಯೆ ರಸ್ತೆಗೆ ಹೋಗುವ ವಾಹನ ಸಂಚಾರ ನಿರ್ಬಂಧಿಸಿ ವ್ಹೀಲರ್ಸ್ ರಸ್ತೆ, ಸೇಂಟ್‌ಜಾನ್ಸ್ ಚರ್ಚ್ ರಸ್ತೆ ಮುಖಾಂತರ ಸಂಚರಿಸಲು ಅವಕಾಶ.
- ನಾಗಾ ಜಂಕ್ಷನ್‌ನಲ್ಲಿ ಸೇಂಟ್ ಜಾನ್ಸ್ ರಸ್ತೆಗೆ ಮತ್ತು ಹಲಸೂರು ಕೆರೆ ಕಡೆಗೆ ಹೋಗುವ ವಾಹನಗಳನ್ನು ನಿರ್ಬಂಧಿಸಿ ಸೇಂಟ್ ಜಾನ್ಸ್ ಚರ್ಚ್ ರಸ್ತೆ ಹಾಗೂ ಪ್ರೊಮ್ನೇಡ್ ರಸ್ತೆ ಮುಖಾಂತರ ವಾಹನಗಳ ಸಂಚಾರಕ್ಕೆ ಅವಕಾಶ
- ಲಾವಣ್ಯ ಜಂಕ್ಷನ್‌ನಲ್ಲಿ ಶ್ರೀ ಸರ್ಕಲ್ ಕಡೆಗೆ ಹೋಗುವ ಎಲ್ಲಾ ರೀತಿಯ ವಾಹನಗಳನ್ನು ನಿರ್ಬಂಧಿಸಿ ಎಸ್.ಸಿ ಗಾರ್ಡನ್ ಮುಖಾಂತರ ಸಂಚರಿಸಲು ಅವಕಾಶ.

ವಾಹನ ನಿಲುಗಡೆಗೆ ಅವಕಾಶ: ಕಂಠೀರವ ಕ್ರೀಡಾಂಗಣ, ಯು.ಬಿ. ಸಿಟಿ, ಒನ್ ಎಂ.ಜಿ. ಮಾಲ್, ಗರುಡಾ ಮಾಲ್, ಆರ್ಮಿ ಪಬ್ಲಿಕ್ ಸ್ಕೂಲ್ (ಹಿರಿಯ ನಾಗರಿಕರು ಮತ್ತು ಬಸ್‌ಗಳಿಗಾಗಿ), ಮಣಿಪಾಲ್ ಸೆಂಟರ್ (ಮಾಧ್ಯಮದ ವಾಹನಗಳಿಗೆ)


ವಿಶ್ವ 10ಕೆ ಓಟದ ನೂತನ ಮಾರ್ಗನಕ್ಷೆಯನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು. (ಎಡದಿಂದ) ಬೆಂಗಳೂರು ಸಂಚಾರ ಪೊಲೀಸ್ ಯೋಜನಾ ವಿಭಾಗದ ಇನ್‌ಸ್ಪೆಕ್ಟರ್ ಅನಿಲ್‌ಕುಮಾರ್ ಪಿ, ಕೇಂದ್ರ ಉಪವಿಭಾಗದ ಸಂಚಾರ ಎಸಿಪಿ ಶಶಿಕಲಾ, ಕಾರ್ಯಕ್ರಮದ ವೈದ್ಯಕೀಯ ನಿರ್ದೇಶಕ ಡಾ.ವಿವೇಕ್ ಜವಳಿ, ರೇಸ್ ನಿರ್ದೇಶಕ ಹ್ಯುಗ್ ಜೋನ್ಸ್ , ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಸ್‌ಡಬ್ಲ್ಯುಎಂ) ಎಂ.ಎಂ. ಅಭಿಲಾಷ್, ಕಾರ್ಯಾಚರಣೆ ನಿರ್ದೇಶಕ ಪಿ.ಎಸ್. ಶಂಕರನ್, ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಹೊಸ ಮಾರ್ಗದಲ್ಲಿ ಸಾಗಲಿರುವ ಓಟ

ಸಂಚಾರ ದಟ್ಟಣೆ ಗಮನದಲ್ಲಿಟ್ಟುಕೊಂಡು ವಿಶ್ವ 10ಕೆ ಓಟದ ಸ್ಪರ್ಧೆಗಳಿಗೆ ನೂತನ ಮಾರ್ಗನಕ್ಷೆ ಹಾಗೂ ವೇಳಾಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ತಿಳಿಸಿದರು.

'16ನೇ ಬಾರಿ ಈ ಓಟವು ನಡೆಯುತ್ತಿದೆ. ಈ ಹಿಂದಿನ ಓಟಗಳಲ್ಲಿ ಆಗಿರುವ ಅನುಭವದ ಆಧಾರದಲ್ಲಿ ವೇಳಾಪಟ್ಟಿ ಹಾಗೂ ಮಾರ್ಗ ರೂಪಿಸಲಾಗಿದೆ. ಇದೇ ಮೊದಲ ಬಾರಿಗೆ 10ಕೆ ಓಟವು ಹೊಸ ಮಾರ್ಗದಲ್ಲಿ ಸಾಗಲಿದೆ. ಈ ಬಾರಿ ಹಲಸೂರು ಕೆರೆಯ ಅಂಚಿನವರೆಗೆ ಮೂರು ಕಿಲೋಮೀಟರ್ ವಿಸ್ತರಣೆ ಮಾಡಲಾಗಿದೆ ಎಂದರು.

ಕಬ್ಬನ್ ರಸ್ತೆಯ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣೆಕ್‌ಶಾ ಪರೇಡ್ ಮೈದಾನದಿಂದ ಸ್ಪರ್ಧೆ ಆರಂಭಗೊಳ್ಳುವುದು. 1500 ಓಟಗಾರರು ಸೇರಿದಂತೆ 28,500 ಕ್ಕೂ ಅಧಿಕ ಮಂದಿ ಭಾಗವಹಿಸಲಿದ್ದಾರೆ.

ರೇಸ್ ವಿಭಾಗಗಳು: ಓಪನ್ 10ಕೆ: (ಆರಂಭ: ಬೆಳಿಗ್ಗೆ 5.10); ವಿಶ್ವ 10ಕೆ ಮಹಿಳೆಯರು (6.40); ವಿಶ್ವ 10ಕೆ ಪುರುಷರು (7.30); ಚಾಂಪಿಯನ್ಸ್, ಅಂಗವಿಕಲರು– 2.6 ಕಿ.ಮೀ. (8.50); ಮಜಾ ರನ್–5.5 ಕಿ.ಮೀ. (8.15); ಸಿಲ್ವರ್ಸ್ ರನ್–2.6 ಕಿ.ಮೀ. (8.50)

'ಟೊರಾಂಟೊದಲ್ಲಿ ಭಾರತದ ಕಂಪನ...'


ಗ್ಯಾರಿ ಕ್ಯಾಸ್ಪರೋವ್


ನವದೆಹಲಿ (ಪಿಟಿಐ): 'ಟೊರಾಂಟೊದಲ್ಲಿ ಭಾರತ ಕಂಪನ ಸೃಷ್ಟಿಸಿದೆ'ವಾಗಿದೆ ಎಂದು ಬಣ್ಣಿಸಿದವರು ರಷ್ಯಾದ ಚೆಸ್ ದಂತಕಥೆ ಗ್ಯಾರಿ ಕ್ಯಾಸ್ಪರೋವ್ ಅವರು, ವಿಶ್ವ ಚಾಂಪಿಯನ್ ಪಟ್ಟಕ್ಕೆ ಅತಿ ಕಿರಿಯ ಚಾಲೆಂಜರ್ ಎನಿಸಿದ ಡಿ.ಗುಕೇಶ್ ಅವರ ಸಾಧನೆಯನ್ನು ಕೊಂಡಾಡಿದ್ದಾರೆ.

17 ವರ್ಷದ ಗುಕೇಶ್ ಅವರು, ಸ್ವತಃ ಕ್ಯಾಸ್ಪರೋವ್ 40 ವರ್ಷದ ಹಿಂದೆ ಸ್ಥಾಪಿಸಿದ್ದ ದಾಖಲೆಯನ್ನು ಮುರಿದಿದ್ದರು. 1984ರಲ್ಲಿ ಅನತೋಲಿ ಕಾರ್ಪೋವ್ ಅವರಿಗೆ ಚಾಲೆಂಜರ್ ಎನಿಸಿದಾಗ ಕ್ಯಾಸ್ಪರೋವ್ ಅವರಿಗೆ 22 ವರ್ಷ ವಯಸ್ಸು.

'ಅಭಿನಂದನೆಗಳು. ಟೊರಾಂಟೊದಲ್ಲಿ ಭಾರತ ಕಂಪನ ಉಂಟುಮಾಡಿದೆ. ಚೆಸ್ ಶಕ್ತಿ ಈಗ ಪಲ್ಲಟಗೊಳ್ಳುತ್ತಿದೆ. 17 ವರ್ಷದ ಡಿ.ಗುಕೇಶ್ ಚೆಸ್‌ನ ಅತ್ಯುನ್ನತ ಪ್ರಶಸ್ತಿಗಾಗಿ ಡಿಂಗ್ ಲಿರೆನ್ ಈಗ ಅವರನ್ನು ಎದುರಿಸಲಿದ್ದಾರೆ' ಎಂದು ಕ್ಯಾಸ್ಪರೋವ್ 'ಎಕ್ಸ್'ನಲ್ಲಿ ಬರೆದಿದ್ದಾರೆ. ಹಲವು ದಶಕಗಳ ಕಾಲ ರಷ್ಯಾ ಜಾಗತಿಕ ಚೆಸ್ ಶಕ್ತಿಯಾಗಿ ವಿಜೃಂಭಿಸಿದ್ದರ ಹಿನ್ನೆಲೆಯಲ್ಲಿ ಅವರು ಹೀಗೆ ಹೇಳಿದ್ದಾರೆ. ಈ ವರ್ಷದ ಅಂತ್ಯದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ನಡೆಯಲಿದೆ. ಭಾರತದಲ್ಲಿ ಚೆಸ್ ವ್ಯಾಪಕ ಮಟ್ಟದಲ್ಲಿ ಬೆಳೆಯಲು ಐದು ಬಾರಿಯ ಚಾಂಪಿಯನ್ ವಿಶ್ವನಾಥನ್ ಆನಂದ್ ಅವರ ಸಾಧನೆಗಳು ಪ್ರೇರಣೆಯಾದವು. ಭಾರತದ ಚೆಸ್ ಏಳಿಗೆಗೆ ಆನಂದ್ ಅವರ ಕೊಡುಗೆಯನ್ನು ಒಪ್ಪಿಕೊಂಡ ಕ್ಯಾಸ್ಪರೋವ್, 'ವಿಶಿ ಆನಂದ್ ಅವರಿಂದ 'ಬೆಳೆದ ಮಕ್ಕಳು' ಈಗ ಎಲ್ಲೆಡೆ ದೊಡ್ಡ ಮಟ್ಟದಲ್ಲಿ ಸಾಧನೆ ಮಾಡತೊಡಗಿದ್ದಾರೆ' ಎಂದು ಹೇಳಿದ್ದಾರೆ. ಕ್ಯಾಸ್ಪರೋವ್ ಅವರು 1985 ರಿಂದ 1993ರವರೆಗೆ ವಿಶ್ವ ಚಾಂಪಿಯನ್ ಆಗಿದ್ದರು. ದಾಖಲೆ 225 ವಾರಗಳ ಕಾಲ ಅಗ್ರಮಾನ್ಯ ಆಟಗಾರನಾಗಿ ಮೆರೆದಿದ್ದರು.

ಷೇರುಪೇಟೆ ವಹಿವಾಟು

89



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	22,336
ಇಂದಿನ ಅಂತ್ಯ	22,368
▲	31
ದಿನದ ಗರಿಷ್ಠ	22,447

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹280-456
ದ್ವಿತಳಿ (ಬಿ.ವಿ) ₹280-595

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹445
12 ಕ್ಕೆ	₹60
ಮೈಸೂರು	
100ಕ್ಕೆ	₹445

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹177
ಆರ್‌ಎಸ್‌ಎಸ್-5 ₹171
ಗುಡ್ ಲಾಟ್ ₹161
(ಪ್ರತಿ ಕೆ.ಜಿಗೆ)

ಮಾರುಕಟ್ಟೆಯಲ್ಲಿ ದರ ಕುಸಿತ: ಬೆಳೆಗಾರರಿಗೆ ನಷ್ಟದ ಭೀತಿ


ಈರುಳ್ಳಿ ಮಾರಾಟಕ್ಕೆ ಹಿಂದೇಟು

● ವಿಶ್ವನಾಥ ಡಿ.

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಲೋಕಸಭಾ ಚುನಾವಣೆ ಮುಗಿದ ಬಳಿಕ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಗಬಹುದು ಎಂಬ ನಿರೀಕ್ಷೆಯಲ್ಲಿರುವ ರೈತರು, ಈರುಳ್ಳಿ ಮಾರಾಟ ಮಾಡದೆ ಕಳೆದ ಎರಡು ತಿಂಗಳಿನಿಂದಲೂ ದಾಸ್ತಾನು ಇಟ್ಟಿದ್ದಾರೆ.

ತಾಲ್ಲೂಕಿನ ಚಿಗಟೇರಿ ಹೋಬಳಿಯ ನಂದಿಬೇವೂರು, ನಂದಿಬೇವೂರು ತಾಂಡಾ, ಕೊಂಗನಹೊಸೂರು, ಬಾವಿಹಳ್ಳಿ, ಮೈದೂರು, ಹಗರಿ ಗಜಾಪುರ, ಚಿಗಟೇರಿ ಗ್ರಾಮದ ರೈತರು ಸಣ್ಣ ಮತ್ತು ದೊಡ್ಡ ಗಾತ್ರದ ಈರುಳ್ಳಿಯನ್ನು ಪ್ರತ್ಯೇಕಿಸಿ ದಾಸ್ತಾನಿಟ್ಟಿದ್ದಾರೆ.

'ಎರಡೂವರೆ ಎಕರೆ ಜಮೀನಿನಲ್ಲಿ ಈರುಳ್ಳಿ ಬಿತ್ತನೆ ಮಾಡಿದ್ದು, 130 ಚೀಲ ಉತ್ಪಾದನೆಯಾಗಿದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದೇನೆ. ಈರುಳ್ಳಿ ಕಟಾವು ಮಾಡಿ ಸಂಸ್ಕರಿಸಲು ಒಂದು ಚೀಲಕ್ಕೆ ₹200 ಖರ್ಚಾಗುತ್ತದೆ. ಬೆಂಗಳೂರಿಗೆ ಲಾರಿಯಲ್ಲಿ ಸಾಗಿಸಲು ₹100 ಖರ್ಚಾಗುತ್ತದೆ. ಮಧ್ಯವರ್ತಿಗಳು ಕ್ವಿಂಟಲ್‌ಗೆ ₹1,200ಕ್ಕೆ ಕೇಳುತ್ತಾರೆ. ಕಡಿಮೆ ಬೆಲೆಗೆ ಮಾರಾಟ ಮಾಡಲು ಇಷ್ಟವಿಲ್ಲ' ಎಂದು ನಂದಿಬೇವೂರು ಗ್ರಾಮದ ರೈತ ಹೊನ್ನೂರು ಸಾಬ್ 'ಪ್ರಜಾವಾಣಿ'ಗೆ ತಿಳಿಸಿದರು.



ಸದ್ಯ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆಯಾಗಿದೆ. ದೀರ್ಘಕಾಲದಿಂದ ದಾಸ್ತಾನು ಮಾಡಿ ಇಟ್ಟುಕೊಂಡಿರುವ ಈರುಳ್ಳಿ ಹಾಳಾದರೆ ಏನು ಗತಿ ಎಂಬ ಆತಂಕವೂ ರೈತರಿಗೆ ಕಾಡುತ್ತಿದೆ.

> **ಈರುಳ್ಳಿ ಕಟಾವು ಮಾಡಿ ರಾಶಿ ಹಾಕಲು ಕೂಲಿ ಕಾರ್ಮಿಕರಿಗೆ ₹38 ಸಾವಿರ ವ್ಯಯಿಸಿರುವೆ. ಈಗಿನ ಬೆಲೆಗೆ ಈರುಳ್ಳಿ ಮಾರಾಟ ಮಾಡಿದರೆ ನಷ್ಟವಾಗುತ್ತದೆ**
> **ಹೊನ್ನೂರು ಸಾಬ್,** ರೈತ, ನಂದಿಬೇವೂರು

'ಹರಪನಹಳ್ಳಿ ತಾಲ್ಲೂಕಿನಲ್ಲಿ 2023-24ನೇ ಸಾಲಿನ ಮುಂಗಾರು ಹಂಗಾಮಿನಡಿ 1,600 ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆಯಾಗಿತ್ತು. ಆ ಪೈಕಿ ಮಳೆ ಕೊರತೆಯಿಂದ 900 ಹೆಕ್ಟೇರ್‌ನಲ್ಲಿ ಬೆಳೆ ನಷ್ಟವಾಗಿದೆ. ಹಿಂಗಾರು ಹಂಗಾಮಿನಲ್ಲಿ 1,770 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ನೀರಿನ ಕೊರತೆಯಿಂದ ಅರ್ಧದಷ್ಟು ಇಳುವರಿ ಕುಸಿದಿದೆ' ಎಂದು ತೋಟಗಾರಿಕೆ ಇಲಾಖೆಯ ಹಿರಿಯ ನಿರ್ದೇಶಕ ಜಯಸಿಂಹ ತಿಳಿಸಿದರು.

ಮಸಾಲೆ ಪದಾರ್ಥ ಸುರಕ್ಷಿತ: ಎವರೆಸ್ಟ್

ನವದೆಹಲಿ/ ಹೈದರಾಬಾದ್ (ಪಿಟಿಐ/ ರಾಯಿಟರ್ಸ್): 'ಎವರೆಸ್ಟ್ ಮಸಾಲೆ ಪದಾರ್ಥಗಳು ಬಳಕೆಗೆ ಸುರಕ್ಷಿತವಾಗಿದ್ದು, ಗುಣಮಟ್ಟದಿಂದ ಕೂಡಿವೆ. ಹಾಗಾಗಿ, ಗ್ರಾಹಕರು ಯಾವುದೇ ಆತಂಕಪಡುವ ಅಗತ್ಯವಿಲ್ಲ' ಎಂದು ಎವರೆಸ್ಟ್ ಫುಡ್ ಪ್ರಾಡೆಕ್ಟ್ಸ್ ಪ್ರೈವೆಟ್ ಲಿಮಿಟೆಡ್ ಸ್ಪಷ್ಟಪಡಿಸಿದೆ.

ಭಾರತೀಯ ಮಸಾಲೆ ಮಂಡಳಿಯ ಪ್ರಯೋಗಾಲಯದಲ್ಲಿ ಕಂಪನಿಯ ಉತ್ಪನ್ನಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಅಲ್ಲಿ ಅನುಮತಿ ದೊರೆತ ಬಳಿಕವೇ ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ ಎಂದು ಕಂಪನಿಯ ನಿರ್ದೇಶಕ ರಾಜೀವ್ ಶಾ ಹೇಳಿದ್ದಾರೆ.

ಕಂಪನಿಯು ಉತ್ಪಾದಿಸುವ 60 ಪದಾರ್ಥಗಳ ಪೈಕಿ ಫಿಶ್ ಕರ್‍ರಿ ಮಸಾಲೆಯನ್ನು ಮಾತ್ರವೇ ಸಿಂಗಪುರದಲ್ಲಿ ಪರಿಶೀಲಿಸಲಾಗಿದೆ ಎಂದು ತಿಳಿಸಿದ್ದಾರೆ.

'ಸಿಂಗಪುರದಲ್ಲಿ ಕಂಪನಿಯ ಪದಾರ್ಥಗಳ ಬಳಕೆಗೆ ನಿಷೇಧ ಹೇರಿಲ್ಲ. ಹಾಂಗ್‌ಕಾಂಗ್‌ನ ಎಚ್ಚರಿಕೆ ಸಂದೇಶದ ಮೇರೆಗೆ ಮುಂದಿನ ಹಂತದ ಪರಿಶೀಲನೆಗಾಗಿ ತಾತ್ಕಾಲಿಕವಾಗಿ ಮಾರಾಟಕ್ಕೆ ತಡೆ ನೀಡಲಾಗಿದೆ' ಎಂದು ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ದೇಶದ ಜನಪ್ರಿಯ ಬ್ರ್ಯಾಂಡ್ ಆಗಿರುವ ಎವರೆಸ್ಟ್‌ನ ಮಸಾಲೆ ಪದಾರ್ಥಗಳು ಏಷ್ಯಾ, ಆಫ್ರಿಕಾ, ಯೂರೋಪ್ ಹಾಗೂ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಪೂರೈಕೆಯಾಗುತ್ತವೆ.

ರಾಯಭಾರ ಕಚೇರಿಯಿಂದ ವಿವರ ಕೇಳಿದ ಕೇಂದ್ರ

ನವದೆಹಲಿ (ಪಿಟಿಐ): ಹಾಂಗ್‌ಕಾಂಗ್ ಮತ್ತು ಸಿಂಗಪುರದಲ್ಲಿ ಎಂಡಿಎಚ್ ಹಾಗೂ ಎವರೆಸ್ಟ್ ಮಸಾಲೆ ಪದಾರ್ಥಗಳಿಗೆ ನಿಷೇಧ ಹೇರಿರುವುದಕ್ಕೆ ಸಂಬಂಧಿಸಿದಂತೆ ಅಲ್ಲಿನ ಆಹಾರ ಸುರಕ್ಷತೆ ಕೇಂದ್ರಗಳು ಸಿದ್ಧಪಡಿಸಿರುವ ವರದಿಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ನಿಷೇಧಕ್ಕೆ ಸಂಬಂಧಿಸಿದ ತಾಂತ್ರಿಕ ವಿವರ ಹಾಗೂ ವಿಶ್ಲೇಷಣಾತ್ಮಕ ವರದಿ ರವಾನಿಸುವಂತೆ ಎರಡು ದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳಿಗೆ, ಕೇಂದ್ರ ವಾಣಿಜ್ಯ ಸಚಿವಾಲಯವು ನಿರ್ದೇಶನ ನೀಡಿದೆ.

'ಪ್ರತಿಕೂಲ ಹವಾಮಾನದಿಂದ ಹಣದುಬ್ಬರ ಏರಿಕೆ'

ಮುಂಬೈ (ಪಿಟಿಐ): ಮಧ್ಯಪ್ರಾಚ್ಯ ಬಿಕ್ಕಟ್ಟು ಹಾಗೂ ಪ್ರತಿಕೂಲ ಹವಾಮಾನವು ದೇಶದಲ್ಲಿ ಹಣದುಬ್ಬರದ ಏರಿಕೆ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಸಿಕ ವರದಿ ತಿಳಿಸಿದೆ.

ಬಿಸಿ ಗಾಳಿಯು ತರಕಾರಿಗಳ ಬೆಲೆ ಏರಿಕೆಗೆ ಕಾರಣವಾಗಲಿದೆ. ಮತ್ತೊಂದೆಡೆ ಇಸ್ರೇಲ್–ಇರಾನ್ ನಡುವಿನ ಬಿಕ್ಕಟ್ಟಿನಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಅಸ್ಥಿರವಾಗಿದೆ. ತೈಲದ ಬೆಲೆ ಏರಿಕೆಯಾದರೆ ಹಣದುಬ್ಬರವು ಹೆಚ್ಚಳವಾಗಲಿದೆ ಎಂದು ಹೇಳಿದೆ.

ಮಾರ್ಚ್‌ನಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧರಿಸಿದ ಚಿಲ್ಲರೆ ಹಣದುಬ್ಬರವು ಶೇ 4.9ರಷ್ಟು ದಾಖಲಾಗಿದೆ. ಕಳೆದ ಎರಡು ತಿಂಗಳಿನಿಂದಲೂ ಸರಾಸರಿ ಹಣದುಬ್ಬರವು ಶೇ 5.1ರಷ್ಟಿದೆ.

ಜಾಗತಿಕ ಬೆಳವಣಿಗೆಯ ವೇಗವು ಸುಸ್ಥಿರವಾಗಿದ್ದು, ವ್ಯಾಪಾರ ವಹಿವಾಟು ಸಕಾರಾತ್ಮಕವಾಗಿದೆ ಎಂದು ವರದಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಚಿನ್ನ ₹1,450, ಬೆಳ್ಳಿ ₹2,300 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಮಂಗಳವಾರ ಮತ್ತೆ ಇಳಿಕೆಯಾಗಿದೆ.

ಚಿನ್ನದ ದರ 10 ಗ್ರಾಂಗೆ ₹1,450 ಕಡಿಮೆಯಾಗಿ, ₹72,200ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹2,300 ಕುಸಿದು, ₹83,500 ಆಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,310 ಡಾಲರ್ (ಅಂದಾಜು ₹1.92 ಲಕ್ಷ) ಮತ್ತು 28.29 (ಅಂದಾಜು ₹2,233) ಡಾಲರ್‌ನಂತೆ ಮಾರಾಟವಾಗಿದೆ.

'ಇಸ್ರೇಲ್ ಮತ್ತು ಇರಾನ್ ನಡುವೆ ತಲೆದೋರಿದ್ದ ಉದ್ವಿಗ್ನತೆ ಕಡಿಮೆಯಾಗಿದೆ. ಅಲ್ಲದೆ, ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸುವ ನಿರ್ಧಾರವನ್ನು ಮುಂದೂಡುವ ಸಾಧ್ಯತೆಯಿದೆ. ಇದು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ. ಹಾಗಾಗಿ, ಹಳದಿ ಲೋಹದ ಧಾರಣೆ ಇಳಿಕೆಯಾಗಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಿಲಯನ್ಸ್‌ಗೆ ₹28,607 ಕೋಟಿ ನಷ್ಟ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಷೇರಿನ ಮೌಲ್ಯವು ಮಂಗಳವಾರ ಶೇ 1ರಷ್ಟು ಇಳಿಕೆ ಕಂಡಿದೆ.

2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಕಂಪನಿಯ ಲಾಭವು ಸ್ಥಿರವಾಗಿದೆ. ವಹಿವಾಟಿನಲ್ಲಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯ ಇಳಿಕೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 1.42ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆಯು ₹2,918 ಆಗಿದೆ. ಎನ್‌ಎಸ್‌ಇಯಲ್ಲಿ ಶೇ 1.35ರಷ್ಟು ಇಳಿಕೆ ಕಂಡಿದ್ದು, ಪ್ರತಿ ಷೇರಿನ ಬೆಲೆಯು ₹2,919.50 ಆಗಿದೆ. ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯವು ₹28,607 ಕೋಟಿ ಕರಗಿದೆ. ಒಟ್ಟು ಮಾರುಕಟ್ಟೆ ಮೌಲ್ಯವು ₹19.74 ಲಕ್ಷ ಕೋಟಿ ಆಗಿದೆ.

ವೊಡಾಫೋನ್ ಐಡಿಯಾ ಷೇರು ಶೇ 12ರಷ್ಟು ಏರಿಕೆ

ನವದೆಹಲಿ (ಪಿಟಿಐ): ವೊಡಾಫೋನ್ ಐಡಿಯಾ ಕಂಪನಿಯು ಷೇರು ಮಾರಾಟ ಪ್ರಕ್ರಿಯೆ (ಎಫ್‌ಪಿಒ) ಮೂಲಕ ₹18 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿದ ಬೆನ್ನಲ್ಲೇ ಕಂಪನಿಯ ಷೇರಿನ ಮೌಲ್ಯವು ಮಂಗಳವಾರ ಶೇ 12ರಷ್ಟು ಏರಿಕೆಯಾಗಿದೆ.

ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ಒಂದೇ ದಿನ ₹7,517 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹72,122 ಕೋಟಿಗೆ ತಲುಪಿದೆ ಎಂದು ಕಂಪನಿ ತಿಳಿಸಿದೆ.

ಪ್ರತಿ ಷೇರಿನ ಬೆಲೆಯು ₹14 ದಾಟಿದೆ. ಆರಂಭಿಕ ಹೂಡಿಕೆದಾರರಿಂದ ಕಂಪನಿಯು ₹5,400 ಕೋಟಿ ಬಂಡವಾಳ ಸಂಗ್ರಹಿಸಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-44500
ಚಿತ್ರದುರ್ಗ	
ಅಪಿ	52129-52579
ಬೆಟ್ಟೆ	35719-36199
ಕೆಂಪುಗೋಟು	30609-31010
ರಾಶಿ	51639-52069
ಕಾರ್ಕಳ	
ಹೊಸತು	25000-36500
ಹಳತು	30000-44500
ಪುತ್ತೂರು	
ಹೊಸತು	26500-36500
ಸಾಗರ	
ಬಿಳಿಗೋಟು	22214-26599
ಚಾಲಿ	31899-33939
ಕೋಕ	11099-28699
ಕೆಂಪುಗೋಟು	27899-32899
ರಾಶಿ	42399-51299
ಸಿಪ್ಪೆಗೋಟು	8014-18789
ಶಿವಮೊಗ್ಗ	
ಬೆಟ್ಟೆ	47400-56333
ಗೊರಬಲು	17609-40969
ರಾಶಿ	30006-53869
ಸರಕು	51699-84696
ಸಿದ್ದಾಪುರ	
ಬಿಳಿಗೋಟು	26099-29299
ಚಾಲಿ	33200-35499
ಕೋಕ	24689-29099
ಹಳೆಚಾಲಿ	34709-36469
ಕೆಂಪುಗೋಟು	27900-31699
ರಾಶಿ	43899-49099
ತಟ್ಟಿಬೆಟ್ಟೆ	34900-43699
ಶಿರಸಿ	
ಬೆಟ್ಟೆ	37050-46609
ಬಿಳಿಗೋಟು	25009-31299
ಚಾಲಿ	32199-36118
ಕೆಂಪುಗೋಟು	28099-31800
ರಾಶಿ	44618-49408
ಯಲ್ಲಾಪುರ	
ಅಪಿ	58299-61565
ಬಿಳಿಗೋಟು	23601-32299
ಕೋಕ	16899-28899
ಹಳೆಚಾಲಿ	36009-36601
ಹೊಸಚಾಲಿ	32399-35910
ಕೆಂಪುಗೋಟು	26899-34469
ರಾಶಿ	44899-55609
ತಟ್ಟಿಬೆಟ್ಟೆ	36689-44119

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಂಕರ್ ಕೆ.ಜಿ., ಗದಗ ಜಿಲ್ಲೆ

● **ಪ್ರಶ್ನೆ: ನನ್ನ ಮಗ 2021ರಲ್ಲಿ ಕೊರೊನಾದಿಂದ ಮೃತನಾಗಿದ್ದು, ಆತನ ಹೆಸರಲ್ಲಿ ಅನೇಕ ಕಂಪನಿಯ ಷೇರುಗಳಿವೆ. ಇದರಲ್ಲಿ ಬಿಇಎಲ್, ಬಿಎಚ್‌ಇಎಲ್, ಎಚ್‌ಡಿಎಫ್‌ಸಿ, ಎನ್‌ಟಿಪಿಸಿ, ಎಸ್‌ಬಿಐ, ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ, ಟ್ರೈಡೆಂಟ್, ವೆಲ್ ಸ್ಪನ್, ಯೆಸ್ ಬ್ಯಾಂಕ್‌ನ ಷೇರುಗಳಿವೆ. ಎನ್‌ಎಸ್‌ಡಿಎಲ್‌ನಿಂದ 2020-21ರ ಫೆಬ್ರುವರಿ ತಿಂಗಳ ತನಕ ಅಕೌಂಟ್ ಸ್ಟೇಟ್‌ಮೆಂಟ್ ಬಂದಿದೆ. ತದನಂತರ ಖಾತೆ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ. ಡಿಮ್ಯಾಟ್ ಖಾತೆ ಎನ್‌ಎಸ್‌ಡಿಎಲ್‌ನಲ್ಲಿದ್ದು, ಬಿಜಿಎಸ್‌ಇ ಬ್ರೋಕರ್ ಮೂಲಕ ಖಾತೆ ನಿರ್ವಹಿಸಲಾಗುತ್ತಿತ್ತು. ಈಗ ಈ ಷೇರುಗಳಲ್ಲಿನ ಹಣವನ್ನು ನಾವು ಹಿಂಪಡೆಯುವುದು ಹೇಗೆ?**

ಉತ್ತರ: ಯಾವುದೇ ವ್ಯಕ್ತಿ ಮೃತನಾದಾಗ ಸಹಜವಾಗಿ ಆತನ ಹೆಸರಲ್ಲಿರುವ ಆಸ್ತಿಗಳನ್ನು ಆತನ ಸಮೀಪದ ಬಂಧುಗಳಿಗೆ ಕಾನೂನುಬದ್ಧವಾಗಿ ಹೇಗೆ ವರ್ಗಾಯಿಸಬೇಕು ಎಂಬ ಪ್ರಶ್ನೆ ಎದುರಾಗುತ್ತದೆ. ಭೂಮಿ, ಬ್ಯಾಂಕ್ ಖಾತೆಯ ಉಳಿಕೆ ಮೊತ್ತವನ್ನು ಹೇಗೆ ಮೃತನ ಉತ್ತರಾಧಿಕಾರಿಗಳಿಗೆ ಹಸ್ತಾಂತರಿಸಲಾಗುತ್ತದೋ, ಷೇರುಗಳಿಗೆ ಸಂಬಂಧಿಸಿದ ವರ್ಗಾವಣೆ ಪ್ರಕ್ರಿಯೆಯೂ ಅದೇ ರೀತಿ ನಡೆಯಲಿದೆ. ಇಲ್ಲಿ ವರ್ಗಾವಣೆ ಯಾರ ಹೆಸರಲ್ಲಿ ಮಾಡಿಸಿಕೊಳ್ಳಲಾಗುತ್ತದೋ ಅವರ ಹೆಸರಲ್ಲಿ ಡಿಮ್ಯಾಟ್ ಖಾತೆ ತೆರೆದು ಷೇರುಗಳನ್ನು ತಮ್ಮದಾಗಿಸಿಕೊಳ್ಳಬೇಕು. ಖಾತೆ ಈಗಾಗಲೇ ತೆರೆದಿದ್ದರೆ, ಅದೇ ಖಾತೆಯನ್ನು ಷೇರುಗಳ ವರ್ಗಾವಣೆಗೆ ಬಳಸಿಕೊಳ್ಳಬಹುದು.

ನಿಮ್ಮಲ್ಲಿ ಈಗಾಗಲೇ ಡಿಮ್ಯಾಟ್ ಖಾತೆ ಇದ್ದರೆ ಅದನ್ನು ವರ್ಗಾವಣೆ ಪಡೆದುಕೊಳ್ಳಲು ಬಳಸಿಕೊಳ್ಳಬಹುದು. ಇಲ್ಲವಾದಲ್ಲಿ ಹೊಸದಾಗಿ ಡಿಮ್ಯಾಟ್ ಖಾತೆ ತೆರೆಯಬೇಕಾಗುತ್ತದೆ. ತದನಂತರ ಅಗತ್ಯವಾದ ವರ್ಗಾವಣೆ ಫಾರಂ ಭರ್ತಿ ಮಾಡಿ, ನಿಮ್ಮ ಹಕ್ಕಿಗಾಗಿ ಇರುವ ಎಲ್ಲಾ ದಾಖಲೆಗಳೊಂದಿಗೆ ನಿಮ್ಮ ದಲ್ಲಾಳಿ (ಬ್ರೋಕರ್) ಸಂಸ್ಥೆಯ ಮೂಲಕ ಅರ್ಜಿ ಸಲ್ಲಿಸಬೇಕು. ಮರಣ ಪತ್ರ, ನಾಮನಿರ್ದೇಶನ, ಉಯಿಲು ಪತ್ರ ಇತ್ಯಾದಿ ದಾಖಲೆಗಳು ಇಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇವುಗಳ ಸಮರ್ಪಕತೆಯನ್ನು ಪರಿಶೀಲಿಸಿದ ಬಳಿಕ ಬ್ರೋಕರ್ ಸಂಸ್ಥೆಯು ಮುಂದಿನ ಕ್ರಮಕ್ಕಾಗಿ ಕಂಪನಿಗೆ ಮಾಹಿತಿ ನೀಡುತ್ತದೆ. ಸಾಮಾನ್ಯವಾಗಿ ಷೇರುಗಳಂತಹ ಆರ್ಥಿಕ ಆಸ್ತಿಗಳ ವಿಚಾರದಲ್ಲಿ ನಾಮನಿರ್ದೇಶನ ಇರುತ್ತದೆ. ಇಲ್ಲದಿದ್ದ ಸಂದರ್ಭದಲ್ಲಿ 'ಫಾರಂ 10' ಅನ್ನು ಭರ್ತಿ ಮಾಡಿ ಷೇರು ಬ್ರೋಕರ್ ಸಂಸ್ಥೆಗೆ ನೀಡಿದರೆ ಗ್ರಾಹಕರ ಕೋರಿಕೆಯನ್ನು ದಾಖಲಿಸುತ್ತಾರೆ.

ಖಾತೆದಾರ ಮೃತಪಟ್ಟ ಸಂದರ್ಭದಲ್ಲಿ ಅರ್ಜಿದಾರ ಯಾವ ರೀತಿ ತನ್ನ ಹೂಡಿಕೆಗಳನ್ನು ಮುಂದಿನ ಸಂಬಂಧಿಗಳಿಗೆ ಹಂಚಬೇಕೆಂದು ಬರೆದು ಕೊಡಲಾಗಿದೆಯೋ ಅದೇ ರೀತಿ ಷೇರುಗಳನ್ನು ಪಾಲು ಮಾಡಲಾಗುತ್ತದೆ. ಇದು ಮರಣಾನಂತರ ಹೂಡಿಕೆಗಳನ್ನು ವಿಲೇವಾರಿ ಮಾಡುವ ಕಾನೂನು ಪ್ರಕ್ರಿಯೆಯನ್ನು ಸರಳಗೊಳಿಸುತ್ತದೆ ಎಂಬುದು ಗಮನಾರ್ಹ ವಿಚಾರವಾಗಿದೆ.

ಶ್ರೀನಿಧಿ, ಮಲ್ಲೇಶ್ವರಂ, ಬೆಂಗಳೂರು.

● **ಪ್ರಶ್ನೆ: ನಾನು ನಿಶ್ಚಿತ ಬಡ್ಡಿ ನೀಡುವ ದೀರ್ಘಾವಧಿ ಬಾಂಡ್‌ಗಳ ಬಗ್ಗೆ ಕೇಳಿದ್ದೇನೆ. ಬಾಂಡ್‌ಗಳ ಮೇಲಿನ ಗಳಿಕೆಯ ಪ್ರತಿಶತ ಪ್ರಮಾಣ ಆಗಾಗ ಬದಲಾಗುತ್ತಿರುತ್ತದೆ. ಈ ಮಾಹಿತಿಯನ್ನು ನಾನು ಅನೇಕ ಸುದ್ದಿ ಮಾಧ್ಯಮದಲ್ಲೂ ಕೇಳಿದ್ದೇನೆ. ಹೀಗಾಗಿ ಬಾಂಡ್ ಮಾರುಕಟ್ಟೆಯಲ್ಲಿ ನಮ್ಮ ಹೂಡಿಕೆಯ ನಿರ್ಧಾರ ಕೈಗೊಳ್ಳುವುದು ತುಸು ಕಷ್ಟ ಎಂಬುದು ನನಗಿರುವ ಆತಂಕ. ಬಾಂಡ್‌ಗಳಲ್ಲಿನ ಹೂಡಿಕೆ ಷೇರು ಮಾರುಕಟ್ಟೆ ಅಥವಾ ಮ್ಯೂಚುವಲ್ ಫಂಡ್‌ಗಳಂತೆ ಸರಳ ಅಲ್ಲ ಎನ್ನುವುದು ನನ್ನ ಅಭಿಪ್ರಾಯ. ನಾವು ಹೂಡಿಕೆಯ ನಿರ್ಧಾರವನ್ನು ಹೇಗೆ ಕೈಗೊಳ್ಳಬೇಕು. ಈ ಬಗ್ಗೆ ಮಾಹಿತಿ ನೀಡಿ.**

ಉತ್ತರ: ಯಾವುದೇ ಮಾರುಕಟ್ಟೆ ಉತ್ಪನ್ನದ ಬೆಲೆಯೂ ಬೇಡಿಕೆ ಹಾಗೂ ಪೂರೈಕೆ ಎಂಬ ಎರಡು ಮಹತ್ವದ ತತ್ವಗಳ ಆಧಾರದ ಮೇಲೆ ನಿರ್ಧಾರವಾಗುತ್ತದೆ ಎನ್ನುವುದನ್ನು ನಾವೆಲ್ಲ ನಮ್ಮ ದೈನಂದಿನ ವ್ಯವಹಾರದಲ್ಲಿ ಅನುಭವದಿಂದ ತಿಳಿದಿರುವ ಪ್ರಮುಖ ವಿಚಾರವಾಗಿದೆ. ಅದೇ ರೀತಿ ಷೇರು ಮಾರುಕಟ್ಟೆ ಅಥವಾ ಬಾಂಡ್ ಮಾರುಕಟ್ಟೆ ಉತ್ಪನ್ನಗಳು ಕೂಡ. ಬಾಂಡ್ ಮಾರುಕಟ್ಟೆಯ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವ ಮೊದಲು ಹಾಗೂ ಹೂಡಿಕೆ ನಿರ್ಧಾರ ಕೈಗೊಳ್ಳುವ ಮೊದಲು ಬಡ್ಡಿದರ ಏರಿಳಿತದ ಪರಿಣಾಮ ಕುರಿತು ಒಂದಿಷ್ಟು ಮಾಹಿತಿ ಹೊಂದಿರಬೇಕು.

ಬಾಂಡ್ ಮಾರುಕಟ್ಟೆಯ ಹೂಡಿಕೆಗೆ ನಿಗದಿತ ದರದ ಬಡ್ಡಿಯನ್ನು ಬಾಂಡ್ (ಸಾಲ ಪತ್ರ) ವಿತರಿಸುವ ಕಂಪನಿಗಳು ನೀಡುತ್ತವೆ. ಕೇಂದ್ರೀಯ ಬ್ಯಾಂಕ್ ಬಡ್ಡಿದರದಲ್ಲಿ ಯಾವುದೇ ಏರಿಳಿತ ಮಾಡಿದಾಗಲೂ ಮಾರುಕಟ್ಟೆಯಲ್ಲಿ ಬಾಂಡ್ ಹೂಡಿಕೆ ಉತ್ಪನ್ನಗಳ ಗಳಿಕೆಯಲ್ಲಿ ಅನುಕೂಲಕರ ಅಥವಾ ಪ್ರತಿಕೂಲ ಪರಿಣಾಮ ಬೀರಬಹುದು. ಬಾಂಡ್‌ಗಳ ಬಡ್ಡಿದರ ಹಾಗೂ ಅವುಗಳ ಮೌಲ್ಯದಲ್ಲಿ ತದ್ವಿರುದ್ಧ ಸಂಬಂಧ ಹೊಂದಿದೆ.

ಉದಾಹರಣೆಗೆ ಮಾರುಕಟ್ಟೆಯಲ್ಲಿ ಬಡ್ಡಿದರ ಏರಿದಾಗ, ಅಸ್ತಿತ್ವದಲ್ಲಿರುವ ಕಡಿಮೆ ದರಗಳಲ್ಲಿ ಆದಾಯ ನೀಡುವ ಬಾಂಡ್‌ಗಳು ತುಲನಾತ್ಮಕವಾಗಿ ಮತ್ತಷ್ಟು ಕಡಿಮೆ ಆಕರ್ಷಕವಾಗುತ್ತವೆ. ಇದರ ಪರಿಣಾಮ ಹೂಡಿಕೆದಾರರು ಹೆಚ್ಚಿನ ಇಳುವರಿ ನೀಡುವ ಬಾಂಡ್ ಉತ್ಪನ್ನಗಳ ಖರೀದಿಗೆ ಮುಂದಾಗುತ್ತಾರೆ. ಆದ್ದರಿಂದ, ಬಾಂಡ್‌ಗಳ ಮಾರುಕಟ್ಟೆ ಬೆಲೆಗಳು ಅವುಗಳ ಇಳುವರಿಯನ್ನು ಇತರೆ ಸಾಧನಗಳಿಗೆ ಹೊಂದಿಸಲು ಸಾಕಷ್ಟು ಕುಸಿಯುತ್ತವೆ. ಬಡ್ಡಿದರ ಇಳಿಕೆಯಾದಾಗ, ಅಸ್ತಿತ್ವದಲ್ಲಿರುವ ಹೆಚ್ಚಿನ ದರದಲ್ಲಿ ಆದಾಯ ನೀಡುವ ಬಾಂಡ್‌ಗಳು ಮತ್ತಷ್ಟು ಆಕರ್ಷಕವಾಗುತ್ತವೆ.

ಬಡ್ಡಿ ಗಳಿಕೆಯ ಪ್ರತಿಶತ ಪ್ರಮಾಣ ಮಾತ್ರವಲ್ಲದೆ, ಹೆಚ್ಚುವರಿ ಲಾಭ ನೀಡುವ ಬಾಂಡ್ ಉತ್ಪನ್ನಗಳು ಹೆಚ್ಚಿನ ಅಪಾಯ ಹೊಂದಿರುವ ಸಾಧ್ಯತೆಗಳೂ ಇರುತ್ತವೆ. ಸಾಮಾನ್ಯವಾಗಿ ಜಿ-ಸೆಕ್ ಎಂದು ಕರೆಯಲ್ಪಡುವ ಸರ್ಕಾರಿ ಬಾಂಡ್‌ಗಳನ್ನು ಕಡಿಮೆ ಅಪಾಯದ ಹೂಡಿಕೆಗಳೆಂದು ಪರಿಗಣಿಸಲಾಗುತ್ತದೆ. ಏಕೆಂದರೆ ಅವುಗಳು ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಬೆಂಬಲಿತವಾಗಿರುತ್ತವೆ. ಆದರೆ, ಕಾರ್ಪೊರೇಟ್ ಬಾಂಡ್‌ಗಳು ಕ್ರೆಡಿಟ್ ರೇಟಿಂಗ್ ಅರ್ಹತೆಯನ್ನು ಅವಲಂಬಿಸಿ ಅಪಾಯದ ವಿಷಯದಲ್ಲಿ ಗಮನಾರ್ಹವಾಗಿ ಬದಲಾಗಬಹುದು.

ಉದಾಹರಣೆಗೆ, ಹೆಚ್ಚಿನ ದರದ ಕಾರ್ಪೊರೇಟ್ ಬಾಂಡ್‌ಗಳು (ಎಎಎ, ಎಎ) ಕಡಿಮೆ ಅಪಾಯಕಾರಿ. ಆದರೆ, ಕಡಿಮೆ ದರದ (ಬಿ ಬಿ, ಬಿ) ಹೆಚ್ಚಿನ ಆರ್ಥಿಕ ಅಪಾಯವನ್ನು ಹೊಂದಿರುತ್ತವೆ. ಆದ್ದರಿಂದ ನಿಮ್ಮ ಹಣಕಾಸಿನ ಗುರಿಗಳು ಮತ್ತು ಅಪಾಯ ಗ್ರಹಿಸುವ ಶಕ್ತಿಗೆ ಹೊಂದಿಕೊಂಡು ನಿರ್ಧಾರ ಮಾಡಬೇಕಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in